www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಜಾರಿ ನಿರ್ದೇಶನಾಲಯ: ಸಮನ್ಸ್ ಮತ್ತು ಬಂಧನದ ನಡುವೆ ಹಲವು ನಿಯಮಗಳು

ವಸತಿಶಾಲೆಗಳಲ್ಲಿ ಘೋಷವಾಕ್ಯ ಬದಲು 7

ಸಹಕಾರ ಸಂಘಗಳ ಮಸೂದೆಗೆ ಒಪ್ಪಿಗೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,708	22,122	₹63,940 (ಬೆಂಗಳೂರು)	₹73,200 (ಬೆಂಗಳೂರು)	83.04

ಬಗರ್ ಹುಕುಂ: 9.85 ಲಕ್ಷ ಅರ್ಜಿ ಬಾಕಿ • 54 ಲಕ್ಷ ಎಕರೆ ಜಮೀನು ಮಂಜೂರಾತಿಗೆ ಬೇಡಿಕೆ

ತಿರಸ್ಕೃತ ಅರ್ಜಿಗೆ ಮತ್ತೆ ಜೀವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ 'ಬಗರ್ ಹುಕುಂ' ಯೋಜನೆಯಡಿಯಲ್ಲಿ ತಿರಸ್ಕೃತಗೊಂಡಿರುವ ಅರ್ಜಿಗಳನ್ನು ಪುನರ್ ಪರಿಶೀಲಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ಬಿಜೆಪಿಯ ಬಿ.ಪಿ. ಹರೀಶ್ ಪ್ರಶ್ನೆಗೆ ವಿಧಾನಸಭೆಯಲ್ಲಿ ಸೋಮವಾರ ಉತ್ತರಿಸಿದ ಅವರು, 'ಬಡವರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನಿನ ಮೇಲೆ ಹಕ್ಕು ನೀಡುವುದಕ್ಕಾಗಿಯೇ ಬಗರ್ ಹುಕುಂ ಯೋಜನೆ ಜಾರಿಗೊಳಿಸಲಾಗಿದೆ. ನಿಯಮ ಮೀರಿ ಯಾವುದೇ ಅರ್ಜಿಗಳು ತಿರಸ್ಕೃತವಾಗಿದ್ದರೂ ಪುನರ್ ಪರಿಶೀಲನೆ ನಡೆಸಿ ತೀರ್ಮಾನಕ್ಕೆ ಬರಲಾಗುವುದು' ಎಂದರು.

138 ತಾಲ್ಲೂಕುಗಳಲ್ಲಿ ಈಗಾಗಲೇ ಬಗರ್ ಹುಕುಂ ಸಮಿತಿಗಳ ರಚನೆಯಾಗಿದೆ. ಉಳಿದ ತಾಲ್ಲೂಕುಗಳಲ್ಲಿ ಸಮಿತಿಗಳ ರಚನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

ಗೋಮಾಳ ಜಮೀನು, ನಗರ ಭೂಮಿತಿ ಕಾಯ್ದೆ ವ್ಯಾಪ್ತಿಯಲ್ಲಿರುವ ಜಮೀನುಗಳ ಮಂಜೂರಾತಿಗೂ ಅರ್ಜಿಗಳನ್ನು ಸಲ್ಲಿಸಲಾಗಿದೆ. ಗೋಮಾಳದಲ್ಲಿ ಹೆಚ್ಚುವರಿ ಜಮೀನುಗಳನ್ನು ಮಾತ್ರ ಮಂಜೂರು ಮಾಡಬಹುದು. ಇಲ್ಲವಾದರೆ ನ್ಯಾಯಾಲಯಗಳಲ್ಲಿ ಸರ್ಕಾರ ಛೀಮಾರಿ ಹಾಕಿಸಿಕೊಳ್ಳಬೇಕಾಗುತ್ತದೆ ಎಂದರು.

ಬಲಾಢ್ಯರಿಂದ ದುರ್ಬಳಕೆ: 'ಬಡವರಿಗಾಗಿ ಜಾರಿಯಲ್ಲಿರುವ ಬಗರ್ ಹುಕುಂ ಯೋಜನೆಯನ್ನು ಬಲಾಢ್ಯರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಬಡವರಿಗೆ ತೊಂದರೆ ಆಗುತ್ತಿದೆ' ಎಂದು ಕೃಷ್ಣ ಬೈರೇಗೌಡ ಹೇಳಿದರು.

ಒಬ್ಬ ವ್ಯಕ್ತಿ 25 ಅರ್ಜಿ ಸಲ್ಲಿಸಿದ ಉದಾಹರಣೆಗಳಿವೆ. 18 ವರ್ಷ ವಯಸ್ಸಾಗದವರು 18 ವರ್ಷ ಸಾಗುವಳಿ ಮಾಡಿರುವುದಾಗಿ ಅರ್ಜಿ ಸಲ್ಲಿಸಿದ್ದಾರೆ. ಈಗ ಒಟ್ಟು 9.85 ಲಕ್ಷ ಅರ್ಜಿಗಳು ಬಾಕಿ ಇದ್ದು, 54 ಲಕ್ಷ ಎಕರೆ ಜಮೀನು ಮಂಜೂರಾತಿಗೆ ಬೇಡಿಕೆ ಇದೆ. ಅಷ್ಟು ವಿಸ್ತೀರ್ಣದ ಸರ್ಕಾರಿ ಜಮೀನು ರಾಜ್ಯದಲ್ಲಿಲ್ಲ ಎಂದರು.

94 ಸಿ, 94 ಸಿಸಿ:ಮತ್ತೆ ವಿಸ್ತರಣೆ ಇಲ್ಲ

'ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳಿಗೆ ಹಕ್ಕುಪತ್ರ ವಿತರಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಸೆಕ್ಷನ್ 94ಸಿ ಮತ್ತು 94ಸಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸುವ ಪ್ರಸ್ತಾವ ಇಲ್ಲ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬಿಜೆಪಿಯ ಯಶ್‌ಪಾಲ್ ಎ. ಸುವರ್ಣ ಪ್ರಶ್ನೆಗೆ ವಿಧಾನಸಭೆಯಲ್ಲಿ ಸೋಮವಾರ ಉತ್ತರಿಸಿದ ಅವರು, 'ಈ ಎರಡೂ ಸೆಕ್ಷನ್‌ಗಳ ಅಡಿಯಲ್ಲಿ ಅನರ್ಹರೇ ಹೆಚ್ಚು ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಮತ್ತೆ ಈಗ ಅರ್ಜಿ ಸಲ್ಲಿಕೆ ಅವಕಾಶ ನೀಡಿದರೆ ಅದು ಮುಂದುವರಿಯುತ್ತದೆ' ಎಂದರು.

94ಸಿ ಅಡಿಯಲ್ಲಿ 6.26 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು. 1.63 ಲಕ್ಷ ಅರ್ಜಿಗಳನ್ನು ಮಾನ್ಯ ಮಾಡಿ, ಮಂಜೂರಾತಿ ನೀಡಲಾಗಿದೆ. 4.12 ಲಕ್ಷ ಅರ್ಜಿಗಳು ತಿರಸ್ಕೃತಗೊಂಡಿವೆ. 94ಸಿಸಿ ಅಡಿಯಲ್ಲಿ 2.12 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು. 69,236 ಅರ್ಜಿದಾರರಿಗೆ ಮಂಜೂರಾತಿ ನೀಡಿದ್ದು, 1.28 ಲಕ್ಷ ಅರ್ಜಿಗಳು ತಿರಸ್ಕೃತಗೊಂಡಿವೆ ಎಂದು ಹೇಳಿದರು.

'ಬಡವರ ಹೆಸರಿನಲ್ಲಿ ಅನರ್ಹರೇ ಅರ್ಜಿ ಸಲ್ಲಿಸಿದ್ದಾರೆ. ನೆಲಮಂಗಲ ತಾಲ್ಲೂಕಿನಲ್ಲಿ ಸ್ವಂತ ಮನೆ ಹೊಂದಿದ್ದ ಶ್ರೀಮಂತರಿಗೆ, ಸರ್ಕಾರಿ ಜಾಗದಲ್ಲಿ ಮನೆ ನಿರ್ಮಿಸದಿದ್ದರೂ ಹಕ್ಕುಪತ್ರ ವಿತರಿಸಿದ ಪ್ರಕರಣಗಳು ಪತ್ತೆಯಾಗಿವೆ' ಎಂದು ಹೇಳಿದರು.

ಅಕ್ರಮ ಸಕ್ರಮ ಯೋಜನೆ ಕೋರ್ಟ್‌ನಲ್ಲಿಯೇ ಹಿನ್ನಡೆ?

'ನಗರ ಪ್ರದೇಶಗಳಲ್ಲಿನ ಅನಧಿಕೃತ ಕಟ್ಟಡ ಮತ್ತು ಬಡಾವಣೆಗಳನ್ನು ಸಕ್ರಮಗೊಳಿಸಲು ರೂಪಿಸಿರುವ 'ಅಕ್ರಮ- ಸಕ್ರಮ' ಯೋಜನೆಗೆ ಸಂಬಂಧಿಸಿದ ಪ್ರಕರಣದಲ್ಲಿ ಸರ್ಕಾರಕ್ಕೆ ಹಿನ್ನಡೆಯಾಗುವ ಸಾಧ್ಯತೆ ಇದೆ ಎಂಬುದಾಗಿ ವಕೀಲರು ತಿಳಿಸಿದ್ದಾರೆ' ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.



94 ಸಿ ಮತ್ತು 94ಸಿಸಿ ಅರ್ಜಿಗಳಿಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರ ಕೊಡುವಾಗ ಈ ವಿಷಯ ಪ್ರಸ್ತಾಪಿಸಿದ ಅವರು, 'ಅಕ್ರಮ- ಸಕ್ರಮ ಯೋಜನೆಯನ್ನು ಪ್ರಶ್ನಿಸಿರುವ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ತೀರ್ಮಾನ ಬರುವ ಸಾಧ್ಯತೆ ಇದೆ ಎಂಬ ಮಾಹಿತಿ ಸರ್ಕಾರದ ಪರ ವಕೀಲರಿಂದ ಬಂದಿದೆ' ಎಂದು ಹೇಳಿದರು.

ಮೆರವಣಿಗೆ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ಕಲಬುರಗಿಯ ಜಗತ್ ವೃತ್ತ ಬಳಿ ಸೋಮವಾರ ನಡೆದ ಮೆರವಣಿಗೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ವೇಷಧರಿಸಿ ಗಮನ ಸೆಳೆದ ಯುವಕ – ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಮತಪತ್ರ, ವಿಡಿಯೊ ಪರಿಶೀಲನೆ ಇಂದು

ಚಂಡೀಗಢ ಮೇಯರ್ ಆಯ್ಕೆ

ನವದೆಹಲಿ (ಪಿಟಿಐ): ಚಂಡೀಗಢ ಮೇಯರ್ ಚುನಾವಣೆಗೆ ಸಂಬಂಧಿಸಿದ ಮತಪತ್ರಗಳು ಮತ್ತು ವಿಡಿಯೊ ದೃಶ್ಯಗಳನ್ನು ಮಂಗಳವಾರ ಖುದ್ದು ಸೂಕ್ಷ್ಮವಾಗಿ ಅವಲೋಕಿಸುವುದಾಗಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಸೋಮವಾರ ಪ್ರಕಟಿಸಿತು.

ಮತಪತ್ರಗಳು ಮತ್ತು ವಿಡಿಯೊ ದೃಶ್ಯಗಳ ಅಡಕಗಳನ್ನು ಸುರಕ್ಷಿತವಾಗಿ ದೆಹಲಿಗೆ ತರಲು ನ್ಯಾಯಾಂಗ ಅಧಿಕಾರಿಯೊಬ್ಬರನ್ನು ನಿಯೋಜಿಸಬೇಕು ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿತು. ಅಲ್ಲದೆ, ನ್ಯಾಯಾಂಗ ಅಧಿಕಾರಿ ಮತ್ತು ದಾಖಲೆಗಳಿಗೆ ಅಗತ್ಯ ಭದ್ರತೆ ಒದಗಿಸಬೇಕು ಪೀಠವು ಚಂಡೀಗಢ ಜಿಲ್ಲಾ ಆಡಳಿತಕ್ಕೆ ಆದೇಶಿಸಿತು.

'ಈ ದಾಖಲೆಗಳನ್ನು ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಖುದ್ದಾಗಿ ಅವಲೋಕಿಸುತ್ತೇವೆ' ಎಂದು ನ್ಯಾಯಪೀಠದ ಸದಸ್ಯರು ಪ್ರಕಟಿಸಿದರು. ನ್ಯಾಯಮೂರ್ತಿಗಳಾದ ಜೆ.ಪಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರು ಈ ಪೀಠದ ಇತರ ಸದಸ್ಯರು.

11 ನೇ ಪುಟ ನೋಡಿ

ಕಾದಂಬರಿಕಾರ ಕೆ.ಟಿ.ಗಟ್ಟಿ ನಿಧನ

ಮಂಗಳೂರು: ಕಾದಂಬರಿಗಳ ಮೂಲಕ ಓದುಗರ ಮನ ಗೆದ್ದಿದ್ದ, ಸಾಹಿತಿ-ವೈಚಾರಿಕ ಲೇಖಕ, ಭಾಷಾ ತಜ್ಞ ಕೆ.ಟಿ. ಗಟ್ಟಿ (86) ವಯೋಸಹಜ ಅನಾರೋಗ್ಯದಿಂದ ಮಂಗಳೂರಿನ ಸ್ವಗೃಹದಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ ನಿವೃತ್ತ ಶಿಕ್ಷಕಿ ಯಶೋದಾ, ನಿಟ್ಟೆ ವಿ.ವಿಯಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರಾಗಿರುವ ಪುತ್ರ ಸತ್ಯಜಿತ್, ಅಮೆರಿಕದಲ್ಲಿ ಪರಿಸರ ವಿಜ್ಞಾನಿ ಮತ್ತು ಆಸ್ಟ್ರಿಯಾದಲ್ಲಿ ಆಂಥ್ರಾಪಾಲಜಿಸ್ಟ್ ಆಗಿರುವ ಪುತ್ರಿಯರಾದ ಪ್ರಿಯದರ್ಶಿನಿ ಹಾಗೂ ಚಿತ್ ಪ್ರಭಾ ಇದ್ದಾರೆ.

ಕಾಸರಗೋಡಿನ ರಾಮದಾಸ ನಗರದಲ್ಲಿ ಜನಿಸಿದ್ದ ಕೆ.ಟಿ. ಗಟ್ಟಿ ಅವರು ಕೆಲವು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆ ಉಜಿರೆ ಬಳಿಯ 'ವನಸಿರಿ'ಯಲ್ಲಿ ನೆಲೆಸಿ ಕೃಷಿ ಮತ್ತು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು.

7ನೇ ಪುಟ ನೋಡಿ

ಇ.ಡಿ.ವಿಚಾರಣೆಗೆ ಕೇಜ್ರಿವಾಲ್ ಗೈರು

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಜೊತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ (ಇ.ಡಿ) ವಿಚಾರಣೆಗೆ ಸತತ ಆರನೇ ಬಾರಿಯೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಗೈರು ಹಾಜರಾಗಿದ್ದಾರೆ.

11

ಚಿನಕುರಳಿ

ಪ್ರಕಾಶ್ ಶೆಟ್ಟಿ

5 ವರ್ಷ ಎಂಎಸ್‌ಪಿ ಖಾತರಿ: ಕೇಂದ್ರದ ಭರವಸೆ

ಪ್ರಸ್ತಾವ ತಿರಸ್ಕರಿಸಿದ ರೈತರು

ಚಂಡೀಗಢ (ಪಿಟಿಐ): ದ್ವಿದಳ ಧಾನ್ಯಗಳು, ಮೆಕ್ಕೆಜೋಳ ಮತ್ತು ಹತ್ತಿಯನ್ನು ಕನಿಷ್ಠ ಬೆಂಬಲ ಬೆಲೆ ನೀಡಿ ಸರ್ಕಾರದ ಸಂಸ್ಥೆಗಳ ಮೂಲಕ ಐದು ವರ್ಷಗಳವರೆಗೆ ಖರೀದಿಸುವ ಕೇಂದ್ರ ಸರ್ಕಾರದ ಪ್ರಸ್ತಾವನೆಯನ್ನು 'ದೆಹಲಿ ಚಲೋ' ಪ್ರತಿಭಟನೆಯಲ್ಲಿ ಭಾಗಿಯಾಗಿರುವ ರೈತ ಮುಖಂಡರು ತಿರಸ್ಕರಿಸಿದ್ದಾರೆ. ಅಲ್ಲದೆ, ರಾಷ್ಟ್ರ ರಾಜಧಾನಿ ದೆಹಲಿಯ ಕಡೆ ಬುಧವಾರ ಸಾಗುವುದಾಗಿ ಹೇಳಿದ್ದಾರೆ.

'ನಮ್ಮ ಸಮಸ್ಯೆಗಳನ್ನು ಸರ್ಕಾರವು ಬಗೆಹರಿಸಬೇಕು. ಅದು ಸಾಧ್ಯವಾಗದಿದ್ದರೆ, ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ ನಮಗೆ ದೆಹಲಿಗೆ ಬಂದು ಶಾಂತಿಯುತವಾಗಿ ಪ್ರತಿಭಟಿಸಲು ಅವಕಾಶ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇವೆ' ಎಂದು ಕಿಸಾನ್ ಮಜ್ದೂರ್ ಮೋರ್ಚಾ ನಾಯಕ ಸರವಣ್ ಸಿಂಗ್ ಪಂಡೇರ್ ಅವರು ಶಂಭು ಗಡಿಯಲ್ಲಿ ಸುದ್ದಿಗಾರರ ಬಳಿ ಹೇಳಿದರು.

ರೈತ ನಾಯಕರ ಜೊತೆ ಕೇಂದ್ರದ ಮೂವರು ಸಚಿವರು ಭಾನುವಾರ ಸಭೆ ನಡೆಸಿದ್ದರು. ದ್ವಿದಳ ಧಾನ್ಯಗಳು, ಮೆಕ್ಕೆಜೋಳ ಮತ್ತು ಹತ್ತಿಯನ್ನು ರೈತರಿಂದ ಐದು ವರ್ಷಗಳವರೆಗೆ ಕನಿಷ್ಠ ಬೆಂಬಲ ಬೆಲೆಗೆ ಖರೀದಿ ಮಾಡಲಾಗುವುದು, ಈ ಖರೀದಿಯು ಸರ್ಕಾರದ ಏಜೆನ್ಸಿಗಳ ಮೂಲಕ ನಡೆಯುತ್ತದೆ ಹಾಗೂ ಖರೀದಿ ವಿಚಾರವಾಗಿ ಒಪ್ಪಂದ ಮಾಡಿಕೊಳ್ಳಲಾಗುತ್ತದೆ ಎಂಬ ಪ್ರಸ್ತಾವವನ್ನು ಕೇಂದ್ರವು ರೈತರ ಮುಂದೆ ಇರಿಸಿತ್ತು.

'ದೆಹಲಿ ಚಲೋ' ಪ್ರತಿಭಟನೆಯ ಭಾಗವಾಗಿ ರೈತರು ಪಂಜಾಬ್–ಹರಿಯಾಣದ ಶಂಭು ಗಡಿಯಲ್ಲಿ ಸೋಮವಾರ ಧರಣಿ ನಡೆಸಿದರು –ಪಿಟಿಐ ಚಿತ್ರ

2020–21ರಲ್ಲಿ ನಡೆದ ರೈತರ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಂಯುಕ್ತ ಕಿಸಾನ್ ಮೋರ್ಚಾ ಈ ಪ್ರಸ್ತಾವವನ್ನು ತಿರಸ್ಕರಿಸಿತ್ತು. ಸ್ವಾಮಿನಾಥನ್ ಆಯೋಗದ ವರದಿಯಲ್ಲಿ ಇರುವ ಶಿಫಾರಸಿನ ಅನುಷ್ಠಾನದ ಹೊರತಾಗಿ ಬೇರೆ ಯಾವ ಪ್ರಸ್ತಾವವನ್ನೂ ತಾನು ಒಪ್ಪುವುದಿಲ್ಲ ಎಂದು ಹೇಳಿತ್ತು.

ಕಿಸಾನ್ ಮಜ್ದೂರ್ ಸಂಘದ ಜೊತೆ ಎಸ್‌ಕೆಎಂ (ರಾಜಕೀಯೇತರ) ಕೂಡ 'ದೆಹಲಿ ಚಲೋ' ಪ್ರತಿಭಟನೆಯ ನೇತೃತ್ವ ವಹಿಸಿದೆ. 'ನಮ್ಮ ಎರಡು ಸಂಘಟನೆಗಳ ಮುಖಂಡರು ಚರ್ಚಿಸಿದ ನಂತರ, ಕೇಂದ್ರದ ಪ್ರಸ್ತಾವನೆಯು ರೈತರ ಹಿತಾಸಕ್ತಿಗೆ ಪೂರಕವಾಗಿಲ್ಲ ಎಂದು ತೀರ್ಮಾನಿಸಲಾಯಿತು. ಪ್ರಸ್ತಾವನೆಯನ್ನು ನಾವು ತಿರಸ್ಕರಿಸುತ್ತಿದ್ದೇವೆ' ಎಂದು ಎಸ್‌ಕೆಎಂ (ರಾಜಕೀಯೇತರ) ನಾಯಕ ಜಗಜಿತ್ ಸಿಂಗ್ ಡಲ್ಲೆವಾಲ್ ಸೋಮವಾರ ರಾತ್ರಿ ತಿಳಿಸಿದರು.

11ನೇ ಪುಟ ನೋಡಿ

ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ಸಿ.ಎಂ ವಿರುದ್ಧದ ಪ್ರಕರಣ

ನವದೆಹಲಿ: ಬೆಂಗಳೂರಿನಲ್ಲಿ 2022ರಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹಾಗೂ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ವಿರುದ್ಧದ ಕ್ರಿಮಿನಲ್ ಮೊಕದ್ದಮೆ ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸೋಮವಾರ ನಡೆಸಿದ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಹಾಗೂ ಪಿ.ಕೆ.ಮಿಶ್ರಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಸಿದ್ದರಾಮಯ್ಯ ಅವರಿಗೆ ₹10 ಸಾವಿರ ದಂಡ ವಿಧಿಸಿ, ಮಾರ್ಚ್ 6ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಿದ್ದ ಹೈಕೋರ್ಟ್ ಆದೇಶಕ್ಕೂ ಪೀಠ ತಡೆ ನೀಡಿದೆ.

ಸರ್ಕಾರವು ಆರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದ ಪೀಠ, ಅರ್ಜಿದಾರರ ವಿರುದ್ಧದ ಮುಂದಿನ ಪ್ರಕ್ರಿಯೆಗಳಿಗೆ ತಡೆ ನೀಡಲಾಗಿದೆ ಎಂದು ಹೇಳಿತು. ಕಾಂಗ್ರೆಸ್ ನಾಯಕರ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್, ಅಭಿಷೇಕ್ ಮನು ಸಿಂಘ್ವಿ, ದೇವದತ್ ಕಾಮತ್ ಮತ್ತು ಸಿದ್ಧಾರ್ಥ್ ಲೂತ್ರಾ ವಾದ ಮಂಡಿಸಿದರು.

'ಅರ್ಜಿದಾರರು ಪ್ರತಿಭಟಿಸುವ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. ಇದು ಸಂವಿಧಾನದ 19 (1) (ಎ) ವಿಧಿಯಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗೆ ಸಂಪೂರ್ಣ ವಿರುದ್ಧ. ಅರ್ಜಿದಾರರು ಯಾವುದೇ ಅಪರಾಧದ ಉದ್ದೇಶವಿಲ್ಲದೆ ಶಾಂತಿಯುತವಾಗಿ ರಾಜಕೀಯ ಪ್ರತಿಭಟನೆ ನಡೆಸಿದ್ದರು. ಪ್ರಜಾಪ್ರಭುತ್ವದಲ್ಲಿ ವಾಕ್ ಮತ್ತು ಪ್ರತಿಭಟನೆಯ ಸ್ವಾತಂತ್ರ್ಯದ ಹಕ್ಕು ಮಹತ್ವದ್ದು, ಅತ್ಯುನ್ನತವಾದುದು ಮತ್ತು ಅದನ್ನು ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾಗಿದೆ' ಎಂದು ಸಿಂಘ್ವಿ ವಾದಿಸಿದರು.

ಈ ಹಂತದಲ್ಲಿ, 'ಈ ವಾದವನ್ನು ಅಂಗೀಕರಿಸಿದರೆ, ಸಾಮಾನ್ಯ ಜೀವನಕ್ಕೆ ತೊಂದರೆ ಯನ್ನುಂಟು ಮಾಡುವ ಪ್ರತಿ ಸಾರ್ವಜನಿಕ ಪ್ರತಿಭಟನೆಗೆ ಸಂವಿಧಾನದ 19 (1) (ಎ) ವಿಧಿಯಲ್ಲಿ ಅವಕಾಶ ನೀಡಬೇಕಾಗುತ್ತದೆ' ಎಂದು ಪೀಠ ಹೇಳಿತು.

'ಈ ಪ್ರತಿಭಟನೆಯನ್ನು ರಾಜಕಾರಣಿಗಳು ಮಾಡಿದ್ದಾರೆ ಎಂದು ನೀವು ವಾದಿಸುತ್ತಿದ್ದೀರಿ. ಆ ಕಾರಣಕ್ಕೆ ಪ್ರಕರಣವನ್ನು ರದ್ದುಗೊಳಿಸಬೇಕೇ' ಎಂದು ಪೀಠ ಪ್ರಶ್ನಿಸಿತು.

5ನೇ ಪುಟ ನೋಡಿ

ಪೊಲೀಸ್ ಪರೀಕ್ಷೆ ಹೆಚ್ಚುವರಿ ಬೋಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ನೇಮಕಾತಿ ಪರೀಕ್ಷೆಯ ಪ್ರಯುಕ್ತ 22 ಪ್ರಮುಖ ರೈಲುಗಳಿಗೆ ಹೆಚ್ಚುವರಿಯಾಗಿ ಸಾಮಾನ್ಯ ಬೋಗಿಗಳನ್ನು ಅಳವಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಕರ್ನಾಟಕ ರಾಜ್ಯ ಪೊಲೀಸ್ ನೇಮಕಾತಿ ಪರೀಕ್ಷೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಂದಾಗಿ ಉಂಟಾಗುವ ಜನದಟ್ಟಣೆಯನ್ನು ನಿವಾರಿಸಲು ಫೆ. 23ರಿಂದ 26ರವರೆಗೆ ಹೆಚ್ಚುವರಿ ಬೋಗಿಗಳ ವ್ಯವಸ್ಥೆ ಇರಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

IN THE HON'BLE HIGH COURT OF KARNATAKA AT BENGALURU (ORIGINAL JURISDICTION)

IN THE MATTER OF COMPANIES ACT, 1956 AND IN THE MATTER OF ACROPETAL TECHNOLOGIES PRIVATE LIMITED (IN LIQUIDATION)

COMPANY PETITION No. 132/2013

BETWEEN: American Express Banking Corp., A Corporation organized under the New York Banking Law, USA.
Having its principal office at Metropolitan Saket, 7th Floor, Office Block, District Centre Saket, New Delhi- 110 017. ...PETITIONER

AND: Acropetal Technologies Limited, A Company incorporated under the Companies Act, 1956
Having its registered office at # 74/75, 3rd Cross, 1st Main, NS Palya, Bannerghatta Road, Bangalore-560 076. ...RESPONDENT

NOTICE OF WINDING-UP ORDER

By an order made by the Hon'ble High Court of Karnataka Bengaluru in the above matter dated 1st day of December 2023, it was ordered that the above-named company be wound-up under the provisions of Companies Act, 1956.

Dated this the 19th day of February 2024.

ADVOCATE FOR PETITIONER
MANU PRABHAKAR KULKARNI
POOVAYYA & Co.
ADVOCATES & SOLICITORS
THE ESTATE, LEVEL FOUR,
121 DICKENSON ROAD, BENGALURU-560 042.

ಆಸ್ತಿ ತೆರಿಗೆ ಪಾವತಿಸದ ಮಾಲೀಕರ ಮೇಲೆ ಕ್ರಮಕೈಗೊಳ್ಳದ ನೌಕರರ ವಿರುದ್ಧ ಅಸಮಾಧಾನ

27 ಸಿಬ್ಬಂದಿ ವಿರುದ್ಧ ಆರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿಸದ ಸ್ವತ್ತುಗಳ ಮಾಲೀಕತ್ವವನ್ನು ಪಾಲಿಕೆ ಹೆಸರಿಗೆ ಜಂಟಿಯಾಗಿ ನೋಂದಾಯಿಸಿಕೊಳ್ಳಲು ಕ್ರಮ ಕೈಗೊಳ್ಳದ ಕಂದಾಯ ವಿಭಾಗದ 27 ಸಿಬ್ಬಂದಿ ಮೇಲೆ ಆರೋಪ ಪಟ್ಟಿ ಸಲ್ಲಿಸಲಾಗಿದೆ.

'ಆಸ್ತಿ ತೆರಿಗೆ ಸಂಗ್ರಹದ ವಿಷಯದಲ್ಲಿ ಕರ್ತವ್ಯಲೋಪ ಎಸಗಲಾಗಿದೆ' ಎಂದು ಆರೋಪ ಪಟ್ಟಿ ಸಲ್ಲಿಸಿರುವ ಬಿಬಿಎಂಪಿ ಉಪ ಆಯುಕ್ತರು (ಆಡಳಿತ), 'ಇಲಾಖಾ ವಿಚಾರಣೆ ನಡೆಸಲಾಗುತ್ತದೆ' ಎಂದು ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಬಿಬಿಎಂಪಿ ಉಪ ವಿಭಾಗಗಳಲ್ಲಿ ಅತಿಹೆಚ್ಚು ಆಸ್ತಿ ತೆರಿಗೆ ಉಳಿಸಿಕೊಂಡಿರುವ 50 ಸ್ವತ್ತುಗಳನ್ನು ಗುರುತಿಸಿ, ಅವುಗಳಿಂದ ಆಸ್ತಿ ತೆರಿಗೆ ಸಂಗ್ರಹಿಸಲು ಆಯಾ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿತ್ತು.

ಆಸ್ತಿ ತೆರಿಗೆ ಪಾವತಿಸದ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಿದ್ದ ಕಂದಾಯ ಅಧಿಕಾರಿಗಳು, ಅವಧಿಯಲ್ಲಿ ಪಾವತಿಸದವರ ಕಟ್ಟಡಗಳನ್ನು ಜಪ್ತಿ ಮಾಡಿ, ಬೀಗಗಳನ್ನೂ ಹಾಕಿದ್ದರು. ಇಷ್ಟಾದರೂ ಮಾಲೀಕರು ಆಸ್ತಿ ತೆರಿಗೆ ಪಾವತಿಸಿರಲಿಲ್ಲ. 'ಇಂತಹ ಸ್ವತ್ತುಗಳನ್ನು ಪಾಲಿಕೆ ಹೆಸರಿನಲ್ಲಿ ಜಂಟಿ ಮಾಲೀಕತ್ವವನ್ನು ನಮೂದಿಸುವಂತೆ 'ನಮೂನೆ-13' ಅನ್ನು ಮಾಲೀಕರಿಗೆ ಜಾರಿ ಮಾಡಿ, ಅದನ್ನು ಸ್ಥಳೀಯ ಉಪ ನೋಂದಣಾಧಿಕಾರಿಗೆ ಕಳುಹಿಸಲು ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಮೇಲಿನ ಅಧಿಕಾರಿಗಳ ಈ ಸೂಚನೆಯನ್ನು ಪಾಲಿಸದೆ ಕರ್ತವ್ಯ ನಿರ್ಲಕ್ಷ್ಯ ತೋರಿದ್ದು, ಇದರಿಂದ ಆಸ್ತಿ ತೆರಿಗೆ ವಸೂಲಾತಿ ಕುಂಠಿತವಾಗಿದೆ. ಹೀಗಾಗಿ ನಿಮ್ಮ ಮೇಲೆ ದೋಷಾರೋಪ ಪಟ್ಟಿ ಸಲ್ಲಿಸಿ, ಇಲಾಖಾ ವಿಚಾರಣೆ ನಡೆಸಲಾಗುವುದು' ಎಂದು ಉಪ ಆಯುಕ್ತರು ನೋಟಿಸ್‌ನಲ್ಲಿ ವಿವರಿಸಿದ್ದಾರೆ.

ಹಗಲು-ರಾತ್ರಿ ಕೆಲಸ: '2023-24ನೇ ಸಾಲಿನಲ್ಲಿ ₹3,598 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲಾಗಿದ್ದು, ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ₹258 ಕೋಟಿ ಹೆಚ್ಚಾಗಿದೆ. ವಿಧಾನಸಭೆ, ಲೋಕಸಭೆ, ಬಿಬಿಎಂಪಿ ಚುನಾವಣೆ ಕೆಲಸ, ಶಿಕ್ಷಕರ ಕ್ಷೇತ್ರದ ಚುನಾವಣೆ ಕಾರ್ಯಗಳು, ಜಾಹೀರಾತು, ಆಸ್ತಿಗಳ ವಿಭಾಗ, ನ್ಯಾಯಾಲಯದ ಪ್ರಕರಣಗಳು ಸೇರಿದಂತೆ ನಿತ್ಯದ ಸಾಮಾನ್ಯ ಕೆಲಸಗಳನ್ನೂ ಕಂದಾಯ ವಿಭಾಗ ಸಿಬ್ಬಂದಿ ನಿರ್ವಹಿಸುತ್ತಿದ್ದೇವೆ. ಹಗಲು-ರಾತ್ರಿ ಕೆಲಸ ಮಾಡಿದರೂ ಮುಗಿಯುತ್ತಿಲ್ಲ' ಎಂದು ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿ ಅಳಲು ತೋಡಿಕೊಂಡರು.

'ನಿತ್ಯವೂ 16 ಗಂಟೆಗಿಂತ ಹೆಚ್ಚು ಕೆಲಸ ಮಾಡುತ್ತಿದ್ದರೂ ಕಂದಾಯ ವಿಭಾಗದ ಸಿಬ್ಬಂದಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗುತ್ತಿದೆ. ವಿವರಣೆ ನೀಡಿದರೂ ಉದ್ದೇಶ ಪೂರ್ವಕವಾಗಿ, ಭಯದ ವಾತಾವರಣ ನಿರ್ಮಿಸಲು ಆರೋಪ ಪಟ್ಟಿ ನೀಡಿ, ಇಲಾಖಾ ವಿಚಾರಣೆ ನಡೆಸುವುದಾಗಿ ಹೆದರಿಸಲಾಗುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಹೋರಾಟ ಅನಿವಾರ್ಯ: ನೌಕರರ ಸಂಘ

'ಕಂದಾಯ ವಿಭಾಗದ ಸಿಬ್ಬಂದಿ ಮೇಲೆ ಇಲಾಖಾ ವಿಚಾರಣೆ ಜರುಗಿಸಲು ನೀಡಿರುವ ಆರೋಪ ಪಟ್ಟ ಪ್ರಸ್ತಾವನೆ ಕೈಬಿಡದಿದ್ದರೆ ಅನಿವಾರ್ಯವಾಗಿ ಹೋರಾಟ ಮಾಡಬೇಕಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಎಚ್ಚರಿಸಿದೆ.

'ಕಂದಾಯ ವಿಭಾಗದ ಅಧಿಕಾರಿಗಳಿಗೆ ಕಿರುಕುಳ ನೀಡಲಾಗುತ್ತಿದ್ದು, ಅತಿಯಾದ ಒತ್ತಡ ಹಾಕಿ ತೆರಿಗೆ ಸಂಗ್ರಹ ಮಾಡಿಸಲಾಗುತ್ತಿದೆ. ಇದರಿಂದ ಸಿಬ್ಬಂದಿ ಆತ್ಮಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆಯಿದ್ದು, ಕೂಡಲೇ ವಿಚಾರಣೆಯನ್ನು ಕೈಬಿಟ್ಟು ಪ್ರಕರಣ ಮುಕ್ತಾಯಗೊಳಿಸಬೇಕು' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಲ್ಲಿಸಲಾಗಿರುವ ಪತ್ರದಲ್ಲಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮನವಿ ಮಾಡಿದ್ದಾರೆ.

ಬಿಬಿಎಂಪಿ ಸುದ್ದಿ

ಸಮ್ಮೇಳನ 25ರಿಂದ

ಮಂಗಳೂರು: 'ಸಾಮರಸ್ಯ, ಉದ್ಯೋಗ, ಘನತೆಯ ಬದುಕಿಗಾಗಿ' ಘೋಷಣೆಯೊಂದಿಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ (ಡಿವೈ-ಎಫ್‌ಐ)12ನೇ ರಾಜ್ಯ ಸಮ್ಮೇಳನವು ಉಳ್ಳಾಲದ ಕಲ್ಲಾಪು ಬಳಿ ಇರುವ ಯುನಿಟಿ ಸಭಾಂಗಣದಲ್ಲಿ ಫೆ.25ರಿಂದ 27ರವರೆಗೆ ನಡೆಯಲಿದೆ.

PUBLIC NOTICE

Notice is hereby given to the general public that Mrs. Kantha Aggarwal, Mr. Satish Kumar Goyal and Mr. Anil Goyal, all children of Late Vidyarani Goyal, Mrs. Saroj Goyal, wife of Mr. Rajendra Goyal, Mr. Subhash Chandra Goyal, son of Mr. Mothiram Goyal, all residing at Bengaluru being the owners (**'Owners'**) of all that piece and parcel of immovable property bearing Survey No. 129/1A, measuring 03 Acres, situated at Hoodi Village, K. R. Puram Hobli, Bengaluru East Taluk and Bengaluru Urban District (**'Property'**) have misplaced/lost the following original documents (**'Original Documents'**) in connection with Property:

(i) Sale Deed dated 06.07.1992 (Registered as Document No. 5841/1992-93) executed by Mr. Pradeep Kumar Arya, son of Mr. P.N. Arya and another in favour of Mrs. Saroj Goyal, wife of Mr. Rajendra Goyal;
(ii) Official Memorandum/ Conversion Order dated 06.12.2000 bearing No. B.DS:ALN:SR (SA) 226:2000-01, issued by the Special Deputy Commissioner, Bangalore District, Bangalore; and
(iii) Gift Deed dated 09.07.2004 (Registered as Document No. KRI-1-09825-2004-05, Book-1, stored in C.D. No. KRID62, at the office of the Sub-Registrar, Krishnaraja Pura, Bangalore) executed by Mrs. Saroj Goyal, wife of Mr. Rajendra Goyal in favour of Mr. Subhash Chandra Goyal, son of Mr. Mothiram Goyal.

Despite best efforts, the Owners are unable to trace the Original Documents for which a Police Complaint intimating the loss of the Original Documents has been filed with Bengaluru City Police Station, vide: (i) Lost Report No. 0936084/2024 dated 16.02.2024; (ii) Lost Report No. 0788371/2023 dated 31.10.2023; and (iii) Lost Report No. 0025119/2021 dated 09.08.2021.

Members of the public are hereby notified that in the event any person/s has/have found/ discovered/ is in custody of the Original Documents, such person/s is/are hereby requested to return the said Original Documents to the undersigned, at the below mentioned address.

Sd/-
Ms. Brijita Prakash, Partner
DSK Legal,
Prestige Loka, No. 201, 2nd Floor, No. 7/1 & 7/7, Brunton Road, Craig Park Layout, Bengaluru – 560025, Tel: 080-69548770.

Date : 20-02-2024
Place : Bengaluru

ರೇಷ್ಮೆ ಇಲಾಖೆ
ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ,
ಕೋಲಾರ ವಿಭಾಗ, ಕೋಲಾರ

ಸಂಖ್ಯೆ: ರೇಸನಿ/ಕೋ/ಸಿಬ್ಬಂದಿ/04/2023-24 ದಿನಾಂಕ: 15.02.2024

ಪತ್ರಿಕಾ ಪ್ರಕಟಣೆ

ಶ್ರೀ ಸಿ.ಸುನೀಲ್, ರೇಷ್ಮೆ ಪ್ರದರ್ಶಕರು, ತಾಂತ್ರಿಕ ಸೇವಾ ಕೇಂದ್ರ, ಕೋಲಾರ ಆದ ನೀವು ತಾಯಿಯ ಅನಾರೋಗ್ಯದ ಕಾರಣವನ್ನು ನೀಡಿ ದಿನಾಂಕ: **15.12.2022** ರಿಂದ **31.12.2022** ರವರೆಗೆ ರಜೆಯ ಮೇಲೆ ತೆರಳಿದ್ದು, ಆನಂತರ ದೂರವಾಣಿ ಮೂಲಕ ದಿನಾಂಕ: **30.04.2023** ರವರೆಗೆ ರಜೆಯನ್ನು ಮುಂದುವರೆಸಲು ಕೋರಿರುತ್ತೀರಿ. ನೀವು ದಿನಾಂಕ: **01.05.2023** ರಿಂದ ಸರ್ಕಾರಿ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಕೆಲಸಕ್ಕೆ ಕೂಡಲೇ ಹಾಜರಾಗಲು ಸೂಚಿಸಿ ದಿನಾಂಕ: **29.04.2023, 11.05.2023** ಹಾಗೂ 14.06.2023 ರಲ್ಲಿ ನಿಮ್ಮ ವಾಸಸ್ಥಳಕ್ಕೆ ನೋಂದಣಿ ಅಂಚೆ ಮೂಲಕ ಕಳುಹಿಸಿರುವ ಪತ್ರಗಳು ಜಾರಿಯಾಗದೇ ವಾಪಸ್ಸು ಬಂದಿರುತ್ತವೆ. ಆದುದರಿಂದ ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಹಾಜರಾಗಿ ಸರ್ಕಾರಿ ಕೆಲಸಕ್ಕೆ ಕಾರ್ಯವರದಿ ಮಾಡಿಕೊಳ್ಳಲು ಅಂತಿಮವಾಗಿ ತಿಳಿಸಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ನಿಮ್ಮನ್ನು ಸೇವೆಯಿಂದ ವಜಾ ಮಾಡಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ತಿಳಿಸಿದೆ. ಇದು ಅಂತಿಮ ತಿಳುವಳಿಕೆ ಆಗಿರುತ್ತದೆ.

ಸಹಿ/- ರೇಷ್ಮೆ ಸಹಾಯಕ ನಿರ್ದೇಶಕರು
ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 360/ಕೆ.ಎಸ್.ಎಂ.ಸಿ.ಎ/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಎಸ್‌ಡಬ್ಲ್ಯುಡಿ, ದಾಸರಹಳ್ಳಿ ವಲಯ, ಬಿಬಿಎಂಪಿ, 9ನೇ ಮಹಡಿ, ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್ ಜಯನಗರ, ಬೆಂಗಳೂರು-560 011

ನಂ.: ಕಾಪಾಅ/ಎಸ್‌ಡಬ್ಲ್ಯುಡಿ/ದಾಹವ/ಟೆಂಡರ್/04/2023-24 ದಿನಾಂಕ: 19.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿಪಿ ಪೋರ್ಟಲ್ ಮೂಲಕ) ದ್ವಿ-ಲಕೋಟೆ ಪದ್ಧತಿ

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಲಯ-ಎಸ್‌ಡಬ್ಲ್ಯೂಡಿ) ವಿಭಾಗ ಇವರು **"ದಾಸರಹಳ್ಳಿ ವಲಯದ ವಾರ್ಡ್ ನಂ. 41ರ ಎನ್‌ಟಿಟಿಎಫ್‌ಎಫ್ ವೃತ್ತ ಸಮೀಪದ ಎಸ್‌ಡಬ್ಲ್ಯುಡಿ ಡಿಹೆಚ್311ಗೆ ಆರ್‌ಸಿಸಿ ತಡೆಗೋಡೆ ನಿರ್ಮಿಸಲು"** ಪೂರ್ವ ಮತ್ತು ನಂತರದ ಹಂತಗಳ ನಿರ್ಮಾಣ ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣ ಪರೀಕ್ಷೆಗಳಿಗೆ ಅರ್ಹ ನೋಂದಾಯಿತ / ಪ್ರತಿಷ್ಠಿತ ಸಲಹಾ ಸಂಸ್ಥೆಗಳಿಂದ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವ ಕಾರ್ಯಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಪಿಎಂಸಿಯ ಅಂದಾಜು ವೆಚ್ಚ (ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ದಾಸರಹಳ್ಳಿ ವಲಯದ **ವಾರ್ಡ್ ನಂ. 41**ರ ಎನ್‌ಟಿಟಿಎಫ್‌ಎಫ್ ವೃತ್ತ ಸಮೀಪದ ಎಸ್‌ಡಬ್ಲ್ಯುಡಿ ಡಿಹೆಚ್311ಗೆ ಆರ್‌ಸಿಸಿ ತಡೆಗೋಡೆ ನಿರ್ಮಿಸಲು ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪಿಎಂಸಿ **ಸೇವೆಯನ್ನು ಒದಗಿಸುವ ಯೋಜನೆಯ ವೆಚ್ಚ: ರೂ. 500.00 ಲಕ್ಷಗಳು**)	12.19	30,000/-

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ **20.02.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಮುಖ್ಯ ಅಭಿಯಂತರರ ಕಛೇರಿ, ಎಸ್‌ಡಬ್ಲ್ಯುಡಿ, ಬಿಬಿಎಂಪಿ, 9ನೇ ಮಹಡಿ, ಶಾಪಿಂಗ್ ಕಾಂಪ್ಲೆಕ್ಸ್, ಜಯನಗರ 4ನೇ ಬ್ಲಾಕ್, ಬೆಂಗಳೂರು-560011 ಇಲ್ಲಿ **26.02.2024**ರ **ಸಂಜೆ 4:00 ಗಂಟೆಗೆ** ನಡೆಯಲಿದೆ. (3) ಟೆಂಡರ್ ದಸ್ತಾವೇಜುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **05.03.2024**ರ **ಸಂಜೆ 4:00 ಗಂಟೆ**ವರೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07.03.2024**ರ **ಸಂಜೆ 4:30 ಗಂಟೆಗೆ** ಅಥವಾ ಮುಂದಿನ ಕೆಲಸದ ದಿನದಂದು. (5) ಆರ್ಥಿಕ ಬಿಡ್ ತೆರೆಯುವುದು: ಬಿಡ್‌ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ, ದಾಸರಹಳ್ಳಿ ವಲಯ, ಬಿಬಿಎಂಪಿ

ಕಲ್ಲಂಗಡಿ, ದ್ರಾಕ್ಷಿ ಮೇಳಕ್ಕೆ ಚಾಲನೆ

ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಫೆ. 29ರವರೆಗೆ ರಿಯಾಯತಿ ದರದಲ್ಲಿ ಮಾರಾಟ

ಪ್ರಜಾವಾಣಿ ವಾರ್ತೆ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸೋಮವಾರ ದ್ರಾಕ್ಷಿ ಹಾಗೂ ಕಲ್ಲಂಗಡಿ ಮೇಳಕ್ಕೆ ಚಾಲನೆ ನೀಡಿದರು. (ಎಡದಿಂದ) ಹಾಪ್‌ಕಾಮ್ಸ್ ಉಮಾಶಂಕರ್ ಮಿರ್ಜೆ, ದೇವರಾಜ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ/ರಂಜು ಪಿ

ಬೆಂಗಳೂರು: 'ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೆಳೆದ ದ್ರಾಕ್ಷಿ ಮತ್ತು ಕಲ್ಲಂಗಡಿ ಹಣ್ಣುಗಳನ್ನು ರೈತರಿಂದ ನೇರವಾಗಿ ಖರೀದಿಸಿ ಹಾಪ್‌ಕಾಮ್ಸ್ ಮೂಲಕ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದ (ಹಾಪ್‌ಕಾಮ್ಸ್) ವತಿಯಿಂದ ಬುಧವಾರ ಆಯೋಜಿಸಿದ್ದ 'ದ್ರಾಕ್ಷಿ ಹಾಗೂ ಕಲ್ಲಂಗಡಿ ಮೇಳ' ಉದ್ಘಾಟಿಸಿ ಅವರು ಮಾತನಾಡಿದರು.

'ಬೇಸಿಗೆ ಕಾಲದಲ್ಲಿ ದ್ರಾಕ್ಷಿ ಮತ್ತು ಕಲ್ಲಂಗಡಿ ಹಣ್ಣುಗಳಿಗೆ ಬೇಡಿಕೆ ಹೆಚ್ಚು, ಆದ್ದರಿಂದ ಈ ಮೇಳವನ್ನು ಆಯೋಜಿಸಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಹೆಚ್ಚು ಹಣ್ಣುಗಳನ್ನು ಖರೀದಿಸುವುದರ ಮೂಲಕ ರೈತರಿಗೆ ನೆರವಾಗಬೇಕು' ಎಂದು ಕರೆ ನೀಡಿದರು.

'ಕರಾವಳಿ ಮತ್ತು ಮಲೆನಾಡಿನ ಪ್ರದೇಶ ಹೊರತುಪಡಿಸಿ ರಾಜ್ಯದಾದ್ಯಂತ ಬೆಳೆದ ಕಿರಣ್ ಕಲ್ಲಂಗಡಿ, ಹಳದಿ ಬಣ್ಣದ ಕಲ್ಲಂಗಡಿ, ಮತ್ತು ವಿಜಯಪುರ, ಬಾಗಲಕೋಟೆ, ಕೊಪ್ಪಳ, ಚಿಕ್ಕ ಬಳ್ಳಾಪುರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳಲ್ಲಿ ಬೆಳೆದ ಬೆಂಗಳೂರು ನೀಲಿ, ಕೃಷ್ಣ ಶರದ್, ಥಾಮ್ಸನ್ ಸೀಡ್‌ಲೆಸ್, ಸೋನಾಕ, ಸೂಪರ್ ಸೋನಾಕ, ಇಂಡಿಯನ್ ರೆಡ್ ಗ್ಲೋಬ್ ಸೇರಿದಂತೆ ಸುಮಾರು 13ರಿಂದ 15 ತಳಿಯ ದ್ರಾಕ್ಷಿ ಹಣ್ಣುಗಳನ್ನು ಮೇಳದಲ್ಲಿ ಖರೀದಿಸಬಹುದು' ಎಂದರು.

'ನಗರದಲ್ಲಿರುವ 211 ಹಾಪ್‌ಕಾಮ್ಸ್ ಮಳಿಗೆ ಗಳಲ್ಲಿ ಫೆ. 29ರವರೆಗೆ ಶೇ 10ರಷ್ಟು ರಿಯಾಯಿತಿ ದರದಲ್ಲಿ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತದೆ. ಮೇಳದಲ್ಲಿ ಒಂದು ಕೆ.ಜಿ. ದ್ರಾಕ್ಷಿಗೆ ಕನಿಷ್ಠ ₹46 ರಿಂದ ಗರಿಷ್ಠ ₹230 ರವರೆಗೂ ದರವಿದೆ. ಒಂದು ಕೆ.ಜಿ. ಕಲ್ಲಂಗಡಿಗೆ ಕನಿಷ್ಠ ₹31 ರಿಂದ ₹ ಗರಿಷ್ಠ ₹38ರವರೆಗೂ ಇದೆ' ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ದೇವರಾಜ್ ತಿಳಿಸಿದರು.

'ರಾಜ್ಯದಲ್ಲಿ ಒಟ್ಟು 36,117 ಹೆಕ್ಟೇರ್ ಪ್ರದೇಶ ದಲ್ಲಿ ವಿವಿಧ ತಳಿಯ ದ್ರಾಕ್ಷಿಗಳನ್ನು ಬೆಳೆಯಲಾಗುತ್ತಿದೆ. ಅದರಲ್ಲಿ ಮುಖ್ಯವಾಗಿ 31,086 ಹೆಕ್ಟೇರ್ ಪ್ರದೇಶದಲ್ಲಿ ಬೀಜರಹಿತ ದ್ರಾಕ್ಷಿಯನ್ನು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 7,74,993 ಮೆಟ್ರಿಕ್ ಟನ್ ದ್ರಾಕ್ಷಿ ಉತ್ಪನ್ನ ಬೆಳೆಯಲಾಗಿದೆ. ಅದರ ಜೊತೆಗೆ 4,700 ಹೆಕ್ಟೇರ್ ಪ್ರದೇಶದಲ್ಲಿ ಕಲ್ಲಂಗಡಿ ಬೆಳೆಯಲಾಗುತ್ತಿದೆ. ಈ ಬಾರಿ ಒಟ್ಟು 1,98,973 ಮೆಟ್ರಿಕ್ ಟನ್ ಕಲ್ಲಂಗಡಿ ಬೆಳೆಯಲಾಗಿದೆ. ಮೇಳದಲ್ಲಿ 500 ಮೆಟ್ರಿಕ್ ಟನ್ ದ್ರಾಕ್ಷಿ ಹಾಗೂ 900 ಮೆಟ್ರಿಕ್ ಟನ್ ಕಲ್ಲಂಗಡಿ ಹಣ್ಣು ಮಾರಾಟ ಮಾಡುವ ಗುರಿ ಇದೆ' ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮಾಶಂಕರ್ ಮಿರ್ಜೆ ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ ಭಾಗವಹಿಸಿದ್ದರು.

ಬಂಟರ ಅಭಿವೃದ್ಧಿ ನಿಗಮ: ಸಿ.ಎಂ ಸಿದ್ದರಾಮಯ್ಯ ಭೇಟಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಂಟರ ಅಭಿವೃದ್ಧಿ ನಿಗಮ ಸ್ಥಾಪಿಸುವುದಾಗಿ ಮಾತುಕೊಟ್ಟಿದ್ದರೂ ರಾಜ್ಯ ಬಜೆಟ್‌ನಲ್ಲಿ ಈ ಕುರಿತು ಪ್ರಸ್ತಾಪಿಸಿಲ್ಲ ಎಂದು ದೂರಿದ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸುವುದಾಗಿ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಿಗಮ ಸ್ಥಾಪಿಸುವುದಾಗಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನಿಡಿತ್ತು. ಉಡುಪಿಯಲ್ಲಿ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ನಡೆದ ವಿಶ್ವ ಬಂಟರ ಸಮ್ಮೇಳನದಲ್ಲಿ ಸಿದ್ದರಾಮಯ್ಯ ಅವರು ಈ ಕುರಿತು ಘೋಷಣೆ ಮಾಡಿದ್ದರು. ಆದರೆ ಬಜೆಟ್‌ನಲ್ಲಿ ಬಂಟರನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂದು ಆರೋಪಿಸಿದರು.

ಬಜೆಟ್‌ನಲ್ಲಿ ಈ ಕುರಿತ ಪ್ರಸ್ತಾಪ ಇಲ್ಲದೇ ಇರುವುದೇ ಸಾಕ್ಷಿ. ಕೂಡಲೇ ಸರ್ಕಾರ ನಿಗಮ ಸ್ಥಾಪನೆ ಮಾಡಿ ₹ 500 ಕೋಟಿ ಅನುದಾನ ಒದಗಿಸಬೇಕು ಎಂದು ಅವರು ಆಗ್ರಹಿಸಿದರು.

ಒಕ್ಕೂಟದ ಕರ್ನಿರೆ ವಿಶ್ವನಾಥ ಶೆಟ್ಟಿ, ಜಯಕರ್ ಶೆಟ್ಟಿ ಇಂದ್ರಾಳಿ, ಚಂದ್ರಹಾಸ್ ಡಿ.ಶೆಟ್ಟಿ, ಜಗನ್ನಾಥ ಶೆಟ್ಟಿ ಬಾಳ ಇದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-181/2591/2023-24 ದಿನಾಂಕ: 15-02-2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಗರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ. ಕೆ.ಎಸ್. ಭಾಸ್ಕರಸಾ ಶ್ರೀ. ಕೆ.ಎಸ್. ಓಂಪ್ರಕಾಶ ಶ್ರೀ. ಕೆ.ಎಸ್. ಶಿವರಾಂಸಾ	ಬೆಂಗಳೂರು ಉತ್ತ	ದಾಸನಪುರ	ಮಾಚೋಹಳ್ಳಿ	127/5 127/6 127/7	1-00 1-00 1-03	ವ್ಯವಸಾಯ ವಲಯ	ವಸತಿ
				ಒಟ್ಟು	3-03		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಮತ್ತು ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-230/2654/2023-24 ದಿನಾಂಕ: 19-02-2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಗರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ ಜಿ. ವೆಂಕಟೇಶ್	ಬೆಂಗಳೂರು ಪೂರ್ವ	ಬಿದರಹಳ್ಳಿ	ಆದೂರು	135/2	0-12	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸವರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಸುದ್ದಿ 2 ನಿಮಿಷ

ಹನುಮಂತಯ್ಯಗೆ 'ಕೈ' ತಪ್ಪಿದ ಟಿಕೆಟ್: ಬಿಕೆಸಿ ಅಸಮಾಧಾನ

ಬೆಂಗಳೂರು: 'ರಾಜ್ಯಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯಿಂದ ಎಲ್. ಹನುಮಂತಯ್ಯ ಅವರನ್ನು ಕೈಬಿಟ್ಟಿರುವುದು ಆಘಾತ ತಂದಿದೆ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ದಲಿತ ಎಡಗೈ ಸಮುದಾಯದ ಹನುಮಂತಯ್ಯ ಅವರು ಗ್ರಾಮೀಣ ಪ್ರದೇಶದ ಅತ್ಯಂತ ಬಡ ಕುಟುಂಬದಲ್ಲಿ ಜನಿಸಿ, ಸಾಕಷ್ಟು ಕಷ್ಟ ಅನುಭವಿಸಿದ್ದರು. ಕಷ್ಟಪಟ್ಟು ಶಿಕ್ಷಣ ಪಡೆದು ಸುಲಲಿತವಾಗಿ ಇಂಗ್ಲಿಷ್ ಮಾತನಾಡುತ್ತಾರೆ. ರಾಜ್ಯಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದರು. ಅವರನ್ನು ಈ ಬಾರಿಯ ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿ ಮಾಡದಿರುವುದು ಉತ್ತಮ ಬೆಳವಣಿಗೆ ಅಲ್ಲ' ಎಂದು ತಿಳಿಸಿದ್ದಾರೆ.

'ಕೇಂದ್ರ ಸರ್ಕಾರವು ಸಂವಿಧಾನದತ್ತ ಎಲ್ಲ ಅಧಿಕಾರವನ್ನೂ ಮೊಟಕುಗೊಳಿಸಿ ಒಕ್ಕೂಟ ವ್ಯವಸ್ಥೆಯನ್ನೇ ದುರ್ಬಲಗೊಳಿಸುತ್ತಿದೆ. ರಾಜ್ಯಗಳೇ ವಸೂಲಿ ಮಾಡುವ ತೆರಿಗೆ ಹಣವನ್ನು ಬಿಜೆಪಿಯೇತರ ಪಕ್ಷಗಳು ಅಧಿಕಾರಿದಲ್ಲಿರುವ ರಾಜ್ಯಗಳಿಗೆ ನೀಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಂಬಂಧ ಕುರಿತು ರಾಜ್ಯಸಭೆಯಲ್ಲಿ ಚರ್ಚೆ ನಡೆಸಲು ಸಾಕಷ್ಟು ಪಾಂಡಿತ್ಯವುಳ್ಳ ಹನುಮಂತಯ್ಯ ಅವರನ್ನು ಮತ್ತೆ ಆರಿಸಿ ಕಳುಹಿಸುವ ಅಗತ್ಯವಿತ್ತು' ಎಂದು ಹೇಳಿದ್ದಾರೆ.

'ಚುನಾವಣೆ ಹೊಸ್ತಿಲಿನಲ್ಲಿ ಎಡಗೈ ದಲಿತರ ಅಸಮಾಧಾನವನ್ನು ನಿರ್ಲಕ್ಷಿಸಬಾರದು' ಎಂದು ಸಲಹೆ ನೀಡಿದ್ದಾರೆ.

ವಿಧಾನ ಪರಿಷತ್ ಚುನಾವಣೆ ಇಂದು ಮತ ಎಣಿಕೆ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆಯ ಮತ ಎಣಿಕೆ ಮಂಗಳವಾರ ನಡೆಯಲಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರ ಉಪ ಚುನಾವಣೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ ವ್ಯಾಪ್ತಿಯ ಮತದಾರರು ಫೆ.16ರಂದು ಮತದಾನ ಮಾಡಿದ್ದರು. ಒಟ್ಟು 19,152 ಮತಗಳ ಪೈಕಿ 16,544 ಮಂದಿ (ಪುರುಷರು 6,504, ಮಹಿಳೆಯರು 10,040) ಮತ ಚಲಾಯಿಸಿದರು.

ಕಾಂಗ್ರೆಸ್ ಅಭ್ಯರ್ಥಿಯಾಗಿ ಪುಟ್ಟಣ್ಣ, ಬಿಜೆಪಿ- ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಎ.ಪಿ. ರಂಗನಾಥ್ ಸೇರಿದಂತೆ ಒಟ್ಟು ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ದೇವೇಗೌಡರಿಂದ ಚಮಚಾಗಿರಿ ಎಚ್.ವಿಶ್ವನಾಥ್ ಟೀಕೆ

ಪ್ರಜಾವಾಣಿ ವಾರ್ತೆ



ಮೈಸೂರು: 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳುವ ಮೂಲಕ ಚಮಚಾಗಿರಿ ಮಾಡುತ್ತಿದ್ದಾರೆ' ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಟೀಕಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಅವರಿಗಿಂತಲೂ ಮೋದಿ ಸಾಧನೆ ಮಾಡಿದ್ದಾರಾ?' ಎಂದು ಕೇಳಿದರು.

'ನೆಹರೂ, ಇಂದಿರಾ ಗಾಂಧಿ ಬಡತನ ನಿರ್ಮೂಲನೆ ಮಾಡಿ ದೇಶವನ್ನು ಅಭಿವೃದ್ಧಿ ಪಥದತ್ತ ತಂದಿದ್ದರು. ಆದರೆ, ದೇವೇಗೌಡರು ಮೋದಿಯನ್ನು ಕೊಂಡಾಡುತ್ತಿರುವುದು ವಿಪರ್ಯಾಸ. ಅವರಂತಹ ಹಿರಿಯ ನಾಯಕರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಜಾತ್ಯತೀತ ಪದಕ್ಕೂ ಅವರು ತಿಲಾಂಜಲಿ ಇಟ್ಟಿದ್ದಾರೆ. ಮೋದಿಯಂತಹ ನಾಯಕನನ್ನು ಕಂಡಿರಲಿಲ್ಲ ಎಂದು ಹೇಳಿರುವುದು ಚಮಚಾಗಿರಿಯಲ್ಲದೇ ಬೇರೇನೂ ಅಲ್ಲ' ಎಂದು ಹರಿಹಾಯ್ದರು.

ಹಿಂಬಾಕಿ ಪಾವತಿಸಲು ಸಾರಿಗೆ ನೌಕರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಸಾರಿಗೆ ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ 2020ರ ಜನವರಿ 1ರಿಂದ ಅನ್ವಯವಾಗುವಂತೆ ಒಂದೇ ಕಂತಿನಲ್ಲಿ ವೇತನದ ಹಿಂಬಾಕಿಯನ್ನು ಪಾವತಿಸುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್, '2020ರ ಡಿಸೆಂಬರ್ ಹಾಗೂ 2021ರ ಏಪ್ರಿಲ್‌ನಲ್ಲಿ ಹಮ್ಮಿಕೊಂಡಿದ್ದ ಮುಷ್ಕರದಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರ ಮೇಲೆ ಹಾಕಿರುವ ಪ್ರಕರಣಗಳು ಹಾಗೂ ಶಿಸ್ತು ಕ್ರಮ ರದ್ದುಗೊಳಿಸಿ ಅವರನ್ನು ಕರ್ತವ್ಯಕ್ಕೆ ನಿಯೋಜಿಸಬೇಕು' ಎಂದು ಒತ್ತಾಯಿಸಿದರು.

'ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಸರ್ಕಾರಿ ನೌಕರರಿಗೆ ನೀಡುವ ವೇತನ ಮತ್ತು ಸೌಲಭ್ಯಗಳನ್ನು ಸಾರಿಗೆ ನೌಕರರಿಗೂ ವಿಸ್ತರಿಸಬೇಕು. ಸಾರಿಗೆ ಸಂಘಗಳ ಸಂಸ್ಥೆಗಳಿಗೆ ಕೂಡಲೇ ಚುನಾವಣೆ ನಡೆಸಬೇಕು. ಸಾರಿಗೆ ನೌಕರರಿಗೆ ಹಾಗೂ ಅವರ ಅವಲಂಬಿತರಿಗೆ ಉಚಿತ ಆರೋಗ್ಯ ಸೌಲಭ್ಯ ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.

ಕೆಬಿಎನ್‌ಎನ್ ವರ್ಕರ್ಸ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಸ್. ನಾಗರಾಜು, 'ಸಾರಿಗೆ ಸಂಸ್ಥೆಗಳಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಖಾಸಗಿ ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುತ್ತಿರುವುದನ್ನು ಕೂಡಲೇ ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ 2024ರ ಮಾರ್ಚ್ 4ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗುವುದು' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

'ಅಧ್ಯಯನ, ಅನುಭವದಿಂದ ಕಾವ್ಯ ಕಟ್ಟಬೇಕಿದೆ'

ಪ್ರಜಾವಾಣಿ ವಾರ್ತೆ

ಹಾವನೂರು ಬಡಾವಣೆಯ ಕಚೇರಿಯಲ್ಲಿ ಭೂಮಿಕಾ ಸೇವಾ ಟ್ರಸ್ಟ್ ಆಯೋಜಿಸಿದ್ದ ಕವಿಗೋಷ್ಠಿಯನ್ನು ಕಲಾವಿದೆ ಲಕ್ಷ್ಮಿ ಭಟ್ ಉದ್ಘಾಟಿಸಿದರು. ಕವಿ ವೈ.ಬಿ.ಎಚ್. ಜಯದೇವ್, ಕವಯತ್ರಿ ಮಮತಾ ವಾರನಹಳ್ಳಿ, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕಣ್ಣೂರ, ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ಕೃಷ್ಣಮೂರ್ತಿ ಇದ್ದರು

ಪೀಣ್ಯ ದಾಸರಹಳ್ಳಿ: 'ಅಧ್ಯಯನ, ಅನುಭವ, ಚಿಂತನಗಳ ಮೂಲಕ ಇಂದಿನ ಕವಿಗಳು ಕಾವ್ಯ ಕಟ್ಟಬೇಕಿದೆ' ಎಂದು ಕನ್ನಡ ಜಾನಪದ ಪರಿಷತ್ತು ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್.ಜಯದೇವ್ ಅಭಿಪ್ರಾಯಪಟ್ಟರು

ಹಾವನೂರು ಬಡಾವಣೆಯ ಭೂಮಿಕಾ ಸೇವಾ ಟ್ರಸ್ಟ್ ಆಯೋಜಿಸಿದ್ದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಇಂದಿನ ಕವಿಗಳಿಗೆ ಜೀವನಾನುಭವದ ಕೊರತೆಯಿದೆ. ಸಮೃದ್ಧವಾದ ಕಾವ್ಯವನ್ನು ಕಟ್ಟಲು ಅವರು ಪ್ರಾಚೀನ ಸಾಹಿತ್ಯದ ಮೊರೆ ಹೋಗಬೇಕಿದೆ. ಇಂದಿನ ಸಾಹಿತ್ಯದ ಅಧ್ಯಯನ ಕೂಡ ಕವಿಗಳಿಗೆ ಉತ್ಕೃಷ್ಟ ಕವಿತೆಗಳನ್ನು ರಚಿಸಲು ಸಹಾಯಕವಾಗಬಲ್ಲದು' ಎಂದು ನುಡಿದರು.

ಕಲಾವಿದೆ ಲಕ್ಷ್ಮಿಭಟ್ ಮಾತನಾಡಿ, 'ಬರೆಯುವುದಕ್ಕೆ ನಮಗೆ ಭಾಷಾ ಶುದ್ಧತೆ ಇರಬೇಕು. ಅದಕ್ಕಾಗಿ ದಿನಪತ್ರಿಕೆಗಳನ್ನು ಓದಬೇಕು ನೂರಾರು ಪುಸ್ತಕಗಳನ್ನು ಅಭ್ಯಾಸ ಮಾಡಬೇಕು. ಆಗ ಬರವಣಿಗೆಯ ಮೇಲೆ ಹಿಡಿತ ಬರುತ್ತದೆ' ಎಂದು ಹೇಳಿದರು.

'ಭಾಷೆಯ ಭಂಡಾರವನ್ನು ನಮ್ಮಲ್ಲಿ ಅಳವಡಿಸಿಕೊಂಡರೆ ಕವಿತೆಗಳ ಸೃಷ್ಟಿ ಬಹಳ ಸುಲಭ ಅನಿಸುತ್ತದೆ. ಕವಿಗಳು ಕೂಡ ಕಲಾವಿದರ ಹಾಗೆ. ಕಲಾವಿದರು ಮನಸ್ಸಿನಲ್ಲಿ ಪಾತ್ರಗಳನ್ನು ಇಟ್ಟುಕೊಂಡು ಹೇಗೆ ಅಭಿನಯಿಸುತ್ತೇವೋ ಹಾಗೆ ಕವಿಗಳು ಕೂಡ ಅಲ್ಲಿನ ಸುತ್ತಮುತ್ತಲ ಪರಿಸರವನ್ನು ನೋಡಿ ಕವಿತೆಗಳನ್ನು ಸೃಷ್ಟಿ ಮಾಡುವ ಶಕ್ತಿ ಅವರಲ್ಲಿದೆ' ಎಂದರು.

ಕವಯತ್ರಿ ಮಮತಾ ವಾರನಹಳ್ಳಿ, ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕಣ್ಣೂರ, ಕೃಷ್ಣಮೂರ್ತಿ ಇದ್ದರು. ಕವಯತ್ರಿ ಬಿ.ಎಂ.ಪ್ರಮೀಳಾ ಅವರಿಗೆ ಅಭಿನಂದಿಸಲಾಯಿತು.

ಕವಿಗೋಷ್ಠಿಯಲ್ಲಿ 20ಕ್ಕೂ ಹೆಚ್ಚು ಕವಿಗಳು ಭಾಗವಹಿಸಿ ಕವನ ವಾಚನ ಮಾಡಿದರು.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳಿಗೆ ಯೋಜನೆ: ಬಾಣಲೆಯಿಂದ ಬೆಂಕಿಗೆ ಬಿದ್ದ ಸ್ಥಿತಿ

ಬದಲಾಗದ ಗ್ರಾಮಗಳ ಚಹರೆ, ತಪ್ಪದ ಸಂಕಷ್ಟ

• ಪ್ರಸನ್ನ ಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಗುಂಡಿ ಬಿದ್ದ ರಸ್ತೆಗಳು, ಅಲ್ಲಲ್ಲಿ ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಮ್ಯಾನ್‌ಹೋಲ್‌ಗಳು, ಜಲ್ಲಿ ತುಂಬಿದ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಹೈರಾಣಾಗುತ್ತಿರುವ ಸವಾರರು...

ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಸಿಡೇದಹಳ್ಳಿ, ಚಿಕ್ಕಸಂದ್ರ, ಮ್ಯಾದರಹಳ್ಳಿ, ಶೆಟ್ಟಿಹಳ್ಳಿ ಮತ್ತು ಅಬ್ಬಿಗೆರೆಯಲ್ಲಿ ಕಾಡುತ್ತಿರುವ ಸಮಸ್ಯೆಗಳಿವು...

2007ರಲ್ಲಿ 110 ಹಳ್ಳಿಗಳು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ್ದವು. ಆಗ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಐದು ಗ್ರಾಮಗಳು ಸೇರ್ಪಡೆಗೊಂಡಿದ್ದವು. ಈ ಬೆಳವಣಿಗೆಯ ನಂತರ ಸ್ಥಳೀಯರಲ್ಲಿ 'ಅಭಿವೃದ್ಧಿಯ' ಹೊಸ ಭರವಸೆ ಮೂಡಿತ್ತು. ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಕಲ್ಪಿಸುವ ವಿಚಾರದಲ್ಲಿ ಜನರು ಸಹ ಸಂತೋಷದಲ್ಲಿದ್ದರು. ಆದರೆ, ದಶಕ ಕಳೆದರೂ ಈ ಹಳ್ಳಿಗಳು ನಿರೀಕ್ಷಿತ ಪ್ರಗತಿ ಕಂಡಿಲ್ಲ. ಮೂಲಸೌಕರ್ಯಗಳ ತೊಂದರೆಯಿಂದಾಗಿ ಜನರ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ.

ಭಾಷಣವೇ ಭೂಷಣ ಅಭಿವೃದ್ಧಿ ಗೌಣ

ನೀರು, ರಸ್ತೆ ಸಮಸ್ಯೆ: ಬಾಗಲಗುಂಟೆ ವಾರ್ಡ್ ಸಿಡೇದಹಳ್ಳಿ, ಸಿದ್ದೇಶ್ವರ ಬಡಾವಣೆ, ಕಿರ್ಲೋಸ್ಕರ್ ಬಡಾವಣೆ ರಸ್ತೆಗಳು ಹಾಳಾಗಿದ್ದು ಅಲ್ಲಲ್ಲಿ ತೇಪೆ ಹಾಕಲಾಗಿದೆ. ಕೆಲವು ವಾರ್ಡ್‌ಗಳಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ ಇನ್ನಿತರೆ ಮೂಲಸೌಕರ್ಯಗಳ ವಿಳಂಬದಿಂದಾಗಿ ಸ್ಥಳೀಯರು ಪರದಾಡುವಂತಾಗಿದೆ.

ಕೆಲವು ಕಡೆ ಚರಂಡಿಗಳಲ್ಲಿ ಮತ್ತು ರಾಜ-ಕಾಲುವೆಯಲ್ಲಿ ಕಸ ತುಂಬಿದೆ. ಶೆಟ್ಟಿಹಳ್ಳಿ ವಾರ್ಡ್ ಚಿಕ್ಕಸಂದ್ರದ 14, 15 ಮತ್ತು 16ನೇ ಕ್ರಾಸ್, ಬೋನ್‌ಮಿಲ್‌ನಿಂದ ರಾಜಣ್ಣ ಬಡಾವಣೆವರೆಗಿನ ರಸ್ತೆ ಹಾಳಾಗಿ ನಡೆದಾಡುವುದೂ ಕಷ್ಟವಾಗಿದೆ.

ಅಬ್ಬಿಗೆರೆ ರಸ್ತೆ, ಗಂಗಮ್ಮನ ಗುಡಿ ರಸ್ತೆ, ಕಾನ್ಶಿರಾಮ ನಗರ ರಸ್ತೆಗಳಲ್ಲಿ ಕಾವೇರಿ ನೀರಿನ ಸಂಪರ್ಕಕ್ಕಾಗಿ ಪೈಪ್ ಅಳವಡಿಸಲು ಅಗೆದ ರಸ್ತೆಗಳಲ್ಲಿ ಸಂಚರಿಸಲು ವಾಹನ ಸವಾರರು ಪರದಾಡುತ್ತಿದ್ದಾರೆ. ಪಾಲಿಕೆ ಮತ್ತು ಬೆಂಗಳೂರು ಜಲಮಂಡಳಿ ಹಲವು ನೆಪಗಳನ್ನು ಒಡ್ಡಿ ಕಾಮಗಾರಿಯ ಗಡುವು ಮುಂದೂಡುತ್ತಲೇ ಇದೆ. ಈ ಹಳ್ಳಿಗಳಿಗೆ ನೀರು ಒದಗಿಸಲು ಶುರುವಾದ ಕಾವೇರಿ 5ನೇ ಹಂತದ ಯೋಜನೆಯು ಸಹ ಕುಂಟುತ್ತ ಸಾಗಿದೆ. ಜನರು ದೂಳು ಮತ್ತು ಗುಂಡಿ ಬಿದ್ದಿರುವ ರಸ್ತೆಗಳಲ್ಲಿ ಸಾಗಬೇಕಿದೆ ಎಂದು ಸ್ಥಳೀಯರು ಅಳಲು ತೋಡಿಕೊಳ್ಳುತ್ತಾರೆ.

ಕಾನ್ಶಿರಾಮ ನಗರದ ರಸ್ತೆಯ ಸ್ಥಿತಿ

ಬೋನ್‌ಮಿಲ್‌ನಿಂದ ರಾಜಣ್ಣ ಬಡಾವಣೆವರೆಗಿನ ರಸ್ತೆ ಹಾಳಾಗಿರುವುದು

ಚಿಕ್ಕಸಂದ್ರ– ಎಜಿಬಿ ಬಡಾವಣೆಯ ರಸ್ತೆಯ ಪಕ್ಕದಲ್ಲಿರುವ ರಾಜಕಾಲುವೆಯಲ್ಲಿ ಕಸ ತುಂಬಿದೆ

ಮೂಲಸೌಕರ್ಯಗಳನ್ನು ಕಲ್ಪಿಸಿಲ್ಲ. ಇದರಿಂದ, ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಕೆಲವು ಗುತ್ತಿಗೆದಾರರು ಕಳಪೆ ಕಾಮಗಾರಿ ನಡೆಸಿ ಬಿಲ್ ಮಾಡಿಸಿಕೊಂಡಿದ್ದಾರೆ
ರಘು ಸೂರ್ಯ, ಸವಾಲ್ ಟೀಮ್ ಸಂಸ್ಥಾಪಕ, ಸಿಡೇದಹಳ್ಳಿ

ಕಾವೇರಿ ನೀರು ಪೂರೈಕೆಗಾಗಿ ಅಗೆದ ರಸ್ತೆಗಳಿಗೆ ಸರಿಯಾಗಿ ಡಾಂಬರು ಹಾಕಿಲ್ಲ. ಅಬ್ಬಿಗೆರೆ ರಸ್ತೆ, ಲಕ್ಷ್ಮಿಪುರ ರಸ್ತೆ ಹಾಳಾಗಿದ್ದು, ನಿತ್ಯವೂ ದೂಳಿನಿಂದ ಬಸವಳಿಯುವ ಸ್ಥಿತಿಯಿದೆ
ಮಂಜುನಾಥ್, ಅಬ್ಬಿಗೆರೆ ನಿವಾಸಿ

ಹೆಚ್ಚಿನ ಅನುದಾನ ಕಲ್ಪಿಸಲಿ



ಬಡಾವಣೆಯ ಹಲವು ರಸ್ತೆಗಳು ಇದುವರೆಗೂ ಡಾಂಬರೀಕರಣ ಕಂಡಿಲ್ಲ. ಹಿರಿಯ ನಾಗರಿಕರು, ಮಕ್ಕಳು, ಮಹಿಳೆಯರು ಗುಂಡಿ ಬಿದ್ದಿರುವ ರಸ್ತೆಗಳಲ್ಲಿ ಸಂಚರಿಸಲು ಭಯಪಡುತ್ತಾರೆ. ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾದ ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕಲ್ಪಿಸಬೇಕು.
ವೈ.ಬಿ.ಎಚ್.ಜಯದೇವ್, ಚಿಕ್ಕಸಂದ್ರದ 15ನೇ ಕ್ರಾಸ್ ನಿವಾಸಿ

ಸಂವಿಧಾನ ಜಾಗೃತಿ ಜಾಥಾ

ಕೆ.ಆರ್‌.ಪುರದಲ್ಲಿ ಸಂವಿಧಾನ ಜಾಗೃತಿ ಜಾಥಾ ನಡೆಯಿತು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಮಾಜ ಕಲ್ಯಾಣ ಇಲಾಖೆ ಮತ್ತು ಬಿಬಿಎಂಪಿ ಸಹಯೋಗದಲ್ಲಿ ಕೆ.ಆರ್.ಪುರದಲ್ಲಿ ಸಂವಿಧಾನ ಜಾಗೃತಿ ಜಾಥಾ ನಡೆಯಿತು.

ಪ್ರಮುಖ ಸ್ಥಳಗಳಲ್ಲಿ ಶಾಲಾ ಮಕ್ಕಳು, ಸಂವಿಧಾನ ಬೋಧಿಸುವ ಮೂಲಕ ಸಾರ್ವಜನಿಕರಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಿದರು.

ಕೆ.ಆರ್.ಪುರದಿಂದ ಆರಂಭವಾದ ಜಾಥಾ ತಾಲ್ಲೂಕು ಕಚೇರಿ, ಆನಂದಪುರ, ಟಿ.ಸಿ.ಪಾಳ್ಯ, ಭಟ್ಟರಹಳ್ಳಿ, ಬಸವನಪುರ, ಅಯ್ಯಪ್ಪನಗರ, ದೇವಸಂದ್ರ ಪ್ರಮುಖ ಮುಖ್ಯರಸ್ತೆಗಳಲ್ಲಿ ಸಾಗಿತು.

75ನೇ ಸಂವಿಧಾನ ದಿನಾಚರಣೆ ಪ್ರಯುಕ್ತ ಜಾಗೃತಿ ಜಾಥಾ ಏಕತಾ ಸಮಾವೇಶ ಅಂಗವಾಗಿ ಮತ್ತು ಸ್ತಬ್ಧಚಿತ್ರ-ದೊಂದಿಗೆ ಮೆರವಣಿಗೆ ನಡೆಸಿದರು.

ಬಿಬಿಎಂಪಿ ಎಇಇ ವಿನಯ್ ಮಾತನಾಡಿದರು. ಇಇ ಚನ್ನಬಸಪ್ಪ, ಎಇ ಜಾದವ್, ಕೇಶವ್, ದಮನಿತ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಸಾಮ್ರಾಟ್ ಶೇಖರ್, ಕಾರ್ಯಾಧ್ಯಕ್ಷ ನಾರಾಯಣಸ್ವಾಮಿ, ಅಂಥೋಣಿಸ್ವಾಮಿ, ರುದ್ರೇಶ್, ಮುರುಳಿ, ಲೋಕೇಶ್ ಇದ್ದರು.

2050ಕ್ಕೆ ಹಿರಿಯರ ಸಂಖ್ಯೆ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ 2050ರ ವೇಳೆಗೆ ಹಿರಿಯ ನಾಗರಿಕರ ಸಂಖ್ಯೆ ಶೇ 19.5ರಷ್ಟಕ್ಕೆ ತಲುಪಲಿದೆ. ಹಾಗಾಗಿ, ಅವರಿಗೆ ಪ್ರತ್ಯೇಕವಾಗಿ ತೆರಿಗೆ ಸುಧಾರಣೆ, ಉಳಿತಾಯ ಹಾಗೂ ವಸತಿ ಯೋಜನೆ ರೂಪಿಸುವ ಅಗತ್ಯವಿದೆ ಎಂದು ನೀತಿ ಆಯೋಗದ ವರದಿ ಹೇಳಿದೆ.

'ಭಾರತದಲ್ಲಿ ಹಿರಿಯರ ಆರೈಕೆಯ ಸುಧಾರಣೆಗಳು; ಹಿರಿಯರ ಆರೈಕೆ ಮಾದರಿ ಮರು ರೂಪಿಸುವಿಕೆ' ಹೆಸರಿನ ಶೀರ್ಷಿಕೆಯ ಈ ವರದಿಯಲ್ಲಿ, 'ಹಿರಿಯ ನಾಗರಿಕರಿಗೆ ಅಗತ್ಯ ಸೇವೆ ಒದಗಿಸಲು ರಾಷ್ಟ್ರೀಯ ಮಟ್ಟದಲ್ಲಿ ಪ್ರತ್ಯೇಕವಾದ ಪೋರ್ಟಲ್ ರಚಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದೆ.

'ಮೂಡ್ಲಮಲೆ ಮಾದಯ್ಯ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಪ್ಪ ಚಾರಿತ್ರಿಕ ವ್ಯಕ್ತಿಯೂ ಇರಬಹುದು; ಚಾರಿತ್ರಿಕವಲ್ಲದೇ ಪರಂಪರೆಯಿಂದ ಬಂದ ದೇವರೂ ಆಗಿರಬಹುದು. ಅವರೆಡನ್ನೂ ಬೆರೆಸಿ ಈ ಕಾಲಘಟ್ಟದಲ್ಲಿ ಒಬ್ಬ ಮಾದಪ್ಪನನ್ನು ಸೃಷ್ಟಿ ಮಾಡಿಕೊಂಡಿದ್ದೇವೆ' ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ ವಿಶ್ಲೇಷಿಸಿದರು.

ಸಾಹಿತ್ಯ ಸಂಗಮ ಟ್ರಸ್ಟ್, ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯ-ಕ್ರಮದಲ್ಲಿ ಬೂದನೂರು ಪುಟ್ಟಸ್ವಾಮಿ ಅವರ 'ಮೂಡ್ಲಮಲೆ ಮಾದಯ್ಯ' ಎಂಬ ಸಂಶೋಧನಾ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಮಾದಪ್ಪನ ಪರಂಪರೆ ಆರಂಭವಾದ ದಿನಗಳಿಂದಲೂ ಇಲ್ಲಿಯವರೆಗೆ ಅದೇ ಮಾದಪ್ಪ ಇದ್ದಾನೆಯೇ? ಅದೇ ಮಾದಪ್ಪ ಇರಬೇಕೆಂದೂ ಇಲ್ಲ. ಈ ಎಲ್ಲ ಸೂಕ್ಷ್ಮ ವಿಚಾರಗಳನ್ನು ಗ್ರಹಿಸಿ, ಆಕರ ಗ್ರಂಥಗಳನ್ನು ಬಳಸಿ ಬೂದನೂರು ಪುಟ್ಟಸ್ವಾಮಿ ಸಂಶೋಧನಾ ಕೃತಿ ಬರೆದಿದ್ದಾರೆ. ಇದು ಮೆಚ್ಚುವ ವಿಚಾರ. ಕುಲಕಥನ, ಜಾನಪದ ಕಥನ, ಕಾವ್ಯ ಪುರಾಣ, ಕಾವ್ಯಗಳು... ಸೃಷ್ಟಿ ಆಗಬೇಕಿದ್ದರೆ ಸಂಕ್ರಮಣ ಕಾಲಘಟ್ಟ ಬರಬೇಕು ಎಂದು ಹೇಳಿದರು.

'ಬೇರೆಲ್ಲ ದೇವರಿಗೆ ಒಂದೇ ಪರಿಷೆಯಿದ್ದರೆ, ಮಾದಪ್ಪನಿಗೆ ಹಲವು ಪರಿಷೆಗಳಿವೆ. ಬೇರೆ ರಾಜ್ಯದ ಕೃಷಿಕರೂ ಬೆಟ್ಟಕ್ಕೆ ಬರುತ್ತಾರೆ. ಭಕ್ತರ ಸಂಖ್ಯೆಯೂ ಹೆಚ್ಚಿದೆ. ಬೆಟ್ಟದಲ್ಲಿ ಜಾಗೃತ ದೈವಾರಾಧನೆ ನಡೆಯುತ್ತದೆ' ಎಂದು ಹೇಳಿದರು.

ಪತ್ರಕರ್ತ ಆರ್‌ಜಿ ಹಳ್ಳಿ ನಾಗರಾಜ್ ಮಾತನಾಡಿ, 'ಪುಟ್ಟಸ್ವಾಮಿ ಅವರು ಸಾಹಿತ್ಯ, ಸಾಂಸ್ಕೃತಿಕ ಜಗತ್ತಿನ ಅಪರೂಪದ ಚಿಂತಕ. ಅವರ ಓದು, ಗ್ರಹಿಕೆ ತುಂಬಾ ಭಿನ್ನವಾಗಿತ್ತು. ಅವರು ಓದಿನ ಜ್ಞಾನವನ್ನು ಹಿಗ್ಗಿಸಿಕೊಳ್ಳಲು ಮಲೆ ಮಹದೇಶ್ವರ ಸಂಶೋಧನೆಗೆ ತೊಡಗಿದರು. ಶೈವ ಸಂಸ್ಕೃತಿಯ, ವಚನ ಸಾಹಿತ್ಯದ, ಜಾನಪದ ಸಾಹಿತ್ಯ... ಹೀಗೆ ಅನೇಕ ಕೃತಿಗಳನ್ನು ಗುಡ್ಡೆ ಹಾಕಿಕೊಂಡು ಓದಿ ಸಂಶೋಧನೆ ಕೃತಿ ರಚಿಸಿದ್ದಾರೆ' ಎಂದು ಹೇಳಿದರು.

ನಗರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಬೂದನೂರು ಪುಟ್ಟಸ್ವಾಮಿ ಅವರ 'ಮೂಡ್ಲುಮಲೆ ಮಾದಯ್ಯ' ಕೃತಿಯನ್ನು ಸಾಹಿತಿ ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಿದರು. (ಎಡದಿಂದ) ನಿವೃತ್ತ ಪ್ರಾಂಶುಪಾಲ ಶಿವರಾಮೇಗೌಡ ನಾಗವಾರ, ಸಂಶೋಧನಾ ವಿಜ್ಞಾನಿ ರೀತಿ ಬೂದನೂರು, ಸಾಹಿತಿ ಕಾಳೇಗೌಡ ನಾಗವಾರ, ಪತ್ರಕರ್ತ ಆರ್‌.ಜಿ.ಹಳ್ಳಿ ನಾಗರಾಜ, ಸಾಹಿತ್ಯ ಸಂಗಮ ಟ್ರಸ್ಟ್ ಅಧ್ಯಕ್ಷ ಎಸ್‌.ನಾಗಭೂಷಣ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ
ಕೃತಿ ಹೆಸರು: ಮೂಡ್ಲಮಲೆ ಮಾದಯ್ಯ
ಲೇಖಕ: ಬೂದನೂರು ಪುಟ್ಟಸ್ವಾಮಿ
ಬೆಲೆ: ₹275
ಪುಟಗಳು: 192
ಪ್ರಕಾಶನ: ಶಶಿ ಪಬ್ಲಿಕೇಷನ್ಸ್

ಅನುದಾನ ಹಂಚಿಕೆ: ಬೆಂಗಳೂರಿಗೆ ಅನ್ಯಾಯ

ಶೇ 60ರಷ್ಟು ಆದಾಯ ನೀಡುವ ಬೆಂಗಳೂರಿಗೆ ಕೊಟ್ಟಿದ್ದು ₹1,200 ಕೋಟಿ: ಶಾಸಕ ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಡೀ ರಾಜ್ಯದಲ್ಲಿ ತೆರಿಗೆ ಸಂಗ್ರಹವೂ ಸೇರಿ ಎಲ್ಲ ರೀತಿಯ ಆದಾಯದಲ್ಲಿ ಬೆಂಗಳೂರಿನ ಪಾಲು ಶೇ 60 ರಷ್ಟು ಇದೆ. ಆದರೆ, ಹಣದ ಹಂಚಿಕೆಯಲ್ಲಿ ಅನ್ಯಾಯ ಆಗುತ್ತಿದೆ. ನಗರಕ್ಕೆ ಹೆಚ್ಚು ಹಣ ನೀಡಬೇಕು ಎಂದು ಬಿಜೆಪಿಯ ಮುನಿರತ್ನ ವಿಧಾನಸಭೆಯಲ್ಲಿ ಆಗ್ರಹಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೇರೆ ನಗರಗಳಿಗೆ, ಜಿಲ್ಲೆಗಳಿಗೆ ಹಣ ಕೊಡಬೇಡಿ ಎಂದು ಹೇಳುವುದಿಲ್ಲ. ಆದರೆ, ಇಲ್ಲಿನ ಶ್ರಮದ ಹಣ ಇಲ್ಲಿಗೇ ಹೆಚ್ಚು ಪ್ರಮಾಣದಲ್ಲಿ ಬಳಕೆಯಾಗಬೇಕು ಎಂದು ಪ್ರತಿಪಾದಿಸಿದರು.

ಬಜೆಟ್‌ನಲ್ಲಿ ನೀರಾವರಿಗೆ ₹16,735 ಕೋಟಿ ನೀಡಿದ್ದಾರೆ. ಆದರೆ, ಶೇ 60 ರಷ್ಟು ಆದಾಯ ನೀಡುವ ಈ ನಗರಕ್ಕೆ ಕೊಟ್ಟಿದ್ದು ಕೇವಲ ₹1,200 ಕೋಟಿ. ಆ ಹಣವನ್ನು ಬಿಬಿಎಂಪಿ ಅನುದಾನದಿಂದ ಬಳಸಿಕೊಳ್ಳಿ ಎಂದೂ ಸರ್ಕಾರ ಹೇಳಿದೆ. ವೈಟ್ ಟಾಪಿಂಗ್‌ಗೆ ನಮ್ಮ ಸರ್ಕಾರ ಇದ್ದಾಗ ನೀಡಿದ್ದ ₹800 ಕೋಟಿ ಅನುದಾನವನ್ನು ಸೇರಿಸಿಕೊಂಡು ತಾವೇ ಕೊಡುತ್ತಿದ್ದೇವೆ ಎಂದು ಬಿಂಬಿಸಿ-ಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಐಟಿ– ಬಿಟಿ ವಲಯದಿಂದ ಶೇ 34 ರಷ್ಟು ಆದಾಯ ಬರುತ್ತಿದೆ. ಆದರೆ, ಇಲ್ಲಿನ ಸಂಚಾರ ದಟ್ಟಣೆ, ಹದಗೆಟ್ಟ ರಸ್ತೆಗಳಿಂದಾಗಿ ಹಲವು ಕಂಪನಿಗಳು ಹೈದರಾಬಾದ್‌ಗೆ ವಲಸೆ ಹೋಗುತ್ತಿವೆ. ಸಂಚಾರ ದಟ್ಟಣೆ ನಿವಾರಿಸುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳದೇ, ಈಗ ಸುರಂಗ ರಸ್ತೆಯ ಪ್ರಸ್ತಾಪ ಮಾಡುತ್ತಿದ್ದಾರೆ. 2013 ರ ಬಳಿಕ ರಸ್ತೆ ವಿಸ್ತರಣೆ ಕೆಲಸವೇ ನಡೆದಿಲ್ಲ ಎಂದು ಮುನಿರತ್ನ ಹೇಳಿದರು.

ಈಗ ನಗರದ ಜನಸಂಖ್ಯೆ 2 ಕೋಟಿ ತಲುಪಿದೆ. 2050ರ ವೇಳೆಗೆ 3.50 ಕೋಟಿ ಆಗಬಹುದು. ಆಗ ಬೆಂಗಳೂರು ಹೇಗಿರುತ್ತದೆ ಎಂಬುದನ್ನು ಊಹಿಸಲೂ ಆಗುವುದಿಲ್ಲ. ಇದಕ್ಕೆ ಸರ್ಕಾರದ ಬಳಿ ಯಾವ ಯೋಜನೆ ಇದೆ? ಎಷ್ಟು ಹಣ ಬಳಸುತ್ತದೆ? ಬೆಂಗಳೂರು ಗ್ರಾಮಾಂತರ ಸಂಸದರು ನಮ್ಮ ತೆರಿಗೆ ಹಣ ಗುಜರಾತ್‌ಗೆ ಯಾಕೆ ಕೊಡಬೇಕು ಎಂದು ಕೇಳಿದ್ದಾರೆ. ಬೆಂಗಳೂರಿನ ಹಣ ಇಲ್ಲೇ ಬಳಸಬೇಕಲ್ಲವೆ ಎಂದು ಪ್ರಶ್ನಿಸಿದರು.

'ಬೆಂಗಳೂರಿನ ಶಾಸಕರಿಗೆ ಹೆಚ್ಚಿನ ಅನುದಾನ ನೀಡಿ. ಕಾಂಗ್ರೆಸ್‌ನವರಿಗೆ ಹೆಚ್ಚು ಕೊಟ್ಟು ನಮಗೆ ಕಡಿಮೆ ಕೊಟ್ಟರೂ ಪರವಾಗಿಲ್ಲ, ಒಟ್ಟಿನಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಹೆಚ್ಚಿನ ಹಣ ಕೊಡಬೇಕು' ಎಂದು ಹೇಳಿದ ಅವರು, ಹೆಚ್ಚು ಅನುದಾನ ಪಡೆದಿರುವ ಕಾಂಗ್ರೆಸ್ ಶಾಸಕರ ಪಟ್ಟಿಯನ್ನು ಓದಿ ಹೇಳಿದರು.

ಸುರಂಗ ರಸ್ತೆ ಸಾಧ್ಯವಿಲ್ಲ: ಸುರಂಗ ರಸ್ತೆ ಮಾಡುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಿದೆ. ಇದಕ್ಕೆ ಒಂದು ಪೈಸೆ ಹಣ ಇಟ್ಟಿಲ್ಲ. ಹೆಬ್ಬಾಳದಿಂದ ಚಾಲುಕ್ಯ ವೃತ್ತಕ್ಕೆ 7 ಕಿ.ಮೀ ಇದೆ. ಇವರು ₹1,500 ಕೋಟಿ ವೆಚ್ಚದಲ್ಲಿ 3 ಕಿ.ಮೀ ಸುರಂಗ ರಸ್ತೆ ಮಾಡಲು ಹೊರಟಿದ್ದಾರೆ ಎಂದು ಟೀಕಿಸಿದರು.

'ಹರಿಪ್ರಸಾದ್‌ಗೆ ಸಚಿವ ಸ್ಥಾನ ಕೊಡಬೇಕಿತ್ತು'

ಬೆಂಗಳೂರು: ಕಾಂಗ್ರೆಸ್‌ನ ಕೆಲವೇ ಸಮರ್ಥ ನಾಯಕರಲ್ಲಿ ಬಿ.ಕೆ. ಹರಿಪ್ರಸಾದ್ ಒಬ್ಬರು. ಸಚಿವ ಸ್ಥಾನಕ್ಕೆ ಅರ್ಹ ವ್ಯಕ್ತಿ. ಆದರೆ, ಅವರಿಗೆ ಆ ಸ್ಥಾನ ಸಿಗಲಿಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅನಗತ್ಯ ಟೀಕೆ ಮಾಡುತ್ತಾರೆ. ರಾಮ ಮಂದಿರವನ್ನು ಬೇರೆ ಸ್ಥಳದಲ್ಲಿ ಕಟ್ಟಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಸಹ ಈಚೆಗೆ ಟೀಕಿಸಿದ್ದರು. ಅವರು ಯಾವಾಗ ಸರ್ವೆ ಇಲಾಖೆಗೆ ಸೇರಿದರು ಎಂದು ಪ್ರಶ್ನಿಸಿದ ಅವರು, ಶುದ್ಧ ಚಾರಿತ್ರ್ಯ ಇರುವವರಿಗೆ ಕಾಂಗ್ರೆಸ್ ಸಚಿವ ಸ್ಥಾನ ನೀಡುವುದಿಲ್ಲ. ಹರಿಪ್ರಸಾದ್ ಅಂಥವರನ್ನು ಕಡೆಗಣಿಸುತ್ತದೆ ಎಂದರು.

ಕೋಟ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಸಭಾನಾಯಕ ಬೋಸರಾಜು, ಬೇರೆ ಪಕ್ಷದ ಕುರಿತು ಮಾತನಾಡುವ ಬದಲು, ನಿಮ್ಮದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಸೂಕ್ತ ಸ್ಥಾನ ನೀಡಿ. ಕೇಂದ್ರ ಸಚಿವರಾಗಿದ್ದ ಅವರನ್ನು ಬಿಜೆಪಿ ನಡೆಸಿಕೊಂಡ ರೀತಿಯೇ ಸರಿ ಇಲ್ಲ ಎಂದು ಹೇಳಿದರು.

ಸಿದ್ದಗಂಗಾ ಮಠದಿಂದ ಅಕ್ಕಿ ಪಡೆಯುವ ಸ್ಥಿತಿಗೆ ಸರ್ಕಾರ ಬಂದಿದೆ. ರಾಜ್ಯಪಾಲರ ಮೂಲಕ ಸುಳ್ಳು ಹೇಳಿಸಿದೆ. ಪ್ರಧಾನಿಯನ್ನು ಟೀಕಿಸುವ ಬದಲು ಸಚಿವ ಮಹದೇವಪ್ಪ ಹೇಳಿದಂತೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಲೋಕಸಭೆಗೆ ಸ್ಪರ್ಧಿಸಿ, ಆಯ್ಕೆಯಾದರೆ ಸಂಸತ್‌ನಲ್ಲಿ ಮೋದಿ ಅವರನ್ನು ಪ್ರಶ್ನಿಸಬಹುದು ಎಂದು ಕೋಟ ಶ್ರೀನಿವಾಸ ಪೂಜಾರಿ ಸಲಹೆ ನೀಡಿದರು.

ಮಕ್ಕಳ ಸುರಕ್ಷತೆ ಜತೆ ರಾಜಿ ಇಲ್ಲ: ಸಚಿವ

ಮಕ್ಕಳ ಸುರಕ್ಷತೆ ವಿಚಾರದಲ್ಲಿ ರಾಜಿಯ ಪ್ರಶ್ನೆಯೇ ಇಲ್ಲ. ಹಾಗಾಗಿ, ಅಗ್ನಿ ಹಾಗೂ ಕಟ್ಟಡ ಸುರಕ್ಷತೆ ವಿಚಾರದಲ್ಲಿ ನಿಯಮ ಸಡಿಲಿಸಲು ಸಾಧ್ಯವಿಲ್ಲ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 2017–18ಕ್ಕೂ ಹಿಂದೆ ಇಲಾಖೆಯ ಅನುಮತಿ ಪಡೆದ ಶಾಲೆಗಳ ಮಾನ್ಯತೆಯನ್ನು 5 ವರ್ಷಗಳಿಗೊಮ್ಮೆ ನವೀಕರಣ ಮಾಡಲಾಗುತ್ತಿದೆ. ಹೈಕೋರ್ಟ್ ಆದೇಶದಂತೆ 10 ವರ್ಷಗಳಿಗೆ ಒಮ್ಮೆ ನವೀಕರಿಸುವ ಕುರಿತು ನಿಯಮದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಎರಡು ಬಾರಿ ಪರೀಕ್ಷೆಗೆ ಅವಕಾಶ

ರಾಯಪುರ (ಪಿಟಿಐ): 2025–26ನೇ ಶೈಕ್ಷಣಿಕ ವರ್ಷದಿಂದ 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೋಮವಾರ ತಿಳಿಸಿದರು.

ಛತ್ತೀಸಗಢದಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು' ಎಂಬುದು ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮುಖ ಧ್ಯೇಯವಾಗಿದೆ' ಎಂದು ಹೇಳಿದರು.

ಚಿತ್ರಾವಳಿ

ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ ಮತ್ತು ಬೊಮ್ಮನಹಳ್ಳಿ ಬಂಜಾರ ಸೇವಾ ಸಂಘ ವತಿಯಿಂದ ಸಂತ ಸೇವಾಲಾಲರ 285ನೇ ಜಯಂತಿಯನ್ನು ಆಚರಿಸಲಾಯಿತು. ಎಚ್‌.ಪಿ ಸಿದ್ದಾನಾಯಕ್, ಎ.ಆರ್‌. ಗೋವಿಂದಸ್ವಾಮಿ, ಡಿ.ಪರಮೇಶ್ವರ ನಾಯ್ಕ, ನರಸಿಂಹ ನಾಯ್ಕ, ನವೀನ್ ಅಂಜನಪ್ಪ, ಗೋವಿಂದ ನಾಯ್ಕ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಬೆಂಗಳೂರಿನ ಆರ್‌.ಟಿ. ನಗರದ ಶಿವರಾಮ ಕಾರಂತ ವೇದಿಕೆ ಆಶ್ರಯದಲ್ಲಿ ನಡೆದ ಗಂಗಾಧರ ಚಿತ್ತಾಲರ ನೂರರ ನೆನಪು ಕಾರ್ಯಕ್ರಮದಲ್ಲಿ ಲೇಖಕ ಆರ್‌. ಲಕ್ಷ್ಮೀನಾರಾಯಣ ಅವರು (ಮಧ್ಯದಲ್ಲಿರುವವರು) ಚಿತ್ತಾಲರ ಕಾವ್ಯಲೋಕದ ಕುರಿತು ಉಪನ್ಯಾಸ ನೀಡಿದರು. ವೇದಿಕೆಯ ಅಧ್ಯಕ್ಷೆ ದೀಪಾ ಫಡ್ಕೆ ಮತ್ತು ವಿಮರ್ಶಕ ಎಸ್ ಆರ್ ವಿಜಯಶಂಕರ ಉಪಸ್ಥಿತರಿದ್ದರು

ನದಾಫ್–ಪಿಂಜಾರ: ಪದಾಧಿಕಾರಿಗಳ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ರಾಜ್ಯ ನದಾಫ್– ಪಿಂಜಾರ ಸಂಘದ ನೂತನ ಪದಾಧಿಕಾರಿಗಳು, ಅಧಿಕಾರ ಸ್ವೀಕರಿಸಿದರು.

2024–25ನೇ ಸಾಲಿಗೆ ಬೆಂಗಳೂರು ನಗರ ಘಟಕ, ಮಹಿಳಾ ಜಿಲ್ಲಾ ಘಟಕ, ತಾಲ್ಲೂಕು ಘಟಕಕ್ಕೆ ಪದಾಧಿಕಾರಿಗಳು ಆಯ್ಕೆಯಾಗಿದ್ದರು. ಅವರಿಗೆ ಮಾನ್ಯತಾ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಸಂಘದ ಲಾಂಛನವನ್ನು ಹಸ್ತಾಂತರ ಮಾಡಲಾಯಿತು.

ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಡಿ. ನದಾಫ್ ಮಾತನಾಡಿ, 'ಹೊಸದಾಗಿ ಆಯ್ಕೆಯಾದ ಪದಾಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು' ಎಂದು ಸೂಚಿಸಿದರು.

ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನದಾಫ್– ಪಿಂಜಾರ ಸಂಘದ ನೂತನ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರ ಮಾಡಲಾಯಿತು

ಬೆಂಗಳೂರು ನಗರ ಘಟಕದ ಜಿಲ್ಲಾ ಅಧ್ಯಕ್ಷ ಎಚ್.ಎನ್.ರಫೀಕ್ ಅಹಮದ್ ಮಾತನಾಡಿ, 'ಸಂಘಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳಲು ನೂತನ ಆಡಳಿತ ಮಂಡಳಿ ಕಾರ್ಯೋನ್ಮುಖ ಆಗಬೇಕು' ಎಂದು ಕರೆ ನೀಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ರಿಯಾಜ್ ಸಲೀಂ ನಾಗ್ತೆ ಅವರು ಪ್ರಮಾಣ ವಚನ ಬೋಧಿಸಿದರು. ರಷೀದ್ ಅಹಮದ್, ಮುಬಶಿರಾ, ಸನಾವುಲ್ಲಾ, ಯಾಸೀನ್ ಹಾಜರಿದ್ದರು.

ನಗರದಲ್ಲಿ ಇಂದು

ನವ ಚಂಡಿಕಾ ಹೋಮ: ಗಣಪತಿ ಪೂಜೆ, ಸ್ವಸ್ತಿ ವಾಚನ, ನವಗ್ರಹ ಪುರಸ್ಸರ, ಮೃತ್ಯುಂಜಯ ಹವನ, ಚಂಡಿಕಾ ಪಾರಾಯಣ, ಆಯೋಜನೆ ಮತ್ತು ಸ್ಥಳ: ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಮಲ್ಲೇಶ್ವರ, ಬೆಳಿಗ್ಗೆ 8.30

ಹವಾನಿಯಂತ್ರಿತ ಬಸ್ ಮತ್ತು ಸಾಮಾನ್ಯ ಸಾರಿಗೆ ಸೇವೆಯ ಉದ್ಘಾಟನೆ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಬಿ. ಶಿವಣ್ಣ, ಅತಿಥಿಗಳು: ಡಿ.ಕೆ. ಸುರೇಶ್, ಎಚ್.ಎಸ್. ಗೋಪಿನಾಥ್, ಆಯೋಜನೆ: ಬಿಎಂಟಿಸಿ, ಸ್ಥಳ: ಸರ್ಜಾಪುರ ಬಸ್ ನಿಲ್ದಾಣ, ಬೆಳಿಗ್ಗೆ 9

ಟೆಲಿ ಮನಸ್, ಮೆಂಟಲ್ ಹೆಲ್ತ್ ಸಂತೆ–2.0: ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆ್ಯಂಡ್ ನ್ಯೂರೊ ಸೈನ್ಸ್ (ನಿಮ್ಹಾನ್ಸ್), ಹೊಸೂರು ರಸ್ತೆ, ಬೆಳಿಗ್ಗೆ 10

ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ: ಅತಿಥಿಗಳು: ಜಗದೀಪ್ ಧನಕರ್, ಲಿಂಗರಾಜ ಗಾಂಧಿ, ಆಯೋಜನೆ: ಇಗ್ನೊ ಜನತಾ ವಿಶ್ವವಿದ್ಯಾಲಯ, ಸ್ಥಳ: ಸರ್ ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್, ಬೆಳಿಗ್ಗೆ 11

ಬಿ.ಟಿ. ಜಾಹ್ನವಿ ಅವರ 'ಒಬ್ರು ಸುದ್ಯಾಕೆ ಒಬ್ರು ಗುದ್ಯಾಕೆ' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಪುಸ್ತಕದ ಕುರಿತು: ರವಿಕುಮಾರ ನೀಹ, ಅತಿಥಿಗಳು: ಸಿ.ಎಸ್. ದ್ವಾರಕಾನಾಥ್, ದಯಾ ಗಂಗನಘಟ್ಟ, ಉಪಸ್ಥಿತಿ: ಮಮತ, ಆಯೋಜನೆ: ಕೌದಿ ಪ್ರಕಾಶನ, ಸ್ಥಳ: ದೇವರಾಜ್ ಅರಸ್ ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5



ಬರಗೂರು ರಾಮಚಂದ್ರಪ್ಪ

ಸರ್ವಜ್ಞನ ಜಯಂತಿ: ಸಾನ್ನಿಧ್ಯ: ಶರಣು ಕುಂಬಾರ ಗುಂಡಯ್ಯ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಕರ್ನಾಟಕ ಜಾನಪದ ಉತ್ಸವ: 'ಕರ್ನಾಟಕ ಜಾನಪದ ನೃತ್ಯ ವೈಭವ': ಅತಿಥಿಗಳು: ಡಾ. ಅಬ್ದುಲ್ ಖಾದರ್, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಅವಿರತ ಹರೀಶ್, ಓ.ವೆಂಕಟೇಶ್, ಆಯೋಜನೆ: ಪದ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

'ಜಿಂಕ್ಸಡ್ ಆರೆಂಜಸ್' ನಾಟಕ ಪ್ರದರ್ಶನ: ನಿರ್ದೇಶನ: ಶುಭಾ ಭಟ್ ಬಾಷೀನ್, ತಂಡ: ವಿಂಡ್ ಮೀಯರ್ ಆರ್ಟ್ಸ್ ಇಂಡಿಯಾ, ಆಯೋಜನೆ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಶಶಿಕಾಂತ ಯಡಹಳ್ಳಿ ಅವರ 'ಅನುರಕ್ತೆ' ಏಕವ್ಯಕ್ತಿ ರಂಗ ಪ್ರದರ್ಶನ: ಪ್ರಸ್ತುತಿ: ಉಮಾಶ್ರೀ ಮಧು ಮಳವಳ್ಳಿ, ರಂಗ ವಿನ್ಯಾಸ: ಶಶಿಧರ ಅಡಪ, ಸಂಗೀತ: ಜನಾರ್ದನ, ಸಾಂಗತ್ಯ: ಅದಿತ್ಯ ಭಾರದ್ವಾಜ್, ಬೆಳಕಿನ ವಿನ್ಯಾಸ: ಅರುಣ್ ಮೂರ್ತಿ, ನಿರ್ದೇಶನ: ಮಧು ಮಳವಳ್ಳಿ, ಆಯೋಜನೆ: ರಂಗಬಂಡಿ ಮಳವಳ್ಳಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಪೊಲೀಸರು– ವಕೀಲರ ಸಂಘರ್ಷ ತಾರಕಕ್ಕೆ • ಡಿ.ಸಿ ಕಚೇರಿಗೆ ವಕೀಲರ ದಿಗ್ಬಂಧನ • ಅಹೋರಾತ್ರಿ ಧರಣಿ

ವಕೀಲರ ಹೋರಾಟಕ್ಕೆ ರಾಜಕೀಯ ತಿರುವು

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲಾ ವಕೀಲರ ಸಂಘದ 40 ವಕೀಲರ ವಿರುದ್ಧ ಪ್ರಕರಣ ದಾಖಲಿಸಿದ ಐಜೂರು ಪೊಲೀಸ್ ಠಾಣೆ ಪಿಎಸ್ಐ ಅಮಾನತಿಗೆ ಪಟ್ಟು ಹಿಡಿದಿರುವ ವಕೀಲರು ಎಂಟು ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆ ಸೋಮವಾರ ರಾಜಕೀಯ ತಿರುವು ಪಡೆದುಕೊಂಡಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ತಡರಾತ್ರಿ ರಾಮನಗರಕ್ಕೆ ಧಾವಿಸಿದ್ದು, ವಕೀಲರ ಹೋರಾಟ ಬೆಂಬಲ ಘೋಷಿಸಿದ್ದಾರೆ. ಇದರಿಂದ ವಕೀಲರ ಮತ್ತು ಪೊಲೀಸರ ನಡುವಿನ ಹೋರಾಟ ಎಂಟು ದಿನಗಳ ನಂತರ ರಾಜಕೀಯ ಬಣ್ಣ ಪಡೆದುಕೊಂಡಿದೆ.

ನೂರಾರು ವಕೀಲರು ಮಧ್ಯಾಹ್ನ ದಿಂದಲೇ ಜಿಲ್ಲಾಧಿಕಾರಿ ಕಚೇರಿಗೆ ದಿಗ್ಬಂಧನ ಹೇರಿದ್ದು, ಜಿಲ್ಲಾಡಳಿತ ಭವನದ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಬಂದ್ ಮಾಡಿದ್ದಾರೆ.

ರಾಮನಗರ ಜಿಲ್ಲಾಧಿಕಾರಿಗೆ ಸೋಮವಾರ ವಕೀಲರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು

ಯಾರನ್ನೂ ಒಳ ಹೋಗದಂತೆ ಮತ್ತು ಒಳಗಿನವರು ಹೊರ ಬಾರದಂತೆ ಜಿಲ್ಲಾಧಿಕಾರಿ ಕಚೇರಿ ದ್ವಾರಗಳನ್ನು ಬಂದ್ ಮಾಡಿರುವ ವಕೀಲರು ರಾತ್ರಿ ಹಾಸಿಗೆ ಹಾಸಿಕೊಂಡು ಮಲಗಿದ್ದಾರೆ. ಡಿ.ಸಿ ಕಚೇರಿ ಸಂಕೀರ್ಣದಲ್ಲಿರುವ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಹೊರಗೆ ಬರಲು ಆಗುತ್ತಿಲ್ಲ.

ಮಧ್ಯಾಹ್ನ ಕಚೇರಿಗೆ ಬಂದಿರುವ ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್, ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ, ಉಪ ವಿಭಾಗಾಧಿಕಾರಿ ಪಿ.ಕೆ. ಬಿನೋಯ್ ತಡರಾತ್ರಿಯವರೆಗೂ ಒಳಗೆ ಸಿಲುಕಿದ್ದಾರೆ. ಇದರಿಂದಾಗಿ ಇಡೀ ದಿನ ಜಿಲ್ಲಾಧಿಕಾರಿ ಕಚೇರಿ ಬಳಿ ಬಿಗುವಿನ ವಾತಾವರಣ ಇದ್ದು, ಭಾರಿ ಸಂಖ್ಯೆಯ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ.

ಐಜೂರು ಪಿಎಸ್ಐ ಸಯ್ಯದ್ ತನ್ವೀರ್ ಹುಸೇನ್ ಅಮಾನತಿಗೆ ವಕೀಲರು ಪಟ್ಟು ಹಿಡಿದ್ದಾರೆ. ಅಧಿಕಾರಿಗಳು ಮತ್ತು ವಕೀಲರ ನಡುವೆ ಸಂಧಾನಕಾರರ ಮೂಲಕ ಮಾತುಕತೆ ನಡೆಯುತ್ತಿವೆ. ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ವಕೀಲರು ಬೇಡಿಕೆ ಇಟ್ಟಿದ್ದಾರೆ.

ಇದಕ್ಕೂ ಮೊದಲು ಕೋರ್ಟ್ ಆವರಣದಲ್ಲಿ ಜಮಾಯಿಸಿದ ವಕೀಲರು ಪ್ರತಿಭಟನಾ ಸಭೆ ನಡೆಸಿದರು. ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆ ಬಂದು ಐಜೂರು ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು. ಅಲ್ಲಿಂದ ಡಿ.ಸಿ ಕಚೇರಿಗೆ ಬಂದು ಧರಣಿ ಕುಳಿತಿದ್ದಾರೆ.

ಬೆಂಗಳೂರು ಹಾಗೂ ದೆಹಲಿಯಿಂದ ಬಂದಿರುವ ವಕೀಲರ ಸಂಘದ ಪದಾಧಿಕಾರಿಗಳು ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಮಧ್ಯೆ ಪ್ರವೇಶಿಸದ ಜಿಲ್ಲಾ ನ್ಯಾಯಾಧೀರ ವಿರುದ್ಧವೂ ಹರಿಹಾಯ್ದಿದ್ದಾರೆ.

ಗ್ಯಾನವಾಪಿ ಮಸೀದಿಯಲ್ಲಿ ಪೂಜೆಗೆ ಕೋರ್ಟ್ ಅವಕಾಶ ಕಲ್ಪಿಸಿದ್ದರ ಕುರಿತು ಫೇಸ್‌ಬುಕ್‌ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಮಾಡಿದ್ದ ನಗರದ ವಕೀಲ ಚಾಂದ್ ಪಾಷಾ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದಕ್ಕೆ ಪ್ರತಿಯಾಗಿ ಪಾಷಾ ಅವರ ಕಡೆಯವರೊಬ್ಬರು ನೀಡಿದ ದೂರಿನ ಮೇರೆಗೆ ಇಲ್ಲಿನ ಐಜೂರು ಪೊಲೀಸ್ ಠಾಣೆಯ ಪಿಎಸ್ಐ ಸಯ್ಯದ್ ತನ್ವೀರ್ ಅವರು ವಕೀಲರ ಸಂಘದ 40 ವಕೀಲರ ವಿರುದ್ಧ ಎಫ್ಐಆರ್ ದಾಖಲಿಸಿದ್ದರು.

> **ವಕೀಲರ ಸಂಘದ ಬೇಡಿಕೆಯಂತೆ ವಕೀಲರ ಪರ ಮತ್ತು ವಿರುದ್ಧ ದಾಖಲಾಗಿರುವ ಎರಡೂ ಪ್ರಕರಣಗಳ ತನಿಖಾ ಅಧಿಕಾರಿಯನ್ನು ಬದಲಾಯಿಸಲಾಗಿದೆ. ಪಿಎಸ್ಐ ವಿರುದ್ಧ ಚನ್ನಪಟ್ಟಣ ಡಿವೈಎಸ್ಪಿ ತನಿಖೆ ನಡೆಸುತ್ತಿದ್ದಾರೆ. ವರದಿ ಆಧರಿಸಿ ಮುಂದಿ ಕ್ರಮ ಕೈಗೊಳ್ಳಲಾಗುವುದು**
> **ಕಾರ್ತಿಕ್ ರೆಡ್ಡಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

> **ಪಿಎಸ್ಐ ವಿರುದ್ಧ ವಿಚಾರಣೆ ನಡೆಸದೆ ಕ್ರಮ ಜರುಗಿಸಲು ಸಾಧ್ಯವಿಲ್ಲ. ಸದ್ಯ ಅವರ ವಿರುದ್ಧ ವಿಚಾರಣೆ ನಡೆಯುತ್ತಿದೆ. ಮೂರು ದಿನದಲ್ಲಿ ವರದಿ ಬರಲಿದೆ. ತಪ್ಪು ಮಾಡಿರುವುದು ಸಾಬೀತಾದರೆ ಕ್ರಮ ಕೈಗೊಳ್ಳಲಾಗುವುದು**
> **ಡಾ. ಅವಿನಾಶ್ ಮೆನನ್ ರಾಜೇಂದ್ರನ್,** ಜಿಲ್ಲಾಧಿಕಾರಿ

ಸುದ್ದಿ 2 ನಿಮಿಷ

ಅಪಘಾತ: ಬಿಎಂಟಿಸಿ ಸಿಬ್ಬಂದಿಗೆ ₹ 1 ಕೋಟಿ ಪರಿಹಾರ ವಿಮೆ

ಬೆಂಗಳೂರು: ಕೆಎಸ್ಆರ್‌ಟಿಸಿ ಮಾದರಿಯಲ್ಲಿ ಬಿಎಂಟಿಸಿ ಸಿಬ್ಬಂದಿಗೂ ₹ 1 ಕೋಟಿ ಅಪಘಾತ ವಿಮೆ ಯೋಜನೆಯನ್ನು ಸರ್ಕಾರ ಸೋಮವಾರ ಜಾರಿ ಮಾಡಿದೆ.

ಅಪಘಾತದಲ್ಲಿ ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ ಅನುಕೂಲವಾಗುವಂತೆ ಇಲಾಖಾ ಗುಂಪು ವಿಮಾ ಪರಿಹಾರ ₹3 ಲಕ್ಷ ನೀಡುವ ಯೋಜನೆ 2008ರಿಂದಲೇ ಜಾರಿಯಲ್ಲಿದೆ. ಕೆನರಾ ಬ್ಯಾಂಕ್‌ನಲ್ಲಿ ವೇತನ ಖಾತೆ ಹೊಂದಿರುವ ಬಿಎಂಟಿಸಿ ನೌಕರರು ಮೃತಪಟ್ಟರೆ ₹30 ಲಕ್ಷ ಪರಿಹಾರ ನೀಡುವ ವಿಮಾ ಯೋಜನೆ 2022ರಲ್ಲಿ ಜಾರಿಯಾಗಿತ್ತು.

ಇದೀಗ ಯೂನಿಯನ್ ಬ್ಯಾಂಕ್ (ವಿಮೆ ₹65 ಲಕ್ಷ), ಎಸ್‌ಬಿಐ ಮತ್ತು ಕೆನರಾ ಬ್ಯಾಂಕ್‌ಗಳೊಂದಿಗೆ (ವಿಮೆ ತಲಾ ₹50 ಲಕ್ಷ) ಬಿಎಂಟಿಸಿ ಒಡಂಬಡಿಕೆ ಮಾಡಿಕೊಂಡಿದೆ. ನೌಕರರು ಮೃತಪಟ್ಟರೆ ಅವರ ಕುಟುಂಬಕ್ಕೆ ಒಟ್ಟು ₹1.15 ಕೋಟಿ ಪರಿಹಾರ ಸಿಗಲಿದೆ.

ಸೇವಾವಧಿಯಲ್ಲಿ ಅಪಘಾತ ಹೊರತುಪಡಿಸಿ ಕಾಯಿಲೆಗಳಿಂದ ಮೃತಪಟ್ಟವರಿಗೆ ನೀಡುತ್ತಿದ್ದ ವಿಮಾ ಪರಿಹಾರ ಮೊತ್ತವನ್ನು ₹3 ಲಕ್ಷದಿಂದ ₹10 ಲಕ್ಷಕ್ಕೆ ಏರಿಸಲಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ತಿಳಿಸಿದ್ದಾರೆ.

₹10 ಲಕ್ಷ ಪರಿಹಾರ ವಿತರಣೆ

ಬೆಂಗಳೂರು: ಕೆಎಸ್ಆರ್‌ಟಿಸಿ ಬಸ್ ಅಪಘಾತದಲ್ಲಿ ಮೃತಪಟ್ಟ ಪ್ರಯಾಣಿಕರ ಅವಲಂಬಿತರಿಗೆ ಮೊದಲ ಬಾರಿಗೆ ₹10 ಲಕ್ಷ ಅಪಘಾತ ಪರಿಹಾರ ಚೆಕ್ ಅನ್ನು ಸೋಮವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್ ವಿತರಿಸಿದರು.

ಪ್ರಯಾಣಿಕರಿಗೆ ಅಪಘಾತ ಪರಿಹಾರ ವಿಮೆ ₹3 ಲಕ್ಷ ಇತ್ತು. ಕಳೆದ ಜ.1ರಿಂದ ಈ ಮೊತ್ತವನ್ನು ₹10 ಲಕ್ಷಕ್ಕೆ ಏರಿಸಲಾಗಿತ್ತು. ಫೆ.4ರಂದು ಹಾಸನ ವಿಭಾಗ ಚನ್ನರಾಯಪಟ್ಟಣ ಘಟಕದ ಬಸ್ ಸಕಲೇಶಪುರ ಸಮೀಪದ ಬಾಗೆ ಎಂಬಲ್ಲಿ ಅಪಘಾತಕ್ಕೆ ಈಡಾಗಿತ್ತು. ಪ್ರಯಾಣಿಕ ಜಿ.ಎನ್. ಅಮೃತ್(34) ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಅವರ ತಂದೆಗೆ ಸೋಮವಾರ ₹ 10 ಲಕ್ಷದ ಚೆಕ್ ವಿತರಿಸಲಾಯಿತು.

ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತೆ) ನಂದಿನಿ ದೇವಿ, ಅಧಿಕಾರಿಗಳು ಭಾಗವಹಿಸಿದ್ದರು.

ಸುಗಂಧ ದ್ರವ್ಯ ಡಬ್ಬಿ ಜಜ್ಜುವಾಗ ಸಂಭವಿಸಿದ್ದ ಸ್ಫೋಟ • ಪಕ್ಕದ ಮನೆಯವರ ಜೊತೆ ಬಂದಿದ್ದ ಬಾಲಕರು

ಮಳಿಗೆಯಲ್ಲಿ ಬೆಂಕಿ: ಬಾಲಕನ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ರಾಮಸಂದ್ರದಲ್ಲಿರುವ ಗುಜರಿ ಮಳಿಗೆಯೊಂದರಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಗಾಯಗೊಂಡಿರುವ ಐವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಈ ಪೈಕಿ 10 ವರ್ಷದ ಬಾಲಕನ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ.

ಭಾನುವಾರ ಸಂಜೆ ಸಂಭವಿಸಿದ್ದ ಅವಘಡದಲ್ಲಿ ಗುಜರಿ ಮಳಿಗೆ ಮಾಲೀಕ ಚಿಕ್ಕಬಸ್ತಿಯ ಸಲೀಂ (32), ಮೆಹಬೂಬ್ ಪಾಷಾ (32), ಬಾಲಕ ಅರ್ಬಾಜ್ (14) ಸಜೀವ ದಹನವಾಗಿದ್ದಾರೆ. ಮೂವರ ಮೃತದೇಹಗಳು ಸಂಪೂರ್ಣ ಸುಟ್ಟಿದ್ದು, ಅವುಗಳನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ.

'ಗುಜರಿ ಮಳಿಗೆಯಲ್ಲಿದ್ದ ಎಲ್ಲ ವಸ್ತುಗಳು ಸಂಪೂರ್ಣ ಸುಟ್ಟು, ಕರಕಲಾಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಚುರುಕಿನ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಅಕ್ಕ– ಪಕ್ಕದ ಮನೆಗಳಿಗೂ ಬೆಂಕಿ ವ್ಯಾಪಿಸುವ ಭಯವಿತ್ತು. ಆದರೆ, ಸಿಬ್ಬಂದಿ ತ್ವರಿತವಾಗಿ ಬೆಂಕಿ ಹತೋಟಿಗೆ ತಂದರು' ಎಂದು ಸ್ಥಳೀಯರು ಹೇಳಿದರು.

ಅವೈಜ್ಞಾನಿಕ ಕೆಲಸ: 'ಗುಜರಿ ವ್ಯಾಪಾರಿ ಸಲೀಂ, ಸುಗಂಧ ದ್ರವ್ಯದ 500ಕ್ಕೂ ಹೆಚ್ಚು ತಗಡಿನ ಡಬ್ಬಿಗಳನ್ನು ತಂದಿದ್ದರು. ಬಹುತೇಕ ಡಬ್ಬಿಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಅನಿಲ ಇತ್ತು. ಅದನ್ನು ಹೊರಗೆ ತೆಗೆದು, ನಂತರ ಡಬ್ಬಿ ಜಜ್ಜಿ ಸಮತಟ್ಟು ಮಾಡಬೇಕಿತ್ತು' ಎಂದು ಪೊಲೀಸರು ಹೇಳಿದರು.

ಬೆಂಕಿ ಅವಘಡ ಸಂಭವಿಸಿದ್ದ ಗುಜರಿ ಮಳಿಗೆ ಸ್ಥಳದಲ್ಲಿದ್ದ ಅವಶೇಷಗಳು

'3 ದಿನಗಳಿಂದ ಬೆಳಿಗ್ಗೆಯಿಂದ ರಾತ್ರಿಯವರೆಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರು, ಅವೈಜ್ಞಾನಿಕವಾಗಿ ಡಬ್ಬಿ ಜಜ್ಜುತ್ತಿದ್ದರು. ಇದಕ್ಕಾಗಿ ಕಲ್ಲು ಬಳಸುತ್ತಿದ್ದರು. ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಮಳಿಗೆಯಲ್ಲಿ ಕೈಗೊಂಡಿರಲಿಲ್ಲ' ಎಂದರು.

ಅನಿಲ ಸೋರಿಕೆಯಿಂದ ಬೆಂಕಿ: 'ಕಾರ್ಮಿಕರು ಡಬ್ಬಿಯಲ್ಲಿ ಅನಿಲ ಇರುವ ಸ್ಥಿತಿಯಲ್ಲೇ ಜಜ್ಜುತ್ತಿದ್ದರು. ಭಾನುವಾರ ಸಂಜೆ 5.30 ಗಂಟೆ ಸುಮಾರಿಗೆ ಡಬ್ಬಿಯೊಂದನ್ನು ಕಲ್ಲಿನಿಂದ ಜಜ್ಜುವಾಗ ಅನಿಲ ಸೋರಿಕೆಯಾಗಿ ಬೆಂಕಿಯ ಕಿಡಿ ಹೊತ್ತಿಕೊಂಡು ಸ್ಫೋಟ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು. 'ಚೀಲಗಳಲ್ಲಿ ಡಬ್ಬಿಗಳನ್ನು ತುಂಬಿಡಲಾಗಿತ್ತು. ಒಂದು ಡಬ್ಬಿ ಸ್ಫೋಟವಾಗುತ್ತಿದ್ದಂತೆ, ಉಳಿದ ಡಬ್ಬಿಗಳಿಗೂ ಬೆಂಕಿ ಹೊತ್ತಿಕೊಂಡಿತ್ತು. ನಂತರ, 10ಕ್ಕೂ ಹೆಚ್ಚು ಡಬ್ಬಿಗಳು ಸರಣಿಯಲ್ಲಿ ಸ್ಫೋಟವಾಗಿದ್ದವು. ಇದರಿಂದಲೇ ಬೆಂಕಿಯ ಕೆನ್ನಾಲಗೆ ಹೆಚ್ಚಾಗಿ ಇಡೀ ಮಳಿಗೆ ಸುಟ್ಟು ಹೋಗಿದೆ' ಎಂದರು.

ಸರಕು ಸಾಗಣೆ ವಾಹನ ಚಾಲಕ: 'ಮೃತ ಮೆಹಬೂಬ್ ಪಾಷಾ, ಸರಕು ಸಾಗಣೆ ವಾಹನ ಚಾಲಕ. ಗುಜರಿಯಲ್ಲಿದ್ದ ಸುಗಂಧ ದ್ರವ್ಯಗಳ ಡಬ್ಬಿಗಳನ್ನು ಕೊಂಡೊಯ್ಯಲು ಮಳಿಗೆಗೆ ಬಂದಿದ್ದರು. ಕಾರ್ಮಿಕರು, ಜಜ್ಜಿದ್ದ ಡಬ್ಬಿಗಳನ್ನು ಚೀಲದಲ್ಲಿ ತುಂಬಿ ವಾಹನಕ್ಕೆ ತುಂಬುತ್ತಿದ್ದಾಗಲೇ ಬೆಂಕಿ ಅವಘಡ ಸಂಭವಿಸಿದೆ ಎಂದು ಪೊಲೀಸರು ಹೇಳಿದರು.

ಪಕ್ಕದ ಮನೆಯವರ ಜೊತೆ ಬಂದಿದ್ದರು: 'ಮೃತ ಅರ್ಬಾಜ್ ಹಾಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 10 ವರ್ಷಗಳ ಬಾಲಕ, ಪಕ್ಕದ ಮನೆಯವರ ಜೊತೆಯಲ್ಲಿ ಮಳಿಗೆಗೆ ಬಂದಿದ್ದರು ಎಂಬುದಾಗಿ ಸಂಬಂಧಿಕರಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ನಿವೇಶನ ಮಾಲೀಕನಿಗಾಗಿ ಹುಡುಕಾಟ: 'ಅಕ್ರಮವಾಗಿ ಗುಜರಿ ಮಳಿಗೆ ತೆರೆದಿದ್ದ ಮಾಲೀಕ ಸಲೀಂ ಹಾಗೂ ನಿವೇಶನ ಮಾಲೀಕ ವಿಠ್ಠಲ್ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ. ಸಲೀಂ ಈಗಾಗಲೇ ತೀರಿಕೊಂಡಿದ್ದಾರೆ. ವಿಠ್ಠಲ್ ತಲೆಮರೆಸಿಕೊಂಡಿದ್ದು, ಈತನ ಪತ್ತೆಗೆ ಹುಡುಕಾಟ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

'ಕಾರಣ ನಿಗೂಢ: ತಜ್ಞರ ವರದಿ ಆಧರಿಸಿ ಕ್ರಮ'

'ಸುಗಂಧ ದ್ರವ್ಯ ಡಬ್ಬಿಗಳಲ್ಲಿ ಯಾವ ಅನಿಲ ಇತ್ತು ? ದೊಡ್ಡ ಪ್ರಮಾಣದಲ್ಲಿ ಸ್ಫೋಟ ಹೇಗೆ ಸಂಭವಿಸಿತು ? ಡಬ್ಬಿ ಹೊರತಾಗಿ ಬೇರೆ ಯಾವುದಾದರೂ ವಸ್ತುಗಳನ್ನು ಮಳಿಗೆಯಲ್ಲಿ ಸಂಗ್ರಹಿಸಲಾಗಿತ್ತೆ ? ಎಂಬ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಬೆಂಕಿ ಅವಘಡದ ಕಾರಣ ನಿಗೂಢವಾಗಿದೆ. ಸ್ಥಳಕ್ಕೆ ಭೇಟಿ ನೀಡಿದ್ದ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಅವರು ನೀಡುವ ವರದಿ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ತಲಾ ₹ 1 ಲಕ್ಷ ಪರಿಹಾರ'

ಮೃತಪಟ್ಟ ವ್ಯಕ್ತಿಗಳ ಮನೆಗಳಿಗೆ ಸೋಮವಾರ ಭೇಟಿ ನೀಡಿದ ಯಶವಂತಪುರ ವಿಧಾನ ಸಭಾ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್, ಕುಟುಂಬಕ್ಕೆ ಸಾಂತ್ವನ ಹೇಳಿದರು. ಮೃತರ ಕುಟುಂಬಗಳಿಗೆ ವೈಯಕ್ತಿಕವಾಗಿ ತಲಾ ₹ 1 ಲಕ್ಷ ಪರಿಹಾರ ಸಹ ನೀಡಿದರು. ಗಾಯಾಳುಗಳಿಗೂ ₹ 50 ಸಾವಿರ ನೀಡಿದರು.

ಅಗ್ನಿ ಅವಘಡ: ಪರಿಹಾರಕ್ಕೆ ಆಗ್ರಹ

ಬೆಂಗಳೂರು: ಮೈಸೂರು ರಸ್ತೆಯ ರಾಮಸಂದ್ರದಲ್ಲಿ ಭಾನುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಮೃತಪಟ್ಟ ಮೂವರ ಕುಟುಂಬಗಳಿಗೆ ಸರ್ಕಾರ ಪರಿಹಾರ ಘೋಷಿಸಬೇಕು ಮತ್ತು ಆಸ್ಪತ್ರೆಯಲ್ಲಿರುವ ಐವರ ಚಿಕಿತ್ಸಾ ವೆಚ್ಚವನ್ನು ಭರಿಸಬೇಕು ಎಂದು ಸ್ಥಳೀಯ ಶಾಸಕ ಎಸ್.ಟಿ. ಸೋಮಶೇಖರ್ ವಿಧಾನಸಭೆಯಲ್ಲಿ ಸೋಮವಾರ ಆಗ್ರಹಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ದುರ್ಘಟನೆಗೆ ಕಾರಣ ಏನು ಎಂಬುದು ಇನ್ನೂ ತಿಳಿದಿಲ್ಲ. ಗೃಹ ಸಚಿವರು ಸೇರಿದಂತೆ ಸರ್ಕಾರದಿಂದ ಯಾರೊಬ್ಬರೂ ಸ್ಥಳಕ್ಕೆ ಭೇಟಿ ನೀಡಿಲ್ಲ. ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ಹಾಗೂ ಗಾಯಾಳುಗಳಿಗೆ ಚಿಕಿತ್ಸಾ ವೆಚ್ಚ ಭರಿಸಲು ಆದೇಶ ಹೊರಡಿಸಬೇಕು' ಎಂದು ಒತ್ತಾಯಿಸಿದರು.

ಗರ್ಭಿಣಿ ಹೊಟ್ಟೆಗೆ ಒದ್ದು ಹಲ್ಲೆ: ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿನಾಕಾರಣ ಜಗಳ ತೆಗೆದಿದ್ದ ಪದ್ಮಮ್ಮ ಹಾಗೂ ಕಾವ್ಯಾ, ನನ್ನ ಹೊಟ್ಟೆಗೆ ಒದ್ದು ಹಲ್ಲೆ ಮಾಡಿದ್ದು, ಇದರಿಂದಾಗಿ ಹೊಟ್ಟೆಯಲ್ಲಿಯೇ ಮಗು ಮೃತಪಟ್ಟಿದೆ' ಎಂದು ಆರೋಪಿಸಿ ಮಹಿಳೆಯೊಬ್ಬರು ಗೋವಿಂದರಾಜನಗರ ಠಾಣೆಗೆ ದೂರು ನೀಡಿದ್ದಾರೆ.

'ಸುಬ್ಬಣ್ಣ ಗಾರ್ಡನ್ ನಿವಾಸಿ 32 ವರ್ಷದ ಮಹಿಳೆ ದೂರು ನೀಡಿದ್ದಾರೆ. ಆರೋಪಿಗಳಾದ ಪದ್ಮಮ್ಮ ಹಾಗೂ ಕಾವ್ಯಾ ವಿರುದ್ಧ ಎಫ್ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಮಹಿಳೆ, ಗರ್ಭಿಣಿ ಆಗಿದ್ದರು. ಅವರ ಪತಿ, ಬೈಕ್ ದುರಸ್ತಿ ಮಳಿಗೆ ಇಟ್ಟುಕೊಂಡಿದ್ದಾರೆ. ಅವರ ಮಳಿಗೆ ಪಕ್ಕವೇ ಆರೋಪಿಗಳ ಬಿರಿಯಾನಿ ಹೋಟೆಲ್ ಇದೆ. ಫೆ. 2ರಂದು ಬೆಳಿಗ್ಗೆ ಮಹಿಳೆಯ ಪತಿ ಹಾಗೂ ಆರೋಪಿಗಳ ನಡುವೆ ಜಗಳ ಆಗಿತ್ತು. ನಂತರ, ಎರಡೂ ಕಡೆಯವರು ಠಾಣೆಗೆ ಬಂದು ಸಂಧಾನ ಮಾಡಿಕೊಂಡು ಹೋಗಿದ್ದರು' ಎಂದು ತಿಳಿಸಿವೆ.

'ಠಾಣೆಯಿಂದ ಹೊರಬಂದ ಆರೋಪಿಗಳು, ರಸ್ತೆಯಲ್ಲಿ ಹೊರಟಿದ್ದ ದೂರುದಾರ ಮಹಿಳೆಯನ್ನು ಅಡ್ಡಗಟ್ಟಿ ಪುನಃ ಜಗಳ ಮಾಡಿದ್ದರು. ಇದೇ ಸಂದರ್ಭದಲ್ಲಿ ಮಹಿಳೆ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಹೊಟ್ಟೆಗೆ ಒದ್ದಿದ್ದರು. ಕುಸಿದು ಬಿದ್ದಿದ್ದ ಮಹಿಳೆಯನ್ನು ಸಂಬಂಧಿಕರು ಹಾಗೂ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಫೆ. 14ರಂದು ಹೊಟ್ಟೆ ನೋವು ಹೆಚ್ಚಾಗಿತ್ತು. ಹೆರಿಗೆ ಮಾಡಿದ್ದ ವೈದ್ಯರು, ಹೊಟ್ಟೆಯಲ್ಲಿಯೇ ಮಗು ಮೃತಪಟ್ಟಿದ್ದಾಗಿ ಹೇಳಿದರು. ಈ ಸಂಗತಿಯನ್ನು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮದುವೆಯಾಗುವುದಾಗಿ ನಂಬಿಸಿ ವಂಚನೆ

ಬೆಂಗಳೂರು: ಸಿನಿಮಾದಲ್ಲಿ ಅವಕಾಶ ಕೊಡಿಸುವ ನೆಪದಲ್ಲಿ ಯುವತಿಯನ್ನು ಪರಿಚಯಿಸಿಕೊಂಡು ಮದುವೆಯಾಗುವುದಾಗಿ ಹೇಳಿ ವಂಚಿಸಿರುವ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'27 ವರ್ಷದ ಯುವತಿ ದೂರು ನೀಡಿದ್ದಾರೆ. ಅತ್ತಿಬೆಲೆಯ ಶಾನಭೋಗನಹಳ್ಳಿ ನಿವಾಸಿ ಸಂತೋಷ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಯಚೂರಿನ ಯುವತಿ, ತಂದೆ–ತಾಯಿ ಜೊತೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 2019ರಲ್ಲಿ ಯುವತಿಗೆ ಸಂತೋಷ್ ಪರಿಚಯವಾಗಿತ್ತು. ಸಿನಿಮಾ ನಟನೆಂದು ಆರೋಪಿ ಹೇಳಿಕೊಂಡಿದ್ದ. ಕನ್ನಡ ಹಾಗೂ ತಮಿಳು ಸಿನಿಮಾದಲ್ಲಿ ನಟಿಯಾಗಿ ಅಭಿನಯಿಸಲು ಅವಕಾಶ ಕೊಡಿಸುವುದಾಗಿ ಯುವತಿಗೆ ತಿಳಿಸಿದ್ದ. ಅದನ್ನು ನಂಬಿದ್ದ ಯುವತಿ, ಆರೋಪಿಗೆ ತಮ್ಮ ಮೊಬೈಲ್ ನಂಬರ್ ನೀಡಿದ್ದರು.' 'ಯುವತಿಗೆ ಕರೆ ಮಾಡಲಾರಂಭಿಸಿದ್ದ ಸಂತೋಷ್, ಮದುವೆಯಾಗುವುದಾಗಿ ಹೇಳಿ ಸಲುಗೆ ಬೆಳೆಸಿದ್ದ. ಯುವತಿ ಹಾಗೂ ಆರೋಪಿ, ಹಲವೆಡೆ ಸುತ್ತಾಡಿದ್ದರು. ಇದೇ ಸಂದರ್ಭದಲ್ಲಿ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ' ಎಂದು ಪೊಲೀಸರು ತಿಳಿಸಿದರು.

ಬೇರೊಬ್ಬ ಯುವತಿ ಜೊತೆ ಮದುವೆ: 'ಆರೋಪಿ ಸಂತೋಷ್, ಬೇರೊಬ್ಬ ಯುವತಿ ಜೊತೆ ಮದುವೆಯಾಗಿದ್ದ. ಅದು ತಿಳಿಯುತ್ತಿದ್ದಂತೆ ದೂರುದಾರ ಯುವತಿ, ಆರೋಪಿ ಮನೆಗೆ ಹೋಗಿ ಪ್ರಶ್ನಿಸಿದ್ದರು. ಸಿಟ್ಟಾದ ಆರೋಪಿ, ಯುವತಿ ಮನೆಗೆ ಬಂದು ಗಲಾಟೆ ಮಾಡಿದ್ದಾನೆ. ಯುವತಿಯ ಖಾಸಗಿ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವುದಾಗಿ ಬೆದರಿಸಿದ್ದಾನೆ' ಎಂದು ಹೇಳಿದರು.

'ಕೃತ್ಯ ಸಂಬಂಧ ಯುವತಿ ಈ ಹಿಂದೆಯೂ ದೂರು ನೀಡಿದ್ದರು. ಅದರಡಿ ದಾಖಲಿಸಿಕೊಂಡಿದ್ದ ಪ್ರಕರಣವನ್ನು ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಅತ್ತಿಬೆಲೆ ಠಾಣೆಗೆ ವರ್ಗಾಯಿಸಲಾಗಿತ್ತು. ಇದೀಗ ಮತ್ತೊಂದು ದೂರು ನೀಡಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

ನೋಂದಣಿ ಫಲಕ ಮರೆಮಾಚಿದ್ದವನ ವಿರುದ್ಧ ಎಫ್ಐಆರ್

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ದಂಡದಿಂದ ತಪ್ಪಿಸಿಕೊಳ್ಳಲು ನೋಂದಣಿ ಸಂಖ್ಯೆಯ ಫಲಕ ಮರೆಮಾಚಿದ್ದ ಆರೋಪದಡಿ ದ್ವಿಚಕ್ರ ವಾಹನ ಸವಾರ ರಾಹುಲ್‌ಕುಮಾರ್ (23) ವಿರುದ್ಧ ಪೊಲೀಸರು ಎಫ್ಐಆರ್ ದಾಖಲಿಸಿಕೊಂಡಿದ್ದಾರೆ.

'ಎಚ್ಎಎಲ್ ಸಂಚಾರ ಠಾಣೆ ವ್ಯಾಪ್ತಿಯ ದೊಡ್ಡನೆಕ್ಕುಂದಿ ಜಂಕ್ಷನ್ ಬಳಿ ಫೆ. 17ರಂದು ಹೊರಟಿದ್ದ ರಾಹುಲ್‌ಕುಮಾರ್ ದ್ವಿಚಕ್ರ ವಾಹನದ ಫಲಕ ಮರೆಮಾಚಿತ್ತು. ಇದರ ಫೋಟೊ ಕ್ಲಿಕ್ಕಿಸಿದ್ದ ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಫೋಟೊ ಆಧರಿಸಿ ತನಿಖೆ ಕೈಗೊಂಡು ರಾಹುಲ್‌ನನ್ನು ವಶಕ್ಕೆ ಪಡೆಯಲಾಗಿದೆ. ದ್ವಿಚಕ್ರ ವಾಹನವನ್ನೂ ಜಪ್ತಿ ಮಾಡಲಾಗಿದೆ. ರಾಹುಲ್ ವಿರುದ್ಧ ಎಚ್ಎಎಲ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ' ಎಂದರು.

ಹೋಟೆಲ್‌ನಲ್ಲಿ ಕಳ್ಳತನ: ಕ್ಯಾಷಿಯರ್ ಬಂಧನ

ಬೆಂಗಳೂರು: ಕೆ.ಆರ್. ಪುರದ ಭಟ್ಟರಹಳ್ಳಿ ಬಳಿಯ ಹೋಟೆಲ್‌ವೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ, ಅದೇ ಹೋಟೆಲ್‌ನ ಕ್ಯಾಷಿಯರ್ ರವಿಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಫೆ. 19ರಂದು ನಡೆದಿದ್ದ ಕಳ್ಳತನ ಸಂಬಂಧ ಹೋಟೆಲ್ ಮಾಲೀಕ ದೂರು ನೀಡಿದ್ದರು. ಹೋಟೆಲ್ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಆರೋಪಿ ರವಿಕುಮಾರ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಬನಶಂಕರಿ ನಿವಾಸಿ ರವಿಕುಮಾರ್, ಹೋಟೆಲ್‌ನಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಜೀವನ ನಿರ್ವಹಣೆಗೆ ಸಂಬಳ ಸಾಲುತ್ತಿರಲಿಲ್ಲ. ಹೋಟೆಲ್‌ನಲ್ಲಿ ಯಾರೂ ಇಲ್ಲದನ್ನು ಗಮನಿಸಿದ್ದ ಈತ, ₹1 ಲಕ್ಷ ಹಣ ಕದ್ದುಕೊಂಡು ಪರಾರಿಯಾಗಿದ್ದ.'

'ನಗದು ಪೆಟ್ಟಿಗೆಯಲ್ಲಿದ್ದ ಹಣವನ್ನು ಜೇಬಿನಲ್ಲಿ ಇಟ್ಟುಕೊಳ್ಳುತ್ತಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಇದೇ ಪುರಾವೆ ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಈ ಹಿಂದೆಯೂ ಆರೋಪಿ ಹಲವು ಬಾರಿ ಕಳ್ಳತನ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಶಿವರಾಜ್ ಎಸ್. ತಂಗಡಗಿ ಅಭಿಮತ

'ಜಾತಿಗಣತಿ ವರದಿ ಜಾರಿಯಿಂದ ಆರ್ಥಿಕ ಸ್ಥಿತಿ ಉತ್ತಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್. ಕಾಂತರಾಜ ಆಯೋಗದ ವರದಿಯನ್ನು ಎಲ್ಲ ಸಮುದಾಯದವರೂ ಒಪ್ಪಿದರೆ, ಆರ್ಥಿಕ ಸ್ಥಿತಿ–ಗತಿ ಉತ್ತಮವಾಗಲಿದೆ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಶಿವರಾಜ್ ಎಸ್. ತಂಗಡಗಿ ಹೇಳಿದರು.

'ಕಾಂತರಾಜ ವರದಿಯನ್ನು ಜಾತಿಗಣತಿ ಎಂದು ಮಾತ್ರ ಬಿಂಬಿಸಲಾಗುತ್ತಿದೆ. ಈ ವರದಿ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಇಲಾಖೆಯ ಸಚಿವನಾಗಿದ್ದರೂ ನನಗೆ ಆ ವರದಿಯಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ಆದರೆ, ಆ ವರದಿ ಜಾರಿಯಾದರೆ ಎಲ್ಲ ಸಮುದಾಯದ ಬಡವರಿಗೆ ನೆರವಾಗುತ್ತದೆ. ಅವರೆಲ್ಲೂ ಅಭಿವೃದ್ಧಿಯತ್ತ ಸಾಗುತ್ತಾರೆ' ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ 'ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'2ಎಗೆ ಸೇರಿಸಬೇಕು, ಅದರಂತೆ ಸೌಲಭ್ಯಬೇಕು ಎಂದು ನೀವೆಲ್ಲ ಕೇಳುತ್ತಿದ್ದೀರಿ. ಆ ರೀತಿ ಸೇರಿಸಲು, ಸೌಲಭ್ಯ ನೀಡಲು ಆಧಾರ ಬೇಕಲ್ಲವೇ? ಕಾಂತರಾಜ ಆಯೋಗದ ವರದಿ ಜಾರಿಯಾದರೆ ಮರಾಠ, ಹಿಂದುಳಿದ ವರ್ಗ, ಬ್ರಾಹ್ಮಣ, ಲಿಂಗಾಯತ, ಎಸ್‌ಸಿ, ಎಸ್‌ಟಿ ಸಮುದಾಯದವರೆಲ್ಲರಿಗೂ ಅನುಕೂಲವಾಗುತ್ತದೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲ ವರ್ಗಕ್ಕೆ ನೆರವಾಗಲೆಂದೇ ಕಾಂತರಾಜ ಆಯೋಗವನ್ನು ರಚಿಸಿರುವುದು. ಅಲ್ಲದೆ, ಈ ಬಾರಿ ಬಜೆಟ್‌ನಲ್ಲಿ ಎಲ್ಲ ನಿಗಮಗಳಿಗೆ ₹1,600 ಕೋಟಿ ನೀಡಿದ್ದಾರೆ. ಇದರಿಂದ ಎಲ್ಲ ನಿಗಮಗಳಿಗೂ ಅನುದಾನ ನೀಡಲಾಗುತ್ತದೆ' ಎಂದು ಸಚಿವರು ಹೇಳಿದರು.

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ ಅರಿವು ಶೈಕ್ಷಣಿಕ ಸಾಲ ಯೋಜನೆ, ರಾಜಶ್ರೀ ಸಾಹುಮಹಾರಾಜ್ ವಿದೇಶಿ ವ್ಯಾಸಂಗ ಸಾಲ ಯೋಜನೆ, ಮರಾಠ ಮಿಲ್ಟ್ರಿ ಹೋಟೆಲ್, ಸ್ವಾವಲಂಬಿ ಸಾರಥಿ ಯೋಜನೆ, ಜೀಜಾವು– ಜಲಭಾಗ್ಯ ಯೋಜನೆ, ಶಹಜೀ ರಾಜೇ ಸಮೃದ್ಧಿ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ಅಮೃತ್ ಯೋಜನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಆರ್. ಪಾಗೋಜಿ ನೇತೃತ್ವದಲ್ಲಿ ಪ್ರಕಟಿಸಿರುವ ಮರಾಠ ಸಮುದಾಯದ ಕುರಿತ ಕಿರು ಸಂಶೋಧನಾತ್ಮಕ ಸಂಪುಟ– 'ಕರ್ನಾಟಕ ಸಂಕ್ಷಿಪ್ತ ಮರಾಠ ಸಾಂಸ್ಕೃತಿಕ ಪರಂಪರೆ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಯೋಜನೆಗಳಿಗೆ ಚಾಲನೆ ನೀಡಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಸತ್ಯವತಿ ಜಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ, ಸಚಿವ ಶಿವರಾಜ ತಂಗಡಗಿ, ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಶ್ರೀ ಗೋಸಾಯಿ ಮಹಾಸಂಸ್ಥಾನಮಠ ಶ್ರೀ ಭವಾನಿ ಪೀಠದ ಮಂಜುನಾಥ ಭಾರತಿ ಸ್ವಾಮೀಜಿ, ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್ ರಾಜ್ಯಾಧ್ಯಕ್ಷ ಎಸ್. ಸುರೇಶ ರಾವ್ ಸಾಠೆ, ಶಾಸಕ ಶ್ರೀನಿವಾಸ ವಿ.ಮಾನೆ, ಶಾಸಕ ವಿಠ್ಠಲ ಸೋಮಣ್ಣ ಹಲಗೇಕರ್, ಕರ್ನಾಟಕ ಮರಾಠ ಕಲ್ಯಾಣ ಸಂಸ್ಥೆ ಅಧ್ಯಕ್ಷ ಎಸ್. ಮನೋಜ್ ಕುಮಾರ್ ರಣ್ಣೋರೆ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

2 / 3 Wheelers Selling

Mobikes

DAMAGED BY ACCIDENT KA19-HG7446 Street TripleR M/cycle. 2021, at Keerthi Triumph Service 4th. Cross, Lalbagh Road for Sale Quote for with RC &. RC cancelled after inspection within Seven days Sampat Surveyor 9900182098.

BUSINESS

Business to Business

Business

WANTED BUSINESS PARTNERS For Saree Business 10 Lakhs Investment Monthly Income 4 Lakhs: 8892501007/ 9606701007

PERSONAL

Lost

DOCUMENT LOST
I, J. K. SRINIVASA MURTHY, S/o. Late J. S. Kanakaiah, residing No. 446, Maruthi Sawmill Road, T.P. Channygowda Layout, Vidyasagara (Sarayipalya), Dr. Shivarama Karanth Nagara Post, Thanisandra, Bengaluru 560 077, lost the Original BDA Allotment Letter bearing SL. No. 043921 and issue No. BDA/DS-I/719/F E OF BSK VI STAGE/IV B BLOCK/2003-04 dated 07-02-2004 and original BDA Possession Certificate bearing Sl.No.081193 bearing P.C.R No. 129/04-05 dated 14-12-2004. Lodged complaint before the Hennur Police Station on 02.02.2024 and received acknowledgement vide Lost Report No. 0914422/2024. If the same are found, please contact 9980856284 to return the said originals.

ಕಳೆದಿದೆ
ಬೆಂಗಳೂರಿನ ಓಸ್ಬೋರ್ನ್ ರಸ್ತೆಯ ನಂ.48ರ ನಿವಾಸಿಗಳಾದ ಎಂ.ಪಿ. ಮೆಹತಾ ಮತ್ತು ಲಲಿತಾ ಮೆಹತಾ ಇವರಿಗೆ ಸಂಬಂಧಿಸಿದ ಬಿಡಿಎ ಹಂಚಿಕೆ ಪತ್ರ ಮತ್ತು ಸ್ವಾಧೀನಪತ್ರ ನಂ.5 & 5/1, ಹಳೆಯ ಸಂಖ್ಯೆ 37ರ ದಾಖಲಾತಿಗಳು ಪ್ರಯಾಣಿಸುವಾಗ ಕಳೆದಿವೆ. ದಯವಿಟ್ಟು ಸಿಕ್ಕಿದಲ್ಲಿ ಸಂಪರ್ಕಿಸಿ: 9886000731 / 9845007281

Change of Name

CHANGE OF NAME
We, Dr Ramanuja. S S/o. Late. P. Sanjeevaiah, and Vinoda. K W/o. Dr Ramanuja S. R/a #319, Sri Ram Nilaya, 6th Main Road, ITI Layout, Mallathahalli, Bangalore- 560056 have changed our minor Daughter's Name from PARNIKA to PARNIKA. V.R. RAM Vide affidavit dated 19.02.2024 Sworn before Notary M.K. Devaki, Bangalore.

I, SURENDRA PUJARY, Residing at Bangalore-70 have changed my name as SURENDRA POOJARY, vide affidavit dated 19/2/2024 before Notary K.S. Bammappanavar, Bangalore

I, RENY CYNTHIA D/o Joseph Chinnappa, age 29 years, do hereby declare that I have changed my name from RENY CYNTHIA to YOSHINI, vide affidavit dated 15-02-2024, sworn before Advocate and Notary PRAKASHA .C at Bangalore.

CHANGE OF NAME
We, Dr Ramanuja. S S/o. Late. P. Sanjeevaiah, and Vinoda. K W/o. Dr Ramanuja S. R/a #319, Sri Ram Nilaya, 6th Main Road, ITI Layout, Mallathahalli, Bangalore- 560056 have changed our minor Daughter's Name from LIPIKA. V.R. to LIPIKA. V.R. RAM Vide affidavit dated 19.02.2024 Sworn before Notary M.K. Devaki, Bangalore.

I, RESHMA T D SILVA, resident of No.74/B, 2nd Phase, WOC Road, Manjunathanagar, Bangalore 560010, have changed my name to TEENA NAZARETH vide Affidavit dated 17.02.2024 sworn before advocate and notary Onkarappa .N.R., Bengaluru

I, GANESH THOTTAM BADHYA R/o, Bailakere, Tenkanidiyoor, Thottam, Udupi, have changed my name as GANESH BADHYA Vide affidavit dated 13/02/2024 before Notary K. Shivaprasad Hegde, Udupi

I, PUPPY. V, Residing at Bangalore-562107 have changed my name as V.SOWNDHARYA, vide affidavit dated 19/2/2024 before Notary K.S. Bammappanavar, Bangalore

DH Classifieds More value, more impact ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಬಿಸಿಲ ಝಳ: ಬಸವಳಿದ ಜನ

ನೆತ್ತಿ ಸುಡುತ್ತಿರುವ ಬಿಸಿಲು: ಫೆಬ್ರುವರಿಯಲ್ಲಿ ನಾಲ್ಕನೇ ಬಾರಿಗೆ ಅತ್ಯಧಿಕ ಉಷ್ಣಾಂಶ ದಾಖಲು

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲಿ ಒಂದು ವಾರದಿಂದ ಬಿಸಿಲ ಝಳ ಹೆಚ್ಚಿದ್ದು, ಧಗೆಯು ಜನರನ್ನು ಬಸವಳಿಯುವಂತೆ ಮಾಡಿದೆ. ರಾತ್ರಿ ಹಾಗೂ ಮುಂಜಾನೆ ವೇಳೆಯಲ್ಲಿ ತಾಪಮಾನ ಕೊಂಚ ಇಳಿಕೆಯಾಗಿದ್ದರೂ ಮಧ್ಯಾಹ್ನ ಬಿಸಿಲು ನೆತ್ತಿ ಸುಡುತ್ತಿದೆ.

ಈ ವರ್ಷ ಫೆಬ್ರುವರಿ ಕೊನೆಯಲ್ಲೇ ಪ್ರಖರ ಬಿಸಿಲು ಕಾಣಿಸಿಕೊಂಡಿದ್ದು, ಮಾರ್ಚ್, ಏಪ್ರಿಲ್ ಹಾಗೂ ಮೇನಲ್ಲಿ ಪರಿಸ್ಥಿತಿ ನಿಭಾಯಿಸುವುದು ಹೇಗಪ್ಪಾ ಎಂದು ಜನರು ಹೇಳುವಂತಾಗಿದೆ. ಬೀದಿಬದಿಯ ವ್ಯಾಪಾರಿಗಳು ಸೇರಿ ಹಲವರಿಗೆ ಬೇಸಿಲಿನ ಬೇಗೆ ತಟ್ಟಿದೆ.

ಕಳೆದ ವರ್ಷ ಮುಂಗಾರು ಹಾಗೂ ಹಿಂಗಾರಿನಲ್ಲಿ ವಾಡಿಕೆಯಷ್ಟು ಮಳೆ ಸುರಿದಿರಲಿಲ್ಲ. ಚಳಿಗಾಲದಲ್ಲೂ ಚಳಿ ತೀವ್ರತೆ ಕಡಿಮೆಯಿತ್ತು. ಹೀಗಾಗಿ, ತೇವಾಂಶದ ಕೊರತೆಯಾಗಿ ಫೆಬ್ರುವರಿ ಮಧ್ಯಭಾಗದಲ್ಲೇ ತಾಪಮಾನ ಹೆಚ್ಚಳವಾಗಿದೆ. ದಿಢೀರ್ ತಾಪಮಾನ ಏರಿಕೆಯಿಂದ ಜನರು ಫ್ಯಾನ್ ಹಾಗೂ ಎ.ಸಿ ಮೊರೆ ಹೋಗುವಂತಾಗಿದೆ. ಹೊರವಲಯದ ಬಡಾವಣೆಗಳಲ್ಲೂ ವಾತಾವರಣ ಬಿಸಿಯೇರಿಸುತ್ತಿದೆ.

ಕಾಂಕ್ರೀಟ್, ಡಾಂಬರು ಕಾವಿನ ಜೊತೆಗೆ ವಾತಾವರಣದಲ್ಲಿ ಆಗಿರುವ ಏರುಪೇರಿನಿಂದ ತಾಪಮಾನದಲ್ಲಿ ಏರಿಕೆಯಾಗಿದೆ. ಇನ್ನೂ ಕೆಲವು ದಿನಗಳ ಕಾಲ ನಗರದಲ್ಲಿ ನಿರ್ಮಲ ಆಕಾಶ ಇರಲಿದ್ದು, ಉಷ್ಣಾಂಶದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಲಿದೆ ಎಂದು ಹವಾಮಾನ ತಜ್ಞರು ಎಚ್ಚರಿಸಿದ್ದಾರೆ.

ನಾಲ್ಕನೇ ದಾಖಲೆ: ನಗರದಲ್ಲಿ ಭಾನುವಾರ ಗರಿಷ್ಠ ಉಷ್ಣಾಂಶ 34.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಫೆಬ್ರುವರಿಯಲ್ಲಿ ಅತ್ಯಧಿಕ ಉಷ್ಣಾಂಶ ದಾಖಲಾಗುತ್ತಿರುವುದು ಇದು ನಾಲ್ಕನೇ ಬಾರಿ. ಈ ಹಿಂದೆ 2005ರ ಫೆ.17ರಂದು ಗರಿಷ್ಠ 35.9, 2011 ಹಾಗೂ 2016ರ ಫೆಬ್ರುವರಿಯಲ್ಲಿ ಗರಿಷ್ಠ ಉಷ್ಣಾಂಶ 35.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಹವಾಮಾನ ಇಲಾಖೆ ಅಧಿಕಾರಿ ಪ್ರಸಾದ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಫೆಬ್ರುವರಿಯಲ್ಲಿ ಸರಾಸರಿ 30.9 ಹಾಗೂ ಮಾರ್ಚ್‌ನಲ್ಲಿ ಸರಾಸರಿ ಗರಿಷ್ಠ ಉಷ್ಣಾಂಶ 33.4 ಡಿಗ್ರಿ ಸೆಲ್ಸಿಯಸ್ ಇತ್ತು. ಆದರೆ, ಮಳೆ ಕೊರತೆಯಿಂದ ತಾಪಮಾನ ಸಹಜವಾಗಿ ಏರಿಕೆಯಾಗಿದೆ. ಇದೇ ತಿಂಗಳಲ್ಲಿ 7 ಮಿ.ಮೀನಷ್ಟು ಮಳೆ ಆಗಬೇಕಿತ್ತು. ಮಳೆ ಆಗಿಲ್ಲ. ಇನ್ನೂ ಕೆಲವು ದಿನಗಳ ಕಾಲ ಮಳೆಯಾಗುವ ಮುನ್ಸೂಚನೆಯೂ ಇಲ್ಲ' ಎಂದು ಮಾಹಿತಿ ನೀಡಿದ್ದಾರೆ.

'ಎಲ್ ನಿನೊ ವಿದ್ಯಮಾನದಿಂದಾಗಿ ಉಷ್ಣಾಂಶವು ಕೆಲವು ಭಾಗದಲ್ಲಿ ಸಾಮಾನ್ಯಕ್ಕಿಂತ ಏರಿಕೆ ಕಾಣಿಸಲಿದೆ.ಸದ್ಯ ಎಲ್ ನಿನೊ ವಿದ್ಯಮಾನ ದುರ್ಬಲವಾಗಿ ಮಧ್ಯಮ ಹಂತಕ್ಕೆ ಬಂದಿದೆ. ಅದರ ಪ್ರಭಾವ ಜೂನ್ ವೇಳೆಗೆ ತಗ್ಗುವ ಸಾಧ್ಯತೆಯಿದೆ' ಎಂದು ಅವರು ಹೇಳುತ್ತಾರೆ.

'ಬೇಸಿಗೆಯ ದಿನಗಳಲ್ಲಿ ಮಕ್ಕಳು ಹಾಗೂ ವೃದ್ಧರ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಯಿದೆ. ದೇಹದಲ್ಲಿ ನೀರಿನ ಅಂಶ ಇರುವಂತೆ ನೋಡಿಕೊಳ್ಳಬೇಕು. ಹೆಚ್ಚು ನೀರು ಕುಡಿಯಬೇಕು' ಎಂದು ತಜ್ಞರು ಎಚ್ಚರಿಸಿದ್ದಾರೆ.

ಬೀದಿ ಬದಿಯ ವ್ಯಾಪಾರಿಯೊಬ್ಬರು ಬಿಸಿಲಿನಿಂದ ಪಾರಾಗಲು ದೊಡ್ಡದಾದ ಕೊಡೆಯ ಆಶ್ರಯ ಪಡೆದಿರುವುದು.

ನಗರದಲ್ಲಿ ವಿಮಾನ ನಿಲ್ದಾಣದ ಸುತ್ತಮುತ್ತ ಅಧಿಕ ತಾಪಮಾನ

ನಗರದಲ್ಲಿ ತಾಪಮಾನ ದಾಖಲಿಸಲು ನಾಲ್ಕು ಕೇಂದ್ರಗಳಿವೆ. ಎಚ್.ಎ.ಎಲ್ ಏರ್‌ಪೋರ್ಟ್ ಕೇಂದ್ರದಲ್ಲಿ ಗರಿಷ್ಠ 32.4, ಬೆಂಗಳೂರು ನಗರ ಕೇಂದ್ರದಲ್ಲಿ 32.6, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಳಿಯ ಕೇಂದ್ರದಲ್ಲಿ 33.6, ಜಿ.ಕೆ.ವಿ.ಕೆ ಆವರಣದ ಕೇಂದ್ರದಲ್ಲಿ ಗರಿಷ್ಠ ಉಷ್ಣಾಂಶ 31.4 ಡಿಗ್ರಿ ಸೆಲ್ಸಿಯಸ್ ಸೋಮವಾರ ಮಧ್ಯಾಹ್ನ ದಾಖಲಾಗಿತ್ತು.

ಮುಂದಿನ ಐದು ದಿನಗಳ ಉಷ್ಣಾಂಶದ ಮುನ್ಸೂಚನೆ

ದಿನಾಂಕ	ಕನಿಷ್ಠ	ಗರಿಷ್ಠ
ಫೆ.20	18	33
ಫೆ.21	18	32
ಫೆ.22	18	32
ಫೆ.23	18	32
ಫೆ.24	18	32

(ಮಾಹಿತಿ: ಹವಾಮಾನ ಇಲಾಖೆ)

ಎಳನೀರು ಪೂರೈಕೆ ವ್ಯತ್ಯಯ

ತಾಪಮಾನ ಏರಿಕೆ ಆಗುತ್ತಿದ್ದಂತೆ ಜನರು ತಂಪು ಪಾನೀಯ, ಎಳನೀರು, ಮಜ್ಜಿಗೆ, ಹಣ್ಣಿನ ಜ್ಯೂಸ್ ಮೊರೆ ಹೋಗುತ್ತಿದ್ದಾರೆ. ಯುವತಿಯರು ಬಿಸಿಲಿನಿಂದ ಪಾರಾಗಲು ಕೊಡೆಯ ಆಶ್ರಯ ಪಡೆಯುತ್ತಿದ್ದಾರೆ.

'ಎಳನೀರಿಗೆ ಹೆಚ್ಚಿನ ಬೇಡಿಕೆ ಹೆಚ್ಚಾಗಿದೆ. ಆದರೆ, ನಿರೀಕ್ಷೆಯಷ್ಟು ಎಳನೀರು ಪೂರೈಕೆಯಾಗುತ್ತಿಲ್ಲ. ತೆಂಗಿನ ಮರಕ್ಕೆ ಕಪ್ಪುತಲೆ ಹುಳು ರೋಗ ಕಾಣಿಸಿಕೊಂಡಿದ್ದು, ಗರಿಗಳ ಒಣಗಿ ಬೀಳುತ್ತಿವೆ. ಏಪ್ರಿಲ್ ವೇಳೆಗೆ ಎಳನೀರು ಬೆಲೆ ಮತ್ತಷ್ಟು ಹೆಚ್ಚಲಿದೆ' ಎಂದು ವ್ಯಾಪಾರಿ ರಿಯಾಜ್ ಅಹಮದ್ ಹೇಳುತ್ತಾರೆ.

ರಾಕ್‌ಲೈನ್ ಮಾಲ್ ಬೀಗ ತೆರವಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ತೆರಿಗೆ ಪಾವತಿಸದ ಕಾರಣ ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಒಡೆತನದ ರಾಕ್‌ಲೈನ್ ಮಾಲ್‌ಗೆ ಹಾಕಲಾಗಿರುವ ಬೀಗವನ್ನು ತಕ್ಷಣವೇ ತೆರವುಗೊಳಿಸುವಂತೆ ಹೈಕೋರ್ಟ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಆದೇಶಿಸಿದೆ.

ಬಿಬಿಎಂಪಿ ಕ್ರಮವನ್ನು ಪ್ರಶ್ನಿಸಿ ರಾಕ್‌ಲೈನ್ ವೆಂಕಟೇಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ರಾಕ್‌ಲೈನ್ ವೆಂಕಟೇಶ್ ಪರ ಹಿರಿಯ ವಕೀಲ ಎಂ.ಶ್ಯಾಮಸುಂದರ್, 'ಮಾಲ್ ಅನ್ನು ಲಾಕ್ ಮಾಡಲು ಬಿಬಿಎಂಪಿಯ ಪ್ರತ್ಯೇಕ ಕಾಯ್ದೆಯಲ್ಲಾಗಲೀ ಅಥವಾ ಕೆಎಂಸಿ ಕಾಯ್ದೆಯಲ್ಲಾಗಲೀ ಎಲ್ಲೂ ಅವಕಾಶವಿಲ್ಲ. ಈ ಹಿಂದೆ ಇದೇ ಹೈಕೋರ್ಟ್‌ನ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂತ್ರಿಮಾಲ್ ಪ್ರಕರಣದಲ್ಲಿ ಇದನ್ನು ಸ್ಪಷ್ಟಪಡಿಸಿದೆ. ತೆರಿಗೆ ಸಂಗ್ರಹಿಸಲು ಬಿಬಿಎಂಪಿಗೆ ಪರ್ಯಾಯ ಮಾರ್ಗಗಳಿವೆ. ಆದ್ದರಿಂದ, ರಾಕ್‌ಲೈನ್ ಮಾಲ್ ಬೀಗ ತೆರೆಯಲು ಆದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಬಿಬಿಎಂಪಿ ಪರ ವಕೀಲರನ್ನು, 'ನೀವೇಕೆ ಈ ಹಿಂದೆ ಇದೇ ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ' ಎಂದು ಪ್ರಶ್ನಿಸಿತಲ್ಲದೆ, 'ರಾಕ್ ಲೈನ್ ಮಾಲ್‌ಗೆ ಹಾಕಲಾಗಿರುವ ಬೀಗ ತೆರೆಯಿರಿ' ಎಂದು ಆದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಜಯಾ ಆಭರಣ ಹಸ್ತಾಂತರ: ದಿನ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಹಣ ಗಳಿಕೆ ಪ್ರಕರಣದಲ್ಲಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಹಾಗೂ ಇತರರಿಂದ ಜಪ್ತಿ ಮಾಡಿದ್ದ ಚಿನ್ನಾಭರಣವನ್ನು ತಮಿಳುನಾಡಿನ ಸರ್ಕಾರಕ್ಕೆ ಹಸ್ತಾಂತರಿಸಲು ನಗರದ 36ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ದಿನಾಂಕ ನಿಗದಿ ಮಾಡಿದೆ.

ಟಿ. ನರಸಿಂಹಮೂರ್ತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಾಧೀಶರು, 'ಮಾರ್ಚ್ 6 ಹಾಗೂ 7ರಂದು ಚಿನ್ನಾಭರಣ ಹಸ್ತಾಂತರ ಮಾಡಲಾಗುವುದು. ಚಿನ್ನಾಭರಣ ಪಡೆಯಲು ಅಧಿಕೃತ ವ್ಯಕ್ತಿಯೊಬ್ಬರನ್ನು ತಮಿಳುನಾಡು ಸರ್ಕಾರ ನೇಮಿಸಬೇಕು' ಎಂದು ಆದೇಶಿಸಿದ್ದಾರೆ.

ಜಯಲಲಿತಾ

'ತಮಿಳುನಾಡಿನ ಡಿವೈಎಸ್ಪಿಯವರು ತಮ್ಮ ರಾಜ್ಯದ ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ವಿಷಯ ತಿಳಿಸಬೇಕು. ತಮಿಳುನಾಡು ಐಜಿಪಿ ಅವರೊಂದಿಗೆ ನಿಗದಿತ ದಿನದಂದು ನ್ಯಾಯಾಲಯದಲ್ಲಿ ಹಾಜರಿರಬೇಕು. ಛಾಯಾಗ್ರಾಹಕರು ಹಾಗೂ ವಿಡಿಯೊಗ್ರಾಫರ್‌ಗಳನ್ನು ಕರೆತರಬೇಕು. ಜೊತೆಗೆ, ಚಿನ್ನಾಭರಣ ತುಂಬಿಕೊಳ್ಳಲು ಆರು ದೊಡ್ಡ ಗಾತ್ರದ ಟ್ರಂಕ್‌ಗಳನ್ನು ತರಬೇಕು' ಎಂದು ಆದೇಶದಲ್ಲಿ ಹೇಳಿದ್ದಾರೆ.

'ಚಿನ್ನಾಭರಣ ಹಸ್ತಾಂತರ ಸಂದರ್ಭದಲ್ಲಿ ಸ್ಥಳೀಯ ಪೊಲೀಸರಿಂದ ಭದ್ರತೆಗೆ ವ್ಯವಸ್ಥೆ ಮಾಡಲು ರಿಜಿಸ್ಟ್ರಾರ್ ಕ್ರಮ ಕೈಗೊಳ್ಳಬೇಕು' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

7,040 ಗ್ರಾಂ ತೂಕದ 468 ಬಗೆಯ ಚಿನ್ನಾಭರಣ ಹಾಗೂ ವಜ್ರದ ಆಭರಣಗಳು, 700 ಕೆ.ಜಿ ಬೆಳ್ಳಿ ಸಾಮಗ್ರಿ ಸೇರಿದಂತೆ ಹಲವು ವಸ್ತುಗಳನ್ನು ಜಪ್ತಿ ಮಾಡಲಾಗಿತ್ತು. ಪ್ರಕರಣದ ವಿಚಾರಣೆಗಾಗಿ ಕರ್ನಾಟಕ ಸರ್ಕಾರ ವೆಚ್ಚ ಮಾಡಿದ್ದ ಹಣವನ್ನು ಪಾವತಿ ಮಾಡಿರುವ ತಮಿಳುನಾಡು ಸರ್ಕಾರ, ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ನೀಡಿದೆ.

ಮುಖ್ಯಾಂಶಗಳು

- ಚಿನ್ನಾಭರಣ ತುಂಬಿಸಿಕೊಳ್ಳಲು ಆರು ಟ್ರಂಕ್ ತರಲು ಸೂಚನೆ
- ಭದ್ರತೆ ಕಲ್ಪಿಸುವುದು ಸ್ಥಳೀಯ ಪೊಲೀಸರ ಹೊಣೆ

'ಆಶಾಕಿರಣ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

'2.5 ಲಕ್ಷ ಜನರಿಗೆ ಉಚಿತ ಕನ್ನಡಕ'

ಪ್ರಜಾವಾಣಿ ವಾರ್ತೆ

ಹಾವೇರಿ: ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿ ಸರ್ಕಾರದ ಮಹತ್ವಾಕಾಂಕ್ಷೆಯ 'ಆಶಾಕಿರಣ- ನಿಮ್ಮ ಮನೆ ಬಾಗಿಲಿಗೆ ಕಣ್ಣಿನ ಆರೈಕೆ' ಎಂಬ ನೂತನ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಚಾಲನೆ ನೀಡಿದರು.

'ಈ ಯೋಜನೆಯಡಿ ಮೊದಲ ಹಂತದಲ್ಲಿ ಹಾವೇರಿ, ಕಲಬುರಗಿ, ಚಿಕ್ಕಬಳ್ಳಾಪುರ ಹಾಗೂ ಚಾಮರಾಜನಗರ ಜಿಲ್ಲೆಗಳು, ಎರಡನೇ ಹಂತದಲ್ಲಿ ಚಿತ್ರದುರ್ಗ, ಮಂಡ್ಯ, ರಾಯಚೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮನೆ ಮನೆಗೆ ತೆರಳಿ ಕಣ್ಣಿನ ತಪಾಸಣೆ ನಡೆಸಲಾಗುವುದು. ಕಣ್ಣಿನ ಪೊರೆ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಶಸ್ತ್ರಚಿಕಿತ್ಸೆ ಹಾಗೂ ಉಚಿತ ಕನ್ನಡಕ ವಿತರಿಸುವ ಉದ್ದೇಶವಿದೆ' ಎಂದು ಸಿದ್ದರಾಮಯ್ಯ ಅವರು ಈ ಸಂದರ್ಭದಲ್ಲಿ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಆಶಾ ಕಿರಣ ಯೋಜನೆಯಡಿ ದೃಷ್ಟಿದೋಷ ಇರುವ ರಾಜ್ಯದ 1 ಕೋಟಿಗಿಂತ ಹೆಚ್ಚಿನ ಜನರ ತಪಾಸಣೆ ಮಾಡಲಾಗಿದೆ. ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ಮಾಡಲಾಗಿತ್ತು. 2.5 ಲಕ್ಷ ಜನರಿಗೆ ಉಚಿತವಾಗಿ ಕನ್ನಡಕ ವಿತರಿಸಲಾಗಿದೆ. ಮತ್ತೆ ಈ ವರ್ಷ ಗದಗ ಜಿಲ್ಲೆ ಸೇರಿ ಮತ್ತೆ ನಾಲ್ಕು ಜಿಲ್ಲೆಗಳಲ್ಲಿ ಈ ಯೋಜನೆ ಜಾರಿ ಮಾಡಲಾಗುವುದು. ಪ್ರತಿ ವರ್ಷ ನಾಲ್ಕು ಜಿಲ್ಲೆಗಳಿಗೆ ಯೋಜನೆ ಜಾರಿಗೊಳಿಸಲಾಗುವುದು' ಎಂದರು.

'ಮುಖ್ಯಮಂತ್ರಿಯವರು ಹೊಸದಾಗಿ 15 ಜಿಲ್ಲೆಗಳಿಗೆ ಎಂ.ಆರ್.ಐ. ಯಂತ್ರ ನೀಡುತ್ತಾರೆ. ಹಾವೇರಿ ಜಿಲ್ಲೆಗೂ ಸಹ ಸಿಗಲಿದೆ. 800 ಹೊಸ ಡಯಾಲಿಸಿಸ್ ಯಂತ್ರಗಳನ್ನು ಖರೀಸಿದ್ದು, 42 ಹೊಸ ತಾಲ್ಲೂಕುಗಳಿಗೆ ನೀಡಲಾಗುತ್ತಿದೆ. ಆರೋಗ್ಯ ಇಲಾಖೆಯ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ' ಎಂದು ದಿನೇಶ್ ಅವರು ತಿಳಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಆಶಾಕಿರಣ' ಯೋಜನೆಯ ಫಲಾನುಭವಿಗಳಿಗೆ ಹಾವೇರಿಯಲ್ಲಿ ಉಚಿತವಾಗಿ ಕನ್ನಡಕ ವಿತರಿಸಿದರು. ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಇದ್ದಾರೆ —ಪ್ರಜಾವಾಣಿ ಚಿತ್ರ

ಎಸ್‌ಪಿಪಿ ಮುಂದುವರಿಕೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಸೇಂಟ್ ಪೀಟರ್ಸ್ ಪೊಂಟಿಫಿಕಲ್ ಸೆಮಿನರಿಯ ರೆಕ್ಟರ್ (ಮುಖ್ಯಸ್ಥ) ಕೆ.ಜೆ.ಥಾಮಸ್ ಕೊಲೆ ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ) ಆಗಿ ಸದಾಶಿವಮೂರ್ತಿ ಅವರನ್ನು ಮುಂದುವರಿಸುವುದಕ್ಕೆ ಹೈಕೋರ್ಟ್ ತಡೆ ನೀಡಿದೆ.

ಸದಾಶಿವ ಮೂರ್ತಿ ಮುಂದುವರಿಕೆ ಪ್ರಶ್ನಿಸಿ ಕೊತ್ತನೂರು ಗೆದ್ದಲಹಳ್ಳಿಯ ಫಾದರ್ ಇಲಿಯಾಸ್ ಡೇನಿಯಲ್, ಕೆಂಗೇರಿ ಉಪನಗರದ ಅಸ್ಸೀಸಿಯಾ ಸೇಂಟ್ ಫ್ರಾನ್ಸಿಸ್ ಚರ್ಚ್‌ನ ಫಾದರ್ ವಿಲಿಯಂ ಪ್ಯಾಟ್ರಿಕ್ ಮತ್ತು ಕನಕಪುರ ತಾಲ್ಲೂಕು ತಾತಗುಪ್ಪೆ ಮರಿಯಪ್ಪ ಗ್ರಾಮದ ಕಾರ್ಮೆಲ್ ಪೀಟರ್ ಅಲಿಯಾಸ್ ಪೀಟರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಶ್ಯಾಮಸುಂದರ್, 'ಸದಾಶಿವಮೂರ್ತಿ ಅವರನ್ನು ರಾಜ್ಯ ಸರ್ಕಾರ ಹಿಂದೊಮ್ಮೆ ಈ ಪ್ರಕರಣದಲ್ಲಿ ಎಸ್‌ಪಿಪಿ ಆಗಿ ನೇಮಕ ಮಾಡಿತ್ತು. ಆದರೆ, ಇವರ ನೇಮಕದಿಂದ ಪ್ರಕರಣದಲ್ಲಿನ ನ್ಯಾಯಿಕ ಪ್ರಕ್ರಿಯೆಯಲ್ಲಿ ಯಾವುದೇ ಪ್ರಗತಿ ಕಂಡುಬರಲಿಲ್ಲ ಎಂಬ ಕಾರಣಕ್ಕಾಗಿ ನೇಮಕಾತಿ ಆದೇಶವನ್ನು ಹಿಂಪಡೆಯಲಾಗಿತ್ತು. ಈಗ ಪುನಃ ನೇಮಕ ಮಾಡಿರುವುದು ತರವಲ್ಲ' ಎಂದು ಬಲವಾಗಿ ಆಕ್ಷೇಪಿಸಿದರು.

'ದೂರುದಾರರು ನೀಡಿದ್ದ ಮನವಿ ಆಧರಿಸಿ ಈಗ ಇವರನ್ನೇ ಪುನಃ ನೇಮಕ ಮಾಡಲಾಗಿದೆ. ಅಂತೆಯೇ, ಸದಾಶಿವಮೂರ್ತಿ ಅವರಿಗೆ ಎಸ್‌ಪಿಪಿ ಆಗಿ ನಿರ್ವಹಿಸುವ ಕೆಲಸಕ್ಕೆ ನೀಡಬೇಕಾದ ಶುಲ್ಕ ರೂಪದ ಪುರಸ್ಕಾರ ಧನವನ್ನು ತಾನೇ ಭರಿಸುವುದಾಗಿ ದೂರುದಾರರು ತಿಳಿಸಿದ್ದಾರೆ. ಇದು ಕಾನೂನಿಗೆ ವಿರೋಧ. ಆದ್ದರಿಂದ, ಇವರ ಎಸ್‌ಪಿಪಿ ನೇಮಕಾತಿ ಆದೇಶವನ್ನು ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮನ್ನಿಸಿದ ನ್ಯಾಯಪೀಠ ಸದಾಶಿವಮೂರ್ತಿ ಅವರನ್ನು ಪ್ರಕರಣದಲ್ಲಿ ಎಸ್‌ಪಿಪಿ ಆಗಿ ಮುಂದುವರಿಸುವುದಕ್ಕೆ ತಡೆ ನೀಡಿತು. ಪ್ರಕರಣದ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತಲ್ಲದೆ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: ಮಲ್ಲೇಶ್ವರ ಸೇಂಟ್ ಪೀಟರ್ಸ್ ಪೊಂಟಿಫಿಕಲ್ ಸೆಮಿನರಿಯ ರೆಕ್ಟರ್ (ಮುಖ್ಯಸ್ಥ) ಕೆ.ಜೆ.ಥಾಮಸ್ 2013ರ ಮಾರ್ಚ್ 31ರಂದು ರಾತ್ರಿ 11 ರಿಂದ 2 ಗಂಟೆ ಮಧ್ಯದ ಅವಧಿಯಲ್ಲಿ ಹತ್ಯೆಗೀಡಾಗಿದ್ದರು. ಈ ಸಂಬಂಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಸದ್ಯ ಸಿಸಿಎಚ್–1ರಲ್ಲಿ ಪ್ರಕರಣದ ವಿಚಾರಣೆ ಬಾಕಿ ಇದೆ. 2023ರ ಸೆಪ್ಟೆಂಬರ್ 15ರಂದು ಸದಾಶಿವಮೂರ್ತಿ ಅವರನ್ನು ಪ್ರಕರಣದ ಎಸ್‌ಪಿಪಿ ಆಗಿ ಪುನಃ ನೇಮಕ ಮಾಡಲಾಗಿತ್ತು.

ನಾಪತ್ತೆ: ವರದಿ ಸಲ್ಲಿಕೆಗೆ ನಿರ್ದೇಶನ

ಬೆಂಗಳೂರು: 'ಬಿಡದಿಯ ನಿತ್ಯಾನಂದ ಧ್ಯಾನಪೀಠದ ಆಶ್ರಮದಿಂದ ಕಾಣೆಯಾಗಿದ್ದಾರೆ ಎನ್ನಲಾದ ಸಾಫ್ಟ್‌ವೇರ್ ಎಂಜಿನಿಯರ್ ಕೃಷ್ಣಕುಮಾರ್ ಪಾಲ್ ಇರುವಿಕೆಯ ಬಗ್ಗೆ ಸಮಗ್ರ ವರದಿ ಸಲ್ಲಿಸಿ' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ನನ್ನ ಮಗ ಕೃಷ್ಣಕುಮಾರ್ ಪಾಲ್ ನಾಪತ್ತೆಯಾಗಿದ್ದಾನೆ' ಎಂದು ರಾಂಚಿಯ ದಯಾಶಂಕರ್ ಪಾಲ್ ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ಅವರು, 'ಪೊಲೀಸರು ಕೃಷ್ಣಕುಮಾರ್ ಅವರ ಬಗ್ಗೆ ಇರುವಿಕೆಯ ಬಗ್ಗೆ ಬಿಡದಿಯ ನಿತ್ಯಾನಂದ ಪೀಠಕ್ಕೆ ತೆರಳಿ ಖುದ್ದು ಪರಿಶೀಲನೆ ನಡೆಸಿದ್ದಾರೆ. ಆದರೆ, ಕೃಷ್ಣಕುಮಾರ್ ಬಿಡದಿಯ ಧ್ಯಾನಪೀಠದಲ್ಲಿ ಇಲ್ಲ. ಅವರ ಇ-ಮೇಲ್‌ಗೆ ನಡೆಸಲಾದ ಸಂವಹನದಲ್ಲಿ; ಈ ಮೊದಲು ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡಿ ಎಂಬ ಉತ್ತರ ಬಂದಿತ್ತು. ನಂತರ ಬಂದಿಲ್ಲ. ಆಶ್ರಮದಲ್ಲಿ ಇರುವವರಿಗೂ ಅವರು ಎಲ್ಲಿದ್ದಾರೆ ಎನ್ನುವ ಮಾಹಿತಿ ಇಲ್ಲ' ಎಂದು ತಿಳಿಸಿದರು.

ನ್ಯಾಯಪೀಠವು ಪ್ರಕರಣದ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಮಾರ್ಚ್ 4ಕ್ಕೆ ಮುಂದೂಡಿತು. ಅರ್ಜಿದಾರರ ಪರ ವಕೀಲ ರಾಜಕುಮಾರ್ ವಾದ ಮಂಡಿಸಿದರು.

ಭಾಷಾತಜ್ಞ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯ

ಸಮರ್ಥ ಭಾಷಾ ನೀತಿ ಅಗತ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ 300ಕ್ಕೂ ಹೆಚ್ಚು ತಾಯ್ನುಡಿಗಳಿದ್ದು, ಈ ಭಾಷೆಗಳ ರಕ್ಷಣೆ ಹಾಗೂ ಸಬಲೀಕರಣ ಅಗತ್ಯ' ಎಂದು ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ. ಬಸವರಾಜ ಕೋಡಗುಂಟಿ ಅಭಿಪ್ರಾಯಪಟ್ಟರು.

ನ್ಯಾಷನಲ್ ಬುಕ್ ಟ್ರಸ್ಟ್ ಇಲ್ಲಿನ ಪ್ರಗತಿ ಮೈದಾನದಲ್ಲಿ ಸಂಘಟಿಸಿದ ವಿಶ್ವ ಪುಸ್ತಕ ಮೇಳದಲ್ಲಿ ಕರ್ನಾಟಕದ ಬಹುಭಾಷಿಕತೆ ಕುರಿತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರಿನ ಲೇಖಕಿ ಡಾ. ಸುಕನ್ಯಾ ಕನಾರಳ್ಳಿ ಅವರು ತಾವು ಹುಟ್ಟಿ ಬೆಳೆದ ಬಹುಭಾಷಾ ಪರಿಸರದ ವಿವರಣೆ ನೀಡಿದರು.

ಪುರುಷೋತ್ತಮ ಬಿಳಿಮಲೆ

ಸೃಜನಶೀಲ ಪ್ರಕ್ರಿಯೆಯು ಭಾಷಾ ವೈವಿಧ್ಯಗಳನ್ನು ಒಳಗೊಳ್ಳುವ ಕುರಿತು ಹಾಗೂ ಅವು ಸಾಮಾಜಿಕವಾಗಿ ಬಹುಜನರನ್ನು ಒಳಗೊಳ್ಳುವ ಕುರಿತು ಮಾತನಾಡಿದರು.

ನಿವೃತ್ತ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಭಾರತದ ಅನೇಕ ಭಾಷೆಗಳು ಪತನಮುಖಿಯಾಗಿರುವುದನ್ನು ಉದಾಹರಣೆಗಳೊಂದಿಗೆ ವಿವರಿಸಿ, 'ಈ ಎಲ್ಲ ಭಾಷೆಗಳು ಉಳಿದು ಬೆಳೆಯಬೇಕಾದರೆ ಭಾರತಕ್ಕೊಂದು ಸಮರ್ಥ ಭಾಷಾ ನೀತಿಯ ಅಗತ್ಯ ಇದೆ ಎಂದರು.

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ಎನ್‌ಬಿಟಿಯು ಸುಮಾರು 60 ಭಾರತೀಯ ಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸುವ ಕಾರ್ಯ ಮಾಡುತ್ತಿದೆ. ಪ್ರತಿವರ್ಷ ಇಲ್ಲಿನ ಪ್ರಗತಿ ಮೈದಾನದಲ್ಲಿ ಪುಸ್ತಕ ಮೇಳ ಆಯೋಜಿಸುವ ಜೊತೆಗೆ ವಿವಿಧ ಭಾಷೆಗಳ ಪುಸ್ತಕಗಳ ಕುರಿತು ಚರ್ಚೆ, ಪ್ರಮುಖ ವಿಷಯಗಳ ಕುರಿತ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

ನ್ಯಾಯಾಂಗ ನಿಂದನೆ ಕೈಬಿಟ್ಟ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರ್ಟ್ ಕಲಾಪದಲ್ಲಿ ಸಂಯಮ ಮೀರಿ ವರ್ತಿಸಿ ದುರ್ನಡತೆ ತೋರಿದ ಆರೋಪಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವಕೀಲ ಎಂ. ವೀರಭದ್ರಯ್ಯ ವಿರುದ್ಧ ದಾಖಲಿಸಿಕೊಳ್ಳಲಾಗಿದ್ದ ಸ್ವಯಂಪ್ರೇರಿತ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣವನ್ನು ಹೈಕೋರ್ಟ್ ಕೈಬಿಟ್ಟಿದೆ.

'ನನ್ನ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಸೂಚಿಸಿ ಹೊರಡಿಸಿರುವ ಆದೇಶ ಹಿಂಪಡೆಯಬೇಕು' ಎಂದು ವೀರಭದ್ರಯ್ಯ ಅರ್ಜಿ ಸಲ್ಲಿಸಿದ್ದರು.

ಕಳೆದ ಚುನಾವಣೆಯ ಇವಿಎಂ ಬಳಕೆಗೆ ಅಸ್ತು

ಪ್ರಜಾವಾಣಿ ವಾರ್ತೆ

ವರುಣಾ ಕ್ಷೇತ್ರ

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೆದ್ದಿರುವ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಮತದಾನಕ್ಕೆ ಬಳಸಲಾಗಿದ್ದ ಇವಿಎಂ-ವಿವಿ ಪ್ಯಾಟ್‌ಗಳನ್ನು ಮುಂದಿನ ಲೋಕಸಭಾ ಚುನಾವಣೆಗೆ ಉಪಯೋಗಿಸಿಕೊಳ್ಳಲು ಚುನಾವಣಾ ಆಯೋಗಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

'ಸಿದ್ದರಾಮಯ್ಯ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಮೈಸೂರಿನ ವರುಣಾ ಹೋಬಳಿಯ ಕೂಡನಹಳ್ಳಿ ನಿವಾಸಿ ಕೆ.ಎಂ.ಶಂಕರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಚುನಾವಣಾ ಆಯೋಗದ ಪರ ವಕೀಲ ಎಸ್. ಆರ್.ದೊಡ್ಡವಾಡ ಅವರು, 'ಅರ್ಜಿ ವಿಚಾರಣೆಗೆ ಬಾಕಿ ಇರುವುದರಿಂದ ವರುಣಾ ಕ್ಷೇತ್ರದಲ್ಲಿ ಬಳಸಲಾಗಿದ್ದ ಇವಿಎಂ-ವಿವಿ ಪ್ಯಾಟ್‌ಗಳನ್ನು ಜಿಲ್ಲಾ ಇವಿಎಂ ವೇರ್ ಹೌಸ್‌ನಲ್ಲಿ ಇರಿಸಲಾಗಿದೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು ವರುಣಾ ಕ್ಷೇತ್ರದ ಮತದಾನಕ್ಕೆ ಬಳಸಿಕೊಳ್ಳಲಾಗಿದ್ದ 314 ಇವಿಎಂ ಹಾಗೂ 338 ವಿವಿ ಪ್ಯಾಟ್‌ಗಳನ್ನು ಲೋಕಸಭೆ ಚುನಾವಣೆಯಲ್ಲಿ ಬಳಸಲು ಅನುಮತಿ ನೀಡಬೇಕು' ಎಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದರು.

'ಇದಕ್ಕೆ ತಮ್ಮದೇನೂ ಆಕ್ಷೇಪಣೆ ಇಲ್ಲ' ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠವು ವರುಣಾ ಕ್ಷೇತ್ರದ ಇವಿಎಂ-ವಿವಿ ಪ್ಯಾಟ್‌ಗಳನ್ನು ಮುಂದಿನ ಲೋಕಸಭಾ ಚುನಾವಣೆಗೆ ಬಳಸಿಕೊಳ್ಳಲು ಆಯೋಗಕ್ಕೆ ಅನುಮತಿ ನೀಡಿ ಮಧ್ಯಂತರ ಅರ್ಜಿ ವಿಲೇವಾರಿ ಮಾಡಿತು.

ವಿಚಾರಣೆ ವೇಳೆ ಸಿದ್ದರಾಮಯ್ಯ ಪರ ವಕೀಲರು ವಾದ ಮಂಡನೆಗೆ ಮತ್ತಷ್ಟು ಕಾಲಾವಕಾಶ ಕೋರಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು, 'ಪದೇ ಪದೇ ಕಾಲಾವಕಾಶ ಕೇಳಲಾಗುತ್ತಿದೆ. ಪ್ರಕರಣವನ್ನು ಸುಮ್ಮನೇ ವಿಳಂಬ ಮಾಡಲಾಗುತ್ತಿದೆ' ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಯಾಗಿ ನ್ಯಾಯಪೀಠವು ಸಿದ್ದರಾಮಯ್ಯ ಪರ ವಕೀಲರನ್ನು ಸೂಕ್ಷ್ಮವಾಗಿ ಎಚ್ಚರಿಸಿ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿತು.

'ಉಚಿತ ಗ್ಯಾರಂಟಿಗಳ ಆಮಿಷದ ಮೂಲಕ ಚುನಾವಣಾ ಅಕ್ರಮ ಎಸಗಿ ಗೆದ್ದಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂಬುದು ಅರ್ಜಿದಾರರ ಕೋರಿಕೆ.

'ಕೆಎಎಸ್: ವಯೋಮಿತಿ ಸಡಿಲಿಸಿ ಎಲ್ಲರಿಗೂ ಅವಕಾಶ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2017–18ನೇ ಸಾಲಿನಲ್ಲಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಮತ್ತು ವಯೋಮಿತಿ ಮೀರಿದ ಎಲ್ಲ ವರ್ಗದ ಅಭ್ಯರ್ಥಿಗಳಿಗೆ 2023-24ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಅಧಿಸೂಚನೆಯಲ್ಲಿ ಪರೀಕ್ಷೆ ಬರೆಯಲು ಒಂದು ಹೆಚ್ಚುವರಿ ಅವಕಾಶ ನೀಡಬೇಕು' ಎಂದು ರಾಜ್ಯ ದಲಿತ ಪದವೀಧರ ಸಂಘ ಆಗ್ರಹಿಸಿದೆ.

ಸಂಘ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿ, ಅಹವಾಲು ತೋಡಿಕೊಂಡಿದೆ. ಅಲ್ಲದೆ, ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರನ್ನು ಭೇಟಿ ಮಾಡಿ ಈ ಅವಕಾಶ ಕಲ್ಪಿಸುವಂತೆ ಕೋರಿದೆ.

ಮುಖ್ಯಾಂಶಗಳು

- ದಲಿತ ಪದವೀಧರರ ಸಂಘದ ಆಗ್ರಹ
- ಮುಖ್ಯಮಂತ್ರಿಗೆ ಈಗಾಗಲೇ ಅಹವಾಲು ಸಲ್ಲಿಸಿರುವ ಸಂಘ
- ಪೂರ್ವಭಾವಿ ಪರೀಕ್ಷೆ ಬರೆದವರಿಗೆ ಹೆಚ್ಚುವರಿ ಅವಕಾಶಕ್ಕೆ ಕೋರಿಕೆ

'2023-24ನೇ ಸಾಲಿನಲ್ಲಿ ಪರೀಕ್ಷೆ ಬರೆಯುವ ಆಕಾಂಕ್ಷಿಗಳಿಗೆ ರಾಜ್ಯ ಸರ್ಕಾರ ಈಗಾಗಲೇ ಮೂರು ವರ್ಷಗಳ ವಯೋಮಿತಿ ಸಡಿಲಿಸಿ ಅವಕಾಶ ನೀಡಿದೆ. ಇದರಿಂದ ಶೇ 20ರಷ್ಟು ಆಕಾಂಕ್ಷಿಗಳಿಗೆ ಮಾತ್ರ ಅವಕಾಶ ಸಿಕ್ಕಿದೆ. ವಯೋಮಿತಿ ಮೀರಿದ ಶೇ 80ರಷ್ಟು ಆಕಾಂಕ್ಷಿಗಳು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ' ಎಂದು ಸಂಘದ ಅಧ್ಯಕ್ಷ ವಿ. ಲೋಕೇಶ್ ತಿಳಿಸಿದ್ದಾರೆ.

'ಒಡಿಶಾ ರಾಜ್ಯದಲ್ಲಿ 2020, 2021 ಮತ್ತು 2022ರಲ್ಲಿ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆ ಬರೆದು ವಯೋಮಿತಿ ಮೀರಿದ ಎಲ್ಲ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ 2023ರ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಗೆ ಒಂದು ಹೆಚ್ಚುವರಿ ಅವಕಾಶ ನೀಡಲಾಗಿದೆ' ಎಂದು ಸಂಘವು ವಿವರಿಸಿದೆ.

'ಕರ್ನಾಟಕ ಸರ್ಕಾರ ಕೂಡಾ 1988-93ರ ಅವಧಿಯಲ್ಲಿ ಕೆಎಎಸ್ ಪರೀಕ್ಷೆ ಬರೆದು ವಯೋಮಿತಿ ಮೀರಿದ ಎಲ್ಲ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನಂತರದ ಅವಧಿಯಲ್ಲಿ ಪರೀಕ್ಷೆ ಬರೆಯಲು ಒಂದು ಹೆಚ್ಚುವರಿ ಅವಕಾಶ ನೀಡಿದೆ' ಎಂದು ಲೋಕೇಶ್ ಅವರು ಹೇಳಿದ್ದಾರೆ.

ವಿಮರ್ಶೆ ಕುರಿತು ಸಾಹಿತಿ ಕೆ. ಮರುಳಸಿದ್ದಪ್ಪ ಅಭಿಪ್ರಾಯ

ಆತ್ಮಸಾಕ್ಷಿಗೆ ವಿರುದ್ಧವಾದ ವಿಮರ್ಶೆ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಮಾಣಿಕತೆ ಮತ್ತು ಆತ್ಮಸಾಕ್ಷಿ ಇಲ್ಲದ ವಿಮರ್ಶೆಗೆ ಎಷ್ಟೇ ಪಾಂಡಿತ್ಯ, ಅನುಭವ, ಜ್ಞಾನ ಇದ್ದರೂ ಪ್ರಯೋಜನವಿಲ್ಲ. ಅದು ಅನ್ಯಾಯದ ವಿಮರ್ಶೆ ಎಂದು ಸಾಹಿತಿ ಕೆ. ಮರುಳಸಿದ್ದಪ್ಪ ಪ್ರತಿಪಾದಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನವು ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಮತ್ತು ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ನವೋದಯದ ಕಾಲದಲ್ಲಿ ಓದುಗರ ಅಭಿರುಚಿ ಬೆಳೆಸುವಂತ ವಿಮರ್ಶೆಗಳು ಬರುತ್ತಿದ್ದವು. ಭಿನ್ನಾಭಿಪ್ರಾಯಗಳು, ವಾಗ್ವಾದಗಳು ಕೂಡ ಗೌರವಯುತ ಭಾಷೆಯಲ್ಲೇ ನಡೆಯುತ್ತಿದ್ದವು ಎಂದು ತಿಳಿಸಿದರು.

ಇಂದಿನ ಮಾಧ್ಯಮ ಸಾಗುತ್ತಿರುವ ಹಾದಿ ನೋಡಿದರೆ ದಿಗ್ಭ್ರಾಂತಿಯಾಗುತ್ತಿದೆ. ದೃಶ್ಯಮಾಧ್ಯಮಗಳನ್ನು ನೋಡುವುದೇ ಬೇಡ ಅನ್ನಿಸುತ್ತಿದೆ. ಆದರೆ, ಬಿಡಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದೂರದರ್ಶನದಂತಹ ಸರ್ಕಾರಿ ಚಾನೆಲ್‌ನಲ್ಲಿ ಸಮಚಿತ್ತದಿಂದ ಸುದ್ದಿಗಳು ಬರುತ್ತಿದ್ದವು. ಖಾಸಗಿ ಚಾನೆಲ್‌ಗಳು ಬಂದಾಗ ಉತ್ತಮ ವಿಮರ್ಶಾತ್ಮಕ ಸುದ್ದಿ ಬರಬಹುದು ಎಂಬ ನಿರೀಕ್ಷೆ ನಮ್ಮದಾಗಿತ್ತು. ಆದರೆ, ಖಾಸಗಿ ಚಾನೆಲ್‌ಗಳು ಬಳಸುವ ಭಾಷೆ, ಆರಿಸಿಕೊಳ್ಳುವ ವಿಚಾರಗಳು, ಚರ್ಚೆಗಳು ಆಘಾತಕಾರಿಯಾಗಿವೆ ಎಂದು ವಿಶ್ಲೇಷಿಸಿದರು.

ಎಲ್.ಎಸ್. ಶೇಷಗಿರಿರಾವ್ ಪ್ರಶಸ್ತಿ ಸ್ವೀಕರಿಸಿದ ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿ, 'ಹಿಂದೆ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಬಂಡಾಯ ಮುಂತಾದ ಚಳವಳಿಗಳಿದ್ದವು. ವಾಗ್ವಾದಗಳು ನಡೆಯುತ್ತಿದ್ದವು. ಈಗ ಎಲ್ಲವೂ ಸ್ಥಗಿತಗೊಂಡಿರುವ ಸಮಾಜದಲ್ಲಿ ನಾವಿದ್ದೇವೆ' ಎಂದು ವಿಷಾದಿಸಿದರು.

ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಸ್ವೀಕರಿಸಿದ ಈಶ್ವರ ದೈತೋಟ ಅವರು ಮಾತನಾಡಿ, 'ಬೆಂಗಳೂರಿನಲ್ಲಿ ಇಬ್ಬರು ಇದ್ದಾಗ ಕನ್ನಡ ಮಾತನಾಡುತ್ತಾರೆ. ಮೂರು ಮಂದಿಯಾದರೆ ಇಂಗ್ಲಿಷ್ ಬಳಸುತ್ತಾರೆ. ಇದಾಗಬಾರದು. ಕರ್ನಾಟಕಕ್ಕೆ ಯಾವುದೇ ದೇಶ, ಪ್ರದೇಶದಿಂದ ಬಂದರೂ ಅವರು ಇಲ್ಲಿ ಕನ್ನಡವನ್ನೇ ಬಳಸಬೇಕು' ಎಂದರು.

'ಇಂಗ್ಲಿಷ್ ಬಳಸದ ದೇಶಗಳಿಗೆ ನಾವು ತೆರಳಿದರೆ ಅಲ್ಲಿ ಕನ್ನಡದಲ್ಲಿಯೇ ವ್ಯವಹರಿಸಬೇಕು' ಎಂದು ಸಲಹೆ ನೀಡಿದರು.

ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು.



'ಬಿಎಂಶ್ರೀ ಪ್ರತಿಷ್ಠಾನ' ವತಿಯಿಂದ ಮೀರಾಸಾಬಿಹಳ್ಳಿ ಶಿವಣ್ಣ ಅವರಿಗೆ ಪ್ರೊ. ಎಲ್. ಎಸ್ ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಮತ್ತು ಈಶ್ವರ ದೈತೋಟ ಅವರಿಗೆ ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಾಹಿತಿ ಕೆ. ಮರುಳಸಿದ್ದಪ್ಪ, 'ಬಿಎಂಶ್ರೀ ಪ್ರತಿಷ್ಠಾನ'ದ ಗೌರವ ಕೋಶಾಧಿಕಾರಿ ಪ್ರಭಾಕರ್ ಬೆಳವಾಡಿ, ಗೌರವ ಕಾರ್ಯದರ್ಶಿ ಶಾಂತರಾಜು ಮತ್ತು ಅಧ್ಯಕ್ಷ ಬೈರಮಂಗಲ ರಾಮೇಗೌಡ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಕ್ಷೇಮ ಕುಶಲ

ಅಪಸ್ಮಾರ ಬೇಡ ತಾತ್ಸಾರ

ಡಾ. ಮುರಲೀ ಮೋಹನ್ ಚೂಂತಾರು

ಮಿದುಳಿನ ನರಕೋಶಗಳು ವಿದ್ಯುತ್ ಪ್ರಚೋದನೆಯನ್ನು ಉಂಟುಮಾಡುತ್ತಿರುತ್ತವೆ. ಇವು ಪದೇ ಪದೇ ಅತ್ಯಧಿಕ ಪ್ರಮಾಣದಲ್ಲಿ ಕಾಣಿಸಿಕೊಂಡಾಗ ಮಿದುಳಿನ ಕಾರ್ಯದಲ್ಲಿ ತಾತ್ಕಾಲಿಕ ವ್ಯತ್ಯಯ ಉಂಟಾಗುತ್ತದೆ. ಇದರ ಪರಿಣಾಮ ವ್ಯಕ್ತಿ ಸೆಳೆತ ಅಥವಾ ಸೆಳವುಗಳನ್ನು ಅನುಭವಿಸುತ್ತಾನೆ. ಇದೇ ಅಪಸ್ಮಾರ. ಇದನ್ನೇ ಮೂರ್ಛೆರೋಗ, ಫಿಟ್ಸ್, ಮಲರೋಗ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಆಂಗ್ಲಭಾಷೆಯಲ್ಲಿ 'ಎಪಿಲೆಪ್ಸಿ' ಎಂದು ಕರೆಯುತ್ತಾರೆ; ಆಡುಭಾಷೆಯಲ್ಲಿ 'ಫಿಟ್ಸ್' ಎನ್ನುತ್ತಾರೆ.

ನಮ್ಮ ಮಿದುಳು ಒಂದು ಸಂಕೀರ್ಣವಾದ ನರಮಂಡಲ. ಅದರಲ್ಲಿ ನರಕೋಶಗಳ ಮಧ್ಯೆ ವಿದ್ಯುತ್ ಪ್ರಸರಣ ನಿಯಮಿತವಾಗಿ ನಡೆಯುತ್ತಿರುತ್ತದೆ. ವಿದ್ಯುತ್ ಆವೇಗಗಳ ಹರಡುವಿಕೆ ಅತಿ ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿರುತ್ತದೆ. ಆದರೆ ದೊಡ್ಡ ಸೆಳವು ಬಂದಾಗ ನರಕೋಶಗಳ ದೊಡ್ಡ ಗುಂಪು ಪದೇ ಪದೇ ಸೆಳೆತಕೊಳ್ಳಗಾಗಿ ಅವೇಶಗೊಂಡು, ಚುರುಕುಗೊಂಡು ತುಂಬಾ ವ್ಯಾಪಕ ಪ್ರಮಾಣದಲ್ಲಿ ವಿದ್ಯುತ್ ಚೇತನವನ್ನು ಹೊರಹಾಕುತ್ತದೆ. ಅದನ್ನು ತಡೆಯುವ ಶಕ್ತಿ ನರಕೋಶಗಳ ಮಧ್ಯೆ ಕುಗ್ಗಿಹೋಗಿರುತ್ತದೆ. ಪ್ರತಿಯೊಬ್ಬ ಮನುಷ್ಯನಲ್ಲಿ ಸೆಳವಿನ ಕಾರ್ಯವ್ಯಾಪ್ತಿಗೊಂದು ಮಿತಿಯಿರುತ್ತದೆ. ಅಪಸ್ಮಾರ ರೋಗಿಗಳಲ್ಲಿ ಈ ಮಿತಿ ತುಂಬ ತಳಹಂತದಲ್ಲಿದ್ದು, ಅವರು ಬೇರೆ ಬೇರೆ ಕಾರಣಗಳಿಂದಾಗಿ ದೊರೆಯುವ ಅನೇಕ ಬಗೆಯ ಪ್ರಚೋದನೆಗಳಿಗೆ ಸೆಳವನ್ನು ತೋರ್ಪಡಿಸುತ್ತಾರೆ. ಅಸಹಜವಾಗಿರುವ ಅವರ ನರಮಂಡಲದ ನರಕೋಶಗಳು ಬಹಳ ಬೇಗನೆ ಪ್ರಚೋದನೆಗೊಳಗಾಗುತ್ತದೆ.

ಕಾರಣಗಳೇನು?

1. ಆನುವಂಶಿಕ ಕಾರಣಗಳು.
2. ಹೆರಿಗೆಯ ಸಮಯದಲ್ಲಿ ಮಗುವಿನ ಮಿದುಳಿಗೆ ಆಗುವ ಹಾನಿ. ಮಗು ಗರ್ಭಾಶಯದಲ್ಲಿರುವಾಗಲೇ ಉಂಟಾಗುವ ಅಮ್ಲಜನಕದ ಕೊರತೆಯಿಂದಾಗಿಯೂ ಬಾಲ್ಯದಲ್ಲಿ ಅಪಸ್ಮಾರ ಬರುವ ಸಾಧ್ಯತೆ ಇದೆ.
3. ಬಾಲ್ಯದಲ್ಲಿ ತಲೆಗೆ ಬಿದ್ದ ಪೆಟ್ಟು ನಂತರದ ದಿನಗಳಲ್ಲಿ ಅಥವಾ ಅನೇಕ ತಿಂಗಳು ಅಥವಾ ವರ್ಷಗಳ ಬಳಿಕ ಸೆಳವಿನ ರೂಪದಲ್ಲಿ ಕಾಣಿಸಿಕೊಳ್ಳಬಹುದು.
4. ವಿಪರೀತ ಜ್ವರದಿಂದಲೂ ಕೆಲವೊಮ್ಮೆ ಅಪಸ್ಮಾರ ಬರುವ ಸಾಧ್ಯತೆ ಇದೆ.
5. ಮಿದುಳಿನ ಕೆಲವೊಂದು ಶಸ್ತ್ರಚಿಕಿತ್ಸೆಗಳ ಬಳಿಕ, ಮಿದುಳಿಗೆ ಉಂಟಾಗುವ ಗಾಯ.
6. ಮಿದುಳಿಗೆ ರಕ್ತಸಂಚಾರ ಅಥವಾ ಆಮ್ಲಜನಕದ ಕೊರತೆ ಉಂಟಾದಾಗ.
7. ಅತಿಯಾದ ಮದ್ಯಪಾನ, ಅತಿಯಾದ ಔಷಧಗಳ ಸೇವನೆ, ಖಿನ್ನತೆ ಹೊಗಲಾಡಿಸುವ ಔಷಧಿಗಳ ದುರ್ಬಳಕೆ.
8. ಮಿದುಳಿನ ಉರಿಯೂತ, ಮಿದುಳಿನ ಪೊರೆ ಉರಿಯೂತ, ಮಿದುಳಿನ ಕೀವುಗಳು, ಮಿದುಳಿನ ಹೊರಮೈಯ ಪೊರೆಯಲ್ಲಿ ರಕ್ತಶೇಖರಣೆ, ಮಿದುಳಿಗೆ ಗಾಯವಾಗಿ ಊದಿಕೊಂಡಾಗ, (ಅಪಘಾತಗಳಲ್ಲಿ) ಮಿದುಳಿನ ಒಳಗಿನ ಒತ್ತಡ ಜಾಸ್ತಿಯಾದಾಗ.

9. ರಕ್ತದಲ್ಲಿ ಗ್ಲುಕೋಸ್, ಕ್ಯಾಲ್ಸಿಯಂ, ಸೋಡಿಯಂ ಪ್ರಮಾಣ ಕಡಿಮೆಯಾದಾಗ; ರಕ್ತದಲ್ಲಿ ಕಲ್ಮಶಗಳು ಜಾಸ್ತಿಯಾದಾಗ.
10. ವಿಪರೀತ ಮದ್ಯಸೇವನೆಯಿಂದಾಗಿ ಯಕೃತ್ತು (ಲಿವರ್) ನಾಶಗೊಂಡು ತನ್ನ ಕಾರ್ಯಕ್ಷಮತೆಯನ್ನು ಕಳೆದುಕೊಂಡಾಗ.

ಏನು ಮಾಡಬೇಕು?

ಅಪಸ್ಮಾರ ಬಂದಾಗ ತಕ್ಷಣ ಮಾಡಬೇಕಾದ ತುರ್ತು ಕೆಲಸವೆಂದರೆ, ರೋಗಿಯ ದೇಹದ ಭಾಗಕ್ಕೆ ಯಾವುದೇ ರೀತಿಯ ಅಪಾಯ ಆಗದಂತೆ ಅವನನ್ನು/ಅವಳನ್ನು ನೋಡಿಕೊಳ್ಳಬೇಕು. ಚೂಪಾದ ವಸ್ತುಗಳು, ಕಲ್ಲು, ನೀರು, ಬೆಂಕಿ, ಇತ್ಯಾದಿಗಳಿಂದ ದೂರವಿರಿಸಬೇಕು. ಬಿಗಿಯಾದ ಉಡುಪನ್ನು ಸಡಿಲಿಸಬೇಕು. ಉಸಿರಾಡಲು ಅನುಕೂಲವಾಗುವಂತೆ, ಉಸಿರು ಸರಾಗವಾಗಿ ಚಲನೆ ಉಂಟಾಗಲು ಪೂರಕವಾಗುವಂತೆ ತಲೆಯನ್ನು ಒಂದು ಕಡೆ ವಾಲಿಸಿ ಹಿಡಿಯಬೇಕು. ನಾಲಗೆ ಕಚ್ಚಿಕೊಳ್ಳದಂತೆ ತಡೆಯಲು, ಹಲ್ಲುಗಳ ನಡುವೆ ಕರವಸ್ತ್ರ ಅಥವಾ ಬಟ್ಟೆಯನ್ನು ಇಡಬಹುದು. ನಾಲಗೆ ಕಡಿಯದಂತೆ ತಡೆಯಲು ಮರದ ತುಂಡು, ನಾಲಗೆ ಇಕ್ಕುಳ ಮತ್ತು ದೇಹದ ಚಲನೆಯನನ್ನು ನಿರ್ಬಂಧಿಸುವ ಸಾಧನಗಳಿಂದ, ಉಪಕಾರಕ್ಕಿಂತ ಹೆಚ್ಚು ಅಪಾಯವಾಗುವ ಸಾಧ್ಯತೆ ಇರುತ್ತದೆ. ಸೆಳವು ಕಾಲದಲ್ಲಿ ಸುರಿಯುವ ವಿಪರೀತ ಜೊಲ್ಲುರಸವು ಗಂಟಲಿಗೆ ಹೋಗಿ ಉಸಿರಾಟಕ್ಕೆ ತೊಂದರೆಯಾಗಬಹುದು. ನಿಯಮಿತವಾಗಿ ಒರೆಸಿ, ಗಾಳಿಯ ಸರಾಗ ಚಲನೆಗೆ ಅನುವು ಮಾಡಿಕೊಡಬೇಕು. ಎತ್ತರದ ಜಾಗದಲ್ಲಿ ವ್ಯಕ್ತಿ ಬಿದ್ದಿದ್ದರೆ, ವ್ಯಕ್ತಿಯನ್ನು ಸಮತಟ್ಟಾದ ನೆಲದಲ್ಲಿ ಮಲಗಿಸಿ ದೇಹಕ್ಕೆ ಯಾವುದೇ ಏಟಾಗದಂತೆ ತಡೆಯಬೇಕು. ಅಪಸ್ಮಾರದಿಂದ ಹೊರಳಾಡುತ್ತಿರುವ ವ್ಯಕ್ತಿಯ ಕೈಗೆ ಚೂಪಾದ ಕಬ್ಬಿಣದ ಸರಳನ್ನು ನೀಡಿ ಸೆಳತ ನಿಲ್ಲಿಸಲು ಪ್ರಯತ್ನಿಸುವುದು ಮೂರ್ಖತನದ ಪರಮಾವಧಿ. ಅದೇ ರೀತಿ ಮುಖದ ಮೇಲೆ ನೀರು ಸುರಿಯುವುದರಿಂದ ಉಸಿರಾಟಕ್ಕೆ ಮತ್ತಷ್ಟು ತೊಂದರೆಯಾಗಬಹುದು. ಅಪಸ್ಮಾರದ ಬಂದು ವ್ಯಕ್ತಿ ಕಂಪಿಸುತ್ತಿರುವಾಗ ವ್ಯಕ್ತಿಯನ್ನು ಕುಳಿತುಕೊಳ್ಳಿಸುವುದಕ್ಕೆ ಪ್ರಯತ್ನಿಸಬಾರದು. ನೆಲದ ಮೇಲೆ ಮಲಗಿಸಿ ಅಪಸ್ಮಾರ ನಿಲ್ಲುವವರೆಗೆ ವ್ಯಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು ಅಪಸ್ಮಾರದ ತೀವ್ರತೆ ಕಡಿಮೆಯಾದ ಬಳಿಕ ವೈದ್ಯರಲ್ಲಿಗೆ ಒಯ್ದು, ಅಗತ್ಯ ಚಿಕಿತ್ಸೆಯನ್ನು ಕೊಡಿಸಬೇಕು.

ಏನು ಮಾಡಬಾರದು?

ನಿರಂತರವಾಗಿ ಅಪಸ್ಮಾರರೋಗಕ್ಕೆ ತುತ್ತಾಗುವವರು, ವೈದ್ಯರ ಸೂಚನೆಯಂತೆ ನಿಯಮಿತವಾಗಿ ಔಷಧಗಳನ್ನು ಸೇವಿಸಬೇಕು. ಮಾತ್ರೆಗಳನ್ನು ಅನೇಕ ವರ್ಷಗಳ ಕಾಲ ದಿನ ಬಿಡದೇ ಸೇವಿಸಬೇಕಾದ ಅನಿವಾರ್ಯತೆ ಇರುತ್ತದೆ. ಔಷಧಿ ಸೇವನೆ ನಿಲ್ಲಿಸಿದ ಕೂಡಲೇ ಅಪಸ್ಮಾರಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅಪಸ್ಮಾರದ ರೋಗದ ಚಿಕಿತ್ಸೆ ದೀರ್ಘಕಾಲಿಕವಾಗಿದ್ದು ವೈದ್ಯ, ರೋಗಿ ಮತ್ತು ರೋಗಿಯ ಕುಟುಂಬದ ಸದಸ್ಯರ ನಡುವೆ ಹೊಂದಾಣಿಕೆ ಅತಿ ಅಗತ್ಯ. ಅಪಸ್ಮಾರ ರೋಗಿ ಒಬ್ಬರೇ ಈಜಾಡುವುದು, ಬೆಟ್ಟ ಹತ್ತುವುದು, ವಾಹನವನ್ನು ಚಾಲನೆ ಮಾಡುವುದು, ಚಲಿಸುವ ಯಂತ್ರಗಳೊಡನೆ ಓಡಾಡುವುದು, ಎತ್ತರ ಪ್ರದೇಶದಲ್ಲಿ ಕೆಲಸ ಮಾಡುವುದು – ಇವೆಲ್ಲ ನಿಷಿದ್ಧ. ಅಪಸ್ಮಾರ ರೋಗಿಗಳನ್ನ ಮನೆಯಲ್ಲಿ ಒಬ್ಬಂಟಿಯಾಗಿ ಬಿಡಬಾರದು. ಸ್ನಾನಗೃಹದಲ್ಲಿಯೂ ಬಾಗಿಲು ಚಿಲಕ ಹಾಕದೇ ಸ್ನಾನ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಒಟ್ಟಿನಲ್ಲಿ ಅಪಸ್ಮಾರ ರೋಗಿಗಳು ಕುಟುಂಬದವರ ಕಣ್ಗಾವಲಿನಲ್ಲಿಯೇ ಇರಬೇಕಾಗುತ್ತದೆ.

ಕೊನೆ ಮಾತು

ಅಪಸ್ಮಾರರೋಗಿಗಳಲ್ಲಿನ ಕೀಳರಿಮೆಯನ್ನು ಹೋಗಲಾಡಿಸಿ, ಅವರಿಗೆ ಧೈರ್ಯವನ್ನು ತುಂಬಬೇಕು. ಅವರಲ್ಲಿ ಸಕಾರಾತ್ಮಕ ವಿಚಾರಗಳ ಬಗ್ಗೆ ತಿಳಿಹೇಳಿ, ಆತ್ಮವಿಶ್ವಾಸವನ್ನು ತುಂಬಬೇಕು. ಅಂಥ ರೋಗಿಗಳನ್ನು ಅತ್ಯಂತ ಪ್ರೀತಿ, ವಿಶ್ವಾಸ, ಆದರ,ಮಮತೆ ಮತ್ತು ಕರುಣೆಗಳಿಂದ ನೋಡಿಕೊಳ್ಳಬೇಕು. ಅವರ ಬಗ್ಗೆ ತಿರಸ್ಕಾರ ಮತ್ತು ಜುಗುಪ್ಸೆ ಯಾವತ್ತೂ ಸಲ್ಲದು.

ಏಕಾಗ್ರತೆಗೆ ಕೆಲವು ಸೂತ್ರಗಳು

ರಮ್ಯಾ ಶ್ರೀಹರಿ

ಅಧ್ಯಯನಕ್ಕೆ, ಅಭ್ಯಾಸಕ್ಕೆ, ಹೊಸ ಕಲಿಕೆಗೆ, ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮಾಡಿ ಮುಗಿಸುವುದಕ್ಕೆ ಏಕಾಗ್ರತೆ ಬಹಳ ಮುಖ್ಯ. ಮನಸ್ಸಿನ, ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ 'ಗಮನ'ದ (attention) ಮೂಲಸ್ವಭಾವವೇ ಹೊರ ಪ್ರಪಂಚದೆಡೆಗೆ, ವಸ್ತುವಿನ ಕಡೆಗೆ ಹರಿಯುವುದು. ಮನಸ್ಸಿನ ಸ್ವಭಾವವೇ ಹೀಗೆ 'ಅಲೆಯುವುದು', ಮನಸ್ಸು ಅಲೆಯುವುದರಿಂದಲೇ ನಮಗೆ ಹೊಸ ಲೋಕದ, ಹೊಸ ವಿಚಾರಗಳ ಪರಿಚಯವಾಗುವುದು. ಆದರೆ ಹತ್ತು ನಿಮಿಷದಲ್ಲಿ ನೂರು ದಿಕ್ಕುಗಳಿಗೆ ಚಲಿಸುವ ಅಸ್ತವ್ಯಸ್ತವಾದ ಮನಸ್ಸು ಏನನ್ನು ತಾನೇ ಹಿಡಿದಿಟ್ಟುಕೊಳ್ಳಬಲ್ಲದು?

ಯಾವುದೇ ವಿಷಯವನ್ನು ಆಳವಾಗಿ ತಿಳಿಯಬೇಕಾದಾಗ ಅದನ್ನು ಸಾವಕಾಶವಾಗಿ ಅವಲೋಕಿಸಿ, ಧ್ಯಾನಿಸಿ, ಧಾರಣ ಮಾಡುವುದು ಅತ್ಯವಶ್ಯಕ. ಶೈಕ್ಷಣಿಕ ಪರೀಕ್ಷೆಗಳನ್ನು ಎದುರಿಸುವ ಮಕ್ಕಳಲ್ಲಂತೂ ಏಕಾಗ್ರತೆಯ ಕೊರತೆಯೇ ದೊಡ್ಡ ಸಮಸ್ಯೆಯಾಗುವುದುಂಟು. ಮಕ್ಕಳೇ ಇರಲಿ, ದೊಡ್ಡವರೇ ಇರಲಿ, ಯಾರಿಗೂ ಏಕಾಗ್ರತೆ ಸುಲಭಸಾಧ್ಯವಲ್ಲ; ಸತತ ಪ್ರಯತ್ನದಿಂದ ಮಾತ್ರ ಏಕಾಗ್ರತೆಯನ್ನು ಸಾಧಿಸಬಹುದು. ಏಕಾಗ್ರತೆಯ ಕೊರತೆ ಎನ್ನುವುದು ವ್ಯಕ್ತಿತ್ವದ ದೋಷವೋ, ವೈಯಕ್ತಿಕ ಗುಣಸ್ವಭಾವವೋ ಅಲ್ಲ; ಏಕಾಗ್ರತೆಯನ್ನು ಎಲ್ಲರೂ ಮೈಗೂಡಿಸಿಕೊಳ್ಳಬಹುದು.

ಗಮನ ಎತ್ತೆತ್ತಲೋ ಹರಿಯುವುದು, ಅದರಿಂದ ಉಂಟಾಗುವ ಮಾನಸಿಕ ಆಯಾಸ, ಬೇಸರ, ಗಮನ ಕೇಂದ್ರೀಕರಿಸಿದಾಗ ಉಂಟಾಗುವ ಸಮಾಧಾನದ ಸ್ಥಿತಿ, ಅಂತಹ ಪ್ರಶಾಂತ ಮನಃಸ್ಥಿತಿಯಲ್ಲಿ ಕಲಿಕೆ ಸುಲಲಿತವಾಗಿ ಸಾಗಿದಾಗ ಉಂಟಾಗುವ ಸಂತೋಷ - ಎಲ್ಲವನ್ನೂ ಅನುಭವಿಸುತ್ತಾ ಮಕ್ಕಳು ತಮ್ಮ ಮನಸ್ಸಿನ ಬಗ್ಗೆಯೇ ತಾವು ಅರಿಯುವುದೂ ಮುಖ್ಯ. ಮನಸ್ಸಿನ ಸೂಕ್ಷ್ಮ ಬದಲಾವಣೆಗಳನ್ನು ಗುರುತಿಸಿ ಅದು ನಮ್ಮ ಕ್ರಿಯೆಗಳನ್ನು ಹೇಗೆ ಪ್ರಭಾವಿಸುತ್ತದೆ ಎನ್ನುವುದೂ ಕೂಡ ಮಕ್ಕಳಿಗೆ ಮಹತ್ವಪೂರ್ಣ ಕಲಿಕೆಯೇ ಹೌದು. ಏಕಾಗ್ರತೆಯನ್ನು ಯಾವ ಪರಿಶ್ರಮವನ್ನೂ ಪಡೆಯದೆಯೇ ಆನಂದವಾಗಿದ್ದುಕೊಂಡೇ ಸಾಧಿಸಿಬಿಡಬಹುದೇ? ಹಾಗೇನಿಲ್ಲ; ಏಕಾಗ್ರತೆಯನ್ನು ಸಾಧಿಸುವ ನಿಟ್ಟಿನಲ್ಲಿ ಎರಡು ಮಾನಸಿಕ ಸ್ಥಿತಿಗಳನ್ನು ಹಾದುಹೋಗಬೇಕಾಗುತ್ತದೆ; ಒಂದು ಏಕತಾನತೆ ತರುವ 'ಬೇಸರ' (Boredom); ಇನ್ನೊಂದು ತಲುಪಲಾರದ ಗುರಿಗಳು, ಧ್ಯೇಯಗಳು ತರುವ 'ಆತಂಕ' (Anxiety). ನಮ್ಮ ಕೌಶಲಗಳು (Skills) ನಾವೆದುರಿಸಬೇಕಾದ ಸವಾಲುಗಳ (Challenges) ಮಟ್ಟವನ್ನು ಮೀರಿದ್ದಾದರೆ ಆಗ ಬೇಸರ ಉಂಟಾಗುತ್ತದೆ. ಉದಾಹರಣೆಗೆ, ಗಣಿತದಲ್ಲಿ ಪ್ರತಿಭೆಯಿರುವ ವಿದ್ಯಾರ್ಥಿಗೆ ತನ್ನ ಕೌಶಲವನ್ನು ಸರಿಗಟ್ಟದ ಸಾಧಾರಣ ಲೆಕ್ಕಗಳನ್ನು ಮಾಡಬೇಕಾದಾಗ ಬೇಸರವಾಗುತ್ತದೆ. ಹಾಗೆಯೇ ನಾವೆದುರಿಸಬೇಕಾದ ಸವಾಲುಗಳ ಮಟ್ಟ ನಮ್ಮ ಕೌಶಲಗಳನ್ನು ಮೀರಿದ್ದಾದರೆ ನಾವೆಣಿಸಿದ ಗುರಿ ತಲುಪಲಾರೆವೇನೋ ಎನ್ನುವ ಆತಂಕದಿಂದ ನಿಷ್ಕ್ರಿಯತೆ, ನಿರುತ್ಸಾಹ ಉಂಟಾಗುತ್ತದೆ. ಉದಾಹರಣೆಗೆ ಸಾಧಾರಣ ವಾಕ್ಯಗಳನ್ನೂ ರಚಿಸಲು ಕಷ್ಟಪಡುವ ವಿದ್ಯಾರ್ಥಿ ನಾಲ್ಕು ಪುಟದ ಪ್ರಬಂಧ ಬರೆಯಬೇಕಾದಾಗ ಆತಂಕವನ್ನು ಅನುಭವಿಸುತ್ತಾನೆ.

ಮೇಲೆ ವಿವರಿಸಿದ ಎರಡೂ ಸಂದರ್ಭಗಳಲ್ಲಿ ಗಮನ ಕೇಂದ್ರೀಕರಿಸುವುದು ಸಾಧ್ಯವಿಲ್ಲ. ಆದರೆ ಯಾವಾಗ ನಮ್ಮ ಕೌಶಲಗಳು ಮತ್ತು ನಾವೆದುರಿಸಬೇಕಾಗಿರುವ ಸವಾಲುಗಳು ಒಂದಕ್ಕೊಂದು ಪೂರಕವಾಗಿ, ಪ್ರೇರಕವಾಗಿ ಕೆಲಸ ಮಾಡುತ್ತದೆಯೋ ಆಗ ನಾವು ಮಾಡುತ್ತಿರುವ ಕೆಲಸವು ರೋಚಕ ಅನುಭವ ನೀಡುತ್ತದೆ, ಗುರಿ ತಲುಪಲು ಬೇಕಾದ ಎಲ್ಲ ಪರಿಶ್ರಮವನ್ನೂ ಪಡಲು ನಮ್ಮನ್ನು ಸಿದ್ಧಗೊಳಿಸುತ್ತದೆ.

ಮನಸ್ಸನ್ನು ಓದಿನಲ್ಲಿ ಏಕಾಗ್ರತೆಯಿಂದ ತೊಡಗಿಸಲು ವಿದ್ಯಾರ್ಥಿಗಳು ಕೈಗೊಳ್ಳಬಹುದಾದ ಕೆಲವು ಸುಲಭೋಪಾಯಗಳು ಇಲ್ಲಿವೆ

1. ಅಧ್ಯಯನದಲ್ಲಿ ತೊಡಗಿದಾಗ ಮನಸ್ಸು ವಿಚಲಿತಗೊಳ್ಳುವುದು ಸ್ವಾಭಾವಿಕ. ಆದರೆ ಒಂದು ಕ್ಷಣದ ವಿಚಲಿತತೆ ಮತ್ತು ಅದು ತರುವ ಬೇಸರ ಒಂದು ಇಡೀ ದಿನವನ್ನು ಹಾಳು ಮಾಡದಂತೆ ನೋಡಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ.
2. ಪ್ರತಿದಿನದ ಪ್ರಾರಂಭವನ್ನು ಅರ್ಥಪೂರ್ಣವಾದ, ಸಂತೃಪ್ತಿ ತರುವ ಕೆಲಸದಿಂದ ಪ್ರಾರಂಭಿಸುವುದು ಇಡೀ ದಿನದ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ಪ್ರೇರೇಪಿಸುತ್ತದೆ. ಸಮಯ ಹಾಳುಮಾಡುವುದು ಅಭ್ಯಾಸವಾಗಿಬಿಟ್ಟಾಗ ಗುರಿಯ ಬಗೆಗಿನ ಆಸೆ ಕ್ಷೀಣಿಸುತ್ತದೆ, ಆಗ ಏಕಾಗ್ರತೆ ಸಾಧಿಸುವುದು ಕಷ್ಟ.
3. ನಮ್ಮ ಆಹಾರ, ನಿದ್ರೆ, ದಿನಚರಿ, ಸ್ಕ್ರೀನ್ ಸಮಯ, ಸ್ನೇಹಿತರ ಒಡನಾಟ, ಭಾವನಾತ್ಮಕ ಏರುಪೇರುಗಳು, ಕೌಟುಂಬಿಕ ವಾತಾವರಣ – ಎಲ್ಲವೂ ನಮ್ಮ ಏಕಾಗ್ರತೆಯನ್ನು ಪ್ರಭಾವಿಸುತ್ತದೆ. ಇವೆಲ್ಲವನ್ನೂ ಮೀರಿಸುವ ಅಧ್ಯಯನದ ಹಂಬಲ ನಮ್ಮದಾಗಬೇಕು.
4. ಏನನ್ನಾದರೂ ಯಶಸ್ವಿಯಾಗಿ ಮಾಡಿ ಮುಗಿಸಿದ್ದರ ಅನುಭವ ಮತ್ತು ಅದರ ನೆನಪೂ ಕೂಡ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಹಾಗಾಗಿ ಪ್ರತಿದಿನವೂ ಏನನ್ನು ಓದಬೇಕು, ಏನನ್ನು ಹೊಸದಾಗಿ ಕಲಿಯಬೇಕು ಎನ್ನುವುದರ ಒಂದು ಪಟ್ಟಿ ತಯಾರಿಸಿಕೊಂಡು ಓದಿ, ದಿನದ ಕೊನೆಯಲ್ಲಿ ಏನು ಓದಿದೆ, ಹೇಗೆ ಕಲಿತೆ, ಕಲಿತದ್ದು ಸಮರ್ಪಕವಾಗಿದೆಯೇ, ಪರೀಕ್ಷೆಯಲ್ಲಿ ಬರೆಯಲು ಬರುತ್ತದೆಯೇ ಎನ್ನುವುದನ್ನು ವಿಮರ್ಶಿಸಿಕೊಂಡು ಬರೆದಿಟ್ಟುಕೊಳ್ಳಬಹುದು.
5. ಓದುವಾಗ ಪರಿಕಲ್ಪನೆಗಳನ್ನು, ವಿಚಾರಗಳನ್ನು ಆಳವಾಗಿ ಅರ್ಥಮಾಡಿಕೊಳ್ಳುವುದು, ಅರ್ಥಮಾಡಿಕೊಂಡಿದ್ದನ್ನು ಅಭಿವ್ಯಕ್ತಿಸುವುದು, ಪ್ರಾಯೋಗಿಕವಾದ ಸಮಸ್ಯೆಗಳನ್ನು ಪರಿಹರಿಸಲು ಉಪಯೋಗಿಸುವುದು ಏಕಾಗ್ರತೆಯನ್ನು ಸಾಧಿಸುವ ಉಪಾಯಗಳಲ್ಲೊಂದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

17) $2x^2 + kx + 3 = 0$ ವರ್ಗ ಸಮೀಕರಣವು ಸಮನಾದ ಎರಡು ಮೂಲಗಳನ್ನು ಹೊಂದಿದ್ದರೆ **k** ಯ ಬೆಲೆಯನ್ನು ಕಂಡುಹಿಡಿಯಿರಿ.

ಪರಿಹಾರ:– $2x^2 + kx + 3 = 0$

ಇಲ್ಲಿ $a = 2, \quad b = k \quad c = 3$

$= b^2 - 4ac$

$= k^2 - 4(2)(3)$

$= k^2 - 24$

ಕೊಟ್ಟಿರುವ ವರ್ಗ ಸಮೀಕರಣವು ಎರಡು ವಾಸ್ತವ ಮೂಲಗಳನ್ನು ಹೊಂದಿದ್ದರೆ

$b^2 - 4ac$

$\Rightarrow k^2 - 24 = 0 \Rightarrow k = 24 \Rightarrow k = \pm\sqrt{24}$

$\Rightarrow k = \pm 2\sqrt{6}$

ಹೀಗಾಗಿ **k** ನ ಬೆಲೆ =

$\pm 2\sqrt{6}$ ie $2\sqrt{6}$ and $-2\sqrt{6}$

18) ಚಿತ್ರದಲ್ಲಿ $LM \parallel CB$ ಮತ್ತು $LN \parallel CD$ ಆದರೆ $\frac{AM}{AB} = \frac{AN}{AD}$ ಎಂದು ಸಾಧಿಸಿ.



ಪರಿಹಾರ:– ಮೇಲಿನ ಚಿತ್ರದಲ್ಲಿರುವಂತೆ, $LM \parallel CB$, ಮೂಲ ಸಮಾನುಪಾತತೆಯ ಪ್ರಮೇಯದಂತೆ

$\frac{AM}{AB} = \frac{AL}{AC}$ ....(1)

ಅದರಂತೆ $LN \parallel CD$

ಮೂಲ ಸಮಾನುಪಾತತೆಯ ಪ್ರಮೇಯದಂತೆ

$\therefore \frac{AN}{AD} = \frac{AL}{AC}$ ....(2)

ಇಲ್ಲಿ ಸಮೀಕರಣ 1 ಮತ್ತು 2 ರಿಂದ,

$\frac{AM}{AB} = \frac{AN}{AD}$

19) ಸಮಾಂತರ ಶ್ರೇಢಿಯಲ್ಲಿ $a = 5, d = 3, an = 50$ ಆದರೆ n ಮತ್ತು Sn ಕಂಡುಹಿಡಿಯಿರಿ

ಪರಿಹಾರ: $a = 5, d = 3, an = 50$ ಆದರೆ n ಮತ್ತು Sn

ಇಲ್ಲಿ $a = 5, \quad d = 3, \quad an = 50$

ನಮಗೆ ಗೊತ್ತಿರುವಂತೆ $a_n = a + (n-1)d$

$50 = 5 + (n-1)(3)$

$(n-1)(3) = 50 - 5$

$(n-1)(3) = 45 \Rightarrow (n-1) = 45/3$

$n-1 = 15 \Rightarrow n = 15 + 1 = 16$

ನಮಗೆ ಗೊತ್ತಿರುವಂತೆ

$$S_n = \frac{n}{2}[2a + (n-1)d]$$

$$Sn = \frac{16}{2}[2(5) + (16-1)(3)]$$

$$Sn = 8[10 + 45]$$

$$= 8(55)$$

$$= 440$$

20) ಒಂದು ಎಕ್ಸ್‌ಪ್ರೆಸ್ ರೈಲು ಮೈಸೂರು ಮತ್ತು ಬೆಂಗಳೂರಿನ ನಡುವಿನ 132 **km** ದೂರವನ್ನು ಕ್ರಮಿಸಲು ಪ್ಯಾಸೆಂಜರ್ ರೈಲಿಗಿಂತ 1 ಘಂಟೆ ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತದೆ (ಮಧ್ಯಂತರ ನಿಲ್ದಾಣಗಳಲ್ಲಿ ರೈಲು ನಿಲ್ಲುವ ಸಮಯವನ್ನು ಪರಿಗಣಿಸಿಲ್ಲ). ಎಕ್ಸ್‌ಪ್ರೆಸ್ ರೈಲಿನ ಸರಾಸರಿ ಜವವು ಪ್ಯಾಸೆಂಜರ್ ರೈಲಿನ ಸರಾಸರಿ ಜವಕ್ಕಿಂತ 11 km/h ಹೆಚ್ಚಾಗಿದ್ದರೆ, ಆ ಎರಡೂ ರೈಲುಗಳ ಸರಾಸರಿ ಜವವನ್ನು ಕಂಡುಹಿಡಿಯಿರಿ

ಪರಿಹಾರ:–

* ಪ್ಯಾಸೆಂಜರ್ ರೈಲಿ ಸರಾಸರಿ ವೇಗ x km/h ಆಗಿರಲಿ
* ಎಕ್ಸ್‌ಪ್ರೆಸ್ ರೈಲಿ ಸರಾಸರಿ ವೇಗ $(x + 11)$ km/h ಆಗಿರಲಿ
* ಮೈಸೂರು ಮತ್ತು ಬೆಂಗಳೂರಿನ ನಡುವಿನ 132 km ದೂರವನ್ನು ಕ್ರಮಿಸಲು ಪ್ಯಾಸೆಂಜರ್ ರೈಲು ತೆಗೆದುಕೊಂಡ ಸಮಯ =

$= \frac{132}{x}$ h $\quad \left| \text{Time} = \frac{\text{Distance}}{\text{Speed}} \right|$

* ಮೈಸೂರು ಮತ್ತು ಬೆಂಗಳೂರಿನ ನಡುವಿನ 132 km ದೂರವನ್ನು ಕ್ರಮಿಸಲು ಎಕ್ಸ್‌ಪ್ರೆಸ್ ರೈಲು ತೆಗೆದುಕೊಂಡ ಸಮಯ=

$$\frac{132}{x+11} \text{ h}$$

ಸಮಸ್ಯೆಯ ಪ್ರಕಾರ

$$\frac{132}{x+11} = \frac{132}{x} - 1$$

$$\frac{132}{x} - \frac{132}{x+11} = 1$$

$$132\left(\frac{1}{x} - \frac{1}{x+11}\right) = 1$$

$$\frac{1}{x} - \frac{1}{x+11} = \frac{1}{132}$$

$$\frac{(x+11) - x}{x(x+11)} = \frac{1}{132}$$

$$\frac{11}{x(x+11)} = \frac{1}{132}$$

$$x(x+11) = (11)(132)$$

$$x(x+11) = 1452$$

$$x^2 + 11x - 1452 = 0$$

$ax^2 + bx + c = 0$ ಹೋಲಿಸಿದಾಗ

$a = 1 \quad b = 11 \quad c = -1452$

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

REVISION and MODEL QUESTIONS

27) Explain Rosenmund's reduction of benzoyal chloride.

Ans:- When benzoyl chloride are treated with hydrogen gas through boiling xylene in the presence of palladium catalyst supported over barium sulphate they get reduced to benzaldehyde. This reaction is called Rosenmund's reduction.



28) Write a brief note on the conduction of Electric current in Semi-conductors.

Ans:- Pure silicon and pure germanium are poor conductors of electricity and are regarded as insulators. But, their conductivity can be increased as follows:

a) By increasing the temperature -

Upon increasing the temperature, some electrons are in a position to move from the valence band to the conduction band and the electric conductance of the insulators thus increases as a result of increase in temperature, hence are known as intrinsic semi conductors.

b) By adding the impurities of some suitable metals or by doping – The conductivity of intrinsic semiconductors is still very low and has hardly any utility. This can be further increased by adding a small amount of either electron rich element (belonging to higher group) or electron deficient element (belonging to lower group). They act as impurities and this process is known as doping.

29) Explain the manufacture of potassium dichromate from chromite ore ($FeCr_2O_4$).

Ans:- Potassium dischromate $K_2Cr_2O_7$ is obtained from chromite ore ($FeCr_2O_4$) in following steps:

Step -1: Chromite ore is fused with molten Na_2CO_3 in the presence of air, Na_2CrO_4 and Fe_2O_3 are formed. Fe_2O_3 is water insoluble while Na_2CrO_4 is water soluble hence separation is done.

$4\,FeCr_2O_3 + 8Na_2CO_3 + 7O_2 \rightarrow 8Na_2CrO_4 + Fe_2O_3 + 8CO_2$

Step -2: Aqueous solution of Na_2CO_3 is acidified with concentrated H_2SO_4 to from $Na_2Cr_2O_7$

$2Na_2CrO_7 + H_2SO_4 \rightarrow Na_2Cr_2O_7 + Na_2SO_4 + H_2O$

Step - 3: Sodium dichromate ($Na_2Cr_2O_7$) is more soluble and less stable than $K_2Cr_2O_7$ hence $Na_2Cr_2O_7$ changes to $K_2Cr_2O_7$ on reaction with KCl. On cooling concentrated solution, orange crystals of $K_2Cr_2O_7$ are obtained.

$Na_2Cr_2O_7 + 2KCl \rightarrow K_2Cr_2O_7 + 2NaCl$

30) Differentiate between the crystalline and amorphous solids.

Ans:- The difference between the crystalline and amorphous solids are –

Crystalline solids	Amorphous solids
They have definite geometrical shape.	They have irregular shape.
They shine in the presence of sunlight.	They do not shine in the presence of sunlight.
They are anisotropic	They are isotropic
They have sharp melting point.	They do not have sharp melting point.
They have definite heat of fusion.	They do not have definite heat of fusion.
Eg- Common salt, zinc, diamond etc.,	*Eg-* Wood, rubber, Asphalt, Lamp black

31) Crystals possessing CsCl structure change to NaCl structure upon heating. Give a suitable explanation.

Ans. A crystalline solid AB having CsCl structure has 8 : 8 co-ordination of its constituents. When heated, its co-ordination changes to 6 : 6. Therefore, it acquires NaCl structure upon heating.

32) Why are solids almost incompressible?

Ans:- The constituent particles in a solid are so closely packed that they cannot come future close on applying pressure. Thus, the solids are almost incompressible.

33) Name a colligative property.

Ans:- Osmotic pressure is a Colligative property.

Some of the other colligative properties are –

a) Relative lowering of vapour pressure
b) Elevation in boiling point
c) Depression in freezing point

Extra information:-

The properties of dilute solutions which depend only on the number of solute particles and not on the nature of solute particles are called colligative properties.

34) What does the van't Hoff factor ' i ' for a solute in a solvent account for?

Ans:- The van't Hoff factor ' i ' for a solute in a solvent accounts for the extent of association (or) dissociation of a solute.

35) What is a secondary cell?

Ans:- A secondary cell is a cell that can be recharged again.

36) By how many times does the $t_{½}$ of zero order reaction increase if the initial concentration of the reactant is doubled?

(Contd.........)

ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ಒಂದನೇ ಪುಟದಿಂದ...

ನ್ಯಾಯಮೂರ್ತಿ ಪಿ.ಕೆ. ಮಿಶ್ರಾ, 'ಪ್ರಕರಣದಲ್ಲಿ ಉಲ್ಲೇಖಿಸಿರುವ ಅಪರಾಧಗಳನ್ನು ಮೂಲಭೂತ ಹಕ್ಕುಗಳ ಅಡಿಯಲ್ಲಿ ಸಾಂವಿಧಾನಿಕ ನಿರ್ಬಂಧಗಳನ್ನು ಗಮನದಲ್ಲಿರಿಸಿಕೊಂಡು ಶಾಸನ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ' ಎಂದರು.

'ಪ್ರತಿಭಟನೆ ನಡೆಸಲು ನೀವು ಅನುಮತಿ ಕೇಳಿದ್ದೀರಾ? ನೀವು ಒಂದು ದಿನ ಹಠಾತ್ತಾಗಿ ಸಾವಿರಾರು ಜನರು ಸೇರಿ ಪ್ರತಿಭಟನೆ ಮಾಡುವುದು ಹಾಗೂ ನಾವು ಪ್ರತಿಭಟನೆ ನಡೆಸುತ್ತಿರುವುದರಿಂದ ನಮಗೇನೂ ಆಗಲು ಸಾಧ್ಯವಿಲ್ಲ ಎನ್ನಲಾಗದು' ಎಂದು ಮಿಶ್ರಾ ಹೇಳಿದರು.

ಕಪಿಲ್ ಸಿಬಲ್ ವಾದ ಮಂಡಿಸಿ, 'ನನಗೆ ಸಾಂವಿಧಾನಿಕ ಹಕ್ಕು ಹಾಗೂ ಮೂಲಭೂತ ಹಕ್ಕು ಇದೆ. ಕಾನೂನು ಸುವ್ಯವಸ್ಥೆ ಕಾರಣಕ್ಕೆ ಮೂಲಭೂತ ಹಕ್ಕನ್ನು ನಿರಾಕರಿಸಲು ಆಗುವುದಿಲ್ಲ. ಕಾನೂನು ಸುವ್ಯವಸ್ಥೆ ಕಾರಣಕ್ಕೆ ನಿರ್ಬಂಧ ಹೇರಿದರೆ ಪ್ರತಿ ಸಾರ್ವಜನಿಕ ಪ್ರತಿಭಟನೆಯೂ ಕಾನೂನುಬಾಹಿರ ಆಗುತ್ತದೆ' ಎಂದರು. 'ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟಾದಾಗ ಮಾತ್ರ ಸಭೆ ಮತ್ತು ಪ್ರತಿಭಟನೆ ಮಾಡುವ ಹಕ್ಕನ್ನು ನಿರ್ಬಂಧಿಸಬಹುದು ಮತ್ತು ಕಾನೂನು ಹಾಗೂ ಸುವ್ಯವಸ್ಥೆ ಕಾರಣಕ್ಕೆ ಅಲ್ಲ' ಎಂದು ಅವರು ಹೇಳಿದರು.

ನಂತರ ನ್ಯಾಯಾಲಯವು ಸುಪ್ರೀಂ ಕೋರ್ಟ್ ಹಾಗೂ ಪರ ವಕೀಲರ ವಾದಗಳನ್ನು ದಾಖಲಿಸಿತು ಹಾಗೂ ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ತಡೆಯಾಜ್ಞೆ ನೀಡಿತು.

ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ನಡೆಸಲಾಗಿದ್ದ ಪ್ರತಿಭಟನಾ ಮೆರವಣಿಗೆ ವೇಳೆ ಕಾಂಗ್ರೆಸ್‌ನ ನಾಯಕರ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಪ್ರತಿಭಟನೆಯಿಂದ ಸಂಚಾರ ದಟ್ಟಣೆಯಾಗಿ, ಪ್ರಯಾಣಿಕರಿಗೆ ಅನನುಕೂಲವಾಗಿತ್ತು ಎಂದು ಆರೋಪಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದರು.

'ಪ್ರತಿಭಟನಾ ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಯಾರಿಗೂ ಇದರಿಂದ ತೊಂದರೆ ಆಗಿಲ್ಲ. ಈ ಕ್ರಿಮಿನಲ್ ಪ್ರಕರಣದ ನ್ಯಾಯಿಕ ಪ್ರಕ್ರಿಯೆ ಮುಂದುವರಿಸುವುದರಿಂದ ಕಾನೂನು ದುರುಪಯೋಗ ಆಗುತ್ತದೆ' ಎಂದು ಸಿದ್ದರಾಮಯ್ಯ ಅರ್ಜಿಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಲ್ಲು ತೂರಾಟ: ಸಚಿವರಿಗೆ ಪೆಟ್ಟು

ಪಣಜಿ (ಪಿಟಿಐ): ದಕ್ಷಿಣ ಗೋವಾದ ಗ್ರಾಮವೊಂದರಲ್ಲಿ ಛತ್ರಪತಿ ಶಿವಾಜಿ ಪ್ರತಿಮೆ ಅನಾವರಣದ ಸಂದರ್ಭದಲ್ಲಿ ಕಲ್ಲು ತೂರಾಟ ನಡೆದಿದ್ದು, ಸಚಿವ ಸುಭಾಷ್ ಫಳ್ ದೇಸಾಯಿ ಗಾಯಗೊಂಡಿದ್ದಾರೆ.

ಸೋಮವಾರ ಶಿವಾಜಿ ಅವರ 394ನೇ ಜನ್ಮವಾರ್ಷಿಕೋತ್ಸವವಾಗಿತ್ತು. ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮಗಳು ನಡೆದಿದ್ದವು. ಮಾರ್ಗಾವ್ ಪಟ್ಟಣ ಸಮೀಪದ ಸಾವೊ ಜೋಸ್ ಡೆ ಏರಿಯಲ್ ಗ್ರಾಮದಲ್ಲಿ ಪ್ರತಿಮೆಯೊಂದನ್ನು ಅನಾವರಣಗೊಳಿಸಿದ್ದು, ಇದಕ್ಕೆ ಗ್ರಾಮದ ಮತ್ತೊಂದು ಗುಂಪು ತಕರಾರು ತೆಗೆದಿತ್ತು.

'ಪ್ರತಿಮೆ ಸ್ಥಾಪನೆ ವಿರೋಧಿಸಿದ್ದ ಗುಂಪು ಕಲ್ಲುತೂರಾಟ ನಡೆಸಿತು. ಪರಿಸ್ಥಿತಿಯನ್ನು ಶಾಂತವಾಗಿ ನಿಭಾಯಿಸಲು ನಾನು ಮುಂದಾಗಿದ್ದೆ. ಒಂದು ಹಂತದಲ್ಲಿ ಗುಂಪು ಹಿಂಸೆಗೆ ಇಳಿಯಿತು. ಕಾರಿಗೆ ಹತ್ತುವಾಗ ಕಲ್ಲು ತೂರಲಾಗಿದೆ. ನನಗೆ ಅಲ್ಪಪ್ರಮಾಣ ಪೆಟ್ಟಾಗಿದೆ. ಕೋಮುಸೌಹಾರ್ದ ಕಾಪಾಡುವ ಉದ್ದೇಶದಿಂದ ಈ ಕುರಿತು ಪೊಲೀಸರಿಗೆ ದೂರು ನೀಡಿಲ್ಲ' ಎಂದು ಸಚಿವರು ತಿಳಿಸಿದರು.

ಹಾವು ಕಡಿತವೂ ಘೋಷಿತ ಕಾಯಿಲೆ

ಬೆಂಗಳೂರು: ಆರೋಗ್ಯ ಇಲಾಖೆಯು ಘೋಷಿತ ಕಾಯಿಲೆಗಳ ಪಟ್ಟಿಗೆ ಹಾವು ಕಡಿತವನ್ನೂ ಸೇರ್ಪಡೆ ಮಾಡಿ ಆದೇಶ ಹೊರಡಿಸಿದೆ.

ಭಾರತದಲ್ಲಿ ಉಂಟಾಗುವ ಹಾವು ಕಡಿತವನ್ನು ವಿಶ್ವ ಆರೋಗ್ಯ ಸಂಸ್ಥೆಯು 'ಉಷ್ಣವಲಯದ ನಿರ್ಲಕ್ಷಿತ ರೋಗಗಳು' ಎಂದು ವರ್ಗೀಕರಿಸಿದೆ. ಹೀಗಾಗಿ, ಕರ್ನಾಟಕದಲ್ಲಿ 2023–24ರ ಸಾಲಿನಲ್ಲಿ ಹಾವು ಕಡಿತ ತಡೆಗಟ್ಟುವ ಕಾರ್ಯಕ್ರಮ ಆರಂಭಿಸಲಾಗಿದೆ.

ಹಾವು ಕಡಿತ ಚಿಕಿತ್ಸೆಗೆ ಒಳಗಾದ, ಹೊರರೋಗಿಯಾಗಿ ದಾಖಲಾದವರು, ಮರಣ ಉಂಟಾದ ಪ್ರಕರಣಗಳ ಸಹಿತ ಎಲ್ಲ ಮಾಹಿತಿಗಳನ್ನು ರಾಜ್ಯದ ಎಲ್ಲ ಸರ್ಕಾರಿ, ಖಾಸಗಿ ಆಸ್ಪತ್ರೆಗಳು, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಭಾರತ ಸರ್ಕಾರದ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ (Integrated Health Information Platform) ಇದರಲ್ಲಿ ದಾಖಲಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೂಚನೆ ನೀಡಿದೆ.

7 ಗುರಿ ಸಾಧಿಸುವ ಬಜೆಟ್ ಮಂಡನೆ

ಚೆನ್ನೈ (ಪಿಟಿಐ): ತಮಿಳುನಾಡು ಸರ್ಕಾರವು ಸೋಮವಾರ ಬಜೆಟ್ ಮಂಡನೆ ಮಾಡಿದ್ದು, ಸಾಮಾಜಿಕ ನ್ಯಾಯ ಮತ್ತು ಮಹಿಳಾ ಸಬಲೀಕರಣ ಸೇರಿದಂತೆ 'ತಮಿಳರ ಅಭಿವೃದ್ಧಿಯ 7 ಗುರಿಗಳನ್ನು' ಸಾಕಾರಗೊಳಿಸಲು ಹಲವು ಯೋಜನೆಗಳನ್ನು ಘೋಷಿಸಿದೆ.

ಹಣಕಾಸು ಸಚಿವ ತಂಗಮ್ ತೆನ್ನರಸು ಅವರು ಕಾಗದ ರಹಿತ ಇ-ಬಜೆಟ್ ಮಂಡಿಸಿದ್ದು, '2024–25ನೇ ಸಾಲಿನಲ್ಲಿ ₹49,279 ಕೋಟಿ ಆದಾಯ ಕೊರತೆಯಾಗಲಿದೆ' ಎಂದಿದ್ದಾರೆ.

'ಮಾಜಿ ಮುಖ್ಯಮಂತ್ರಿ ಎಮ್.ಕರುಣಾನಿಧಿ ಹೆಸರಲ್ಲಿ ವಸತಿ ಯೋಜನೆಯನ್ನು ರೂಪಿಸಲಾಗಿದೆ. 2030ರ ವೇಳೆ ಎಲ್ಲರಿಗೂ ಸೂರು ಒದಗಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ 8 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ₹3,500 ಕೋಟಿ ಮೀಸಲಿರಿಸಲಾಗಿದೆ ' ಎಂದು ತಿಳಿಸಿದರು.

'ಎನ್‌ಸಿಪಿ–ಶರದ್ ಪವಾರ್' ಹೆಸರು ಬಳಸಲು ಅನುಮತಿ

ನವದೆಹಲಿ (ಪಿಟಿಐ): ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಬಣಕ್ಕೆ ಚುನಾವಣಾ ಆಯೋಗವು ಫೆಬ್ರುವರಿ 7ರಂದು ನೀಡಿರುವ 'ಎನ್‌ಸಿಪಿ – ಶರದ್‌ಚಂದ್ರ ಪವಾರ್' ಹೆಸರನ್ನು ಮುಂದಿನ ಆದೇಶದವರೆಗೆ ಬಳಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಅಜಿತ್ ಪವಾರ್ ಬಣವನ್ನು ನಿಜವಾದ ಎನ್‌ಸಿಪಿ ಎಂದು ಚುನಾವಣಾ ಆಯೋಗವು ಮಾನ್ಯ ಮಾಡಿದೆ. ಇದನ್ನು ಪ್ರಶ್ನಿಸಿ ಶರದ್ ಪವಾರ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಶರದ್ ಪವಾರ್ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಅಜಿತ್ ಪವಾರ್ ಬಣಕ್ಕೆ ಸೂಚನೆ ನೀಡಿದೆ.

ಪಕ್ಷಕ್ಕೆ ಚಿಹ್ನೆಯನ್ನು ಕೋರಿ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಲು ಶರದ್ ಪವಾರ್ ಅವರು ಸ್ವತಂತ್ರರಿದ್ದಾರೆ ಎಂದು ಪೀಠ ಹೇಳಿದೆ. ಅವರು ಅರ್ಜಿ ಸಲ್ಲಿಸಿದ ಒಂದು ವಾರದಲ್ಲಿ ಚಿಹ್ನೆ ನೀಡಬೇಕು ಎಂದು ಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಬಿಜೆಪಿ ವಿರುದ್ಧ ಚಂಪೈ ವಾಗ್ದಾಳಿ

ಹಜಾರಿಬಾಗ್ (ಜಾರ್ಖಂಡ್) (ಪಿಟಿಐ): 'ಬಿಜೆಪಿಯು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ವೇಳೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಯಾವುದೇ ಕೆಲಸ ಮಾಡಿಲ್ಲ' ಎಂದು ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೋರೆನ್ ಸೋಮವಾರ ಹೇಳಿದ್ದಾರೆ.

'ಹಿಂದಿನ ಹೇಮಂತ್ ಸೋರೆನ್ ನೇತೃತ್ವದ ಸರ್ಕಾರವು ರಾಜ್ಯದ ಜನರಿಗೆ ಮನೆಗಳನ್ನು ಒದಗಿಸುವಂತೆ ಪದೇ ಪದೇ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದರೂ ಸ್ಪಂದಿಸಿರಲಿಲ್ಲ' ಎಂದು ಹೇಳಿದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN-U04010KA2002SGC030438

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ)

ಬೆಸ್ಕಾಂ ಟೆಂಡರ್ ಸಂಖ್ಯೆ: ಬೆಸ್ಕಾಂ/2023–24/ಎಸ್‌0115 ರ ಅನ್ವಯ "ಬೆಂಗಳೂರಿನಲ್ಲಿ ಒಂದೇ ಆವರಣದಲ್ಲಿ ಸ್ಥಾಪಿಸಲಾಗಿರುವ ಬೆಸ್ಕಾಂನ CTAZ ಮತ್ತು BRAZ ಗೆ ಸಂಬಂಧಿಸಿದ ಸರ್ವರ್ ಕಂಟ್ರೋಲ್ ರೂಮ್‌ಗೆ ಅಗತ್ಯವಾದ ಮೂಲಸೌಕರ್ಯಗಳೊಂದಿಗೆ ಅರ್ಹ ಸಿಬ್ಬಂದಿಯನ್ನು ಒದಗಿಸುವ ಮೂಲಕ ಇಂಟಿಗ್ರೇಟೆಡ್ (24X7) ಕಾಲ್ ಸೆಂಟರ್ ಅನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವ" ಅರ್ಹ ಬಿಡ್ಡುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಮತ್ತು ಬಿಡ್ಡಿಂಗ್ ದಾಖಲೆಗಳ ವಿವರಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ದಿನಾಂಕ: 20.02.2024 ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಸಹಾಯವಾಣಿ ಸಂಖ್ಯೆ: +9180 46010000, +918068948777 ಅಥವಾ ಇ-ಮೇಲ್: support@eprochelpdesk.com

ಸಹಿ/-
ಪ್ರಧಾನ ವ್ಯವಸ್ಥಾಪಕರು (ವಿದ್ಯುತ್),
ಗ್ರಾಹಕ ಸಂಬಂಧಗಳು,
ಕೆ.ಆರ್. ವೃತ್ತ, ಬೆಂಗಳೂರು - 560 001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912

ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಚೇರಿ, ಪೂನಾ ಬೆಂಗಳೂರು ರಸ್ತೆ, ನವನಗರ, ಹುಬ್ಬಳ್ಳಿ

Telephone No: 0836-2222535 Fax No : 0836-2324307

Web Site : www.hescom.co.in E-mail ID: seeit@hescom.co.in

Corporate Identity Number (CIN) : U31401KA2002SGC030437

No: HESCOM/SEE-IT&MT/EEIT1/2022-23/ Dated:

ಟೆಂಡರ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಐಟಿ&ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರು ಈ ಕೆಳಗಿನ ಕೆಳಸಕ್ಕಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 2 ಭಾಗಗಳಲ್ಲಿ(ಭಾಗ–1 ಟೆಕ್ನೋ ಕಮರ್ಷಿಯಲ್ ಬಿಡ್ ಮತ್ತು ಭಾಗ–2 ಪ್ರೈಜ್ ಬಿಡ್) ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಬಿಡ್ ಇಂಡೆಂಟ್ ಸಂಖ್ಯೆ	ಟೆಂಡರ್ ವಿವರಗಳು
1	HESCOM/2023-24/SE0030	ಹೆಸ್ಕಾಂನ ಹುಬ್ಬಳ್ಳಿ ವಲಯದಲ್ಲಿ ಅಸ್ತಿತ್ವದಲ್ಲಿರುವ DTC ಮೀಟರಿಂಗ್ ಅನ್ನು ಥ್ರೆಡ್ ಥ್ರೂ ಮೀಟರ್ ಮೂಲಕ AMR/AMI ಪರಿಹಾರದೊಂದಿಗೆ 5 ವರ್ಷಗಳ ಬೆಂಬಲದೊಂದಿಗೆ ನವೀಕರಿಸುವುದು.
2	HESCOM/2023-24/SE0032	ಹೆಸ್ಕಾಂನ ಬೆಳಗಾವಿ ವಲಯದಲ್ಲಿ ಅಸ್ತಿತ್ವದಲ್ಲಿರುವ DTC ಮೀಟರಿಂಗ್ ಅನ್ನು ಥ್ರೆಡ್ ಥ್ರೂ ಮೀಟರ್ ಮೂಲಕ AMR/AMI ಪರಿಹಾರದೊಂದಿಗೆ 5 ವರ್ಷಗಳ ಬೆಂಬಲದೊಂದಿಗೆ ನವೀಕರಿಸುವುದು.

ಸದರಿ ಟೆಂಡರದ ಪೂರ್ಣ ವಿವರಗಳನ್ನು ದಿನಾಂಕ: 19.02.2024 ಸಮಯ ಸಂಜೆ 05:00 ಗಂಟೆ ನಂತರ ವೆಬ್‌ಸೈಟ್, https://kppp.karnataka.gov.in/ ರಲ್ಲಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನೀಯರರು (ವಿ),
(ಐಟಿ & ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ.

ವಾ.ಸಾ.ಇ/ಧಾ/822/ದೇಶಪಾಂಡೆಪಬ್ಲಿಸಿಟಿ/2023–24

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1/ಅ.ಟೆಂಡರ್ ಅವಧಿ ವಿಸ್ತರಣೆ/2023–24/
ದಿನಾಂಕ: 17–02–2024

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ

ಉಲ್ಲೇಖ: ಸಂ:ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ – ಐ.ಎಫ್.ಟಿ–12/ 2023–24/ ದಿನಾಂಕ: 09–02–2024

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಬಂಧನೆಗಳಿಗೊಳಪಟ್ಟಂತೆ ಐ.ಎಫ್.ಟಿ–12 ರಲ್ಲಿ ಕರೆಯಲಾದ 05 ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದ ಕೆಪಿಪಿ–ಪೋರ್ಟನಲ್ಲಿ ಪ್ರಚುರ ಪಡಿಸಲಾಗಿರುವದಿಲ್ಲ, ಆದ್ದರಿಂದ ಐ.ಎಫ್.ಟಿ–12 ರಲ್ಲಿ ಕರೆಯಲಾದ 05 ಕಾಮಗಾರಿಗಳ ಪ್ರಚುರವನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 19–02–2024 ರಿಂದ ಕೆ.ಪಿ.ಪಿ–ಪೋರ್ಟಲ್ ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 28–02–2024 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 29–02–2024 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 01–03–2024 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 02–03–2024 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕರ್ನಾಟಕ ಸರ್ಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ:+91–8046010000, +91–8068948777ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/594/2023-24

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2023–24/2450 ದಿ: 17.02.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲೂ–3 & 4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಏತ ನೀರಾವರಿ ಯೋಜನೆ–ಪ್ರಧಾನ ಕಾಮಗಾರಿ ಯೋಜನೆಯಡಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ 01 ಹಾಗೂ 4702 ಆಣೆಕಟ್ಟು, ಪಿಕಪ್–ಪ್ರಧಾನ ಕಾಮಗಾರಿ ಯೋಜನೆಯಡಿ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ 01 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. 99.98 ಲಕ್ಷ, ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ. 149.86 ಲಕ್ಷಗಳಿರುತ್ತದೆ (ಜಿ.ಎಸ್.ಟಿ.ಸೇರಿದಂತೆ). ಟೆಂಡರ್‌ನ್ನು ದಿನಾಂಕ: 17.02.2024 ರಿಂದ ದಿನಾಂಕ: 26.02.2024 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 28.02.2024 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 02.03.2024 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/864/ಕೆಎಸ್‌ಎಂಸಿಎ/2023–24

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಳಗಾವಿ.
ದೂರವಾಣಿ ಸಂಖ್ಯೆ: 0831–2463850 / ಫ್ಯಾಕ್ಸ್ ಸಂಖ್ಯೆ: 0831–2423008

No: EE/MI&GWDDD/BGM/TND/AE-1/JE/2023-24/919 Date: 17-02-2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ – 2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜಿನಿಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. **ಅಥಣಿ / ಬೆಳಗಾವಿ ಉಪವಿಭಾಗದಡಿಯ ಒಟ್ಟು 07 ಕಾಮಗಾರಿಗಳ** ಅಂದಾಜು ಮೊತ್ತ ಗರಿಷ್ಠ **ರೂ. 200.00 ಲಕ್ಷಗಳು** ಹಾಗೂ ಕನಿಷ್ಠ **ರೂ. 125.00 ಲಕ್ಷಗಳು.**

1) ಪೂರ್ವ ಟೆಂಡರ್ ಸಭೆ ದಿನಾಂಕ: **26–02–2024 ರಂದು ಬೆಳಿಗ್ಗೆ 11.00 ಗಂಟೆಗೆ.** 2) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **27–02–2024 ರಂದು ಸಂಜೆ 4.00 ಗಂಟೆಯವರೆಗೆ.** 3) ಟೆಂಡರ್ ತೆರೆಯುವ ದಿನಾಂಕ: **28–02–2024 ರಂದು ಸಂಜೆ 4.30 ಮುಂದುವರೆದು (ಸಾಧ್ಯವಾದಲ್ಲಿ).** 4) ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ: **ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.** ಅಂತರಜಾಲ ತಾಣದ ವಿಳಾಸ: **https://www.kppp.karnataka.gov.in**

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರ ಪರವಾಗಿ
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.

ವಾಸಾಸಂಇ/ಧಾರವಾಡ/1171/ಅಡ್ವರ್ಟೋರ್/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಕನಕನಪಾಳ್ಯ, ಬೆಂಗಳೂರು–560 011

ಸಂಖ್ಯೆ: ಕಾಪಾಅ/ಚಿಪೇ/ಇ–ಪ್ರೊಕ್/19/2023–24 ದಿನಾಂಕ: 17.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಚಿಕ್ಕಪೇಟೆ ವಿಭಾಗ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–4)

ಕ್ರ ಸಂ.	ಕಾಮಗಾರಿಗಳ ಹೆಸರು
1	ಧರ್ಮರಾಯ ದೇವಸ್ಥಾನ ಉಪ ವಿಭಾಗದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು. **ಅಂದಾಜು ಮೊತ್ತ ₹.499.00 ಲಕ್ಷಗಳು ಇಎಂಡಿ: ರೂ.1.00 ಲಕ್ಷ ಕೆಪಿಪಿ ಪೋರ್ಟಲ್ ಮುಖಾಂತರ & ರೂ.648500/– ಬಿಜಿ ಮೂಲಕ**
2	ವಿ.ವಿ ಪುರಂ ಉಪ ವಿಭಾಗದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು. **ಅಂದಾಜು ಮೊತ್ತ ₹.499.00 ಲಕ್ಷಗಳು ಇಎಂಡಿ: ರೂ.1.00 ಲಕ್ಷ ಕೆಪಿಪಿ ಪೋರ್ಟಲ್ ಮುಖಾಂತರ & ರೂ.648500/– ಬಿಜಿ ಮೂಲಕ**

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **28.02.2024**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್–ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರು (ದಕ್ಷಿಣ)ರವರ ಕಚೇರಿ, ಬೃ.ಬೆಂ.ಮ.ಪಾಲಿಕೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–11 ಇಲ್ಲಿ ದಿನಾಂಕ **22.02.2024**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **28.02.2024**ರ ಸಂಜೆ **4:00** ಗಂಟೆಯವರೆಗೆ. (4) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ **29.02.2024**ರ ಸಂಜೆ **4:30** ಗಂಟೆಗೆ. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಚಿಕ್ಕಪೇಟೆ ವಿಭಾಗ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/23 ದಿನಾಂಕ: 19–02–2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಐಟಂ ದರದ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಕೆಆರ್‌ಡಿಸಿಎಲ್‌ರವರು ನಿಗದಿಪಡಿಸಿರುವಂತೆ ಡೀಸೆಲ್/ಪೆಟ್ರೋಲ್ ಚಾಲಿತ ಸ್ವಿಫ್ಟ್ ಡಿಜೈರ್ / ಟೊಯೊಟ ಇಟಿಯೋಸ್ / ಟೊಯೊಟ ಇನ್ನೋವಾ ಅಥವಾ ತತ್ಸಮಾನ ಸಾಮರ್ಥ್ಯವಿರುವ ವಾಣಿಜ್ಯ ಪ್ಯಾಸೆಂಜರ್ ವಾಹನಗಳನ್ನು (ಕಾರುಗಳು) ಒಂದು ವರ್ಷದ ಅವಧಿಗೆ ಬಾಡಿಗೆ ಆಧಾರದ ಮೇಲೆ ಪೂರೈಸುವುದಕ್ಕಾಗಿ ಅನುಭವವಿರುವ ಕಂಪನಿ/ಏಜೆನ್ಸಿಗಳಿಂದ ಆಫರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಒಂದು (01) ವರ್ಷದ ಅವಧಿಗೆ ಕರ್ನಾಟಕ ರಾಜ್ಯದಲ್ಲಿ ಬಾಡಿಗೆ ಆಧಾರದ ಮೇಲೆ ಕೆಆರ್‌ಡಿಸಿಎಲ್‌ಗೆ ವಾಣಿಜ್ಯ ಪ್ಯಾಸೆಂಜರ್ (ಕಾರುಗಳು) ವಾಹನಗಳನ್ನು ಪೂರೈಸುವುದು. ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **220.00.** ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ರೂ.ಗಳಲ್ಲಿ): **3,30,000/-.** ಸೇವಾ / ಗುತ್ತಿಗೆ ಅವಧಿ: **ಒಂದು ವರ್ಷ.**

ಆಸಕ್ತ ಬಿಡ್‌ದಾರರು ಯಾವುದೇ ಸ್ಪಷ್ಟೀಕರಣಗಳನ್ನು **ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಡಿಸಿಎಲ್, ಬೆಂಗಳೂರು** ಇವರನ್ನು ಟೆಂಡರ್ ಸಲ್ಲಿಸುವ ಮುಂಚಿತವಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ನಿಂದ ಡೌನ್‌ಲೋಡ್‌ಮಾಡಿಕೊಳ್ಳಬಹುದಾಗಿದೆ ಹಾಗೂ ಬಿಡ್‌ಗಳು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು.

ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು: (1) ಟೆಂಡರ್‌ನ ಆಕ್ಷೇಪಣೆಯನ್ನು ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **22.02.2024ರ 17.30 ಗಂಟೆವರೆಗೆ.** ಅರ್ಜಿದಾರರು ಎಲೆಕ್ಟ್ರಾನಿಕ್ ಮೇಲ್ **cekrdcl@gmail.com / mfakrdcl@gmail.com** ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. (2) ಪೂರ್ವ ಬಿಡ್ ಸಭೆಯ ದಿನಾಂಕ: **23.02.2024ರಂದು ಬೆಳಿಗ್ಗೆ 11.30 ಗಂಟೆಗೆ** ಮೇಲ್ಕಂಡ ವಿಳಾಸದಲ್ಲಿರುವ **ಕೆಆರ್‌ಡಿಸಿಎಲ್ ಬೋರ್ಡ್ ರೂಮ್, ಬೆಂಗಳೂರು.** (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **28.02.2024ರ 17.00 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29.02.2024ರಂದು 17.30 ಗಂಟೆಗೆ.**

* ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಮುಖ್ಯ ಅಭಿಯಂತರರು, ಕರಅನಿನಿ ಬೆಂಗಳೂರು

DIPR/CP/YC/3700/2023-24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW–4:ಟೆಂ:2023–24: 3732 ದಿನಾಂಕ:16–02–2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಲೆಕ್ಕ ಶೀರ್ಷಿಕೆ: 3054–ರಾಜ್ಯ ಹೆದ್ದಾರಿ ನಿರ್ವಹಣೆ ಮತ್ತು 2022–23ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮೆಗಾ ಮ್ಯಾಕ್ರೋ ಸಾಮಾಜಿಕೇತರ–ಸಾಮಾನ್ಯ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ **KW- 4** ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 02 ಕಾಮಗಾರಿಗಳಿಗೆ (**ವರ್ಕ ಇಂಡೆಂಟ್ ಸಂಖ್ಯೆ: 8608 & 7046**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ:26–02–2024** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:27–02–2024** ಸಮಯ 16.30 ಗಂಟೆ, ಕನಿಷ್ಠ ಅಂದಾಜು ಮೊತ್ತ **ರೂ. 400.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. 990.00 ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಆರ್ಥಿಕ ಬಿಡ್ ತರೆಯುವ ದಿನಾಂಕ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು **http://kppp.karnataka.gov.in** ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/457/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು

Ph: 08222-252041 e-mail: dirnagarahole@aranya.gov.in

ಸಂಖ್ಯೆ/ಬಿ4/ಎಲ್.ಎನ್.ಡಿ/ರೈಬಾ/ಟೆಂಡರ್/ಸಿಆರ್–27/2023–24
ದಿ: 14.02.2024

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023–24ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ಮತ್ತು ಆನೆಚೌಕೂರು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರಲ್ಲಿನ ಷರತ್ತುಗಳಿಗನುಗುಣವಾಗಿ" ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದೆ.

ಉಪಯೋಗಿತ ರೈಲ್ವೆ ಹಳಿಗಳನ್ನು ಖರೀದಿಸಿ, ಸಾಗಾಣಿಕೆ ಮಾಡಿ ಆನೆ ತಡೆ ಬ್ಯಾರಿಕೇಡ್ ನಿರ್ಮಿಸುವುದು. 6.028ಕಿ.ಮೀ (6 ಯುನಿಟ್). **1,062.38 ಲಕ್ಷಗಳು***

(* ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಮೇರೆಗೆ)

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 22.02.2024 ಸಂಜೆ 4:00 ಗಂಟೆ. ಸದರಿ ದಿನಾಂಕದಂದು ಟೆಂಡರ್ ಆಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: ಮತ್ತು ಸಮಯ: 29.02.2024 ಸಂಜೆ 4:00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ದೂ.: 08222–252041E-Mail : dirnagarahole@aranya.gov.in

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು

DIPR/DDMYS/KSMCA/1103/2023-24

ರೇಷ್ಮೆ ಇಲಾಖೆ

ರೇಷ್ಮೆ ಕೃಷಿ ಉಪ ನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾ. ಜಿಲ್ಲಾ ಪಂಚಾಯತ್, ಜಿಲ್ಲಾಡಳಿತ ಭವನ, ಬೀರಸಂದ್ರ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.
ದೂರವಾಣಿ : 080–2978 7466, ಇ–ಮೇಲ್ : ddsbrzpblr@yahoo.co.in

ಸಂಖ್ಯೆ : ರೇ.ಉ.ನಿ./ಬೆಂ.ಗ್ರಾ.ಜಿ.ಪಂ./ತಾಂ2/ರೋ.ನಿ.ಔ./06/2023–24
ದಿನಾಂಕ : 16–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ವಿತರಿಸಲು ರೇಷ್ಮೆ ಬೆಳೆಗೆ ಬಳಸುವ ಗ್ರೇಡ್ ಒನ್ ಬ್ಲೀಚಿಂಗ್ ಪೌಡರ್, ಸೋಂಕು ನಿವಾರಕಗಳು ಮತ್ತು ಸಸ್ಯ ಸಂವರ್ಧಕಗಳನ್ನು ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1) ಟೆಂಡರ್ ವಿವರ : ರೇಷ್ಮೆ ಬೆಳೆಗೆ ಬಳಸುವ ಗ್ರೇಡ್ ಒನ್ ಬ್ಲೀಚಿಂಗ್ ಪೌಡರ್, ಸೋಂಕು ನಿವಾರಕಗಳು ಮತ್ತು ಸಸ್ಯ ಸಂವರ್ಧಕಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆ. 2) ಟೆಂಡರ್ ಸಂಖ್ಯೆ :– ರೇಉನಿ/ಬೆಂಗ್ರಾಜಿಪಂ/ತಾಂ2/ರೋನಿಔ/06/2023–24, ದಿನಾಂಕ : 14–02–2024. 3) ಇ–ಪೋರ್ಟಲ್ ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ : 14–02–2024. 4) ಪ್ರಿ–ಬಿಡ್ ಸಭೆ ದಿನಾಂಕ : 20–02–2024 ರ ಬೆಳಿಗ್ಗೆ 11.30. 5) ಕಚೇರಿ ವಿಳಾಸ : ರೇಷ್ಮೆ ಕೃಷಿ ಉಪನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, # 225, 2ನೇ ಮಹಡಿ, ಜಿಲ್ಲಾಡಳಿತ ಭವನ,ಬೀರಸಂದ್ರ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110. 6) ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : 22–02–2024 ರ ಸಂಜೆ 5.00. 7) ಇ.ಎಂ.ಡಿ. ಹಾಗೂ ಭದ್ರತಾ ಠೇವಣಿ ಮೊತ್ತ : ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ. 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ : 23–02–2024 ರ ಸಂಜೆ 5.30. 9) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ : 26–02–2024 ರ ಬೆಳಿಗ್ಗೆ 11.30 (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ).

ಆಸಕ್ತ ಸರಬರಾಜುದಾರರು ಇ–ಪೋರ್ಟಲ್ ಮೂಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ರೇಷ್ಮೆ ಉಪ ನಿರ್ದೇಶಕರು,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್,
ಜಿಲ್ಲಾಡಳಿತ ಭವನ, ಬೀರಸಂದ್ರ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/3688/2023–24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಗ್ರಾಅಪಂರಾಇಂಯೋವಿಕ/ತಾಶಾ/ಟೆಂಡರ/2023–24/819 ದಿನಾಂಕ : 17/02/2024

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ

1.	ಕಾಮಗಾರಿಗಳ ಹೆಸರು ಮತ್ತು ಇಂಡೆಂಟ್ ಸಂಖ್ಯೆ	1) Improvements to Road From Farhatabad Main Road to Tilagul Village and Honnakiranagi Village to Tunsanalli Village Road in Kalaburagi Taluka, Afzalpur Constituency of Kalaburagi District (General) under KKRDB for the year 2023-24 Indent No. KRRDA/2023-24/RD/WORK_INDENT27 2) Improvement of Road from Devantagi village Crossing to Jawali (D) Village of Aland constituency, Aland Taluka of Kalaburagi Dist (General) under KKRDB for the year 2023- 24 Indent No. KRRDA/2023-24/RD/WORK_INDENT28	
2.	ಲೆಕ್ಕ ಶೀರ್ಷಿಕೆ	2023–24ನೇ ಸಾಲಿನ (ಮ್ಯಾಕ್ರೋ ಯೋಜನೆ)ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ	
3.	ಟೆಂಡರಗಿಟ್ಟ ಅಂದಾಜು ಮೊತ್ತ	Indent No. 27 ₹ 4,67,00,666.89	Indent No. 28 ₹ 4,67,55,835.26
4.	ಗುತ್ತಿಗೆದಾರರ ಅರ್ಹತೆ	2ನೇ ದರ್ಜೆ ಮತ್ತು ಮೇಲ್ಪಟ್ಟು	
5.	ಟೆಂಡರ ಫಾರಂ ಪಡೆಯುವ ದಿನಾಂಕ	17–02–2024 ರಿಂದ 06–03–2024 ಸಾಯಂಕಾಲ 16:00 ಗಂಟೆವರೆಗೆ	
6.	ಟೆಂಡರ ಅರ್ಜಿ ಬೆಲೆ	ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ	
7.	ಇ.ಎಂ.ಡಿ.	Indent No. 27 ₹ 7,01,000.00	Indent No. 28 ₹ 7,01,500.00
8.	ಟೆಂಡರ ಸಲ್ಲಿಸುವ ದಿನಾಂಕ	17–02–2024 ರಿಂದ 06–03–2024 16:00 ಗಂಟೆವರೆಗೆ	
9.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	07–03–2024 16:00 ಗಂಟೆ ನಂತರ	
10.	ಆರ್ಥಿಕ ಬಿಡ್ ತೆರೆಯುವ ದಿನಾಂಕ	11–03–2024 ಬೆಳಿಗ್ಗೆ 11:00 ಗಂಟೆ ನಂತರ	
11.	ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ	ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ E-mail : kn-gul-1@pmgsy.nic.in	
12.	ಅಂತರಜಾಲ ತಾಣದ ವಿಳಾಸ	www.kppp.karnataka.gov.in	

ಸಹಿ/– ಸೈಯದ್ ಜಮಾಲುದ್ದಿನ್ ಖಾದ್ರಿ
ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್
ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಸಂಚಾರ ಅಭಿಯಂತರರ ಕೋಶ, ನ.ರಾ.ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ/ರಮೂಸೌ–ಸಕೋಶ/ಟೆಂಡರ್/17/2023–24 ದಿನಾಂಕ: 19.02.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ – ಟೆಂಡರ್ ಪ್ರಕಟಣೆ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಸಂಅಕೋ ವಿಭಾಗ ಇವರು ಮುಖ್ಯ ಆಯುಕ್ತರು, ಬೃಬೆಂಮಪಾ, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಕೆಲಸದ ಹೆಸರು
1.	ರಮೂಸೌ–ಬೊಮ್ಮನಹಳ್ಳಿ ವಿಭಾಗದಲ್ಲಿ 2023–24 ರ ಸಾಲಿಗೆ ಹೊಸ ಶೌಲ್ಡರ್ ಚರಿಂಡಿಗಳು, ಲೀಡ್ ಆಫ್ ಚರಂಡಿಗಳು, ಕಲ್ವರ್ಟ್ಸ್‌ಗಳ ನಿರ್ಮಾಣ ಹಾಗೂ ಇತರೆ ತುರ್ತು ಕಾಮಗಾರಿಗಳು (ಪರಿಶಿಷ್ಟ ಪಂಗಡ ವರ್ಗ). **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 59.35 (ಜಿಎಸ್‌ಟಿ ಒಳಗೊಂಡು) **ಇಎಂಡಿ ರೂ.ಗಳಲ್ಲಿ:** 59,500.00.
2.	ರಮೂಸೌ–ಮಹದೇವಪುರ & ಕೆ ಆರ್ ಪುರಂ ವಿಭಾಗಗಳಲ್ಲಿ 2023–24 ರ ಸಾಲಿಗೆ ಹೊಸ ಶೌಲ್ಡರ್ ಚರಿಂಡಿಗಳು, ಲೀಡ್ ಆಫ್ ಚರಂಡಿಗಳು, ಕಲ್ವರ್ಟ್ಸ್‌ಗಳ ನಿರ್ಮಾಣ ಹಾಗೂ ಇತರೆ ತುರ್ತು ಕಾಮಗಾರಿಗಳು (ಪರಿಶಿಷ್ಟ ಜಾತಿ ವರ್ಗ). **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 59.35 (ಜಿಎಸ್‌ಟಿ ಒಳಗೊಂಡು). **ಇಎಂಡಿ ರೂ.ಗಳಲ್ಲಿ:** 59,500.00.
3.	ರಮೂಸೌ–ಯಲಹಂಕ ವಿಭಾಗದಲ್ಲಿ 2023–24 ರ ಸಾಲಿಗೆ ಹೊಸ ಶೌಲ್ಡರ್ ಚರಿಂಡಿಗಳು, ಲೀಡ್ ಆಫ್ ಚರಂಡಿಗಳು, ಕಲ್ವರ್ಟ್ಸ್‌ಗಳ ನಿರ್ಮಾಣ ಹಾಗೂ ಇತರೆ ತುರ್ತು ಕಾಮಗಾರಿಗಳು (ಪರಿಶಿಷ್ಟ ಜಾತಿ ವರ್ಗ). **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 74.18 (ಜಿಎಸ್‌ಟಿ ಒಳಗೊಂಡು). **ಇಎಂಡಿ ರೂ.ಗಳಲ್ಲಿ:** 74,500.00.
4.	ಬೃಬೆಂಮಪ ಮಿತಿಯ ಪೂರ್ವ, ಪಶ್ಚಿಮ, ದಕ್ಷಿಣ, ದಾಸರಹಳ್ಳಿ, ಆರ್ ಆರ್ ನಗರ ವಲಯ & ಮಹದೇವಪುರ ವಿಭಾಗಗಳ ವ್ಯಾಪ್ತಿಯಲ್ಲಿರುವ ಆಯ್ದ ಆರ್ಟೀರಿಯಲ್ ಮತ್ತು ಉಪ–ಆರ್ಟೀರಿಯಲ್ ರಸ್ತೆಗಳಲ್ಲಿ ಫೈಬರ್ ರೀಇನ್‌ಫೋರ್ಸ್ಡ್ ಪಾಲಿಮರ್ (ಎಫ್‌ಆರ್‌ಪಿ) ಸಿಲ್ಟ್ ಟ್ರ್ಯಾಪ್ ಚೇಂಬರೊಂದಿಗೆ ಹೊಸ ಶೌಲ್ಡರ್ ಚರಂಡಿ ನಿರ್ಮಾಣ (ಸಾಮಾನ್ಯ ವರ್ಗ). ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 410.98 (ಜಿಎಸ್‌ಟಿ ಒಳಗೊಂಡು). **ಇಎಂಡಿ ರೂ.ಗಳಲ್ಲಿ:** 6,20,000.00 (ರೂ. ಒಂದು ಲಕ್ಷ ಇ–ಪಾವತಿ ಮೂಲಕ & ಬಾಕಿ ಬಿಡ್ ದಾಖಲಾತಿಯಲ್ಲಿ ಸೂಚಿಸಿರುವಂತೆ).

ವೇಳಾ ಪಟ್ಟಿ : 1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿಗಳ ಲಭ್ಯತೆ: 21.02.2024 ರಿಂದ. 2) ಬಿಡ್ ಪೂರ್ವ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.02.2024, 15.00 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆ: 27.02.2024 ರಂದು 16.30 ಗಂಟೆಗೆ . 4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.03.2024 ರಂದು 16.00 ಗಂಟೆಯವರೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07.03.2024 ರಂದು 16.30 ಗಂಟೆಗೆ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: ಟೆಂಡರ್‌ದಾರರಿಗೆ ತಿಳಿಸಲಾಗುವುದು

ಸಹಿ/– ಕಾರ್ಯಪಾಲಕ ಅಭಿಯಂತರರು, ಸಂಚಾರ ಅಭಿಯಂತರರ ಕೋಶ ವಿಭಾಗ

ಕೃಷಿ ಇಲಾಖೆ

ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01

ಸಂಖ್ಯೆ: ಜಕೃನಿ(ಬೆ.ಅ)/ಕೃ.ಭಾ/HDPE-GM-RfP-420GSM/2023-24 ದಿನಾಂಕ:19.02.2024

ಅಲ್ಪಾವಧಿ Request for Proposal ಪ್ರಕಟಣೆ

ವಿಷಯ:2023–24 ಹಾಗೂ 2024–25 ನೇ ಸಾಲಿನ ಕೃಷಿ ಇಲಾಖೆಯ ಕೃಷಿ ಭಾಗ್ಯ ಯೋಜನೆಯಡಿ ನಿರ್ಮಾಣವಾಗುವ ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ)ಗಳಿಗೆ 420 GSM (500 Microns-Type-2) Geo membrane HDPE Sheet (IS: 15351:2015 BIS license ಹೊಂದಿರುವ) ಗಳನ್ನು ಸರಬರಾಜು ಮತ್ತು ಹೊದಿಕೆ ಮಾಡಲು ಇಚ್ಛಿಸುವ ಅರ್ಹ ಮೂಲ ತಯಾರಕರು/ ತಯಾರಕರು/ ಎಂ.ಒ.ಯು ಹೊಂದಿರುವ ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಲು ಅಲ್ಪಾವಧಿ Request for Proposal ನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಕುರಿತು.

ಉಲ್ಲೇಖ:-**Request for Proposal notification No: JDA(CD)/ Krishibhagya/ HDPE-GM-RfP-420GSM/2023-24 Dt:19.02.2024.**

******

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಅಲ್ಪಾವಧಿ Request for Proposal ಅಡಿ ಭಾಗವಹಿಸಲು ಇಚ್ಛಿಸುವ ಮೂಲ ತಯಾರಕರು/ತಯಾರಕರು/ ಎಂ.ಒ.ಯು ಹೊಂದಿರುವ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ತಂತ್ರಾಂಶದ ಮುಖಾಂತರ (https://kppp.karnataka.gov.in) ದಾಖಲಾತಿಗಳನ್ನು ಸಲ್ಲಿಸಬಹುದಾಗಿದ್ದು ವಿವರ ಕೆಳಕಂಡಂತಿದೆ.

420 GSM (500 Microns-Type-2) Geomembrane HDPE Sheet (IS: 15351:2015 BIS license) ಗಳನ್ನು ಸರಬರಾಜು ಮತ್ತು ಹೊದಿಕೆ ಮಾಡಲು ಇಚ್ಛಿಸುವ ಆಸಕ್ತ ಮೂಲ ತಯಾರಕರು / ತಯಾರಕರು / ಎಂ.ಒ.ಯು ಹೊಂದಿರುವ ಸಂಸ್ಥೆಗಳು RfP ಡಾಕ್ಯೂಮೆಂಟ್‌ನ್ನು **https://kppp.karnataka.gov.in** ನಿಂದ, ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಮತ್ತು ಇಲಾಖೆಯು ನಿಗಧಿಪಡಿಸಿರುವ ಇ.ಎಂ.ಡಿ ಮೊತ್ತವನ್ನು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸಿ RfP ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿರುತ್ತದೆ. ಖಾಲಿ ಅರ್ಜಿಗಳನ್ನು **ದಿನಾಂಕ 20–02–2024 ರಿಂದ ದಿನಾಂಕ 27–02–2024 ವರೆಗೆ https://kppp.karnataka.gov.in** ವೆಬ್‌ಸೈಟ್ ನಿಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 27–02–2024, ಅಪರಾಹ್ನ 5:30 ಗಂಟೆ.** ತಾಂತ್ರಿಕ ಪ್ರಸ್ತಾವನೆಗಳನ್ನು **ದಿನಾಂಕ 29–02–2024, ರಂದು ಪೂರ್ವಾಹ್ನ 11:30 ಗಂಟೆಗೆ** ಸಮೃದ್ಧಿ ಸಭಾಂಗಣ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತರೆಯಲಾಗುವುದು.

RfP ಷರತ್ತುಗಳನ್ವಯ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳ ದಾಖಲಾತಿಗಳನ್ನು (Hard Copy / Physical deposition) ಜಂಟಿ ಕೃಷಿ ನಿರ್ದೇಶಕರ ಕಛೇರಿ, ಬೆಳೆ ಅಭಿವೃದ್ಧಿ ವಿಭಾಗ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು 560 001 ಇಲ್ಲಿ ದಿನಾಂಕ **28–02–2024 ರಂದು ಅಪರಾಹ್ನ 5.30 ರವರಗೆ** ಸ್ವೀಕರಿಸಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು DSC Key/ e-Token ಗಳನ್ನು ಪರಿಗಣಿಸಿರುವ ಏಜನ್ಸಿಗಳ ಮುಖಾಂತರ ಪಡೆಯಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ Centre for E-Governance, 4st Floor, Sri Aravinda Bhavan, Mythic Society Compound, Nrupathunga Road, Bangalore-01 (Helpdesk: 080-46010000 / 68948777).

ಸೂಚನೆ: e-procurement ಸೇವಾ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ ಹಾಗೂ RfP ದಾಖಲೆಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

ಸಹಿ/– ಕೃಷಿ ನಿರ್ದೇಶಕರು ಮತ್ತು
ಟೆಂಡರ್ ಆಹ್ವಾನ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/3707/2023–24

ಸಹಕಾರ ಸಂಘಗಳ ಮೇಲೆ ಹಿಡಿತ ಸಾಧಿಸಲು ಸರ್ಕಾರದ ಯತ್ನ; ಬಿಜೆಪಿ, ಜೆಡಿಎಸ್ ಸದಸ್ಯರ ಒಕ್ಕೊರಲ ಆರೋಪ

ಸಹಕಾರ ಸಂಘಗಳ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದಿಂದ ನೆರವು ಪಡೆದಿರುವ ಸಹಕಾರ ಸಂಸ್ಥೆಗಳಲ್ಲಿ ಮೀಸಲಾತಿ ಆಧಾರದಲ್ಲಿ ನಾಮ ನಿರ್ದೇಶನಕ್ಕೆ ಅವಕಾಶ ಕಲ್ಪಿಸುವ 'ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2024'ಕ್ಕೆ ಮೂರೂ ಪಕ್ಷಗಳ ಕೆಲವು ಸದಸ್ಯರ ವಿರೋಧ ನಡುವೆಯೂ ವಿಧಾನಸಭೆ ಸೋಮವಾರ ಒಪ್ಪಿಗೆ ನೀಡಿತು.

ಮಸೂದೆಯ ಮೇಲಿನ ಸುದೀರ್ಘ ಚರ್ಚೆಯಲ್ಲಿ ಪಾಲ್ಗೊಂಡ ಬಿಜೆಪಿಯ ಎಸ್.ಟಿ. ಸೋಮಶೇಖರ್, ಆರಗ ಜ್ಞಾನೇಂದ್ರ, ಬಸನಗೌಡ ಪಾಟೀಲ ಯತ್ನಾಳ, ಜೆಡಿಎಸ್‌ನ ಜಿ.ಟಿ. ದೇವೇಗೌಡ ಮತ್ತು ಜಿ.ಡಿ. ಹರೀಶ್ ಗೌಡ ಮೀಸಲಾತಿ ಪ್ರಸ್ತಾವವನ್ನು ಕೈಬಿಡುವಂತೆಯೂ ಆಗ್ರಹಿಸಿದರು. ಮಸೂದೆ ಮಂಡಿಸಿದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಸದಸ್ಯರನ್ನು ಮನವೊಲಿಸುವ ಕಸರತ್ತು ನಡೆಸಿದರು. ಕೆಲವು ಬದಲಾವಣೆಗಳಿಗೆ ವಿರೋಧಪಕ್ಷಗಳ ಸದಸ್ಯರು ಪಟ್ಟು ಹಿಡಿದರು.

ಮಸೂದೆಯು ಕುರಿತು ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಎಸ್.ಟಿ. ಸೋಮಶೇಖರ್, 'ಮೀಸಲಾತಿ ಕಲ್ಪಿಸಿ ನಾಮನಿರ್ದೇಶನ ಮಾಡುವುದು ಅಪಾಯಕಾರಿ. ಅವರಿಗೂ ಮತದಾನದ ಹಕ್ಕು ಕೊಡಲಾಗುತ್ತಿದೆ. ಇದರಿಂದ ಸಹಕಾರ ಸಂಸ್ಥೆಗಳ ಆಡಳಿತ ಹಳಿ ತಪ್ಪಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಈ ತಿದ್ದುಪಡಿ ವೈದ್ಯನಾಥನ್ ವರದಿ ಜಾರಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ನಬಾರ್ಡ್ ಮಧ್ಯೆ ಆಗಿರುವ ಒಪ್ಪಂದದ ವಿರುದ್ಧವಾಗಿದೆ. ಪ್ರಜಾಪ್ರಭುತ್ವ ವಿರೋಧಿಯಾದ ಕ್ರಮ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು.

ನಾಮ ನಿರ್ದೇಶನ ಯಾವ ರೀತಿಯಲ್ಲಿ ಮಾಡುತ್ತೀರಿ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಇಷ್ಟರ ಮಟ್ಟಿಗೆ ಹಸ್ತಕ್ಷೇಪ ಮಾಡುವುದಕ್ಕಿಂತ ಚುನಾವಣೆ ಮಾಡದೇ ಸರ್ಕಾರವೇ ನಡೆಸಲಿ ಎಂದು ಜೆಡಿಎಸ್‌ನ ಜಿ.ಡಿ.ಹರೀಶ್ ಗೌಡ ಹೇಳಿದರು.

ಉತ್ತರ ನೀಡಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ, 'ಸಹಕಾರ ಆಂದೋಲನ ಜನರ ಆಂದೋಲನ ಆಗಬೇಕು ಎಂಬುದು ತಿದ್ದುಪಡಿಯ ಹಿಂದಿನ ಉದ್ದೇಶ. ಎಲ್ಲ ಸಹಕಾರ ಸಂಸ್ಥೆಗಳಲ್ಲೂ ಮೀಸಲಾತಿ ಕಲ್ಪಿಸುವುದಿಲ್ಲ. ಸರ್ಕಾರದ ನೆರವು ಪಡೆದ ಸಂಸ್ಥೆಗಳಿಗೆ ಸೀಮಿತ. ಮೀಸಲಾತಿ ನೀಡುವಾಗ ಯಾವ ಸಮಾಜಕ್ಕೆ ಇಲ್ಲಿಯವರೆಗೆ ಪ್ರಾತಿನಿಧ್ಯ ಸಿಕ್ಕಿಲ್ಲವೋ ಅವರಿಗೆ ಆದ್ಯತೆ ನೀಡಲಾಗುವುದು. ಕೆಲವು ಸಹಕಾರ ಸಂಸ್ಥೆಗಳ ಸ್ಥಿತಿ ಗತಿಯ ಬಗ್ಗೆ ಬಹಿರಂಗವಾಗಿ ಮಾತನಾಡುವುದಿಲ್ಲ. ತೀರಾ ಹದಗೆಟ್ಟಿವೆ' ಎಂದು ಹೇಳಿದರು.

ಕಾನೂನು ಸಚಿವ ಎಚ್.ಕೆ.ಪಾಟೀಲ ಮಾತನಾಡಿ, ನಾಮನಿರ್ದೇಶನದ ಹೆಸರಿನಲ್ಲಿ ಹೊರಗಿನವರನ್ನು ತಂದು ಹೇರುತ್ತೀರಿ ಎಂಬ ಆತಂಕ ಹಲವು ಸದಸ್ಯರಿಗಿದೆ. ಆ ಆತಂಕವನ್ನು ನಿವಾರಿಸಬೇಕಾಗಿದೆ ಎಂದರು.

ಕಲಾಪದಲ್ಲಿ ಸಚಿವ ಕೆ.ಎನ್. ರಾಜಣ್ಣ ಮಾತನಾಡಿದರು

'ಗಂಜಿಕೇಂದ್ರ' ಪದಕ್ಕೆ ನರೇಂದ್ರಸ್ವಾಮಿ ಗರಂ

'ಮಸೂದೆಯ ಮೂಲಕ ಸಹಕಾರಿ ಕ್ಷೇತ್ರದ ಮರಣ ಶಾಸನ ತರುವ ಕೆಲಸ ಮಾಡಲಾಗಿದೆ. ನಿರಾಶ್ರಿತರಿಗೆ ಗಂಜಿಕೇಂದ್ರವಾಗುವ ಸಾಧ್ಯತೆ ಇದೆ' ಎಂದು ಬಿಜೆಪಿಯ ಸಿದ್ದು ಸವದಿ ಹೇಳಿದ್ದು, ಕಾಂಗ್ರೆಸ್‌ನ ನರೇಂದ್ರಸ್ವಾಮಿ ಅವರನ್ನು ಕೆರಳಿಸಿತು.

'ನಿಮ್ಮ ಮಾತು ಮೀಸಲಾತಿ ಆಶಯಕ್ಕೆ ವಿರೋಧವಿದೆ. ಜಾತಿ ಹೆಸರು ಪ್ರಸ್ತಾಪಿಸಿದ್ದೀರಿ. ಮೀಸಲಾತಿ ನಮ್ಮ ಹಕ್ಕು, ಅದು ಭಿಕ್ಷೆಯಲ್ಲ. ಗಂಜಿ ಗಿರಾಕಿಗಳು ಎಂದು ಯಾರಿಗೆ ಹೇಳುತ್ತೀರಿ' ಎಂದು ಆಕ್ರೋಶ ಭರಿತರಾಗಿ ಹೇಳಿದರು. ಕಾಂಗ್ರೆಸ್‌ನ ಕೆಲವು ಸದಸ್ಯರು ಇದ್ದಕ್ಕೆ ಧ್ವನಿಗೂಡಿಸಿದರು. ಗದ್ದಲದ ವಾತಾವರಣ ನಿರ್ಮಾಣವಾಯಿತು.

ಆಗ ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಿದ್ದುಸವದಿ ಮೀಸಲಾತಿಯನ್ನು ವಿರೋಧಿಸಿಲ್ಲ. ಸರ್ಕಾರ ಅದನ್ನು ಕಾರ್ಯಗತಗೊಳಿಸಲು ಹೊರಟಿರುವ ವಿಧಾನವನ್ನು ಪ್ರಶ್ನಿಸಿದ್ದಾರೆ. ಗಂಜಿಕೇಂದ್ರ ಎಂಬ ಪದವನ್ನು ಕಡತದಿಂದ ತೆಗೆಸಬಹುದು ಎಂದು ಹೇಳಿದರು.

ಹೆಬ್ಬಾರ್– ಯತ್ನಾಳ ಜಟಾಪಟಿ

'ಕರ್ನಾಟಕ ಸೌಹಾರ್ದ ಸಹಕಾರಿ(ತಿದ್ದುಪಡಿ)ಮಸೂದೆ' 2024 ರ ಚರ್ಚೆಯ ವೇಳೆ ಬಿಜೆಪಿಯ ಶಿವರಾಂ ಹೆಬ್ಬಾರ್ ಮತ್ತು ಬಸನಗೌಡ ಪಾಟೀಲ ಯತ್ನಾಳ ಮಧ್ಯೆ ಜಟಾಪಟಿ ನಡೆಯಿತು.

ಹೆಬ್ಬಾರ್ ಅವರು ಮಾತನಾಡಿ, ಕೆಲವು ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಹೆಚ್ಚು ಬಡ್ಡಿ ನೀಡುವುದಾಗಿ ಜನರಿಗೆ ಆಮಿಷ ಒಡ್ಡಿ ಹಣ ಸಂಗ್ರಹಿಸುತ್ತವೆ. ರಾತ್ರೋ ರಾತ್ರಿ ಮುಚ್ಚಿ ಹೋಗುತ್ತವೆ. ಯತ್ನಾಳ ಅವರು ನಡೆಸುವ ಸೌಹಾರ್ದ ಸಹಕಾರಿ ಬ್ಯಾಂಕ್ ಚೆನ್ನಾಗಿಯೇ ಕೆಲಸ ಮಾಡುತ್ತಿದೆ. ಒಂದಷ್ಟು ಬ್ಯಾಂಕ್‌ಗಳು ಜನರ ವಿಶ್ವಾಸ ಕಳೆದುಕೊಂಡಿವೆ ಎಂದು ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಸನಗೌಡ ಯತ್ನಾಳ ಅವರು, ಎಷ್ಟೋ ಡಿಸಿಸಿ ಬ್ಯಾಂಕ್‌ಗಳು, ಅಪೆಕ್ಸ್ ಬ್ಯಾಂಕ್‌ಗಳು, ರಾಷ್ಟ್ರೀಕೃತ ಬ್ಯಾಂಕ್‌ಗಳು ಬಾಗಿಲು ಮುಚ್ಚುವ ಸ್ಥಿತಿ ಬಂದಿವೆ. ಅಲ್ಲಿ ಅಕ್ರಮಗಳು ನಡೆದಿಲ್ಲವೆ? ಸೌಹಾರ್ದ ವಲಯದಲ್ಲೂ ಕೆಲವು ಅಪವಾದಗಳನ್ನು ಹೊರತು ಪಡಿಸಿದರೆ, ಉಳಿದವು ಚೆನ್ನಾಗಿಯೇ ಕೆಲಸ ಮಾಡುತ್ತಿವೆ ಎಂದು ಸಮರ್ಥಿಸಿಕೊಂಡರು. ಈ ಮಸೂದೆಗೂ ವಿಧಾನಸಭೆ ಒಪ್ಪಿಗೆ ನೀಡಿತು.

> ನಾಮ ನಿರ್ದೇಶನಗೊಳ್ಳುವ ವ್ಯಕ್ತಿಗಳಿಗೆ ಮತದಾನದ ಹಕ್ಕು ನೀಡಬಹುದು. ಅದರೆ, ಯಾವುದೇ ಕಾರಣಕ್ಕೂ ಪದಾಧಿಕಾರಿಗಳನ್ನಾಗಿ ಮಾಡಬಾರದು. ಯಾರೋ ಕಟ್ಟಿ ಬೆಳೆಸಿದ ಸಂಸ್ಥೆಗೆ ನಾಮ ನಿರ್ದೇಶನಗೊಂಡವರನ್ನು ಅಧ್ಯಕ್ಷರನ್ನಾಗಿ ಮಾಡಿ ಸಂಸ್ಥೆಯನ್ನು ತನ್ನ ಮುಷ್ಟಿಗೆ ತೆಗೆದುಕೊಳ್ಳಬಾರದು
>
> **ಲಕ್ಷ್ಮಣ ಸವದಿ,** ಕಾಂಗ್ರೆಸ್

> ಸರ್ಕಾರವೇ ಹೂಡಿಕೆ ಮಾಡಿ ಸಹಕಾರ ಸಂಸ್ಥೆ ತೆರೆಯಲಿ. ಆಗ ಎಲ್ಲ ಸ್ಥಾನಗಳನ್ನೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆಯರಿಗೆ ಕೊಡಲಿ. ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರಿಗೆ ಅವಕಾಶವೇ ಬೇಡ. ಜಾತಿ ಆಧಾರಿತ ಸಹಕಾರ ಸಂಘಗಳಲ್ಲಿ ಹೇಗೆ ಮೀಸಲಾತಿ ಕೊಡುತ್ತೀರಿ
>
> **ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ

> ಈಗ ಸರ್ಕಾರ ತಂದಿರುವ ತಿದ್ದುಪಡಿಯಿಂದ ಸಹಕಾರ ಕ್ಷೇತ್ರ ಅಧೋಗತಿಗೆ ತಲುಪಲಿದೆ. ಸರ್ಕಾರದಿಂದ ಒಂದಕ್ಕಿಂತ ಹೆಚ್ಚು ನಾಮನಿರ್ದೇಶನಕ್ಕೆ ಅವಕಾಶವಿಲ್ಲ. ಈಗ ಅದನ್ನು ಉಲ್ಲಂಘಿಸಿ ಮೂರು ಮಂದಿಯ ನಾಮಕರಣಕ್ಕೆ ಹೊರಟಿರುವುದು ಸರಿಯಲ್ಲ. ಯಾರದ್ದೊ ಒತ್ತಡಕ್ಕೆ ಮಣಿದು ಈ ಮಸೂದೆ ತಂದಿದ್ದೀರಿ. ಇದು ಒಳ್ಳೆಯದಲ್ಲ
>
> **ಜಿ.ಟಿ. ದೇವೇಗೌಡ,** ಜೆಡಿಎಸ್

ಸುದ್ದಿ 2 ನಿಮಿಷ

'ಜನಸ್ಪಂದನ: 11 ದಿನದಲ್ಲಿ 4,321 ಅರ್ಜಿ ವಿಲೇವಾರಿ'

ಬೆಂಗಳೂರು: 'ವಿಧಾನಸೌಧ ಮುಂಭಾಗದಲ್ಲಿ ಮುಖ್ಯಮಂತ್ರಿ ಇತ್ತೀಚೆಗೆ ನಡೆಸಿದ ಜನಸ್ಪಂದನ ಕಾರ್ಯಕ್ರಮದಲ್ಲಿ 14,685 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಈ ಪೈಕಿ, 4,321 ಅರ್ಜಿಗಳನ್ನು ಕೇವಲ 11 ದಿನಗಳಲ್ಲಿ ವಿಲೇವಾರಿ ಮಾಡಲಾಗಿದೆ' ಎಂದು ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ತಿಳಿಸಿದರು.

ಜನಸ್ಪಂದನ ಕಾರ್ಯಕ್ರಮದ ಪರಾಮರ್ಶೆ ಮತ್ತು ಆಯೋಜನೆಯಲ್ಲಿ ಭಾಗಿಯಾದ ಅಧಿಕಾರಿಗಳ ಸಭೆ ಸೋಮವಾರ ನಡೆಸಿದ ಅವರು, ಬಾಕಿ ಉಳಿದ ಅರ್ಜಿಗಳನ್ನೂ ಶೀಘ್ರ ವಿಲೇವಾರಿ ಮಾಡುವಂತೆ ಸೂಚಿಸಿದರು.

'ಜನಸ್ಪಂದನ ಕಾರ್ಯಕ್ರಮವನ್ನು ವಿಭಾಗ ಮಟ್ಟದಲ್ಲಿ ನಡೆಸುವ ಕುರಿತು ಚಿಂತನೆ ನಡೆದಿದೆ. ಮೊದಲಿಗೆ ಕಲಬುರಗಿಯಲ್ಲಿ ನಡೆಸಲು ಉದ್ದೇಶಿಸಲಾಗಿದೆ. ವಿಭಾಗ ಮಟ್ಟದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಖುದ್ದು ಭಾಗವಹಿಸಲು ಸೂಚಿಸಲಾಗುವುದು' ಎಂದರು.

'ಮುಂದಿನ ಜನಸ್ಪಂದನ ಕಾರ್ಯಕ್ರಮಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಆಯೋಜಿಸುವಂತೆ ಮತ್ತು ಸಾರ್ವಜನಿಕ ಕುಂದುಕೊರತೆ ನಿವಾರಣೆಯ ಈ ಕಾರ್ಯಕ್ರಮಗಳು ದೇಶಕ್ಕೇ ಮಾದರಿಯಾಗುವಂತೆ ನಡೆಯಬೇಕು' ಎಂದೂ ಅವರು ಸಲಹೆ ನೀಡಿದರು.

ಮುಖ್ಯಮಂತ್ರಿಯ ಕಾರ್ಯದರ್ಶಿ ಡಾ.ಕೆ.ವಿ. ತ್ರಿಲೋಕಚಂದ್ರ, ಇ-ಆಡಳಿತ ಇಲಾಖೆಯ ಕಾರ್ಯದರ್ಶಿ ಉಜ್ವಲ್ ಕುಮಾರ್ ಘೋಷ್ ಇದ್ದರು.



ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿ ಮಸೂದೆಗೆ ಒಪ್ಪಿಗೆ

ಬೆಂಗಳೂರು: ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶಗಳ ಇತರ ಜಿಲ್ಲೆಗಳ ಮಾದರಿಯಲ್ಲಿ ಕೊಡಗು ಜಿಲ್ಲೆಯಲ್ಲೂ ಪ್ರತಿ 18,000 ಜನಸಂಖ್ಯೆಗೆ ಒಂದು ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಸೃಜಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ– 2024'ಕ್ಕೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಮಲೆನಾಡು ಪ್ರದೇಶಗಳಲ್ಲಿ ಪ್ರತಿ 18,000 ಜನಸಂಖ್ಯೆಗೆ ಒಂದು ಜಿಲ್ಲಾ ಪಂಚಾಯಿತಿ ಕ್ಷೇತ್ರವಿದೆ. ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ 18,000ದಿಂದ 25,000 ಜನಸಂಖ್ಯೆಗೆ ಒಂದು ಕ್ಷೇತ್ರಕ್ಕೆ ಅವಕಾಶವಿದೆ. ಈ ತಿದ್ದುಪಡಿ ಮೂಲಕ ಕೊಡಗು ಜಿಲ್ಲೆಯಲ್ಲಿ 18,000 ಜನಸಂಖ್ಯೆಗೆ ಒಂದು ಕ್ಷೇತ್ರ ಸೃಜಿಸಲು ಅವಕಾಶ ನೀಡಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಸೂದೆಯ ಕುರಿತು ವಿವರ ನೀಡಿದರು. ಧ್ವನಿಮತದ ಮೂಲಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ಔಷಧ ಖರೀದಿಗೆ 2 ವರ್ಷಕ್ಕೊಮ್ಮೆ ಟೆಂಡರ್: ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ತುರ್ತು ಅಗತ್ಯ ಔಷಧಿಗಳ ಕೊರತೆ ನೀಗಿಸಲು, ಔಷಧಗಳ ಖರೀದಿಗೆ ಎರಡು ವರ್ಷಗಳಿಗೊಮ್ಮೆ ಟೆಂಡರ್ ಕರೆಯಲು ಸರ್ಕಾರ ಅನುಮತಿ ನೀಡಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಚ್.ಎಸ್. ಗೋಪಿನಾಥ್ ಪರ ಡಿ.ಎಸ್. ಅರುಣ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, '410 ಔಷಧಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಸದ್ಯ 190 ಔಷಧಗಳ ದಾಸ್ತಾನು ಇಲ್ಲ. ಲಭ್ಯ ಇಲ್ಲದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲು ಸೂಚನೆ ನೀಡಲಾಗಿದೆ' ಎಂದರು.

'ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವನ್ನು ಸದೃಢಗೊಳಿಸುವ ಅಗತ್ಯವಿದೆ. ಇಲ್ಲಿಗೆ ವರ್ಗಾವಣೆಯಾಗಿ ಬರುವ ವ್ಯವಸ್ಥಾಪಕರು 2–3 ತಿಂಗಳೂ ಇರುವುದಿಲ್ಲ. ಈ ಕಾರಣದಿಂದ ಟೆಂಡರ್ ಪ್ರಕ್ರಿಯೆಗಳು ವಿಳಂಬ ಆಗುತ್ತಿವೆ. ಅಲ್ಲದೆ, ಅವಧಿ ಮುಗಿಯುವುದರ ಒಳಗೆ ಔಷಧಗಳ ಪೂರೈಕೆ ಸಾಧ್ಯವಾಗುತ್ತಿಲ್ಲ. ಇದನ್ನು ತಪ್ಪಿಸಲು 2 ವರ್ಷಗಳಿಗೊಮ್ಮೆ ಟೆಂಡರ್ ಕರೆಯಲಾಗುವುದು' ಎಂದರು.

ಪದವಿಗೆ ರ‍್ಯಾಂಕ್ ಬದಲು ಗ್ರೇಡಿಂಗ್?

ಪ್ರೊ. ಎಸ್‌.ಎಂ. ಜಯಕರ ಸಮಿತಿ ಶಿಫಾರಸು ಪರಿಗಣಿಸಲು ಚಿಂತನೆ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗಿನ ಪರೀಕ್ಷಾ ಪದ್ಧತಿಯಲ್ಲಿ ಇರುವ ಅಂಕಗಳ ನೀಡುವಿಕೆ, ರ‍್ಯಾಂಕ್ ವ್ಯವಸ್ಥೆ ಕೈಬಿಟ್ಟು, ಸರಾಸರಿ ಅಂಕಗಳ ಆಧಾರದಲ್ಲಿ ಗ್ರೇಡಿಂಗ್ ಪದ್ಧತಿ ಪರಿಚಯಿಸುವಂತೆ ಪ್ರೊ. ಎಸ್.ಎಂ. ಜಯಕರ ಸಮಿತಿ ನೀಡಿದ್ದ ಶಿಫಾರಸು ಪರಿಗಣಿಸಲು ಚಿಂತನೆ ನಡೆದಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ತಜ್ಞರ ಸಮಿತಿಯ ವರದಿ ಸರ್ಕಾರದ ಮುಂದಿದ್ದು, ಪರಿಶೀಲನೆಯಲ್ಲಿದೆ' ಎಂದರು.

'ಬೆಂಗಳೂರಿನ ಖಾಸಗಿ ವಿಶ್ವವಿದ್ಯಾಲಯವೊಂದರಲ್ಲಿ ಇತ್ತೀಚೆಗೆ ವರದಿಯಾದ ಆತ್ಮಹತ್ಯೆ ಘಟನೆ ಬಳಿಕ ಉನ್ನತ ಶಿಕ್ಷಣ ಇಲಾಖೆ ರಚಿಸಿದ್ದ ಸಮಿತಿಯು ಅಲ್ಲಿಗೆ ಭೇಟಿ ನೀಡಿ ಅಧ್ಯಯನ ನಡೆಸಿ ವರದಿ ಸಲ್ಲಿಸಿದೆ. ಈ ಸಮಿತಿಯ ಶಿಫಾರಸನ್ನು ಪರಿಗಣಿಸುವ ಕುರಿತು ಉನ್ನತ ಶಿಕ್ಷಣ ಪರಿಷತ್ ಚರ್ಚೆ ನಡೆಸುತ್ತಿದೆ' ಎಂದರು.

'ಗ್ರೇಡಿಂಗ್ ಪದ್ಧತಿ ಅಳವಡಿಸುವ ಬಗ್ಗೆ ಚರ್ಚಿಸಲು ಖಾಸಗಿ ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆ ಶೀಘ್ರದಲ್ಲೇ ಸಭೆ ನಡೆಸಲಾಗುವುದು' ಎಂದ ಸಚಿವರು, 'ರಾಜ್ಯದಲ್ಲಿ 30ಕ್ಕೂ ಹೆಚ್ಚು ಖಾಸಗಿ ವಿಶ್ವವಿದ್ಯಾಲಯಗಳಿವೆ. ಇವುಗಳಿಂದ ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಧಕ್ಕೆ ಆಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಸಾರ್ವಜನಿಕ ವಿಶ್ವವಿದ್ಯಾಲಯಗಳ ಹೆಸರು ದುರ್ಬಳಕೆ ಮಾಡಿಕೊಂಡು ಗೌರವ ಡಾಕ್ಟರೇಟ್ ನೀಡುತ್ತಿರುವುದನ್ನು ಪ್ರಸ್ತಾಪಿಸಿದ ಅವರು, 'ಕೆಲವು ನಕಲಿ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡುತ್ತಿವೆ. ಇತ್ತೀಚೆಗೆ ಸಂಸ್ಕೃತ ವಿಶ್ವವಿದ್ಯಾಲಯದ ಹೆಸರಿನಲ್ಲಿ ಗೌರವ ಡಾಕ್ಟರೇಟ್ ನೀಡಿದ ಪ್ರಕರಣವನ್ನು ನಾವು ಪತ್ತೆ ಮಾಡಿದ್ದೇವೆ. ಅಂತಹ ಘಟನೆಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.

ವಿಧಾನ ಪರಿಷತ್‌ನಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಮಾತನಾಡಿದರು

ಕಲಾಪ ವೀಕ್ಷಣೆ ವಿವಿಧ ವಿಭಾಗಗಳಲ್ಲಿ ಸಾಧನೆಯನ್ನು ಮಾಡಿರುವ ಐವರು ಯುವಕರು ತಮ್ಮ ಕುಟುಂಬಸ್ಥರೊಂದಿಗೆ ಇಂದು ವಿಧಾನಸಭೆಯ ವೀಕ್ಷಕರ ಗ್ಯಾಲರಿಗೆ ಆಗಮಿಸಿ, ಕಾರ್ಯಕಲಾಪಗಳನ್ನು ವೀಕ್ಷಿಸಿದರು

'ಅಲ್ಪಸಂಖ್ಯಾತರಿಗೆ ಸಿಕ್ಕಿದ್ದು ಅಲ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಮುಂದಿನ ಆರ್ಥಿಕ ವರ್ಷದ ಬಜೆಟ್ ಗಾತ್ರ ₹ 3.71 ಲಕ್ಷ ಕೋಟಿಯಷ್ಟಿದೆ. ಬಜೆಟ್ ಗಾತ್ರದ ಶೇಕಡ 1ರಷ್ಟು ಕೂಡ ಅಲ್ಪಸಂಖ್ಯಾತರಿಗೆ ಸಿಕ್ಕಿಲ್ಲ' ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ವಿಧಾನ ಸಭೆಯಲ್ಲಿ ಸೋಮವಾರ ಹೇಳಿದರು.

ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ, ವಿದ್ಯಾರ್ಥಿ ವೇತನ ಸೇರಿದಂತೆ ವಿವಿಧ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನದ ಕುರಿತು ಬಿಜೆಪಿಯ ಬಿ.ವೈ. ವಿಜಯೇಂದ್ರ ಕೇಳಿದ ಪ್ರಶ್ನೆಯಿಂದ ಸದನದಲ್ಲಿ ಕೋಲಾಹಲದ ವಾತಾವರಣ ಸೃಷ್ಟಿಯಾಯಿತು.

ಆಗ ಉತ್ತರ ನೀಡಿದ ಸಚಿವರು, 'ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಮೂರು ವರ್ಷಗಳಲ್ಲಿ ₹ 1,000 ಕೋಟಿ ವೆಚ್ಚ ಮಾಡಲು ಕ್ರಿಯಾ ಯೋಜನೆ ರೂಪಿಸಲಾಗಿದೆ. ಮೊದಲ ಹಂತದಲ್ಲಿ ₹ 165 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದರು.

'ಬರಗಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ಹಣ ಬಿಡುಗಡೆ ಮಾಡಲು ಈ ಸರ್ಕಾರ ಕ್ರಮ ಕೈಗೊಂಡಿಲ್ಲ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 10,000 ಕೋಟಿ ಕೊಡಲು ಹೊರಟಿದೆ. ಅನುದಾನ ಬಿಡುಗಡೆಯಲ್ಲೂ ತಾರತಮ್ಯ ಮಾಡುತ್ತಿದೆ' ಎಂದು ವಿಜಯೇಂದ್ರ ಟೀಕಿಸಿದರು.

'ಅನುದಾನ ಬಿಡುಗಡೆಯಲ್ಲಿ ಯಾವುದೇ ತಾರತಮ್ಯ ಆಗಿಲ್ಲ. ಬಿಜೆಪಿಯ 29 ಮತ್ತು ಜೆಡಿಎಸ್‌ನ 8 ಶಾಸಕರ ಕ್ಷೇತ್ರಗಳಿಗೂ ತಲಾ ₹ 5 ಕೋಟಿ ಬಿಡುಗಡೆ ಮಾಡಿದ್ದೇನೆ. ಹಲವು ಶಾಸಕರು ಬೇಡಿಕೆ ಪತ್ರವನ್ನೇ ಕೊಟ್ಟಿಲ್ಲ' ಎಂದು ಸಚಿವರು ಉತ್ತರಿಸಿದರು.

'ಮತ ಬೇಡವೆನ್ನುವವರಿಗೆ ಅನುದಾನ ಏಕೆ?'

'ಮುಸಲ್ಮಾನರ ಮತ ನನಗೆ ಬೇಡ. ಬುರ್ಖಾ ಹಾಕಿದ ಮಹಿಳೆಯರು, ಗಡ್ಡ ಬಿಟ್ಟ ಮುಸ್ಲಿಮರು ನಮ್ಮ ಬಳಿ ಬರಬೇಡಿ ಎಂದು ನೀವು ಬಹಿರಂಗವಾಗಿ ಹೇಳಿದ್ದೀರಿ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ನೀವು ಕೆಲಸ ಮಾಡುವುದಿಲ್ಲ. ಇನ್ನು ಹೇಗೆ ಅನುದಾನ ಕೊಡುವುದು' ಎಂದು ಸಚಿವ ಜಮೀರ್ ಅಹಮದ್ ಪ್ರಶ್ನಿಸಿದರು.

ಪ್ರಶ್ನೋತ್ತರದ ವೇಳೆ ಮಾತನಾಡಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, 'ತಮ್ಮ ಕ್ಷೇತ್ರದಲ್ಲಿ ರಾಜ್ಯದಲ್ಲೇ ಅತ್ಯಧಿಕ ಸಂಖ್ಯೆಯ ಅಲ್ಪಸಂಖ್ಯಾತರಿದ್ದಾರೆ. ಅಲ್ಲಿಗೆ ನಯಾಪೈಸೆ ಅನುದಾನ ನೀಡಿಲ್ಲ ಎಂದರು. ಬಿಜೆಪಿಯ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ಬೆಂಬಲಕ್ಕೆ ನಿಂತರು.

ಇದಕ್ಕೆ ಉತ್ತರಿಸಿದ ಜಮೀರ್, 'ಅನುದಾನಕ್ಕಾಗಿ ನೀವು ಪತ್ರವನ್ನೂ ಕೊಟ್ಟಿಲ್ಲ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದು ವಾಗ್ದಾನ ಕೊಡಿ. ನಿಮ್ಮ ಕ್ಷೇತ್ರಕ್ಕೆ ₹ 10 ಕೋಟಿ ಅನುದಾನ ಕೊಡುತ್ತೇನೆ' ಎಂದು ಯತ್ನಾಳ್‌ಗೆ ಸವಾಲು ಹಾಕಿದರು.

'ಬೇಸಿಗೆಯಲ್ಲೂ ವಿದ್ಯುತ್ ಕೊರತೆ ಆಗದಂತೆ ಕ್ರಮ'

ಪ್ರಜಾವಾಣಿ ವಾರ್ತೆ


ಕೆ.ಜೆ. ಜಾರ್ಜ್

ಬೆಂಗಳೂರು: 'ಶಾಖೋತ್ಪನ್ನ ಮೂಲಗಳಿಂದ ಗರಿಷ್ಠ ಪ್ರಮಾಣದ ಉತ್ಪಾದನೆ, ವಿನಿಮಯ, ಅಲ್ಪಾವಧಿ ಖರೀದಿ ಮೂಲಕ ಬೇಡಿಕೆಗೆ ತಕ್ಕಂತೆ ವಿದ್ಯುತ್ ಪೂರೈಸುತ್ತಿದ್ದು, ಬೇಸಿಗೆಯಲ್ಲೂ ವಿದ್ಯುತ್ ಕೊರತೆ ಉಂಟಾಗದಂತೆ ಕ್ರಮ ವಹಿಸಲಾಗುವುದು' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಜಾರ್ಜ್, 'ಕಳೆದ ನವೆಂಬರ್ ಅಂತ್ಯದವರೆಗೆ ಶಾಖೋತ್ಪನ್ನ, ಜಲ, ಕೇಂದ್ರದಿಂದ ರಾಜ್ಯದ ಪಾಲು, ಖಾಸಗಿ ಸೇರಿ 62,738.86 ದಶಲಕ್ಷ ಯುನಿಟ್ ವಿದ್ಯುತ್ ಲಭ್ಯವಾಗಿದೆ. ಡಿಸೆಂಬರ್ ಅಂತ್ಯದವರೆಗೆ ₹ 1,296.10 ಕೋಟಿ ಮೊತ್ತದಲ್ಲಿ 1,932.32 ದಶಲಕ್ಷ ಯುನಿಟ್ ವಿದ್ಯುತ್ ಖರೀದಿಸಲಾಗಿದೆ' ಎಂದರು.

'ಬ್ಯಾಂಕಿಂಗ್ ವ್ಯವಸ್ಥೆಯಡಿ ಉತ್ತರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಿಂದ ಪ್ರತಿದಿನ 400-500 ಮೆಗಾ ವಾಟ್ ವಿದ್ಯುತ್ (8.9 ದಶಲಕ್ಷ ಯೂನಿಟ್) 2024ರ ಮೇ ವರೆಗೆ ಲಭ್ಯವಾಗಲಿದೆ. ಕೇಂದ್ರ ಸರ್ಕಾರ 2023ರ ನವೆಂಬರ್‌ನಿಂದ 2024ರ ಜೂನ್ ಅಂತ್ಯದವರೆಗೆ ಹೆಚ್ಚುವರಿಯಾಗಿ 302.36 ಮೆಗಾ ವಾಟ್ ಪೂರೈಸಲು ಒಪ್ಪಿಕೊಂಡಿದೆ. ಕೂಡಗಿ ವಿದ್ಯುತ್ ಸ್ಥಾವರದಿಂದ ರಾಜ್ಯದ ಪಾಲು 150 ಮೆಗಾ ವಾಟ್ ವಿದ್ಯುತ್ ನವೆಂಬರ್‌ನಿಂದ ದೊರೆಯುತ್ತಿದೆ' ಎಂದು ಮಾಹಿತಿ ನೀಡಿದರು.

'ಶಾಖೋತ್ಪನ್ನ ಸ್ಥಾವರಗಳಿಗೆ ಬೇಕಾದ ಕಲ್ಲಿದ್ದಲು ಪೂರೈಕೆಯಾಗುತ್ತಿದೆ. ವಿದ್ಯುತ್ ಕಾಯ್ದೆ 11ಇ ಸೆಕ್ಷನ್ ಜಾರಿಗೊಳಿಸಿ ಖಾಸಗಿ ಉತ್ಪಾದಕರಿಂದ ಒಂದು ಸಾವಿರ ಮೆಗಾ ವಾಟ್ ಪಡೆಯಲಾಗುತ್ತಿದೆ. ಅಲ್ಪಾವಧಿ ಖರೀದಿ ನಿಯಮಾವಳಿ, ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿದ ದರದಂತೆ ದಿನವಹಿ ಆಧಾರದಲ್ಲಿ ವಿದ್ಯುತ್ ಖರೀದಿಸಲಾಗುತ್ತದೆ' ಎಂದೂ ಅವರು ತಿಳಿಸಿದರು.

'ಎರಡು ತಿಂಗಳ ಸಂಕಷ್ಟ ಕಾಲದಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ಐದು ತಾಸು ತ್ರಿ ಫೇಸ್ ವಿದ್ಯುತ್ ಪೂರೈಕೆಯಾಗಿದೆ. ಪರ್ಯಾಯ ವ್ಯವಸ್ಥೆಗಳಾದ ನಂತರ ಮುಖ್ಯಮಂತ್ರಿ ಸೂಚನೆಯಂತೆ ಮತ್ತೆ ಏಳು ತಾಸು ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ತಾಂತ್ರಿಕವಾಗಿ ಸಾಧ್ಯತೆ ಇಲ್ಲದಿರುವ ಪ್ರದೇಶಗಳಲ್ಲಿ ಪಾಳಿ ಪ್ರಕಾರ ಹಗಲು ನಾಲ್ಕು ತಾಸು, ರಾತ್ರಿ ಮೂರು ತಾಸುಗಳ ಕಾಲ ತ್ರಿ ಫೇಸ್ ವಿದ್ಯುತ್ ಪೂರೈಕೆಯಾಗುತ್ತಿದೆ' ಎಂದು ಸ್ಪಷ್ಟಪಡಿಸಿದರು.

'ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ, ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಎಸ್ಕಾಂವಾರು ಶಾಸಕರ ಸಭೆಗೆ ನಡೆಸಲಾಗುತ್ತಿದೆ' ಎಂದು ಜಾರ್ಜ್ ಹೇಳಿದರು.

ನಮ್ಮ ಹಣ, ನಮ್ಮ ಹಕ್ಕು: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ದೇವರು, ನಮ್ಮ ಹಣ, ನಮ್ಮ ಹಕ್ಕು' ಆದ್ದರಿಂದ ಹಿಂದು ದೇವಸ್ಥಾನಗಳ ಹಣವನ್ನು ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಾರದು. ಆಯಾ ದೇವಸ್ಥಾನಗಳ ಮತ್ತು ಭಕ್ತರ ಅನುಕೂಲಕ್ಕಾಗಿಯೇ ಬಳಸಬೇಕು ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಸೋಮವಾರ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸರ್ಕಾರ ದೇವಸ್ಥಾನಗಳನ್ನು ನಿಯಂತ್ರಿಸುವುದನ್ನು ತಕ್ಷಣವೇ ನಿಲ್ಲಿಸಬೇಕು. ನಮ್ಮ ದೇವಸ್ಥಾನಗಳ ಹಣವನ್ನು ಮಸೀದಿ, ಚರ್ಚ್ ಇತ್ಯಾದಿಗಳಿಗೆ ಬಳಸಬಾರದು ಎಂದು ಹೇಳಿದರು.

'ನಮ್ಮ ಭಕ್ತರು ಬೆವರು ಸುರಿಸಿ ದುಡಿದ ಹಣವನ್ನು, ದೇವಸ್ಥಾನದ ಅಭಿವೃದ್ಧಿಗೆಂದು ಭಕ್ತಿಯಿಂದ ಕಾಣಿಕೆ ರೂಪದಲ್ಲಿ ನೀಡುತ್ತಾರೆ. ಆ ಹಣವನ್ನು ದೇವಸ್ಥಾನದ ನಿರ್ವಹಣೆ, ಗೋಶಾಲೆ, ಸಂಸ್ಕೃತ ಪಾಠ ಶಾಲೆಗಾಗಿ ಬಳಸಬೇಕು. ಆದರೆ, ಸರ್ಕಾರ ದೇವಸ್ಥಾನದ ಅಭಿವೃದ್ಧಿಗೆ ಹಣ ಬಳಸುತ್ತಿಲ್ಲ' ಎಂದು ದೂರಿದರು.

ಸರ್ಕಾರವು ಮಸೀದಿ, ಚರ್ಚ್, ಗುರುದ್ವಾರ, ಬಸದಿಗಳಲ್ಲಿ ಕಾಣಿಕೆ ರೂಪದಲ್ಲಿ ಸಲ್ಲಿಕೆಯಾಗುವ ಹಣವನ್ನು ಏಕೆ ಬಳಸುತ್ತಿಲ್ಲ. ಇದನ್ನು ಪ್ರಶ್ನಿಸುವವರು ಯಾರೂ ಇಲ್ಲ. ಆ ಕಾನೂನು ತೆಗೆದು ಹಾಕಿ, ಅವರ ಹಣವನ್ನೂ ಸರ್ಕಾರದ ಉದ್ದೇಶಕ್ಕೆ ಬಳಸಿ. ವಕ್ಫ್ ಬಳಿ ಲಕ್ಷಗಟ್ಟಲೆ ಎಕರೆ ಆಸ್ತಿ ಇದೆ. ಅದನ್ನು ಸರ್ಕಾರ ಏಕೆ ತನ್ನ ವಶಕ್ಕೆ ತೆಗೆದುಕೊಳ್ಳುತ್ತಿಲ್ಲ. ಅದನ್ನು ವಶಕ್ಕೆ ತೆಗೆದುಕೊಂಡು ಕಂದಾಯ ಇಲಾಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಡಿಕೆಶಿ– ಯತ್ನಾಳ ಜಟಾಪಟಿ

'ಈ ಸರ್ಕಾರದಲ್ಲಿ ಶೇ 40 ಕಮಿಷನ್ ಇದೆ ಎಂದು ಗುತ್ತಿಗೆದಾರರ ಸಂಘದ ಕೆಂಪಣ್ಣ ಅವರು ಹೇಳಿದ್ದರು. ಆ ಬಳಿಕ ಪಾಪ ಅವರ ಬಾಯಿಯನ್ನು ಬಂದ್ ಮಾಡಿದರು. ಕೆಂಪಣ್ಣ ಅವರ ಬಾಯಿಗೆ ಜೇನುತುಪ್ಪಾ ಹಾಕಿದ್ದಾರಾ? ಬೆಲ್ಲ ಹಾಕಿದ್ದಾರಾ' ಎಂದು ಬಸನಗೌಡ ಯತ್ನಾಳ ಪ್ರಶ್ನಿಸಿದರು.

ಈ ಮಾತಿನಿಂದ ಸಿಡಿಮಿಡಿಗೊಂಡ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ನಿನ್ನ ನುಡಿಮುತ್ತಿನಲ್ಲೇ ಕೋವಿಡ್‌ನಲ್ಲಿ ನಡೆದ ಅಕ್ರಮದ ಬಗ್ಗೆ ಹೇಳಿದ್ದೀಯಲ್ಲಪ್ಪಾ, ಅದನ್ನೂ ಇಲ್ಲಿ ಹೇಳು' ಎಂದು ಏಕವಚನ ಪ್ರಯೋಗಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಯತ್ನಾಳ, 'ನೀನು ಏಕವಚನದಲ್ಲಿ ಮಾತನಾಡಿದರೆ ನಾನೂ ಏಕವಚನದಲ್ಲೇ ಮಾತನಾಡುತ್ತೇನೆ. ನಾನೇನು ನಿನ್ನ ಮುಲಾಜಿನಲ್ಲಿ ಇಲ್ಲ. ನಿನ್ನ ಬಳಿಯೂ ಬರುವುದಿಲ್ಲ. ನನಗೆ ನಿನ್ನ ಬಳಿ ಬರುವ ಅಗತ್ಯವೂ ಇಲ್ಲ. ಬಿಬಿಎಂಪಿಯಲ್ಲಿ ಎಷ್ಟು ಕಮಿಷನ್ ಪಡೆಯುತ್ತಿದ್ದೀಯಾ ಎಂದು ಜಗತ್ತಿಗೆ ಗೊತ್ತು' ಎಂದು ಹರಿಹಾಯ್ದರು.

ಐಬಿಪಿಎಸ್ ಪರೀಕ್ಷೆ: ಉಚಿತ ತರಬೇತಿಗೆ ಆಹ್ವಾನ

ಬೆಂಗಳೂರು: ಆರ್‌ಆರ್‌ಬಿ ಐಬಿಪಿಎಸ್ (ಪಿಒ/ಎಸ್‌ಒ) ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಗಾಗಿ ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಉಚಿತ ತರಬೇತಿ ಮತ್ತು ಮಾರ್ಗದರ್ಶನ ಹಮ್ಮಿಕೊಳ್ಳಲಾಗಿದೆ.

ಫೆ.23ರಂದು ಬೆಳಿಗ್ಗೆ 11.30ರಿಂದ ತರಬೇತಿ ನಡೆಯಲಿದೆ. ಆಸಕ್ತರು ಫೆ.22ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ವಿವರಗಳಿಗೆ ನಂ.15, 2ನೇ ಹಂತ, ಹಳೇ ವಿಮಾನ ನಿಲ್ದಾಣ ರಸ್ತೆ, ಗಾಲ್ಫ್ ಅವೆನ್ಯೂ ರಸ್ತೆ, ಕೋಡಿಹಳ್ಳಿ ಬೆಂಗಳೂರು ಇಲ್ಲಿಗೆ ಸಂಪರ್ಕಿಸಬಹುದು. ಅಥವಾ ವೆಬ್‌ಸೈಟ್: www.Ksfkarnataka.com, ಇ–ಮೇಲ್: Ksfbangalore@gmail.com, ದೂರವಾಣಿ: 080 25202299, 7625000990 ಸಂಪರ್ಕಿಸುವಂತೆ ಫೌಂಡೇಶನ್‌ನ ಗೌರವ ಕಾರ್ಯದರ್ಶಿ ಟಿ. ತಿಮ್ಮೇಗೌಡ ತಿಳಿಸಿದ್ದಾರೆ.

'ಕಾಂಗ್ರೆಸ್ ಶಾಸಕರಿಗೆ ಎಚ್‌ಡಿಕೆ ಆಮಿಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ನಮ್ಮ (ಕಾಂಗ್ರೆಸ್) ಶಾಸಕರಿಗೆ ಕರೆ ಮಾಡಿ ಆಮಿಷ ಒಡ್ಡುತ್ತಿರುವ, ಧಮ್ಕಿ ಹಾಕುತ್ತಿರುವ ಮಾಹಿತಿ ಬಂದಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಕುಮಾರಸ್ವಾಮಿ ಯಾರಿಗೆ ಕರೆ ಮಾಡಿದ್ದಾರೆ? ಏನು ಮಾತನಾಡುತ್ತಿದ್ದಾರೆ? ಯಾರಿಗೆ ಧಮ್ಕಿ ಹಾಕುತ್ತಿದ್ದಾರೆ? ಎಲ್ಲವೂ ನನಗೆ ಗೊತ್ತಿದೆ. ಯಾರಿಗೆ, ಯಾವೆಲ್ಲಾ ಆಮಿಷ ಒಡ್ಡಿದ್ದಾರೆಂದು ಶಾಸಕರು ಮಾಹಿತಿ ನೀಡಿದ್ದಾರೆ. ಬಿಜೆಪಿ ತಂತ್ರಗಾರಿಕೆ ಬಗ್ಗೆಯೂ ಗೊತ್ತಿದೆ. ಮೊದಲು ಅವರು ತಮ್ಮ ಮನೆ ಸರಿಪಡಿಸಿಕೊಳ್ಳಲಿ. ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ' ಎಂದರು.

'ವಿರೋಧ ಪಕ್ಷಗಳು ಅಡ್ಡ ಮತದಾನಕ್ಕೆ ಪ್ರಯತ್ನಿಸುತ್ತಿವೆಯಾ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಐದನೇ ಅಭ್ಯರ್ಥಿಯನ್ನು ಸುಮ್ಮನೆ ಕಣಕ್ಕಿಳಿಸುತ್ತಾರಾ? ಒಂದು ಪ್ರಯತ್ನ ಮಾಡೋಣ ಎಂದು ಹಾಕಿದ್ದಾರೆ. ಮತದಾನ ದಿನ ಎಲ್ಲವೂ ಗೊತ್ತಾಗಲಿದೆ' ಎಂದರು.

'ನಿಮ್ಮ ಪ್ರತಿತಂತ್ರವೇನು?' ಎಂದು ಕೇಳಿದಾಗ, 'ನಮಗೆ ಅದರ ಅಗತ್ಯವಿಲ್ಲ. ಜನ ನಮಗೆ 135 ಸೀಟುಗಳನ್ನು ನೀಡಿದ್ದಾರೆ. ಎರಡು ಕ್ಷೇತ್ರಗಳ ಪಕ್ಷೇತರರು ನಮ್ಮ ಜತೆಗಿದ್ದಾರೆ. ನಮ್ಮ ಜತೆ ಇರುವ ಬೇರೆಯವರ ಬಗ್ಗೆ ಈಗ ಮಾತನಾಡುವುದಿಲ್ಲ. ಮತದಾನದ ನಂತರ ಮಾತನಾಡುತ್ತೇನೆ' ಎಂದರು.

ಶೀಘ್ರದಲ್ಲೇ ಅಧಿಸೂಚನೆ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ

'ಸಾವಿರ ಗ್ರಾಮ ಲೆಕ್ಕಾಧಿಕಾರಿಗಳ ನೇಮಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಸಾವಿರ ಗ್ರಾಮ ಲೆಕ್ಕಾಧಿಕಾರಿಗಳ ನೇಮಕಾತಿಗೆ ತಿಂಗಳೊಳಗೆ ಅಧಿಸೂಚನೆ ಹೊರಡಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಸೋಮವಾರ ಉತ್ತರ ನೀಡಿದ ಅವರು, 'ಕಂದಾಯ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಈಗ 1,000 ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆ ಭರ್ತಿಗೆ ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿದ್ದಾರೆ' ಎಂದರು.

ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಕಂದಾಯ ಇಲಾಖೆಯ ಸಾವಿರಾರು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಬೇರೆ ಇಲಾಖೆಗಳು, ಅನ್ಯ ಕೆಲಸಗಳಿಗೆ ನಿಯೋಜನೆ ಮಾಡಲಾಗಿತ್ತು. ಇದರಿಂದ ಕಂದಾಯ ಇಲಾಖೆಯ ಕಾರ್ಯನಿರ್ವಹಣೆಗೆ ಅಡಚಣೆಯಾಗಿದೆ. ಈಗ ಅಂತಹ ನಿಯೋಜನೆ ಆದೇಶಗಳನ್ನು ರದ್ದು ಮಾಡಲಾಗುವುದು ಎಂದು ತಿಳಿಸಿದರು.

'2,000 ಅಧಿಕಾರಿಗಳು, ಸಿಬ್ಬಂದಿಯ ನಿಯೋಜನೆ ಕೋರಿರುವ ಮನವಿಗಳು ಇಲಾಖೆಯ ಮುಂದಿವೆ. ಆದರೆ, ಯಾವುದನ್ನೂ ನಾನು ಒಪ್ಪಿಕೊಂಡಿಲ್ಲ. ಈ ಕಾರಣಕ್ಕಾಗಿ ನಮ್ಮ ಪಕ್ಷದ ಶಾಸಕರು ಕೂಡ ನನ್ನ ಬಗ್ಗೆ ಅಸಮಾಧಾನ ಹೊಂದಿದ್ದಾರೆ. ಕಂದಾಯ ಇಲಾಖೆಯ ಕೆಲಸಗಳು ನಡೆಯುವುದು ನನಗೆ ಮುಖ್ಯ. ಪ್ರತಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಐದು ಅಧಿಕಾರಿಗಳು, ಸಿಬ್ಬಂದಿಯ ನಿಯೋಜನೆಗಷ್ಟೇ ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಲಾಗುವುದು' ಎಂದರು.

ಕುಂದಾಪುರ ತಾಲ್ಲೂಕು ಕಚೇರಿಗೆ 110 ಹುದ್ದೆಗಳು ಮಂಜೂರಾಗಿವೆ. ಅವುಗಳಲ್ಲಿ 70 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಈ ಪೈಕಿ 19 ಮಂದಿ ನಿಯೋಜನೆಯಲ್ಲಿ ಬೇರೆಡೆ ಕೆಲಸ ಮಾಡುತ್ತಿದ್ದಾರೆ. ಆ ಎಲ್ಲ ನಿಯೋಜನೆ ಆದೇಶಗಳನ್ನು ರದ್ದುಪಡಿಸಲಾಗುವುದು ಎಂದು ಭರವಸೆ ನೀಡಿದರು.

ಹತ್ತು ವರ್ಷಗಳಿಂದ ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗೆ ಸರಿಯಾದ ತರಬೇತಿ ನೀಡಿಲ್ಲ. ಇದರಿಂದ ಇಲಾಖೆಯಲ್ಲಿ ಕಾನೂನು, ನಿಯಮ ಮತ್ತು ಕೆಲಸದ ವಿಧಾನ ತಿಳಿದ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಎಲ್ಲ ನೌಕರರಿಗೂ ಹಂತ ಹಂತವಾಗಿ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ವಿಧಾನಸಭೆ ಕಲಾಪದಲ್ಲಿ ಸಚಿವ ಕೃಷ್ಣ ಬೈರೇಗೌಡ ಮಾತನಾಡಿದರು

'ತಾಲ್ಲೂಕು ಕಚೇರಿ; ಹೊಸ ಅಂದಾಜು ಪಟ್ಟಿ'

'ತಾಲ್ಲೂಕು ಕಚೇರಿಗಳ ಹೊಸ ಕಟ್ಟಡ ನಿರ್ಮಾಣಕ್ಕೆ ₹ 10 ಕೋಟಿ ಅನುದಾನದ ಮಿತಿ ಇದೆ. ಸದ್ಯದ ಅಗತ್ಯಕ್ಕೆ ತಕ್ಕಂತೆ ವಾಸ್ತವಿಕ ದರಗಳ ಆಧಾರದಲ್ಲಿ ಹೊಸ ಅಂದಾಜು ಪಟ್ಟಿ ಸಿದ್ಧಪಡಿಸಲಾಗುವುದು' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಮಹಾಂತೇಶ್ ಕೌಜಲಗಿ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, '2018ರಲ್ಲಿ 63 ಹೊಸ ತಾಲ್ಲೂಕುಗಳನ್ನು ರಚಿಸಲಾಗಿತ್ತು. ಅವುಗಳಲ್ಲಿ 14 ತಾಲ್ಲೂಕುಗಳಿಗೆ ಮಾತ್ರ ಕಚೇರಿ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿತ್ತು. 49 ತಾಲ್ಲೂಕು ಕಚೇರಿಗಳ ನಿರ್ಮಾಣ ಬಾಕಿ ಇದೆ' ಎಂದರು.

ಲೋಕೋಪಯೋಗಿ ಮತ್ತು ಕರ್ನಾಟಕ ಗೃಹ ಮಂಡಳಿ ಮುಖ್ಯ ಎಂಜಿನಿಯರ್‌ಗಳನ್ನು ಒಳಗೊಂಡ ಸಮಿತಿಯಿಂದ ಹೊಸ ಅಂದಾಜು ಪಟ್ಟಿ ಹಾಗೂ ವಿನ್ಯಾಸವನ್ನು ಅಂತಿಮಗೊಳಿಸಲಾಗುವುದು. ನಂತರದಲ್ಲಿ ಮೂರು ವರ್ಷಗಳೊಳಗೆ 49 ತಾಲ್ಲೂಕು ಕಚೇರಿಗಳನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು.

'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ' ಘೋಷಣೆಗೆ ಕೊಕ್ • ಧೈರ್ಯವಾಗಿ ಪ್ರಶ್ನಿಸಿ ಎಂದು ಬದಲು • ಸದನದಲ್ಲಿ ಪ್ರತಿಪಕ್ಷಗಳ ಆಕ್ರೋಶ

ಚರ್ಚೆಗೆ ಗ್ರಾಸವಾದ ವಸತಿ ಶಾಲೆಗಳ ಘೋಷವಾಕ್ಯ

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯ 32 ವಸತಿ ಶಾಲೆಗಳ ಪೈಕಿ ಬಹುತೇಕ ಮೊರಾರ್ಜಿ ದೇಸಾಯಿ, ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳಲ್ಲಿ 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ'ಎನ್ನುವ ಫಲಕದ ಬದಲಿಗೆ 'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ' ಎಂದು ಬರೆಸಲಾಗಿದೆ.

ದೇವದುರ್ಗ ತಾಲ್ಲೂಕಿನ ಗಲಗ ಅಂಬೇಡ್ಕರ್ ವಸತಿ ವಸತಿ ಶಾಲೆಯಲ್ಲಿ 'ಜ್ಞಾನ ದೇಗುಲವಿದು ಕೈ ಮುಗಿದು ಒಳಗ ಬಾ' ಹಾಗೂ 'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ' ಎಂದು ಎರಡನ್ನೂ ಬರೆಸಲಾಗಿದೆ.

KREIS official TEAM ಟೆಲಿಗ್ರಾಂ ಗ್ರೂಪ್‌ನಲ್ಲಿ ಜನವರಿ 18ರಂದು ನಡೆದ ಚರ್ಚೆಯಲ್ಲಿ 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ' ಎನ್ನುವ ಬದಲಿಗೆ ಮೇಲಿನಂತೆ ಬರೆಯಿಸುವಂತೆ ಆದೇಶ ನೀಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಆದೇಶದಂತೆ ನಾಮಫಲಕ ಬದಲಿಸಲಾಗಿದೆ ಎಂದು ಕೆಲ ಪ್ರಾಚಾರ್ಯರು ಪ್ರತಿಕ್ರಿಯಿಸಿದ್ದಾರೆ.

ರಾಯಚೂರು ನಗರದ ಆಶಾಪುರ ರಸ್ತೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಮಸ್ಕಿ, ಲಿಂಗಸುಗೂರಿನ ಆಡಿಮನಿಯ ಕಿತ್ತೂರುರಾಣಿ ಚನ್ನಮ್ಮ ವಸತಿ ಶಾಲೆ, ವಟಗಲ್, ದೇವದುರ್ಗ ತಾಲ್ಲೂಕಿನ ಗಬ್ಬೂರು, ಜಾಲಹಳ್ಳಿ, ಸಿಂಧನೂರು, ತುರ್ವಿಹಾಳ, ನಲಗಲ್ಲು, ಸಿಂಧನೂರು ತಾಲ್ಲೂಕಿನ ಜವಳಗೇರಾದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಾಲಾಪುರದ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯಲ್ಲಿ ಹೊಸ ಘೋಷವಾಕ್ಯ ಬರೆಸಲಾಗಿದೆ.

ಟೆಲಿಗ್ರಾಂ ಗ್ರೂಪ್‌ನಲ್ಲಿ ಚರ್ಚೆಯಾದಂತೆ ವಸತಿ ಶಾಲೆಗಳಲ್ಲಿ ಘೋಷವಾಕ್ಯ ಬದಲಾವಣೆ ಮಾಡಲಾಗಿದೆ. 'ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೂಚನೆ ಮೇರೆಗೆ ಬದಲಾಯಿಸಲಾಗಿದೆ. ಇಲಾಖೆಯಿಂದ ಅಧಿಕೃತ ಆದೇಶ ಬಂದಿಲ್ಲ' ಎಂದು ರಾಯಚೂರು ಮೊರಾರ್ಜಿ ವಸತಿ ಶಾಲೆಯ ಪ್ರಾಚಾರ್ಯ ಕಲ್ಲಪ್ಪ ಬಿರಾದಾರ ಹಾಗೂ ಲಿಂಗಸುಗೂರು ತಾಲ್ಲೂಕಿನ ಆಡಿಮನಿ ಮೊರಾರ್ಜಿ ವಸತಿ ಶಾಲೆಯ ಪ್ರಾಚಾರ್ಯ ನಾಗಭೂಷಣ ನಾಗರಹಾಳ ತಿಳಿಸಿದ್ದಾರೆ.

ಆದರೆ, ಮಾನ್ವಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬದಲಾವಣೆ ಮಾಡಿಲ್ಲ. ಲಿಖಿತ ಆದೇಶ ಬಾರದ ಕಾರಣ ಕೆಲವರು ಇನ್ನೂ ಘೋಷವಾಕ್ಯ ಬದಲಿಸಿಲ್ಲ.

ಯಾದಗಿರಿ ಜಿಲ್ಲೆಯ 22 ವಸತಿ ಶಾಲೆಗಳಲ್ಲೂ ಈಗಾಗಲೇ 'ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸು' ಎಂದು ಬರೆಸಲಾಗಿದೆ. ಸರ್ಕಾರದ ನಿರ್ದೇಶನಕ್ಕೆ ಅಸಮಾಧಾನ ವ್ಯಕ್ತಪಡಿಸಿದ ವಸತಿ ಶಾಲೆಯ ಶಿಕ್ಷಕರು, 'ಇಲಾಖೆಯ ಆದೇಶದನ್ವಯ ಬರಹ ಬರೆಸಲಾಗಿದೆ. ಕೈ ಮುಗಿದಷ್ಟು, ತಲೆಬಾಗಿದಷ್ಟು ನಮಗೆ ವಿದ್ಯೆ ಜಾಸ್ತಿಯಾಗುತ್ತದೆ. ವಿದ್ಯೆ ಕಲಿತ ಮೇಲೆ, ಜ್ಞಾನವಂತರಾದ ಮೇಲೆ ಪ್ರಶ್ನಿಸುವ ಗುಣ ಬರಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರವೇಶ ದ್ವಾರದ ಮೇಲೆ ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ ಎಂದು ಬರೆಯಲಾಗಿದೆ.

'ಮತ ಬ್ಯಾಂಕ್‌ಗಾಗಿ ಬದಲಾವಣೆ'

ವಸತಿ ನಿಲಯಗಳಲ್ಲಿ ಘೋಷವಾಕ್ಯ ಬದಲಾಯಿಸಿರುವ ಕುರಿತು ಕೊಪ್ಪಳದಲ್ಲಿ ಪ್ರತಿಕ್ರಿಯಿಸಿದ ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್, 'ಕೈ ಮುಗಿದು ಒಳಗೆ ಬನ್ನಿ ಎನ್ನುವ ಸಾಲುಗಳು ಕಾಂಗ್ರೆಸ್‌ಗೆ ಏನು ತೊಂದರೆ ಮಾಡಿತ್ತು? ವಿದ್ಯಾರ್ಥಿಗಳು ಬೇಕಾದರೆ ಶಿಕ್ಷಕರನ್ನು ಪ್ರಶ್ನೆ ಮಾಡಲಿ. ಶಾಲೆ ಹಾಗೂ ಹಾಸ್ಟೆಲ್‌ಗಳಲ್ಲಿ ಗಣೇಶ ಹಬ್ಬ, ಸರಸ್ವತಿ ಪೂಜೆ ಮಾಡಿದರೆ ಕಾಂಗ್ರೆಸ್‌ಗೆ ಆಗಬಾರದು. ಮತ ಬ್ಯಾಂಕ್ ರಾಜಕಾರಣಕ್ಕಾಗಿ ಹೀಗೆ ಮಾಡುತ್ತಿದೆ' ಎಂದು ಆರೋಪಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಕೆಲ ವಸತಿ ಶಾಲೆಗಳಲ್ಲಿಯೂ ಹಿಂದಿನ ಘೋಷವಾಕ್ಯ ಬದಲಾಯಿಸಿ 'ದಿಸ್ ಇಸ್ ಟೆಂಪಲ್ ಆಫ್ ನಾಲೆಡ್ಜ್, ಆಸ್ಕ್ ವಿಥೌಟ್ ಫಿಯರ್' ಎಂದು ಇಂಗ್ಲಿಷ್‌ನಲ್ಲಿ ಬರೆಸಲಾಗಿದೆ. ಕೆಲವೆಡೆ ಕನ್ನಡದಲ್ಲಿಯೇ 'ಜ್ಞಾನ ದೇಗುಲವಿದು; ಧೈರ್ಯವಾಗಿ ಪ್ರಶ್ನಿಸಿ' ಎಂದು ಬರೆಯಲಾಗಿದೆ.

'ಒಂದು ತಿಂಗಳ ಹಿಂದೆ ಸೂಚನೆ ಬಂದಿದ್ದರಿಂದ ಈ ಹಿಂದೆ ಇದ್ದ ಜ್ಞಾನದೇಗುಲವಿದು ಕೈಮುಗಿದು ಒಳಗೆ ಬಾ ಅಳಿಸಿಕೊಂಡು, ಜ್ಞಾನ ದೇಗುಲವಿದು ಧೈರ್ಯದಿಂದ ಪ್ರಶ್ನಿಸು ಎಂಬುದನ್ನು ಇನ್ನೊಂದು ಕಡೆ ಬರೆಸಲಾಗಿದೆ' ಎಂದು ಭಾಲ್ಕಿ ತಾಲ್ಲೂಕಿನ ನಿಟ್ಟೂರು ವಸತಿ ಶಾಲೆಯ ಪ್ರಾಚಾರ್ಯರು ಪ್ರತಿಕ್ರಿಯಿಸಿದ್ದಾರೆ.

ಅಧಿಕೃತವಾಗಿ ಇನ್ನೂ ಆದೇಶ ಬಾರದೇ ಇರುವುದರಿಂದ ಕಲಬುರಗಿ ಜಿಲ್ಲೆಯ ವಸತಿಶಾಲೆಗಳಲ್ಲಿ ಘೋಷವಾಕ್ಯವನ್ನು ಬದಲಾಯಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಕ್ಕಳ ಮನಸಲ್ಲೂ ಸಂಘರ್ಷ ಬಿತ್ತಲು ಹುನ್ನಾರ: ಬೊಮ್ಮಾಯಿ

ರಾಜ್ಯ ಸರ್ಕಾರ ವಸತಿ ಶಾಲೆಗಳಲ್ಲಿ ಇದುವರೆಗೂ ಇದ್ದ ಜ್ಞಾನದೇಗುಲವಿದು ಕೈಮುಗಿದು ಬಾ ಎಂಬ ವಾಕ್ಯವನ್ನು ಜ್ಞಾನ ದೇಗುಲವಿದು ಪ್ರಶ್ನೆ ಮಾಡಿ ಎಂದು ಹೇಳುವ ಮೂಲಕ ಮಕ್ಕಳ ಮನಸ್ಸಿನಲ್ಲಿ ಸಂಘರ್ಷ ಬಿತ್ತುವ ಕೆಲಸ ಮಾಡಿಸುತ್ತಿದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

'ಈ ಸರ್ಕಾರ ಸಮಾಜದಲ್ಲಿ ಮಕ್ಕಳಿಂದ ಹಿಡಿದು ಎಲ್ಲರಲ್ಲಿಯೂ ಸಂಘರ್ಷ ಉಂಟು ಮಾಡಿ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ. ಸರ್ಕಾರದ ವಸತಿ ಶಾಲೆಗಳಲ್ಲಿ ಅಕ್ಕಿ ಸಿಗುತ್ತಿಲ್ಲ. ಅದೇ ಕಾರಣಕ್ಕೆ ಖಜಾನೆ ಖಾಲಿ ಆಗಿದೆ ಎಂದು ಹೇಳುತ್ತಿದ್ದೇವೆ. ಅಭಿವೃದ್ಧಿಗೆ ಹಣ ಕೊಡುವುದಿಲ್ಲ. ಹಸಿವು ಮುಕ್ತ ಕರ್ನಾಟಕ ಅಂತ ಬೋರ್ಡ್ ಹಾಕಿಕೊಂಡಿದ್ದಾರೆ. ಮೊದಲು ನಿಮ್ಮ ಶಾಲಾ ಮಕ್ಕಳಿಗೆ ಅನ್ನ ಕೊಡಿ, ವಿದ್ಯೆ ಕೊಡಿ ಅನಗತ್ಯ ಕಿತಾಪತಿಗಳನ್ನು ನಿಲ್ಲಿಸಿ' ಎಂದು ಸುದ್ದಿಗಾರರ ಜತೆ ಮಾತನಾಡಿ ಹೇಳಿದರು.

ಆದೇಶ ಇಲ್ಲದೇ ಬದಲಾವಣೆ ಮಾಡಿದ್ದರೆ ತಪ್ಪು: ಸಚಿವ ಮಧು

ಯಾವುದೇ ಬದಲಾವಣೆ ಮಾಡಬೇಕಾದರೆ ಆದೇಶ ಹೊರಡಿಸಬೇಕು. ಆದೇಶ ಹೊರಡಿಸದೇ ಮಾಡಿದರೆ ತಪ್ಪಾಗುತ್ತದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ವಿದ್ಯೆ ಅಂದರೆ ಸರಸ್ವತಿ. ಕೈ ಮುಗಿದು ಒಳಗೆ ಬಾ ಎನ್ನುವುದು ನಮ್ಮ ಸಂಪ್ರದಾಯ. ಅದರರ್ಥ ಬಿಕ್ಷೆ ಬೇಡುವುದು ಅಂತ ಅಲ್ಲ. ಕೈ ಮುಗಿದು ಒಳಗೆ ಬಂದು ನಿಮ್ಮ ಹಕ್ಕನ್ನು ಪ್ರತಿಪಾದಿಸಿ ಅಂತ ಇದ್ದರೆ ಚೆನ್ನಾಗಿರುತ್ತಿತ್ತು. ಯಾವುದೇ ಕಾರಣಕ್ಕೂ ಕುವೆಂಪು ಅವರಿಗೆ ನಮ್ಮ ಸರ್ಕಾರ ಅವಮಾನ ಮಾಡುವುದಿಲ್ಲ ಎಂದರು.

ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲು ಅಶೋಕ ಆಗ್ರಹ

ವಸತಿ ಶಾಲೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಘೋಷ ವಾಕ್ಯವನ್ನು ಬದಲಿಸಿದ ಅಧಿಕಾರಿ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅಧಿಕಾರಿಗಳು ಸಚಿವರು ಮತ್ತು ಮುಖ್ಯಮಂತ್ರಿಗಳ ಮಾತುಗಳನ್ನೇ ಕೇಳದೆ, ಬೇಕಾಬಿಟ್ಟಿ ಆದೇಶ ಮಾಡುತ್ತಿದ್ದಾರೆ. ಈ ಸರ್ಕಾರ ದಿಕ್ಕು- ದೆಸೆ ಇಲ್ಲದೆ ಎಡಬಿಡಂಗಿಯಾಗಿದ್ದು, ಅಧಿಕಾರಿಗಳ ಕೈಗೆ ಅಧಿಕಾರ ನೀಡಿ ಎಲ್ಲರೂ ಮೋಜು ಮಸ್ತಿಯಲ್ಲಿ ಕಾಲ ಕಳೆಯುತ್ತಿದ್ದಾರೆ ಎಂದು ದೂರಿದರು.

ಉಭಯ ಸದನಗಳಲ್ಲಿ ಗದ್ದಲ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಅಡಿಯಲ್ಲಿರುವ ವಸತಿ ಶಾಲೆಗಳ ಪ್ರವೇಶ ದ್ವಾರದಲ್ಲಿ 'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ' ಎನ್ನುವ ಘೋಷ ವಾಕ್ಯವನ್ನು 'ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸು' ಎಂದು ಬದಲಿಸಲು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ನೀಡಿರುವ ಸೂಚನೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ವಾಕ್ಸಮರಕ್ಕೆ ಕಾರಣವಾಯಿತು.

ಈ ಸೂಚನೆಯನ್ನು ಸರ್ಕಾರ ತಕ್ಷಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ನಡೆಸಿದರು.

ವಿಧಾನ ಪರಿಷತ್‌ನಲ್ಲಿ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ಮುಖ್ಯ ಸಚೇತಕ, ಬಿಜೆಪಿಯ ಎನ್. ರವಿಕುಮಾರ್, 'ಕುವೆಂಪು ಅವರ ಸಾಲಿನ ಪ್ರೇರೇಪಣೆ ಪಡೆದು ಈ ಸಾಲು ಹಾಕಲಾಗಿತ್ತು. ಅದನ್ನು ಬದಲಿಸಿ ಕುವೆಂಪು ಅವರಿಗೆ ಅವಮಾನ ಮಾಡಲಾಗಿದೆ. ಈ ವಿಷಯದ ಕುರಿತು ಚರ್ಚೆಗೆ ಅವಕಾಶ ನೀಡಬೇಕು' ಎಂದು ಪಟ್ಟು ಹಿಡಿದರು. ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಬಿಜೆಪಿ ಸದಸ್ಯರು ಅವರಿಗೆ ದನಿಗೂಡಿಸಿದರು.

'ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶ ಇಲ್ಲ' ಎಂದ ಸಭಾನಾಯಕ ಎನ್.ಎಸ್. ಬೋಸರಾಜ್, ಸಂಬಂಧಿಸಿದ ಸಚಿವರಿಂದ ಉತ್ತರ ಕೊಡಿಸುವ ಭರವಸೆ ನೀಡಿದರು. ಅದಕ್ಕೆ ಸಹಮತ ವ್ಯಕ್ತಪಡಿಸಿದ ಸಭಾಪತಿ ಪೀಠದಲ್ಲಿದ್ದ ತೇಜಸ್ವಿನಿಗೌಡ, 'ಚರ್ಚೆಗೆ ಅವಕಾಶವಿಲ್ಲ. ಬೇರೆ ರೂಪದಲ್ಲಿ ವಿಷಯ ಮಂಡಿಸಿ' ಎಂದು ಸಲಹೆ ನೀಡಿದರು. ಅದಕ್ಕೆ ಒಪ್ಪದ ಬಿಜೆಪಿ ಸದಸ್ಯರು ಸಭಾಪತಿ ಪೀಠದ ಮುಂಭಾಗಕ್ಕೆ ಬಂದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಆರೋಪ– ಪ್ರತ್ಯಾರೋಪ, ವಾಗ್ವಾದ ಮುಂದುವರಿದಾಗ ತೇಜಸ್ವಿನಿಗೌಡ ಕಲಾಪವನ್ನು ಐದು ನಿಮಿಷ ಕಾಲ ಮುಂದೂಡಿಕೆ ಮಾಡಿದರು. ಕಲಾಪ ಮತ್ತೆ ಆರಂಭಗೊಳ್ಳುತ್ತಿದ್ದಂತೆ ಬಿಜೆಪಿ ಸದಸ್ಯರು ಧರಣಿ ಮುಂದುವರೆಸಿದರು. ಆಗ ಸಭಾಪತಿ ಬಸವರಾಜ ಹೊರಟ್ಟಿ ಕಲಾಪವನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಿದರು.

ಕುವೆಂಪು ಅವರಿಗೆ ಅವಮಾನ: ವಿಧಾನ ಸಭೆಯಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಬಿ.ವೈ. ವಿಜಯೇಂದ್ರ, 'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬನ್ನಿ' ಎಂಬ ಕುವೆಂಪುರವರ ರಚನೆಯನ್ನು ವಸತಿ ಶಾಲೆಗಳ ಪ್ರವೇಶ ದ್ವಾರದಲ್ಲಿ ಧ್ಯೇಯ ವಾಕ್ಯವಾಗಿ ಬರೆಯಲಾಗಿತ್ತು. ಈಗ ಅದನ್ನು, 'ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ' ಎಂದು ಬರೆಸಲು ಸೂಚಿಸಲಾಗಿದೆ. ಇದು ರಾಷ್ಟ್ರ ಕವಿ ಕುವೆಂಪು ಅವರಿಗೆ ಈ ಸರ್ಕಾರ ಮಾಡುತ್ತಿರುವ ಅವಮಾನ' ಎಂದರು.

ಸಮಾಜ ಕಲ್ಯಾಣ ಸಚಿವರಿಂದ ಮಂಗಳವಾರ ಉತ್ತರ ಕೊಡಿಸುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸರ್ಕಾರದ ಪರವಾಗಿ ಭರವಸೆ ನೀಡಿದರು. ಬಿಜೆಪಿ ಸದಸ್ಯರು ಅದನ್ನು ಒಪ್ಪಲಿಲ್ಲ. ಕ್ಷಮೆಯಾಚನೆಗೆ ಒತ್ತಾಯಿಸಿ ಗದ್ದಲ ನಡೆಸಿದರು.

ಆಗ ಸಿಟ್ಟಿಗೆದ್ದ ಕೃಷ್ಣ ಬೈರೇಗೌಡ, 'ಕುವೆಂಪು ಅವರ ಪಠ್ಯವನ್ನೇ ಕಿತ್ತು ಹಾಕಿದವರು ನೀವು. ಇನ್ನೂ ಏನೇನೋ ಇದೆ. ಅದನ್ನೆಲ್ಲ ಮಾತಾಡಬೇಕಾಗುತ್ತದೆ' ಎಂದರು.

ಅವರ ಬೆಂಬಲಕ್ಕೆ ನಿಂತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ಕುವೆಂಪು, ಅಂಬೇಡ್ಕರ್, ಫುಲೆ ಎಲ್ಲರಿಗೂ ಅವಮಾನ ಮಾಡಿದ್ದಾರೆ. ಈಗ ಮಾತನಾಡುತ್ತಾರೆ' ಎಂದು ರೇಗಿದರು.'ಏನನ್ನು ಪ್ರಶ್ನೆ ಮಾಡಬೇಕು? ಸರ್ಕಾರ ಇದರ ಪರವಾಗಿ ಇದೆಯಾ?' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಪ್ರಶ್ನಿಸಿದರು.

ಸೂಚನೆಯನ್ನು ಸರ್ಕಾರ ತಕ್ಷಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ನಡೆಸಿದರು.

ಜೆರೋಸಾ ಪ್ರಕರಣ: ವಿಚಾರಣೆ ಆರಂಭಿಸಿದ ಅಧಿಕಾರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಸೇಂಟ್ ಜೆರೋಸಾ ಶಾಲೆಯಲ್ಲಿ ಶಿಕ್ಷಕಿಯೊಬ್ಬರು ತರಗತಿಯಲ್ಲಿ ಪಾಠ ಮಾಡುವಾಗ ಹಿಂದೂ ಧರ್ಮಕ್ಕೆ ಅವಹೇಳನ ಮಾಡಿದ್ದಾರೆ ಎಂಬ ಆರೋಪ ಹಾಗೂ ನಂತರದ ಬೆಳವಣಿಗೆಗಳ ಬಗ್ಗೆ ಐಎಎಸ್ ಅಧಿಕಾರಿ ಆಕಾಶ್ ಶಂಕರ್ ಸೋಮವಾರ ವಿಚಾರಣೆ ಆರಂಭಿಸಿದರು.

ಈ ಪ್ರಕರಣದ ವಿಚಾರಣೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕಲಬುರಗಿ ವಲಯದ ಹೆಚ್ಚುವರಿ ಆಯುಕ್ತರಾಗಿರುವ ಆಕಾಶ್ ಶಂಕರ್ ಅವರನ್ನು ರಾಜ್ಯ ಸರ್ಕಾರ ನೇಮಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದ ಒಟ್ಟು ಬೆಳವಣಿಗೆ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ಅವರು ಸೋಮವಾರ ಪ್ರಾಥಮಿಕ ಮಾಹಿತಿ ಕಲೆಹಾಕಿದರು. ಇಲಾಖೆಯ ಒಬ್ಬೊಬ್ಬ ಅಧಿಕಾರಿಯನ್ನು ಪ್ರತ್ಯೇಕವಾಗಿ ಕರೆಯಿಸಿಕೊಂಡು ವಿಚಾರಣೆ ನಡೆಸಿದರು.

ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಈ ಪ್ರಕರಣದ ಸತ್ಯಶೋಧನೆ ಪ್ರಕ್ರಿಯೆಯನ್ನು ಆರಂಭಿಸಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಾಥಮಿಕ ಮಾಹಿತಿ ಕಲೆಹಾಕಿದ್ದೇನೆ. ಇನ್ನಷ್ಟು ಮಾಹಿತಿ ಕಲೆ ಹಾಕಬೇಕಿದೆ. ಈ ಹಂತದಲ್ಲಿ ವಿಚಾರಣೆ ಕುರಿತು ಏನನ್ನೂ ಹೇಳಲು ಇಷ್ಟಪಡುವುದಿಲ್ಲ. ಎಲ್ಲರೂ ಸಂಪೂರ್ಣ ಸಹಕಾರ ಕೊಡಬೇಕು' ಎಂದರು.

ಆಕಾಶ್ ಶಂಕರ್

'ಎರಡು ದಿನ ಇಲ್ಲೇ ಇದ್ದು, ವಿಚಾರಣೆ ಪೂರ್ಣಗೊಳಿಸಿ ಆದಷ್ಟು ಬೇಗ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿ ವಸ್ತುನಿಷ್ಠ ವರದಿ ಸಲ್ಲಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದರು.

ಪ್ರತಿಭಟನೆ: ಸೇಂಟ್ ಜೆರೋಸಾ ಶಾಲೆಯಲ್ಲಿ ನಡೆದ ಘಟನೆಗೆ ಸಂಬಂಧಿಸಿ ಶಾಸಕರಾದ ವೇದವ್ಯಾಸಕಾಮತ್, ಡಾ. ಭರತ್ ಶೆಟ್ಟಿ ಹಾಗೂ ಇತರ ಮೇಲೆ ದಾಖಲಿಸಿದ ಪ್ರಕರಣ ಹಿಂಪಡೆಯಬೇಕು ಎಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಕಾರ್ಯಕರ್ತರು ಸೋಮವಾರ ಇಲ್ಲಿ ಪ್ರತಿಭಟನೆ ನಡೆಸಿದರು. ಪೊಲೀಸರು ಅವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

'ಕಾಯಕವೇ ಪೂಜೆ' ಪದ್ಯದ ಪೂರ್ಣ ಪಾಠ

ಮಂಗಳೂರು: ಇಲ್ಲಿನ ಸೇಂಟ್ ಜೆರೋಸಾ ಶಾಲೆಯಲ್ಲಿ ಕವಿ ರವೀಂದ್ರನಾಥ ಟ್ಯಾಗೋರ್ ರಚಿಸಿರುವ 'ವರ್ಕ್ ಈಸ್ ವರ್ಷಿಪ್' ಪದ್ಯವನ್ನು ಕಲಿಸುವಾಗ ತರಗತಿಯಲ್ಲಿ ಶಿಕ್ಷಕಿ ಪ್ರಭಾ ಅವರು ಹಿಂದೂ ಧರ್ಮವನ್ನು ನಿಂದಿಸಿದ್ದಾರೆ ಎಂದು ಶಾಲೆಯ ವಿದ್ಯಾರ್ಥಿಗಳ ಪೋಷಕರು ಆರೋಪಿಸಿದ್ದಾರೆ. ಈ ಆರೋಪವನ್ನು ಶಿಕ್ಷಕಿ ಪ್ರಭಾ ಅವರು ಅಲ್ಲಗಳೆದಿದ್ದಾರೆ.

ಈ ಆರೋಪಗಳಿಗೆ ಕಾರಣವಾದ ಏಳನೇ ತರಗತಿಯ ಇಂಗ್ಲಿಷ್ ಪಠ್ಯಪುಸ್ತಕದಲ್ಲಿರುವ ಕವಿ ರವೀಂದ್ರನಾಥ ಟ್ಯಾಗೋರರು ಇಂಗ್ಲಿಷ್‌ನಲ್ಲಿ ರಚಿಸಿದ 'ವರ್ಕ್ ಈಸ್ ವರ್ಷಿಪ್' ಪಠ್ಯದ ಪೂರ್ಣ ಪಾಠ ಇಲ್ಲಿದೆ. (ರಾಜ್ಯ ಪಠ್ಯಕ್ರಮದ 7ನೇ ತರಗತಿ ಪ್ರಥಮ ಭಾಷೆ ಇಂಗ್ಲಿಷ್ ಪಠ್ಯ) 'ಕಾಯಕವೇ ಪೂಜೆ' (ಈ ಪದ್ಯದಲ್ಲಿ ಕವಿಯು ದೇವರು ಮೂರ್ತಿ ಪೂಜೆಯನ್ನು ಇಷ್ಟಪಡುವುದಿಲ್ಲ, ದೇವರಿಗೆ ನಿಜಕ್ಕೂ ಇಷ್ಟವಾಗುವುದು ಕಠಿಣ ಪರಿಶ್ರಮ ಎಂದು ಮೂರ್ತಿಪೂಜೆ ಮಾಡುವವನಿಗೆ ಉಪದೇಶಿಸುತ್ತಾನೆ)

ಮಂತ್ರಘೋಷಗಳನ್ನು, ಭಜನೆಗಳನ್ನು,
ಜಪಮಣಿ ಹಿಡಿದು ಪ್ರಾರ್ಥಿಸುವುದು ಬಿಡು!
ಬಾಗಿಲು ಮುಚ್ಚಿದ ದೇಗುಲದೊಳಗೆ
ಇರುಳ ಮೂಲೆಯಲ್ಲಿ ಒಂಟಿಯಾಗಿ ಕುಳಿತು
ನೀನು ಯಾರ ಪೂಜಿಸುವೆ?
ಕಣ್ತೆರೆದು ನೋಡು, ನಿನ್ನ ದೇವರು ನಿನ್ನ ಮುಂದಿಲ್ಲ!
ದೇವರಿರುವನು ಅಲ್ಲಿ, ಜಡ್ಡುಗಟ್ಟಿದ ಹೊಲವನ್ನು ಉಳುವ ರೈತನೊಡನೆ
ಕಲ್ಲುಗಳನ್ನು ಒಡೆದು ದಾರಿ ಮಾಡುವವನೊಡನೆ,
ಬಿಸಿಲು– ಮಳೆಯಲ್ಲೂ ಅವರೊಡನೆಯೇ ಇರುವನು ದೇವರು
ಮಣ್ಣು ಮೆತ್ತಿದ ಬಟ್ಟೆಯನ್ನುಟ್ಟಿರುವ ದೇವರು
ನಿನ್ನ ಮಡಿಯ ಬಿಡು, ಅವನಂತೆ ಮಣ್ಣಿಗಿಳಿ!
ಮೋಕ್ಷ? ಮೋಕ್ಷವದೆಲ್ಲಿ ಸಿಗುವುದು?
ಸೃಷ್ಟಿಯ ಹೊಣೆಯ ನಮ್ಮೊಡೆಯ ತಾನೇ ಮುದದಿ ವಹಿಸಿರುವಾಗ;
ನಮ್ಮನೆಲ್ಲ ಸದಾ ಪೊರೆವ ಹೊಣೆ ಅವನದಲ್ಲವೇ?
ಜಪ–ತಪವ ತೊರೆ, ಪುಷ್ಪ–ಧೂಪಾರತಿಯ ಬಿಡು!
ಹರಿದ, ಕೊಳಕಾದ ಬಟ್ಟೆಯನುಟ್ಟರೇನಂತೆ?
ದೇವರನು ಕಾಣು, ಹಣೆ ಬೆವರುತ್ತಿದ್ದರೂ,
ಎಂತಹ ಹೆಣಗಾಟವಿದ್ದರೂ ದೇವರೊಡನೆ ನಿಲ್ಲು.
-ರವೀಂದ್ರನಾಥ ಟ್ಯಾಗೋರ್

'ಕಾಯಕವೇ ಪೂಜೆ' ಪದ್ಯದ ಮೂಲ ಇಂಗ್ಲಿಷ್ ಅವತರಣಿಕೆಯ ಪೂರ್ಣ ಪಾಠಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

2012ರಿಂದಲೇ ಪಠ್ಯದಲ್ಲಿದೆ ಪದ್ಯ

ಟ್ಯಾಗೋರರ ಈ ಪದ್ಯವನ್ನು 2012–13ರಿಂದಲೇ ಪಠ್ಯವಾಗಿ ಅಳವಡಿಸಲಾಗಿತ್ತು. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ 2015ರಲ್ಲಿ ಪಠ್ಯಪುಸ್ತಕ ಪುನರ್‌ರಚನೆಗೆ ಬರಗೂರು ರಾಮಚಂದ್ರಪ್ಪ ನೇತೃತ್ವದಲ್ಲಿ ಸಮಿತಿ ರಚಿಸಿದಾಗ ಟ್ಯಾಗೋರರ ಈ ಪದ್ಯವನ್ನು ಸಮಿತಿಯು, ಪದ್ಯವನ್ನು ಬದಲಿಸದೇ ಹಾಗೆಯೇ ಮುಂದುವರಿಸಿತ್ತು. ನಂತರ ಬಂದ ಸಮಿತಿಗಳು ಆ ಪಾಠವನ್ನು ಹಾಗೇ ಉಳಿಸಿ ಕೊಂಡಿದ್ದವು.

ದೂರಿನ ಆಧಾರದಲ್ಲಿ ಶಾಸಕರ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳ ಎದುರು ಪ್ರಚೋದನಾಕಾರಿ ಭಾಷಣ ಮಾಡಿದ್ದ ದೂರಿನ ಅನ್ವಯ ಶಾಸಕರಾದ ವೇದವ್ಯಾಸ ಕಾಮತ್, ಭರತ್ ಶೆಟ್ಟಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಇದರಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಂಗಳೂರಿನ ಶಾಲಾ ಶಿಕ್ಷಕಿಯ ಮೇಲಿನ ಆರೋಪ ಕುರಿತು ತನಿಖೆ ನಡೆಸಲು ಶಾಲಾ ಶಿಕ್ಷಣ ಇಲಾಖೆ ಈಗಾಗಲೇ ಸಮಿತಿ ರಚಿಸಿದೆ. ಶಾಸಕರ ವಿರುದ್ಧ ಪ್ರಕರಣ ದಾಖಲಿಸಿದ ತಕ್ಷಣ ಕಳವಳಪಡುವ ಅಗತ್ಯವಿಲ್ಲ. ಶಿಕ್ಷಣ ಇಲಾಖೆ ಹಾಗೂ ಪೊಲೀಸರ ತನಿಖೆಯ ನಂತರ ಸತ್ಯಾಸತ್ಯತೆ ಹೊರಬರಲಿದೆ ಎಂದರು.ಗೃಹ ಸಚಿವರ ಉತ್ತರಕ್ಕೆ ತೃಪ್ತರಾಗದ ಕೋಟ ಶ್ರೀನಿವಾಸ ಪೂಜಾರಿ, ಭಾರತಿ ಶೆಟ್ಟಿ, ರವಿಕುಮಾರ್, 'ಸರ್ಕಾರಕ್ಕೆ ಇದೆಲ್ಲ ಶೋಭೆ ತರುವುದಿಲ್ಲ. ಬಿಜೆಪಿ ಶಾಸಕರು, ಕಾರ್ಯಕರ್ತರನ್ನೇ ಗುರಿ ಮಾಡಲಾಗುತ್ತಿದೆ. ಬಿಜೆಪಿಯ ಎಲ್ಲ ಶಾಸಕರ ವಿರುದ್ಧ ಎಫ್‌ಐಆರ್ ಹಾಕಿಸಿ, ಜೈಲಿಗೆ ಕಳುಹಿಸಿಬಿಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಸದಸ್ಯರು ಬೆಳಗಾವಿ ವಂಟಮುರಿ ದಲಿತ ಮಹಿಳೆ ಪ್ರಕರಣವನ್ನು ಮಣಿಪುರ ಪ್ರಕರಣದ ಜತೆ ಹೋಲಿಸಿದ್ದಕ್ಕೆ ಪರಮೇಶ್ವರ ಆಕ್ಷೇಪಿಸಿದರು.

ಪುಸ್ತಕಗಳ ನಂಟು; ಮಾನವೀಯತೆಯೇ 'ಗಂಟು'

• ಶ್ಯಾಮಲಾ ಮಾಧವ, ಮುಂಬೈ

ನುಡಿ ನಮನ

ಸಾಹಿತ್ಯ, ಶಿಕ್ಷಣ ಕ್ಷೇತ್ರದಲ್ಲಿ ಮತ್ತು ವೈಚಾರಿಕವಾಗಿ ವಿಶಿಷ್ಟರಾಗಿದ್ದರು ಕೆ.ಟಿ.ಗಟ್ಟಿ ಅವರು. ಸ್ನೇಹ ಸಂಬಂಧಗಳನ್ನು ಉಳಿಸಿಕೊಳ್ಳುವುದರಲ್ಲೂ ಅವರ ಕಾಳಜಿ ಅನನ್ಯವಾಗಿತ್ತು. ದೇವರು, ದಿಂಡರು, ಪೂಜೆ ಪುನಸ್ಕಾರದ ಹಂಗು ಅವರಿಗಿರಲಿಲ್ಲ. ಮಾನವೀಯ ಸಂಬಂಧಗಳು ಮತ್ತು ಪುಸ್ತಕಗಳ ನಂಟೇ ಅವರಿಗೆ ಸಾಕಾಗಿತ್ತು.

'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾದ 'ಶಬ್ದಗಳು' ಕೃತಿಯ ಮೂಲಕ ಓದುಗರಲ್ಲಿ ಸಂಚಲನ ಮೂಡಿಸಿದ ಅವರು ದೂರದ ಇಥಿಯೋಪಿಯಾದಲ್ಲಿದ್ದಾಗಲೂ ಸಾಹಿತ್ಯದ ಒಡನಾಟ ಬಿಡಲಿಲ್ಲ. ಆದ್ದರಿಂದಲೇ 'ಕರ್ಮಣ್ಯೇ ವಾಧಿಕಾರಸ್ತೇ', 'ಅಬ್ರಾಹ್ಮಣ', 'ಯುಗಾಂತರ', 'ಯುದ್ಧ', ಕಾದಂಬರಿಗಳು ಮೂಡಿಬಂದವು.

ತಾಯ್ನಾಡಿಗೆ ಮರಳಿದ ಬಳಿಕ 'ರಾಗಲಹರಿ', 'ಪರುಷ', 'ಸ್ವರ್ಣಮೃಗ', 'ನಿರಂತರ', 'ಕೆಂಪು ಕಳವೆ' ಇತ್ಯಾದಿ ಕಾದಂಬರಿಗಳು ಮೂಡಿಬಂದವು. ಶಿಕ್ಷಣ ಸಂಬಂಧಿ ಕೃತಿಗಳೂ ವೈಚಾರಿಕತೆಯನ್ನು ಉದ್ದೀಪನಗೊಳಿಸುವ ಉತ್ಕೃಷ್ಟ ಸಾಹಿತ್ಯವೂ ಓದುಗರನ್ನು ಚಿಂತನೆಗೆ ಹಚ್ಚಿದವು. ಕವನ ಸಂಕಲನ, ಅನುವಾದ, ಮಕ್ಕಳ ನಾಟಕಗಳನ್ನು ಬರೆದ ಅವರು ತುಳು ಭಾಷೆಯಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಅನುವಾದದ ಮೂಲಕ ಇಂಗ್ಲಿಷ್ ಸಾಹಿತ್ಯದ ಸವಿಯನ್ನೂ ಉಣಿಸಿದ್ದಾರೆ.

'ಶಬ್ದಗಳು' ಕಾದಂಬರಿಯ ಕಥಾನಾಯಕನ ಅದ್ಭುತ ಬುದ್ಧಿ–ಭಾವ ಸಂಘರ್ಷಕ್ಕೆ ಬೆರಗಾಗದವರು ವಿರಳ. ಅಧ್ಯಾಪನವನ್ನು ವೃತ್ತಿಯಾಗಿಸಿಕೊಂಡಿದ್ದ ಅವರು ತಾನೇ ಒಂದು ವಿಶ್ವವಿದ್ಯಾಲಯ ಎನ್ನುವಂತೆ ಬೆಳೆದರು. ಹೀಗಾಗಿ ಅವರ ಕೃತಿಗಳೂ ಪಾಂಡಿತ್ಯಪೂರ್ಣವಾಗಿದ್ದವು. 'ಶಬ್ದಗಳು' ಕೃತಿಯನ್ನು ಓದಿದರೆ ಅದನ್ನು ಬರೆದವರು ಭೌತವಿಜ್ಞಾನಿ ಆಗಿರಬೇಕೆಂದುಕೊಂಡರೆ ಅಚ್ಚರಿ ಇಲ್ಲ. ಭಾಷಾ ವಿಜ್ಞಾನದ ವಿಯಷದಲ್ಲಿ ಅವರ ಪಾಂಡಿತ್ಯ ಅಪಾರ.

ಇದೆಲ್ಲದರ ನಡುವೆ ಅವರ ಜೀವನಪ್ರೀತಿ ಮತ್ತು ಪರರ ಕುರಿತು ಕಾಳಜಿ ವಹಿಸುವ ರೀತಿ ಅನನ್ಯವಾಗಿತ್ತು. 'ಯುಗಾಂತರ'ದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಕೆಲವು ಪ್ರಶ್ನೆಗಳನ್ನು ಮುಂದಿಟ್ಟು ಬರೆದ ಪತ್ರ ಓದಿ ನಮ್ಮ ಮನೆ ಮುಂದೆ 'ಪ್ರತ್ಯಕ್ಷ'ರಾದ ಗಳಿಗೆಯನ್ನು ಮರೆಯಲು ಸಾಧ್ಯವಿಲ್ಲ. ನನ್ನ ಕಂದನ ಕೊನೆಯ ದಿನಗಳಲ್ಲಿ ಪ್ರತಿ ದಿನ ಮೂರು–ನಾಲ್ಕು ಬಾರಿ ಕರೆ ಮಾಡಿ ವಿಚಾರಿಸುತ್ತಿದ್ದ ಅವರ ಸ್ನೇಹಾನುಬಂಧವನ್ನು ಅಳೆಯುವುದು ಹೇಗೆ?

ಕೊನೆಯ ಉಸಿರು ಇರುವ ವರೆಗೂ ಅವರ ಲೇಖನಿ ನಿಲ್ಲದಿರಲಿ ಎಂಬುದು ಅವರ ಸಾಹಿತ್ಯದ ಗಂಧವನ್ನು ಉಂಡವರ ಆಶಯವಾಗಿತ್ತು. ಆದರೆ ಆ ಆಶಯ ಈಡೇರಲಿಲಿಲ್ಲ. 'ಇನ್ನು ಬರೆಯುವುದು ಏನೂ ಇಲ್ಲ, ಬರೆದು ಮುಗಿದಿದೆ' ಎಂಬ ಮಾತು ಈಚೆಗೆ ನಾಲ್ಕು ವರ್ಷಗಳ ಹಿಂದೆ ಅವರಿಂದ ಕೇಳಿದಾಗ ಅವರ ಆತ್ಮೀಯತೆಯಿಂದ ಧನ್ಯಳಾಗಿದ್ದ ನನ್ನ ಹೃದಯವೂ ನೊಂದಿತ್ತು.

ಇಥಿಯೋಪಿಯಾದಿಂದ ಮರಳಿ ಉಜಿರೆಯ 'ವನಸಿರಿ'ಯಲ್ಲಿ ನೆಲೆಸಿದ್ದಾಗ ಸಾಹಿತ್ಯ ಕೃಷಿ, ತೋಟದ ಕೆಲಸದಲ್ಲಿ ಖುಷಿ ಕಾಣುತ್ತಿದ್ದ ಅವರು ವೈಜ್ಞಾನಿಕ ವಿಷಯಗಳ ಬಗ್ಗೆ ಹೊಂದಿದ್ದ ಒಲವು ಬೆರಗು ಮೂಡಿಸುವಂತಿತ್ತು. 'ಕಂಪ್ಯೂಟರ್ ಬಳಕೆಗೆ ಅವರು ಪ್ರೇರಣೆಯಾಗುತ್ತಿದ್ದರು. ಅರ್ಧ ತಾಸಿನಲ್ಲಿ ಕಂಪ್ಯೂಟರ್ ಮೇಲೆ ಆಧಿಪತ್ಯ ಸ್ಥಾಪಿಸಬಹುದು ಎಂದು ಭರವಸೆಯಿಂದ ನುಡಿಯುತ್ತಿದ್ದರು. ಕೊರೊನಾ ಕಾಲದ ನಿರ್ಬಂಧ ಅವರನ್ನು ಅನೇಕ ರೀತಿಯಲ್ಲಿ ಕಾಡಿತ್ತು.

ಭಾಷಾವಿಜ್ಞಾನದ ಮೇಲೆ ಹಿಡಿತವಿದ್ದ ಅವರು ಇಂಗ್ಲಿಷ್ ಉಚ್ಚಾರದ ಬಗ್ಗೆ ಉತ್ತಮ ಜ್ಞಾನ ಹೊಂದಿದ್ದರು. ಕಾದಂಬರಿಗಳಲ್ಲಿ ಜನರ ಹೆಸರಾಗಲೀ, ಸ್ಥಳನಾಮಗಳಾಗಲೀ ಪುನರಾವರ್ತನೆ ಆಗದೇ ಇರುವುದು ಗಮನಾರ್ಹ. ಬಡತನದ ಹಿನ್ನೆಲೆಯಿಂದ ಬಂದ ಅವರ ಬೌದ್ಧಿಕ ಶ್ರೀಮಂತಿಕೆ ಅಪಾರ. ಅವರನ್ನು ಕನ್ನಡ ನಾಡು ಹೇಗೆ ಕಂಡಿತು ಎಂಬ ಬಗ್ಗೆ ಮಾತು ಅನಗತ್ಯ. ಅವರು ಅಂತಹ ವಿಚಾರಗಳ ಬಗ್ಗೆ ಚಿಂತಿಸುತ್ತಿರಲಿಲ್ಲ. ಸಾಹಿತ್ಯವನ್ನಷ್ಟೇ ಉಸಿರಾಡುತ್ತಿದ್ದುದರಿಂದ ಇತರ ವಿಷಯಗಳು ಅವರಿಗೆ ವರ್ಜ್ಯವಾಗಿದ್ದವು.

ಕಾದಂಬರಿಕಾರ ಕೆ.ಟಿ. ಗಟ್ಟಿ ನಿಧನ

ಒಂದನೇ ಪುಟದಿಂದ

ಅನಾರೋಗ್ಯ ಕಾಡಲು ಆರಂಭವಾದ ನಂತರ ಮಂಗಳೂರಿನಲ್ಲಿ ಪುತ್ರನ ಮನೆಯಲ್ಲಿ ವಾಸವಾಗಿದ್ದರು.

ಅವರ ದೇಹವನ್ನು ಕೆಎಂಸಿ ಆಸ್ಪತ್ರೆಗೆ ದಾನ ಮಾಡಲಾಗಿದೆ ಎಂದು ಪುತ್ರ ಸತ್ಯಜಿತ್ ತಿಳಿಸಿದರು.

'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿ ರೂಪದ ಕಾದಂಬರಿಗಳನ್ನು ಬರೆದು ಜನಮಾನಸದಲ್ಲಿ ಸ್ಥಾನ ಪಡೆದಿದ್ದ ಅವರು, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಕುರಿತ ಲೇಖನಗಳನ್ನೂ ಬರೆಯುತ್ತಿದ್ದರು. ಕೆಲಕಾಲ ಇಥಿಯೋಪಿಯಾದಲ್ಲಿ ಮತ್ತು ಉಡುಪಿಯಲ್ಲಿ ಪ್ರಾಧ್ಯಾಪಕರಾಗಿದ್ದರು. 40ಕ್ಕೂ ಹೆಚ್ಚು ಕಾದಂಬರಿಗಳು ಪ್ರಕಟಗೊಂಡಿದ್ದು ಅವರ ನಾಟಕಗಳು ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಮತ್ತು ಪಂಜಾಬಿ ಭಾಷೆಗೆ ಅನುವಾದಗೊಂಡಿವೆ. 'ತೀರ' ಅವರ ಆತ್ಮಕಥೆ.

ಶಿಕ್ಷಕಿ ವಿರುದ್ಧ ಆರೋಪ: ಮಕ್ಕಳ, ಗ್ರಾಮಸ್ಥರ ಪ್ರತಿಭಟನೆ

ಊಟ ತಂದು ಕೊಡದಿದ್ದಕ್ಕೆ ಮಕ್ಕಳಿಗೆ ಥಳಿತ

ಪ್ರಜಾವಾಣಿ ವಾರ್ತೆ

ಕಲಘಟಗಿ (ಧಾರವಾಡ ಜಿಲ್ಲೆ): 'ಮಧ್ಯಾಹ್ನದ ಊಟ ತಂದು ಕೊಡದಿರುವುದಕ್ಕೆ ಸುಜಾತಾ ಸುಣಗಾರ ಎಂಬ ಶಿಕ್ಷಕಿ ಮಕ್ಕಳನ್ನು ಕೊಠಡಿಯಲ್ಲಿ ಕೂಡಿ ಹಾಕಿ, ಮನಸೋಇಚ್ಛೆ ಥಳಿಸಿದ್ದಾರೆ' ಎಂದು ಆರೋಪಿಸಿ ಶಾಲೆ ಎದುರು ಮಕ್ಕಳು ಮತ್ತು ಪಾಲಕರು ಶಿಕ್ಷಕಿ ವಿರುದ್ಧ ಸೋಮವಾರ ಪ್ರತಿಭಟನೆ ನಡೆಸಿದರು.

'ತಾಲ್ಲೂಕಿನ ಜುಂಜನಬೈಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಧ್ಯಾಹ್ನ ಶಿಕ್ಷಕಿ ಸುಜಾತಾ ಸುಣಗಾರ ಅವರು ನಾಲ್ಕನೇ ಮತ್ತು ಐದನೇ ತರಗತಿ ಮಕ್ಕಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಕೋಲಿನಿಂದ ಥಳಿಸಿದರು. ನೋವು ತಾಳಲಾರದೇ ಕೊಠಡಿಯಿಂದ ಮಕ್ಕಳು ಓಡಿಬಂದರು. ಕೆಲವರು ಬಿದ್ದು ಗಾಯಗೊಂಡರು' ಎಂದು ಅವರು ದೂರಿದರು.

'ಘಟನಾ ಸ್ಥಳಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಬಂದು, ಶಿಕ್ಷಕಿ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಶಾಲಾಭಿವೃದ್ಧಿ ಸಮಿತಿ ಸದಸ್ಯರು ಮತ್ತು ಗ್ರಾಮಸ್ಥರು ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಕ್ಷೇತ್ರ ಸಮನ್ವಯಾಧಿಕಾರಿ ಕುಮಾರ ಕೆ.ಎಫ್ ಹಾಗೂ ಶಿಕ್ಷಣ ಸಂಯೋಜಕ ಪುಟ್ಟಪ್ಪ ಭಜಂತ್ರಿ ಅವರು ಮಕ್ಕಳು ಮತ್ತು ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಶಿಕ್ಷಕಿ ಥಳಿಸಿದ್ದಾರೆ ಎಂದು ಆರೋಪಿಸಿ ಕಲಘಟಗಿ ತಾಲ್ಲೂಕಿನ ಜುಂಜನಬೈಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು

ಮುಖ್ಯಾಂಶಗಳು

- ಜುಂಜನಬೈಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಘಟನೆ
- ಮೇಲಧಿಕಾರಿಗಳ ಗಮನಕ್ಕೆ ತಂದು ಕ್ರಮ: ಶಿಕ್ಷಣ ಸಂಯೋಜಕ
- ಶಾಲೆಗೆ ತೆರಳದಂತೆ ಶಿಕ್ಷಕಿಗೆ ಸೂಚನೆ

'ಕೊಠಡಿಯಲ್ಲಿ ಕೂಡಿ ಹಾಕಿ ಶಿಕ್ಷಕಿ ಥಳಿಸಿದ್ದಾರೆ ಎಂಬ ದೂರು ಮಕ್ಕಳು ನೀಡಿದ್ದಾರೆ. ಮಕ್ಕಳನ್ನು ಥಳಿಸಿದ್ದು ಅಪರಾಧ. ಶಿಕ್ಷಕಿ ತಪ್ಪು ಮಾಡಿರುವುದು ಸಾಬೀತಾಗಿದೆ. ಮೇಲಧಿಕಾರಿಗಳ ಗಮನಕ್ಕೆ ತಂದು ಕ್ರಮಕೈಗೊಳ್ಳಲಾಗುವುದು. ಶಾಲೆಗೆ ತೆರಳದಂತೆ ಶಿಕ್ಷಕಿಗೆ ಸೂಚಿಸಲಾಗಿದೆ' ಎಂದು ಭಜಂತ್ರಿ ತಿಳಿಸಿದರು.

GOVERNMENT OF INDIA, DEPARTMENT OF SPACE
INDIAN SPACE RESEARCH ORGANISATION
HUMAN SPACE FLIGHT CENTRE
ANTARIKSH BHAVAN
BENGALURU -560094

CANCELLATION NOTICE

CANCELLATION OF RECRUITMENT FOR THE POST OF DRAUGTSMAN – ELECTRICAL AGAINST ADVERTISEMENT No.HSFC/01/RMT/2019 DATED 24.08.2019

This has reference to the HSFC recruitment Advertisement No.HSFC/01/RMT/2019 dated **24.08.2019** published in the ISRO website www.isro.gov.in dated **24.08.2019** as well as advertised in the other leading Newspapers on **24.08.2019**. It is hereby notified for information of all concerned that the recruitment for the post of Draughtsman – Electrical (Post Code DE01) against **Advertisement No.HSFC/01/RMT/2019** dated **24.08.2019** stands cancelled due to administrative reasons.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ.

ಸಂಖ್ಯೆ:ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಅ.ವಿ.–2/2023–24/1166 ದಿನಾಂಕ:17–02–2024

ತಿದ್ದುಪಡಿ–2, ಶೇಕಡಾವಾರು ಟೆಂಡರ ಅಧಿಸೂಚನೆ.(ಅಲ್ಪಾವಧಿ)
(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ). (ದ್ವಿ ಲಕೋಟೆಯಲ್ಲಿ)

ಸಂಖ್ಯೆ:ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಟೆಂಡರ/2023–24/1051 ದಿನಾಂಕ:24–01–2024
ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಅ.ವಿ.–1/2023–24/1139 ದಿನಾಂಕ:12.02.2024

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ, ವಿಭಾಗದಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಛೇರಿಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಆಹ್ವಾನಿಸಲಾಗಿರುತ್ತದೆ, ವಿವರಗಳು ಈ ಕೆಳಗಿನಂತೆ ಇರುತ್ತವೆ.

ಹಿಂದಿನ ಕಾಲಾವಧಿ: ಕಾಮಗಾರಿಯ ಇಂಡೆಂಟ್ ಸಂ. 1) 698 ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ) 1) Rs.204.703 Crores, ವರೆಗೆ ಇರುತ್ತದೆ. ಇ.ಎಂ.ಡಿ ಮೊತ್ತ Rs. 2.42 Crores ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ :i) ಗುತ್ತಿಗೆದಾರರು ಇ–ಪೋರ್ಟಲ್‌ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 25–01–2024 b) The Last date of Submission of completed tender documents 19-02-2024 @ 16.30Hrs c) Date of Opening of Technical Bid is 20-02-2024 @ 17.00 Hrs & Financial bid is 22-02-2024 @ 17.00 Hrs respectively. All details & information can be had from the office of the under signed during

ಮಾರ್ಪಾಡಿತ ಕಾಲಾವಧಿ: ಕಾಮಗಾರಿಯ ಇಂಡೆಂಟ್ ಸಂ. 1) 698 ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ) 1) Rs.204.703 Crores, ವರೆಗೆ ಇರುತ್ತದೆ. ಇ.ಎಂ.ಡಿ ಮೊತ್ತ Rs. 2.42 Crores ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ :i) ಗುತ್ತಿಗೆದಾರರು ಇ–ಪೋರ್ಟಲ್‌ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 25–01–2024, b) The Last date of Submission of completed tender documents 29-02-2024 @ 16.30Hrs c) Date of Opening of Technical Bid is 01-03-2024 @ 17.00 Hrs & Financial bid is 04-03-2024 @ 17.00 Hrs respectively. All details & information can be had from the office of the under signed during office hours and visit website www.kppp.karnataka.gov.in.

Website www.kppp.karnataka.gov.in. ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ08484–262257 ಸಂಪರ್ಕಿಸುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ

ವಾ.ಸಾ.ಸಂ.ಇ/ಬೀದರ/259–2/ಕೆಎಸ್‌ಎಂಸಿ&ಎ/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಅಪಘಾತ ಮತ್ತು ಆಘಾತ ಎರಡೂ ಒಂದೇ ಬಗೆಯವು. ಅಪರಿಚಿತರು ರಸ್ತೆಯಲ್ಲಿ ಗುದ್ದಿದರೆ ಅದು ಅಪಘಾತ. ಪರಿಚಿತರು ನಂಬಿಕೆಗೆ ಗುದ್ದು ಕೊಟ್ಟರೆ ಅದರಿಂದ ಆಘಾತ, ಅಷ್ಟೇ.

–ರತನ್ ಟಾಟಾ

ಬ್ಯಾಡ್ಮಿಂಟನ್: ಭಾರತದ ಕಿರೀಟಕ್ಕೆ ಮತ್ತೊಂದು ಗರಿ

ಭಾರತದ ಬ್ಯಾಡ್ಮಿಂಟನ್ ಅಂಕಣದಲ್ಲಿ ಈಗ ಸಂಭ್ರಮದ ಹೊನಲು ಹರಿಯುತ್ತಿದೆ. ಮಲೇಷ್ಯಾದ ಶಾ ಆಲಂನಲ್ಲಿ ನಡೆದ ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಭಾರತದ ಮಹಿಳಾ ತಂಡವು ಚಾರಿತ್ರಿಕ ಸಾಧನೆ ಮಾಡಿದೆ. ಇದು, ಒಲಿಂಪಿಯನ್ ಪಿ.ವಿ. ಸಿಂಧು ನಾಯಕತ್ವದ ತಂಡದ ಅಭೂತಪೂರ್ವ ಸಾಧನೆಯಾಗಿದೆ. ಆರು ದಶಕಗಳಿಗೂ ಹೆಚ್ಚಿನ ಇತಿಹಾಸ ಇರುವ ಈ ಟೂರ್ನಿಯಲ್ಲಿ ಭಾರತದ ಪುರುಷ ತಂಡಗಳು ಈವರೆಗೆ ಎರಡು ಬಾರಿ ಕಂಚಿನ ಪದಕ ಗೆದ್ದಿದ್ದವು. ಆದರೆ ಈಗ ಮಹಿಳೆಯರ ಬಳಗವು ಪುರುಷ ತಂಡಗಳಿಗಿಂತ ಎರಡು ಹೆಜ್ಜೆ ಮುಂದೆ ಸಾಗಿದೆ. ವನಿತೆಯರ ಈ ಗೆಲುವು ದೇಶದ ಬ್ಯಾಡ್ಮಿಂಟನ್ ಕ್ರೀಡೆಗೆ ಹೊಸ ಹುರುಪು ತುಂಬಿದೆ. ಇದೇ ಏಪ್ರಿಲ್‌ನಲ್ಲಿ ನಡೆಯಲಿರುವ ಊಬರ್ ಕಪ್‌ನಲ್ಲಿಯೂ ಭಾರತ ಪ್ರಶಸ್ತಿ ಗೆಲ್ಲುವ ನಿರೀಕ್ಷೆ ಗರಿಗೆದರಿದೆ. ಬ್ಯಾಡ್ಮಿಂಟನ್ ಕ್ರೀಡೆಯ 'ವಿಶ್ವಕಪ್' ಎಂದೇ ಊಬರ್ ಕಪ್ ಪ್ರಖ್ಯಾತವಾಗಿದೆ. ಏಷ್ಯಾ ಚಾಂಪಿಯನ್‌ಷಿಪ್ ಗೆಲುವಿನಲ್ಲಿ ಉದಯೋನ್ಮುಖ ಆಟಗಾರ್ತಿಯರು ಮಹತ್ವದ ಕಾಣಿಕೆ ನೀಡಿದರು. ಟೂರ್ನಿಯ ಗುಂಪು ಹಂತದಲ್ಲಿ ಚೀನಾ, ಕ್ವಾರ್ಟರ್ ಫೈನಲ್‌ನಲ್ಲಿ ಹಾಂಗ್‌ಕಾಂಗ್, ಸೆಮಿಫೈನಲ್‌ನಲ್ಲಿ ಜಪಾನ್ ಮತ್ತು ಫೈನಲ್‌ನಲ್ಲಿ ಥಾಯ್ಲೆಂಡ್ ತಂಡಗಳ ಎದುರು ಜಯಿಸಿದ್ದು ಸಣ್ಣ ಸಾಧನೆಯೇನಲ್ಲ. ಈ ಬಳಗದಲ್ಲಿ ಸಿಂಧು ಮತ್ತು ಅಶ್ವಿನಿ ಪೊನ್ನಪ್ಪ ಅವರನ್ನು ಬಿಟ್ಟರೆ ಉಳಿದವರೆಲ್ಲರೂ ಹೊಸ ಪ್ರತಿಭೆಗಳೇ. ಅಶ್ಮಿತಾ ಚಲಿಹಾ, ತನಿಷಾ ಕ್ರಾಸ್ಟೊ, ಟ್ರಿಸಾ ಜೊಲಿ, ಅನ್ಮೋಲ್ ಖರ್ಬ್, ಪ್ರಿಯಾ ಕೊಂಜೆಂಗ್‌ಬಾಮ್, ಶ್ರುತಿ ಮಿಶ್ರಾ, ಗಾಯತ್ರಿ ಗೋಪಿಚಂದ್ ಹಾಗೂ ತನ್ವಿ ಶರ್ಮಾ ಅವರು ಈಗ ಗಮನ ಸೆಳೆದಿರುವ ಆಟಗಾರ್ತಿಯರು. ಅದರಲ್ಲೂ ಥಾಯ್ಲೆಂಡ್ ವಿರುದ್ಧದ ಫೈನಲ್ ಸುತ್ತಿನ ನಿರ್ಣಾಯಕ ಸಿಂಗಲ್ಸ್ ಪಂದ್ಯದಲ್ಲಿ 16 ವರ್ಷದ ಅನ್ಮೋಲ್ ಆಡಿದ ರೀತಿ ಅಮೋಘವಾಗಿತ್ತು. ಆ ಹಣಾಹಣಿಯಲ್ಲಿ ಅವರು ಗೆದ್ದಿದ್ದರಿಂದ ಭಾರತ ಚಾಂಪಿಯನ್ ಆಗಲು ಸಾಧ್ಯವಾಯಿತು.

ಕ್ರಿಕೆಟ್ ಆರಾಧಕರೇ ತುಂಬಿರುವ ಭಾರತದಲ್ಲಿ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಪ್ರತಿಭೆಗಳ ಸೆಲೆ ನಿರಂತರವಾಗಿ ಉಕ್ಕುತ್ತಿರುವುದು ಆಶಾದಾಯಕ

ಈ ವಿಜಯವು ಭಾರತದ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಹೊಸ ಭರವಸೆಯನ್ನು ಹುಟ್ಟುಹಾಕಿದೆ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಸೈನಾ ನೆಹ್ವಾಲ್ ಅವರು ವೃತ್ತಿಪರ ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ಈಗ ಹೆಚ್ಚಿಗೆ ಆಡುತ್ತಿಲ್ಲ. ವಿದಾಯದತ್ತ ಅವರು ಮುಖ ಮಾಡಿದ್ದಾರೆ ಎಂಬ ಮಾತು ಕ್ರೀಡಾವಲಯದಲ್ಲಿ ಕೇಳಿಬರುತ್ತಿದೆ. ಎರಡು ಒಲಿಂಪಿಕ್ ಪದಕ ವಿಜೇತೆ ಮತ್ತು ಮಾಜಿ ವಿಶ್ವ ಚಾಂಪಿಯನ್ ಆಗಿರುವ ಪಿ.ವಿ. ಸಿಂಧು ಅವರೊಬ್ಬರೇ ಈಗ ಮಹಿಳೆಯರ ಸಿಂಗಲ್ಸ್‌ನಲ್ಲಿ ದೇಶದ ಅಭಿಯಾನವನ್ನು ಮುನ್ನಡೆಸುತ್ತಿದ್ದಾರೆ. 28 ವರ್ಷದ ಸಿಂಧು ಈಚೆಗೆ ಗಾಯದ ಸಮಸ್ಯೆಯಿಂದಾಗಿ ನಾಲ್ಕು ತಿಂಗಳು ಆಟದಿಂದ ದೂರ ಉಳಿದಿದ್ದರು. ಈ ಟೂರ್ನಿಯಲ್ಲಿ ಅವರು ಲಯಕ್ಕೆ ಮರಳಿದ್ದು ಸಮಾಧಾನ ತಂದಿದೆ. ಇದೇ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸಿಂಧು ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಸೈನಾ ಮತ್ತು ಸಿಂಧು ಅವರ ಸಾಧನೆಯ ಪರಂಪರೆಯನ್ನು ಮುಂದುವರಿಸುವ ಭರವಸೆಯನ್ನು ಅನ್ಮೋಲ್ ಅವರಂತಹ ಆಟಗಾರ್ತಿಯರು ಮೂಡಿಸಿದ್ದಾರೆ. ಡಬಲ್ಸ್‌ನಲ್ಲಿ ಟ್ರಿಸಾ ಜೋಲಿ, ಗಾಯತ್ರಿ ಗೋಪಿಚಂದ್ ಅವರು ವಿಶ್ವ ರ‍್ಯಾಂಕಿಂಗ್ ಪಟ್ಟಿಯಲ್ಲಿ ನಿರಂತರವಾಗಿ ಪ್ರಗತಿ ತೋರಿಸುತ್ತಿದ್ದಾರೆ. ಈ ಸಾಧನೆಗಳ ಹಿಂದೆ ತಂಡದ ಮುಖ್ಯ ಕೋಚ್ ಪಿ. ಗೋಪಿಚಂದ್ ಹಾಗೂ ನೆರವು ಸಿಬ್ಬಂದಿಯ ಶ್ರಮವೂ ಅಡಗಿದೆ. ವಿದೇಶಿ ಕೋಚ್‌ಗಳು ಮತ್ತು ತಂತ್ರಜ್ಞಾನದ ಬಳಕೆಯಿಂದಾಗಿ ಆಟಗಾರರ ಪ್ರದರ್ಶನದಲ್ಲಿ ಸುಧಾರಣೆ ಕಂಡುಬರುತ್ತಿದೆ. ಫಿಟ್‌ನೆಸ್‌ಗೆ ಹೆಚ್ಚಿನ ಮಹತ್ವ ನೀಡುತ್ತಿರುವುದು ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಹೆಚ್ಚು ಹೆಚ್ಚು ಆಡುತ್ತಿರುವುದರಿಂದ ಆಟಗಾರರ ಸಾಧನೆ ಹುರಿಗಟ್ಟುತ್ತಿದೆ. ಸಾಧಕರ ಸಂಖ್ಯೆ ಹೆಚ್ಚಿದಷ್ಟೂ ಆ ಕ್ರೀಡೆಗಳೂ ಬೆಳೆಯುತ್ತವೆ. ಕ್ರಿಕೆಟ್ ಆರಾಧಕರೇ ತುಂಬಿರುವ ಭಾರತದಲ್ಲಿಯೂ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಪ್ರತಿಭೆಗಳ ಸೆಲೆ ನಿರಂತರವಾಗಿ ಉಕ್ಕುತ್ತಿರುವುದು ಆಶಾದಾಯಕ.

ದಿನದ ಟ್ವೀಟ್

ಬಯಲಿಗೆ ಬರಲಿ

ಎಲ್ಲಿಯವರೆಗೆ ನಿಜವಾದ ಅಪರಾಧಿಗಳಿಗೆ ಶಿಕ್ಷೆ ಆಗುವುದಿಲ್ಲವೋ ಅಲ್ಲಿಯವರೆಗೂ ಪ್ರಜಾಪ್ರಭುತ್ವಕ್ಕೆ ಜಯ ಸಿಗದು. ಯಾರ ಸೂಚನೆಯ ಮೇರೆಗೆ ತಾವು ಹಾಗೆ ಮಾಡಿದ್ದು ಎಂದು ಚುನಾವಣಾಧಿಕಾರಿಯನ್ನು ಸುಪ್ರೀಂ ಕೋರ್ಟ್ ಕೇಳಬೇಕು ಮತ್ತು ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಏಕೆಂದರೆ, ಇಲ್ಲಿ ಅವರು ಒಂದು ದಾಳದಂತೆ ಕಾರ್ಯನಿರ್ವಹಿಸಿದ್ದಾರೆ ಅಷ್ಟೆ. ಇದರಿಂದ ಲಾಭ ಪಡೆಯುವ ರಾಜಕಾರಣಿಗಳೇ ಇದರ ಹಿಂದೆ ಇರುವ ನಿಜವಾದ ಅಪರಾಧಿಗಳು...

(ಚಂಡೀಗಡ ಮೇಯರ್ ಚುನಾವಣೆಯಲ್ಲಿ ತಾವು ಅಕ್ರಮ ಎಸಗಿದ್ದಾಗಿ ಚುನಾವಣಾಧಿಕಾರಿಯು ಸುಪ್ರೀಂ ಕೋರ್ಟ್‌ನಲ್ಲಿ ಒಪ್ಪಿಕೊಂಡಿರುವುದಕ್ಕೆ ಪ್ರತಿಕ್ರಿಯೆ)

ಪವನ್ ಯಾದವ್, ಯುಟ್ಯೂಬರ್

ಕಿಡಿನುಡಿ

ಏನ್ ಕರ್ಮ ಸರ್ ಇದೆಲ್ಲಾ... ನಿಜಕ್ಕೂ ನಾಚಿಕೆಗೇಡು... ಮಕ್ಕಳು ಶಾಲೆಗೆ ಬರುವಂತೆ ಮಾಡಲು ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಜಾರಿಗೊಳಿಸಲಾಯಿತು ಮತ್ತು ಈಗ ವಿಧಾನಸಭಾಧ್ಯಕ್ಷರು ಇಂತಹುದೇ ಕಾರ್ಯವನ್ನು ಶಾಸಕರಿಗಾಗಿ ಮಾಡುತ್ತಿದ್ದಾರೆ... ವಿಪರ್ಯಾಸ.

ನಿರಂಜನ ರಾಜ್ ಅರಸ್

25 ವರ್ಷಗಳ ಹಿಂದೆ

ಶನಿವಾರ, 20-2-1999

• ಪ್ರಧಾನಿ ಬೆಂಬಲಕ್ಕೆ ಮಮತಾ, ಜಯಾ ನಿರ್ಧಾರ

ಚೆನ್ನೈ, ಫೆ. 19 (ಪಿಟಿಐ)– ಈವರೆಗೆ ಆಗಾಗ ಪ್ರಧಾನಿಗೆ ಎಚ್ಚರಿಕೆ ನೀಡುತ್ತಾ ಬಂದಿದ್ದ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಹಾಗೂ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಅವರು ಇನ್ನು ಮುಂದೆ ಪ್ರಧಾನಿ ವಾಜಪೇಯಿ ಅವರ ಕೈ ಬಲಪಡಿಸಲು ನಿರ್ಧರಿಸಿದ್ದಾರೆ.

ಇಂದು ಜಯಲಲಿತಾ ಅವರ ನಿವಾಸದಲ್ಲಿ ಅವರನ್ನು ಪ್ರಥಮ ಬಾರಿಗೆ ಭೇಟಿಯಾಗಿ ಸುಮಾರು 45 ನಿಮಿಷಗಳ ಕಾಲ ಚರ್ಚಿಸಿದ ನಂತರ ಮಮತಾ ಬ್ಯಾನರ್ಜಿ ಅವರು ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದರು.

'ನನ್ನ ಹಿರಿಯಕ್ಕನಂತಿರುವ ಜಯಲಲಿತಾ ಅವರನ್ನು ಅನುಸರಿಸಲು ನಾನು ಉತ್ಸುಕಳಾಗಿದ್ದೇನೆ' ಎಂದು ಮಮತಾ ನುಡಿದರು.

ತಮ್ಮಿಬ್ಬರ ನಡುವಿನ ಬಾಂಧವ್ಯವನ್ನು ಬಲಗೊಳಿಸಲು ಜಯಲಲಿತಾ ಅವರನ್ನು ಭೇಟಿಯಾಗಿದ್ದಾಗಿ ತಿಳಿಸಿದ ಅವರು, ಭೇಟಿಯ ವಿವರಗಳನ್ನು ನೀಡಲು ನಿರಾಕರಿಸಿದರು.

• ರೈತ ವಿರೋಧಿ ನೀತಿಗೆ ದಳ ಗಣ್ಯರ ಎಚ್ಚರಿಕೆ

ಬೆಂಗಳೂರು, ಫೆ. 19– ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟಿಸಲು ಇಂದು ಇಲ್ಲಿ ಜನತಾದಳ ಏರ್ಪಡಿಸಿದ್ದ ರ‍್ಯಾಲಿ ದಳದ ಆಂತರಿಕ ಕಚ್ಚಾಟಕ್ಕೆ ವೇದಿಕೆಯಾಯಿತು. ಗಲಾಟೆ, ಗೊಂದಲಗಳ ನಡುವೆ ಸಚಿವ ಪಿ.ಜಿ.ಆರ್. ಸಿಂಧ್ಯಾ ಅವರ ವಿರುದ್ಧ ತಿರುಗಿದ ಕೆಲವು ಸಭಿಕರು ಅವರತ್ತ ಚಪ್ಪಲಿ ಮತ್ತು ಕಲ್ಲು ತೂರಿದ ಪ್ರಸಂಗ ನಡೆಯಿತು.

ಪ್ರಮುಖ ಒಕ್ಕಲಿಗ ಸಚಿವರ ಗೈರುಹಾಜರಿಯ ನಡುವೆ ನಡೆದ ಈ ರ‍್ಯಾಲಿಯಲ್ಲಿ ಪ್ರಾರಂಭದಿಂದಲೂ ಘರ್ಷಣೆ, ತಳ್ಳಾಟಗಳು ನಡೆದೇ ಇದ್ದವು. ಈ ಅಡೆತಡೆಗಳ ನಡುವೆಯೂ ದಳದ ಹಿರಿಯ ಮುಖಂಡರು ಕೇಂದ್ರದ ರೈತ ವಿರೋಧಿ ನೀತಿಯನ್ನು ಖಂಡಿಸಿ, ರೈತರ ಸಮಸ್ಯೆಯನ್ನು ಬಗೆಹರಿಸದಿದ್ದರೆ ರಾಷ್ಟ್ರದಾದ್ಯಂತ ಹೋರಾಟ ನಡೆಸುವ ಎಚ್ಚರಿಕೆ ನೀಡಿದರು.

50 ವರ್ಷಗಳ ಹಿಂದೆ

ಬುಧವಾರ, 20-2-1974

• ಮುಂಬೈ ಆಚೆ ಸಾಗರ ತಳದಲ್ಲಿ ತೈಲೋದ್ಭವ: ಉತ್ತಮ ನಿಕ್ಷೇಪ ಪತ್ತೆ

ನವದೆಹಲಿ, ಫೆ. 19– ಮುಂಬೈ ಆಚೆ ಕ್ಯಾಂಬೇ ಸಮುದ್ರದಾಳದಲ್ಲಿ ತೋಡಲಾದ ಮೊದಲ ಬಾವಿಯಲ್ಲೇ ಇಂದು ಪೆಟ್ರೋಲಿಯಂ ತೈಲ ಉದ್ಭವಿಸಿತು. ಹದಿಮೂರು ಕೋಟಿ ರೂ. ವೆಚ್ಚದ 'ಸಾಗರ ಸಾಮ್ರಾಟ್' ತೈಲಾನ್ವೇಷಕ ನೌಕೆ ಸಿಬ್ಬಂದಿಯ ಹದಿನಾಲ್ಕು ದಿನಗಳ ಶ್ರಮ ಫಲಿಸಿತು.

ವಿಶ್ವ ತೈಲ ಬಿಕ್ಕಟ್ಟಿನ ಬಿಸಿಗೆ ತಾನೂ ತುತ್ತಾಗಿರುವ ಭಾರತದ ಪಾಲಿಗೆ ಮುಂಬೈ ಬಳಿ ತೈಲೋದ್ಭವವಾಗಿರುವುದು ಸಂತಸ ತಂದ ಸಂಗತಿ.

• 1976ರ ವೇಳೆಗೆ ಹಾಸನ-ಮಂಗಳೂರು ರೈಲು ಮಾರ್ಗ ಪೂರ್ಣ

ನವದೆಹಲಿ, ಫೆ. 19– 1964ನೇ ನವೆಂಬರ್‌ನಲ್ಲಿ ಮಂಜೂರಾದ ಹಾಸನ–ಮಂಗಳೂರು ರೈಲು ಮಾರ್ಗ ಯೋಜನೆಯು 3,587 ಲಕ್ಷ ರೂ. ವೆಚ್ಚದಲ್ಲಿ 1976ನೇ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುವುದೆಂದು ರೈಲ್ವೆ ಖಾತೆ ಉಪಸಚಿವ ಮಹಮದ್ ಷಫಿ ಕುರೇಷ್ ಅವರು ಲೋಕಸಭೆಯಲ್ಲಿ ಇಂದು ತಿಳಿಸಿದರು.

ಅನುಚಿತ ವ್ಯವಹಾರಗಳಿಗೆ ತಡೆಯೊಡ್ಡುವುದೇ ಕೇಂದ್ರದ ಮಾರ್ಗಸೂಚಿ?

ಕೋಚಿಂಗ್ ಕೇಂದ್ರಕ್ಕೆ ಲಗಾಮು

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಒಂದು ಕಾಲದಲ್ಲಿ ಉಪಾಧ್ಯಾಯರ ಮನೆಗಳಿಗೆ ಸೀಮಿತವಾಗಿದ್ದ 'ಟ್ಯೂಷನ್' ಈಗ ಒಂದು ಬೃಹತ್ ಉದ್ಯಮವಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳು ಮಾತ್ರವಲ್ಲ ಐಐಟಿ, ಐಐಎಂನಂತಹ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ಮತ್ತು ಐಎಎಸ್, ಕೆಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಯುವಜನ ಲಕ್ಷಾಂತರ ರೂಪಾಯಿ ಶುಲ್ಕ ನೀಡಿ ಕೋಚಿಂಗ್ ಕೇಂದ್ರಗಳಿಗೆ ಸೇರುತ್ತಿದ್ದಾರೆ.

ಜೆಇಇ, ಎನ್‌ಇಇಟಿ, ಸಿಎಲ್‌ಎಟಿ ಪ್ರವೇಶ ಪರೀಕ್ಷೆಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಶುಲ್ಕವೂ ಅಧಿಕವಾಗಿದೆ. ರಾಜಸ್ಥಾನದ ಕೋಟಾವು 'ಕೋಚಿಂಗ್ ಕಾರ್ಖಾನೆ' ಎಂದೇ ಖ್ಯಾತಿ ಹೊಂದಿದೆ. ಬೆಂಗಳೂರಿನ ವಿಜಯನಗರ ಬಡಾವಣೆ ಅತಿ ಹೆಚ್ಚು ಕೋಚಿಂಗ್ ಕೇಂದ್ರಗಳನ್ನು ಹೊಂದಿದೆ. ದೇಶದ ಕೋಚಿಂಗ್ ವ್ಯವಹಾರದ ಒಟ್ಟು ಮೊತ್ತ ₹ 58.08 ಸಾವಿರ ಕೋಟಿ ಎಂದು ಪುಣೆಯಲ್ಲಿರುವ ಇನ್ಫಿನಿಯಮ್ ಗ್ಲೋಬಲ್ ರಿಸರ್ಚ್ ಸಂಸ್ಥೆ ಅಂದಾಜು ಮಾಡಿದೆ. ಇದು 2028ರ ಹೊತ್ತಿಗೆ ₹ 1.34 ಲಕ್ಷ ಕೋಟಿಗೆ ಏರಿಕೆ ಆಗಬಹುದೆಂದು ಅಂದಾಜು ಮಾಡಲಾಗಿದೆ.

ದೇಶದಾದ್ಯಂತ ವ್ಯಾಪಿಸಿರುವ ಈ ಕೋಚಿಂಗ್ ಕೇಂದ್ರಗಳಲ್ಲಿ ಕೆಲವು ಜವಾಬ್ದಾರಿ ಅರಿತು ಬದ್ಧತೆಯಿಂದ ನಡೆದುಕೊಳ್ಳುತ್ತಿವೆ. ಕೋಚಿಂಗ್ ನೀಡುವ ನೆಪದಲ್ಲಿ ಕೆಲವು ಕೇಂದ್ರಗಳು ಅನುಚಿತವಾಗಿ ವರ್ತಿಸುತ್ತಿವೆ. ಗ್ರಾಹಕ ವೇದಿಕೆಗಳಲ್ಲಿ ಈ ಸಂಬಂಧ ದೂರುಗಳು ಕೂಡ ದಾಖಲಾಗಿವೆ. ಕೋಚಿಂಗ್ ಕೇಂದ್ರಗಳನ್ನು ನಿಯಂತ್ರಿಸಲು ಬಿಗಿಯಾದ ಕಾನೂನು ಇಲ್ಲದ ಕಾರಣ ವಿದ್ಯಾರ್ಥಿಗಳು ಹಣ ಕಳೆದುಕೊಂಡಿದ್ದಾರೆ. ಕೇಂದ್ರಗಳು ಬಿಂಬಿಸಿಕೊಂಡಂತೆ ಉತ್ತಮ ತರಬೇತಿ ಸಹ ದೊರೆಯದ ಕಾರಣ ಅವರ ಅಮೂಲ್ಯ ಸಮಯ ವ್ಯರ್ಥವಾಗಿರುವಂತಹ ನಿದರ್ಶನಗಳೂ ಸಿಗುತ್ತವೆ.

ಉತ್ತಮ ಉಪನ್ಯಾಸಕರು, ಶ್ರೇಷ್ಠ ಮಟ್ಟದ ಪಠ್ಯಸಾಮಗ್ರಿ, ಮಾರ್ಗದರ್ಶನ ಎಲ್ಲವನ್ನೂ ನೀಡಲಾಗುತ್ತದೆ ಎಂದು ಹೇಳಿ ವಿದ್ಯಾರ್ಥಿಗಳನ್ನು ಆಕರ್ಷಿಸಲಾಗುತ್ತದೆ. ಐಐಟಿ, ಐಐಎಂ ಪದವೀಧರರು, ಐಎಎಸ್‌ನಂತಹ ಪರೀಕ್ಷೆಗಳಲ್ಲಿ ಉತ್ತಮ ಸ್ಥಾನ ಗಳಿಸಿದವರು ಪಾಠ ಹೇಳಿಕೊಡುತ್ತಾರೆ, ಒಂದು ತರಗತಿಯಲ್ಲಿ ಕಡಿಮೆ ಸಂಖ್ಯೆಯ ಇಂತಿಷ್ಟೇ ವಿದ್ಯಾರ್ಥಿಗಳಿರುತ್ತಾರೆ, ಪ್ರತಿಯೊಬ್ಬರ ಮೇಲೂ ವೈಯಕ್ತಿಕ ನಿಗಾ ವಹಿಸಲಾಗುತ್ತದೆ ಎಂದೆಲ್ಲ ಪರೀಕ್ಷಾರ್ಥಿಗಳಿಗೆ ವಾಗ್ದಾನ ನೀಡಲಾಗುತ್ತದೆ. ಮೋಡಿ ಮಾಡುವಂತಹ ಕರಪತ್ರಗಳು ನಿಜದ ನೆತ್ತಿಯ ಮೇಲೆ ಹೊಡೆದಂತೆ ಮಾಹಿತಿಗಳನ್ನು ಒಳಗೊಂಡಿರುತ್ತವೆ. ಆದರೆ ವಾಸ್ತವ ಬೇರೆಯೇ ಇರುತ್ತದೆ. ಇಂತಹ ಅನುಚಿತ ವ್ಯವಹಾರವನ್ನು ತಡೆಗಟ್ಟಲು ಪರಿಣಾಮಕಾರಿ ಕಾನೂನು ಇಲ್ಲದೇ ಇರುವುದು ದೊಡ್ಡ ಕೊರತೆಯಾಗಿ ಪರಿಣಮಿಸಿದೆ.

ಕೋಚಿಂಗ್ ಕೇಂದ್ರಗಳ ಹಾವಳಿಯಿಂದ ವಿದ್ಯಾರ್ಥಿಗಳನ್ನು ರಕ್ಷಿಸುವ ಸಲುವಾಗಿ ಕೆಲವು ಪ್ರಯತ್ನಗಳು ನಡೆದಿವೆ. ಈ ಕುರಿತು ಲೋಕಸಭೆಯಲ್ಲಿ ಖಾಸಗಿ ಮಸೂದೆಯೊಂದು ಮಂಡನೆಯಾಗಿತ್ತು. ಕರ್ನಾಟಕ ಸೇರಿದಂತೆ ನಾಲ್ಕೈದು ರಾಜ್ಯಗಳು ಕಡ್ಡಾಯ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ನಿಯಮ ರೂಪಿಸಿ ಅದನ್ನು ಜಾರಿಗೆ ತಂದಿವೆ. ಹೊಸ ಶಿಕ್ಷಣ ನೀತಿಯಲ್ಲಿ ಈ ಸಂಬಂಧವಾಗಿ ಕೆಲವು ಅಂಶಗಳನ್ನು ಕಾಣಬಹುದು. ಕೋಟಾದಲ್ಲಿ ಸಂಭವಿಸುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗಟ್ಟುವ ಬಗ್ಗೆಯೂ ಸರ್ಕಾರ ಗಮನಹರಿಸಿದೆ. ಆದರೆ ಇವು ಯಾವುವೂ ನಿರೀಕ್ಷಿತ ಫಲ ನೀಡಿಲ್ಲ. ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಕೋಚಿಂಗ್ ಕೇಂದ್ರಗಳು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸಿದೆ. ಕೋಚಿಂಗ್ ಕೇಂದ್ರಗಳ ನೋಂದಣಿ, ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವಿಕೆ, ವಿದ್ಯಾರ್ಥಿಗಳ ಸುರಕ್ಷತೆ, ಸರ್ವಾಂಗೀಣ ಬೆಳವಣಿಗೆ ಮತ್ತು ಅವರ ಮಾನಸಿಕ ಸ್ವಾಸ್ಥ್ಯಕ್ಕೆ ಕೈಗೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ಐದು ಅಂಶಗಳನ್ನು ಮಾರ್ಗಸೂಚಿ ಒಳಗೊಂಡಿದೆ.

ಈ ಮಾರ್ಗಸೂಚಿಯ ಅನ್ವಯ, ಪದವೀಧರರಲ್ಲದವರನ್ನು ಪಾಠ ಹೇಳಿಕೊಡಲು ನೇಮಕ ಮಾಡಿಕೊಳ್ಳುವಂತಿಲ್ಲ. ರ‍್ಯಾಂಕ್ ಅಥವಾ ಅಂಕಗಳಿಗೆ ಸಂಬಂಧಿಸಿದಂತೆ ಹಾದಿ ತಪ್ಪಿಸುವ ಜಾಹೀರಾತು ನೀಡುವಂತಿಲ್ಲ. 16 ವರ್ಷಕ್ಕಿಂತ ಮೇಲ್ಪಟ್ಟ ವಿದ್ಯಾರ್ಥಿಗಳನ್ನು ಮಾತ್ರ ಕೋಚಿಂಗ್ ಕೇಂದ್ರಕ್ಕೆ ಸೇರಿಸಿಕೊಳ್ಳಬೇಕು ಎಂದು ಮಾರ್ಗಸೂಚಿ ಹೇಳುತ್ತದೆ. ಕೋಚಿಂಗ್ ಕೇಂದ್ರಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿರುವ ಮಾನಸಿಕ ಸಮಸ್ಯೆ ಮತ್ತು ಆತ್ಮಹತ್ಯೆ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕೋಚಿಂಗ್ ಕೇಂದ್ರದಲ್ಲಿ ಸಮಾಲೋಚನಾ ವ್ಯವಸ್ಥೆ (ಕೌನ್ಸೆಲಿಂಗ್) ಇರಬೇಕೆಂದು ಹೇಳಿದೆ. ಪ್ರತಿಯೊಂದು ಕೋಚಿಂಗ್ ಕೇಂದ್ರವೂ ವೆಬ್‌ಸೈಟ್ ಹೊಂದುವುದು ಕಡ್ಡಾಯವಾಗಿದೆ. ಅದರಲ್ಲಿ ಉಪನ್ಯಾಸಕರ ವಿವರ, ಅವರ ಶಿಕ್ಷಣದ ಮಟ್ಟ, ಹಾಸ್ಟೆಲ್ ಸೌಲಭ್ಯ (ಇದ್ದಲ್ಲಿ), ಎಲ್ಲಕ್ಕಿಂತ ಮುಖ್ಯವಾಗಿ ಶುಲ್ಕದ ವಿವರವನ್ನು ನೀಡಬೇಕಿದೆ.

ಒಂದುವೇಳೆ ವಿದ್ಯಾರ್ಥಿಯು ಅವಧಿ ಪೂರ್ಣಗೊಳ್ಳುವ ಮೊದಲೇ ಅಭ್ಯಾಸ ಮೊಟಕುಗೊಳಿಸಿದರೆ, ಅನುಪಾತದ ಆಧಾರದ ಮೇಲೆ, ಉಳಿದ ಹಣವನ್ನು 10 ದಿನಗಳ ಒಳಗೆ ಮರುಪಾವತಿ ಮಾಡಬೇಕು. ಒಂದು ಕೋರ್ಸ್‌ಗೆ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿದ ನಂತರ ಆ ಶುಲ್ಕದ ಮೊತ್ತವನ್ನು ಹೆಚ್ಚಿಸುವಂತಿಲ್ಲ. ಅಲ್ಲದೆ ಕೋಚಿಂಗ್ ಕೇಂದ್ರದಲ್ಲಿ ಇರಬೇಕಾದ ಮೂಲ ಸೌಕರ್ಯದ ವಿವರಗಳನ್ನೂ ಮಾರ್ಗಸೂಚಿ ಹೊಂದಿದೆ. ಕೋಚಿಂಗ್ ತರಗತಿಗಳ ಅವಧಿ ಒಂದು ದಿನದಲ್ಲಿ ಐದು ಗಂಟೆಗಿಂತ ಹೆಚ್ಚಾಗಿ ಇರಬಾರದು ಹಾಗೂ ತರಗತಿಗಳನ್ನು ಬೆಳಿಗ್ಗೆ ತೀರಾ ಬೇಗ ಅಥವಾ ಸಂಜೆ ತೀರಾ ತಡವಾಗಿ ನಡೆಸಬಾರದೆಂದೂ ಮಾರ್ಗಸೂಚಿ ಹೇಳುತ್ತದೆ.



ಕೋಚಿಂಗ್ ಕೇಂದ್ರಗಳು ನೀಡುವ ಜಾಹೀರಾತಿನಲ್ಲಿ, ತಮ್ಮ ಕೇಂದ್ರದಲ್ಲಿ ಅಭ್ಯಾಸ ಮಾಡಿದವರು 100ಕ್ಕೆ 100ರಷ್ಟು ಅಂಕ ಪಡೆದಿದ್ದಾರೆ, ಐಐಟಿ, ಐಐಎಂನಂತಹ ಪ್ರತಿಷ್ಠಿತ ಸಂಸ್ಥೆಗಳ ಪ್ರವೇಶ ಪರೀಕ್ಷೆಗಳಲ್ಲಿ ಉನ್ನತ ರ‍್ಯಾಂಕ್ ಪಡೆದಿದ್ದಾರೆ ಎಂದೆಲ್ಲ ಹೇಳಿಕೆ ನೀಡಿ ವಿದ್ಯಾರ್ಥಿಗಳನ್ನು ತಮ್ಮ ಕೇಂದ್ರದತ್ತ ಸೆಳೆಯುವ ತಂತ್ರಕ್ಕೆ ಸಂಬಂಧಿಸಿದಂತೆ, ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ಕರಡು ನಿಯಮವನ್ನು ಪ್ರಕಟಿಸಿದೆ. ಕೋಚಿಂಗ್ ಕೇಂದ್ರಗಳ ಜಾಹೀರಾತುಗಳನ್ನು ನಿಯಂತ್ರಿಸುವ ಉದ್ದೇಶವನ್ನು ಈ ನಿಯಮಗಳು ಹೊಂದಿದ್ದು, ಈ ಸಂಬಂಧ ಪ್ರಾಧಿಕಾರವು ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿದೆ.

ಕೋಚಿಂಗ್ ಕೇಂದ್ರಗಳು ನೀಡುವ ಜಾಹೀರಾತು ಮುಖ್ಯ ಅಂಶಗಳನ್ನು ಮುಚ್ಚಿಡಬಾರದೆಂದು ತಿಳಿಸಿರುವುದಲ್ಲದೆ, ರ‍್ಯಾಂಕ್ ಪಡೆದ ವಿದ್ಯಾರ್ಥಿಗಳ ವಿವರವನ್ನು ಆಧಾರವಿಲ್ಲದೆ ಪ್ರಕಟಿಸುವುದನ್ನು ನಿಷೇಧಿಸಿದೆ. ಅಂತಹ ವಿದ್ಯಾರ್ಥಿಗಳಿಂದ ಶುಲ್ಕ ಪಡೆಯಲಾಗಿತ್ತೇ ಅಥವಾ ಉಚಿತವಾಗಿ ತರಬೇತಿ ನೀಡಲಾಗಿತ್ತೇ ಎಂಬುದನ್ನು ಬಹಿರಂಗಪಡಿಸಬೇಕಿದೆ. ಜಾಹೀರಾತುಗಳಲ್ಲಿ ವಿದ್ಯಾರ್ಥಿಗಳು ಇಷ್ಟನೇ ರ‍್ಯಾಂಕ್ ಪಡೆದಿದ್ದಾರೆ ಎಂಬುದಕ್ಕೆ ಸೂಕ್ತ ಆಧಾರ ಇರಬೇಕೆಂದು ಕರಡು ನಿಯಮ ಹೇಳುತ್ತದೆ. ರ‍್ಯಾಂಕ್ ಪಡೆಯಲು ವಿದ್ಯಾರ್ಥಿಗಳು ಮಾಡಿದ ಪ್ರಯತ್ನ ಮತ್ತು ಶ್ರಮವನ್ನು ಕಡೆಗಣಿಸಿ, ಬರೀ ತಮ್ಮ ಕೋಚಿಂಗ್ ಕೇಂದ್ರ ಸೇರಿದ್ದರಿಂದಲೇ ರ‍್ಯಾಂಕ್ ಪಡೆಯುವಂತಾಯಿತು ಎಂಬಂತಹ ಅಭಿಪ್ರಾಯವು ಜನರಲ್ಲಿ ಮೂಡದಂತೆ ನಿಗಾ ವಹಿಸಬೇಕೆಂದು ಸಹ ಕರಡು ಹೇಳುತ್ತದೆ.

ರ‍್ಯಾಂಕ್ ಪಡೆದಿರುವ ವಿದ್ಯಾರ್ಥಿಯ ಅನುಮತಿ ಇಲ್ಲದೆ ಅವರ ಭಾವಚಿತ್ರ ಮತ್ತು ಇತರ ವಿವರಗಳನ್ನು ಜಾಹೀರಾತಿನಲ್ಲಿ ಬಳಸಿಕೊಳ್ಳುವಂತಿಲ್ಲ. ತಮ್ಮ ಕೋಚಿಂಗ್ ಕೇಂದ್ರದಲ್ಲಿ ಅಭ್ಯಾಸ ಮಾಡಿದ ಶೇಕಡ 100ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆತಿದೆ ಎಂದಾಗಲೀ ಅಥವಾ ಪ್ಲೇಸ್‌ಮೆಂಟ್ ದೊರೆಯುತ್ತದೆ ಎಂದಾಗಲೀ ಜಾಹೀರಾತಿನಲ್ಲಿ ಪ್ರಕಟಿಸುವಂತಿಲ್ಲ.

ಇಂತಹ ಮಾರ್ಗಸೂಚಿಗಳ ಜೊತೆಗೆ, ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿ ಪಡೆಯಲು ಮುಂದಾಗುವ ಯುವಜನಾಂಗ ಎಚ್ಚೆತ್ತುಕೊಳ್ಳಬೇಕಾದುದೂ ಅಷ್ಟೇ ಮುಖ್ಯ. ಈ ಅಭ್ಯರ್ಥಿಗಳು ಮುಂದೆ ಉನ್ನತ ಹುದ್ದೆಗಳಿಗೆ ಏರಿ, ದೇಶದ ಆಡಳಿತದ ಸುಸೂತ್ರ ನಿರ್ವಹಣೆಗೆ ಶಾಸಕಾಂಗದೊಂದಿಗೆ ಕೈಜೋಡಿಸುವ ನಿರೀಕ್ಷೆಯುಳ್ಳವರು. ಹೀಗಾಗಿ, ಕೇಂದ್ರಗಳ ಮಾರ್ಗಸೂಚಿ ಪಾಲನೆಯ ಮೇಲೆ ನಿಗಾ ಇಡಬೇಕಾದುದು ಅವರ ಕರ್ತವ್ಯ ಸಹ ಆಗಿರುತ್ತದೆ. ಕೋಚಿಂಗ್ ಕೇಂದ್ರದ ಅವ್ಯವಹಾರಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ, ಗ್ರಾಹಕ ಆಯೋಗಕ್ಕೆ ದೂರು ಸಲ್ಲಿಸುವ ಹೊಣೆಗಾರಿಕೆ ಅವರಿಗಿರುತ್ತದೆ. ಈ ದಿಸೆಯಲ್ಲಿ, ಪ್ರಸ್ತುತ ಜಾರಿಯಾಗಿರುವ ಮಾರ್ಗಸೂಚಿಗೆ ಕಾನೂನಿನ ರೂಪ ಕೊಡುವುದಕ್ಕೆ ವಿದ್ಯಾರ್ಥಿಗಳು ಸಂಘಟಿತರಾಗಬೇಕಾದ ಅಗತ್ಯವಿದೆ.

ಚುರುಮುರಿ

ಒಂದು ಸಿನಿಕಥೆ

• ಲಿಂಗರಾಜು ಡಿ.ಎಸ್.

'ಸಾ, ಈ ಮಲ್ಟಿ ಸ್ಟಾರ್ ಸಿನಿಮಾದಲ್ಲಿ ಸುಮಾರು ಜನ ಹೀರೊಗಳಿರತರೆ. ಓಪನಿಂಗ್ ಸೀನಲ್ಲಿ ಮೇನ್ ಹೀರೊ ಮೋನ ಕಮಲದ ಹೂವಿಡಕಂದು ಬರುವಾಗ ಯಕ್ಕಾಮಕ್ಕ ಸೌಂಡು ಎಫೆಕ್ಟಿರತದೆ. ಜನ ಅಲ್ಲಾಡಿ ಹೋಗಬಕು ಸಾ' ಅಂದ್ರು ನಿರ್ಮಾಪಕರಿಗೆ ಸಿನಿಮಾ ಕತೆ ಹೇಳುತ್ತಿದ್ದ ಡೈರೆಕ್ಟರು.

'ಆಯ್ತು ಕನ್ರೀ, ಮೇನ್ ಹೀರೊ ಏನು ಮಾಡ್ತರೆ?' ನಿರ್ಮಾಪಕರು ಕೇಳಿದರು.

'ಅವರು 'ನಾನು ತಿನ್ನಲ್ಲ, ತಿನ್ನಕ್ಕೆ ಬುಡಲ್ಲ' ಅಂತ ತಮ್ಮ ಸಿಗ್ನೇಚರ್ ಡೈಲಾಗಿನ ನುಡಿಮುದ್ದು ಸಿಡಿಸ್ತರೆ. ಇವರ ಹಿಂಬಾಲಕರು ಅದುನ್ನೇ ರೀಲ್ಸ್ ಮಾಡಿಕ್ಯಂದು 'ಮೋನ, ಮೋನ' ಅಂತ ಕೂಗ್ತಾ ಟ್ರೆಂಡ್‌ಸೆಟ್ ಮಾಡ್ತರೆ'

'ಎರಡನೇ ಹೀರೊ ರಾಗಾ ಕಥೆ?'

'ಸಾ, ಅವರ ಡೈಲಾಗ್ ಡೆಲಿವರಿಯನ್ನ ಡಬ್ಬಿಂಗಲ್ಲಿ ಅಡ್ಜಸ್ಟ್ ಮಾಡಿಕ್ಯಬಕು. ಈಗ ಅವರು ಇಂಡಿಯಾ ಜೋಡಿಸೊ ಯಾತ್ರೆ ಮಾಡಿಕ್ಯಂದು ಮಕ್ಕಳಿಗೆ ತಲೆ ಸವುರದು, ಅಜ್ಜಿದೀರಿಗೆ ಕಾಲಿಗೆ ಬೀಳದ್ರಲ್ಲಿ ಬಿಜಿಯಾಗ್ಯವುರೆ. ಇವರ ಹಿಂಬಾಲಕರು ಹೇಳಿದ ಮಾತು ಕೇಳದಿದ್ರೂ 'ನಮ್ಮದೇ ಗ್ಯಾರಂಟಿ-ಗ್ಯಾರಂಟಿ' ಅಂತ ಹಾಡು ಪ್ರಾಕ್ಟೀಸ್ ಮಾಡ್ತಾವ್ರೆ'

'ಉಳಿದೋರ ಕಥೆ ಹ್ಯಂಗೆ ಡೈರೆಕ್ಟರೆ?'

'ಬಂಗಾಳದ ಅಕ್ಕೋರು ಅವರೇ ಡೈಲಾಗು ಬರಕಬಂದು ಅವರೇ ಡೈರೆಕ್ಷನ್ ಮಾಡಿಕ್ಯತರಂತೆ. ಆನೆ, ಸೈಕಲ್ಲು, ಮಚ್ಚು-ಸುತ್ತಿಗೆ, ಪೊರಕೆ ಹಿಡಿದೋರೂ ಅವ್ರೆ' ನಿರ್ದೇಶಕರು ನಿಟ್ಟುಸಿರುಬಿಟ್ಟರು.

'ಸಿನಿಮಾಕ್ಕೆ ದುಡ್ಡು-ಕಾಸು ಹ್ಯಂಗೆ?' ನಿರ್ಮಾಪಕರು ಡೌಟಲ್ಲಿ ಕೇಳಿದರು.

'ನೀವೇನು ಯದಾರಾಗಬ್ಯಾಡಿ ಸಾ. ದೊಡ್ಡ ದೊಡ್ಡ ಯಾಪಾರಸ್ಥರು ಬಾಂಡು ತಗಂಡು ದುಡ್ಡು ಕೊಟ್ಟೊಯ್ತುರೆ'.

'ಸರಿ ಕನ್ರೀ, ಥಿಯೇಟರ್ ಸಿಗಬೇಕಲ್ಲಪ್ಪ ನಮಗೆ...'

'ಸಾ, ನೀವೇನು ತಲೆ ಕೆಡಿಸಿಗ್ಯಬೇಡಿ. ಮೇನ್ ಹೀರೊ ಮೋನ ಐಡೋರ್ಸಕ್ಕೆ ಥಿಯೇಟರ್ ಬುಕ್ ಮಾಡಿಕ್ಯತಾವ್ರೆ. ಆದರೆ ಸಿನಿಮಾದಲ್ಲಿ ಅವರ ರೀಲ್ಸ್ ಮಾತ್ರ ತೋರಿಸಬೇಕಂತೆ!' ನಿರ್ದೇಶಕರ ಮಾತಿಗೆ ಸ್ಮೃತಿ ತಪ್ಪಿ ಬಿದ್ದರು ನಿರ್ಮಾಪಕರು.

ಸಂಗತ

ಪರೀಕ್ಷೆ ಎಂಬ ಉದ್ವಿಗ್ನ ಸ್ಥಿತಿ!

ಮಕ್ಕಳು ಕಲಿಕೆಯಲ್ಲಿ ಹಿಂದೆ ಬೀಳಲು, ಅವರ ನಡವಳಿಕೆಯಲ್ಲಿ ದಿಢೀರ್ ಬದಲಾವಣೆ ಕಾಣಿಸಿಕೊಳ್ಳಲು ಶಿಕ್ಷಕರು ಮತ್ತು ಪೋಷಕರ ವರ್ತನೆಯೇ ಪ್ರಮುಖ ಕಾರಣ

• ಡಾ. ಮುರಳೀಧರ ಕಿರಣಕೆರೆ

ಆಪ್ತ ಸಲಹೆಗಾಗಿ ಬಂದ ಆ ಮಹಿಳೆ ತಮ್ಮ ಮಾನಸಿಕ ದುಗುಡ ಬಿಚ್ಚಿಡುತ್ತಾ ಜೋರಾಗಿ ಅಳಲು ಆರಂಭಿಸಿದರು. ಅವರಿಗೆ ಒಬ್ಬನೇ ಪುತ್ರ. ಪ್ರತಿಷ್ಠಿತ ಖಾಸಗಿ ಶಾಲೆಯೊಂದರಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿದ್ದಾನೆ. ಮೊದಲೆಲ್ಲಾ ಉತ್ತಮವಾಗಿ ಅಂಕ ಗಳಿಸುತ್ತಿದ್ದವನು ಈಗ ಹಿಂದೆ ಬಿದ್ದಿದ್ದಾನೆ. ಅಭ್ಯಾಸದಲ್ಲಿ ಆಸಕ್ತಿ ತೋರುತ್ತಿಲ್ಲ. ಪೂರ್ವಸಿದ್ಧತಾ ಪರೀಕ್ಷೆಗಳಲ್ಲಂತೂ ಅಂಕಗಳು ತುಂಬಾ ಕಡಿಮೆ ಬಂದಿರುವುದರಿಂದ ಮುಖ್ಯೋಪಾಧ್ಯಾಯರು ಮೂರ್ನಾಲ್ಕು ಬಾರಿ ಆ ಮಹಿಳೆಯನ್ನು ಕರೆಸಿ, ಮಗನ ಕಳಪೆ ಸಾಧನೆಯ ಬಗ್ಗೆ ದೂರಿದ್ದಾರೆ. ಅಲ್ಲದೆ, ಟ್ಯೂಷನ್‌ಗೆ ಹಾಕಿ ಸರಿಯಾಗಿ ಓದಿಸಬೇಕೆಂದು ತಾಕೀತು ಮಾಡಿದ್ದಾರೆ. ಸ್ವಲ್ಪ ಹೆಚ್ಚು-ಕಮ್ಮಿಯಾದರೂ ತಮ್ಮ ಶಾಲೆಗೆ ಶೇ 100 ಫಲಿತಾಂಶ ತಪ್ಪುವುದೆಂಬ ಚಿಂತೆ.

ಹಿಂದಿನ ತರಗತಿಯಲ್ಲೇ ಹೀಗಾಗಿದ್ದರೆ ಟಿ.ಸಿ. ತೆಗೆದುಕೊಂಡು ಹೋಗುವಂತೆ ಒತ್ತಡ ಹೇರಬಹುದಿತ್ತು. ಮುಖ್ಯ ಪರೀಕ್ಷೆ ಹೊಸ್ತಿಲಿನಲ್ಲಿ ನಿಂತಿರುವ ಈ ಹೊತ್ತಿನಲ್ಲಿ ಹಾಗೇನೂ ಮಾಡಲಾಗದು. ಶಿಕ್ಷಕರ ಪ್ರತಿನಿತ್ಯದ ಕಠಿಣ ಎಚ್ಚರಿಕೆಗಳ ಹೊರತಾಗಿಯೂ ಸುಧಾರಣೆ ಕಾಣದಾದಾಗ ಮಗನನ್ನು ಸರಿದಾರಿಗೆ ತರುವಂತೆ ಹೆತ್ತವರ ಮೇಲೆ ಈ ರೀತಿಯ ಒತ್ತಡ ಶುರುವಾಗಿತ್ತು!

'ಸ್ಕೂಲಲ್ಲಿ ಸರ್ಯಾಗಿ ಪಾಠನೇ ಕೇಳಲ್ವಂತೆ. ಅಕ್ಕಪಕ್ಕದ ಹುಡುಗರಿಗೂ ತೊಂದ್ರೆ ಕೊಡ್ತಾನಂತೆ. ಪ್ರತಿದಿನ ಶಿಕ್ಷಕರ ದೂರು. ನಂಗಂತೂ ಕೇಳಿ ಕೇಳಿ ಹುಚ್ಚು ಹಿಡ್ದಂಗೆ ಆಗಿದೆ. ಬೆಳೆದ ಹುಡುಗನಿಗೆ ಎಷ್ಟೂಂತ ಬುದ್ಧಿಮಾತು ಹೇಳೋದು? ನಾವು ಏನು ಅಂದ್ರೂ ಸಿಟ್ ಮಾಡ್ಕೊಂಡು ಕೂಗಾಡ್ತಾನೆ. ಜಾಸ್ತಿ ಬಯ್ಯಕ್ಕೂ ಹೆದ್ರಿಕೆ ಆಗುತ್ತೆ, ಏನಾದ್ರೂ ಹೆಚ್ಚುಕಮ್ಮಿ ಮಾಡ್ಕೊಂಡ್ರೆ ಗತಿ? ಒಂದು ಕಡೆ ಇವನ ಟಾರ್ಚರ್, ಮತ್ತೊಂದು ಕಡೆ ಟೀಚರ್ಸ್ ಟಾರ್ಚರ್. ಈ ಟೆನ್ಷನ್‌ನಲ್ಲಿ ನಂಗೂ ಮೈಗ್ರೇನ್ ಶುರುವಾಗಿದೆ...' ಎನ್ನುತ್ತಾ ಕಣ್ಣೀರು ಹಾಕಿದರು ಆ ತಾಯಿ.

ವಿದ್ಯಾಭ್ಯಾಸದ ಈ ಮಹತ್ವದ ಘಟ್ಟದಲ್ಲಿ ಶಿಕ್ಷಕರು, ಪೋಷಕರ ಅತಿಯಾದ ಒತ್ತಡ, ನಿರೀಕ್ಷೆಗಳನ್ನು ಸಂಭಾಳಿಸಲಾಗದೆ ಆತನ ವರ್ತನೆ ಬದಲಾಗಿತ್ತು. ಹತಾಶೆ, ನಿರಾಸೆಯಿಂದ ಪ್ರತಿಭಟನಾ ಮನಃಸ್ಥಿತಿ ರೂಪುಗೊಂಡಿತ್ತು. ಎಸ್‌ಎಸ್‌ಎಲ್‌ಸಿ, ಪಿಯುಸಿ ಮುಖ್ಯ ಪರೀಕ್ಷೆಗಳು ಹತ್ತಿರ ಬರುತ್ತಿರುವಂತೆಯೇ ಬರೀ ವಿದ್ಯಾರ್ಥಿಗಳಷ್ಟೇ ಅಲ್ಲ ಅವರ ಹೆತ್ತವರೂ ವಿಪರೀತ ಒತ್ತಡ ಅನುಭವಿಸುತ್ತಾರೆ. ಇತ್ತ ಶಿಕ್ಷಕರಿಗೂ ಫಲಿತಾಂಶದ ಟೆನ್ಷನ್. ಅದರಲ್ಲೂ ಕೆಲವು ಖಾಸಗಿ ಶಾಲೆಗಳಲ್ಲಿ ಒತ್ತಡದ್ದು ಮತ್ತೊಂದು ಮಜಲು. ಶೇ 100 ಫಲಿತಾಂಶ, ರ‍್ಯಾಂಕ್, ಗ್ರೇಡ್‌ಗಳಿಗಾಗಿ ತುರುಸಿನ ಪೈಪೋಟಿ. ಉನ್ನತ ಸಾಧನೆಗಾಗಿ ಶಿಕ್ಷಕರ ಮೇಲೆ ವಿಪರೀತ ಒತ್ತಾಯ. ಫಲಿತಾಂಶ ನಿರೀಕ್ಷೆಯಷ್ಟು ಇರದಿದ್ದರೆ ಶಿಕ್ಷಕರ ಇನ್‌ಕ್ರಿಮೆಂಟ್ ಕಟ್, ಒಮ್ಮೊಮ್ಮೆ ಉದ್ಯೋಗಕ್ಕೂ ಸಂಚಕಾರ. ಹಾಗಾಗಿ, ಮಕ್ಕಳ ಸಾಧನೆ ತೃಪ್ತಿಕರವಾಗಿ ಇರದಿದ್ದರೆ ಶಿಕ್ಷಕರು ಗದರುತ್ತಾರೆ. ಸಹಪಾಠಿಗಳ ಎದುರಲ್ಲಿ ಅವಮಾನಿಸುತ್ತಾರೆ. ಪೋಷಕರನ್ನು ಕರೆಸಿ ಸರಿಯಾಗಿ ಓದಿಸುವಂತೆ ಆಗ್ರಹಿಸುತ್ತಾರೆ.

ಶಾಲೆ, ಮನೆಯಲ್ಲಿ ಪದೇಪದೇ ಹೀಯಾಳಿಕೆಗೆ ತುತ್ತಾಗುವ ಮಕ್ಕಳು ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಾರೆ. ಕೆಲವರು ಖಿನ್ನತೆಯತ್ತಲೂ ಜಾರಬಹುದು. ಇನ್ನು ಕೆಲವು ವಿದ್ಯಾರ್ಥಿಗಳು ಭಂಡತನ ಬೆಳೆಸಿಕೊಳ್ಳುತ್ತಾರೆ. ತಮ್ಮನ್ನು ಹೀಗಳೆಯುವ ಶಿಕ್ಷಕರು, ಹೆತ್ತವರಿಗೆ ಬುದ್ಧಿ ಕಲಿಸಲು ಅಭ್ಯಾಸದಿಂದ ದೂರವಾಗುತ್ತಾರೆ. ತಮ್ಮ ಸಹಪಾಠಿಗಳಿಗೂ ವಿವಿಧ ರೀತಿಯಲ್ಲಿ ತೊಂದರೆ ಕೊಡುವುದೂ ಉಂಟು. ಅತ್ತ ಶಾಲೆಯಿಂದಲೂ ಒತ್ತಡ ಇತ್ತ ಬುದ್ಧಿವಾದಕ್ಕೂ ಬಗ್ಗದೆ ದಿನೇ ದಿನೇ ಕಗ್ಗಂಟಾಗುವ ಮಕ್ಕಳು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನರಳುವ ಹೆತ್ತವರು ದೈಹಿಕ, ಮಾನಸಿಕ ತೊಂದರೆಗಳಿಗೆ ತುತ್ತಾಗುತ್ತಿರುವ ವಿದ್ಯಮಾನ ಇತ್ತೀಚೆಗೆ ಸಾಮಾನ್ಯ ಎಂಬಂತಾಗಿದೆ!



ಖಾಸಗಿ ಮತ್ತು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಮನಃಸ್ಥಿತಿಯ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ಸರ್ಕಾರಿ ಶಾಲೆಗಳ ಮಕ್ಕಳ ಮೇಲೆ ಒತ್ತಡದ ಮಟ್ಟ ಅತಿ ಎನಿಸುವಷ್ಟಿಲ್ಲ. ಅವರೊಟ್ಟಿಗೆ ತುಸು ಹೊತ್ತು ಆತ್ಮೀಯವಾಗಿ ಒಡನಾಡಿದರೆ ಸಾಕು ತುಂಬಾ ಖುಷಿಯಿಂದಲೇ ಮಾತಿಗಿಳಿಯುತ್ತಾರೆ. ತಮ್ಮ ಸಂದೇಹ, ಗೊಂದಲಗಳನ್ನು ಪರಿಹರಿಸಿಕೊಳ್ಳಲು ಸ್ಪರ್ಧೆಗಿಳಿಯುತ್ತಾರೆ. ಆದರೆ ಕೆಲವು ಖಾಸಗಿ ಶಾಲೆಗಳ ಮಕ್ಕಳ ಮನಃಸ್ಥಿತಿ ತೀರಾ ವಿಭಿನ್ನ. ಅವರಲ್ಲಿ ಭಯ, ಒತ್ತಡ ಜಾಸ್ತಿ. ಅತೀವ ಆತಂಕದ ಕಾರಣದಿಂದ, ಏನು ಕೇಳಿದರೂ ಬಾಯಿ ಬಿಡರು!

ಮಕ್ಕಳು ಕಲಿಕೆಯಲ್ಲಿ ಹಿಂದೆ ಬೀಳಲು, ಅಭ್ಯಾಸದಲ್ಲಿ ಅನಾಸಕ್ತಿ, ನಿರಾಸಕ್ತಿ ತೋರಲು, ಅವರ ನಡವಳಿಕೆಯಲ್ಲಿ ದಿಢೀರ್ ಬದಲಾವಣೆ ಕಾಣಿಸಿಕೊಳ್ಳಲು ಶಿಕ್ಷಕರು, ಪೋಷಕರ ವರ್ತನೆಯೇ ಪ್ರಮುಖ ಕಾರಣ. ಹದಿಹರೆಯದ ಮಕ್ಕಳನ್ನು ಸದಾ ಗದರುವುದು, ಅವಮಾನ ಮಾಡುವುದು, ಹೀಯಾಳಿಸುವುದು, ಇತರರೊಂದಿಗೆ ಹೋಲಿಸಿ ಹೀಗಳೆಯುವುದು, ನಕಾರಾತ್ಮಕ ಒಡನಾಟವು ಕೀಳರಿಮೆ ಹುಟ್ಟಿಸಿ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ.

ಪ್ರತಿ ಮಗುವೂ ವಿಶಿಷ್ಟ, ವಿಭಿನ್ನ. ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ತಪ್ಪು. ಮಕ್ಕಳಿಗೆ ನಿಜಕ್ಕೂ ಬೇಕಿರುವುದು ಪ್ರೀತಿ, ವಿಶ್ವಾಸ, ಗುರುತಿಸುವಿಕೆ, ಪ್ರಶಂಸೆ, ಹುರಿದುಂಬಿಸುವಿಕೆ, ಪ್ರೋತ್ಸಾಹದ ಮಾತುಗಳು. ಶಾಲೆಯಲ್ಲಾಗಲೀ ಮನೆಯಲ್ಲಾಗಲೀ ಸಕಾರಾತ್ಮಕ ವಾತಾವರಣದಲ್ಲಿ ಬೆಳೆಯುವ ಎಳೆಯರು ಅಭ್ಯಾಸದಲ್ಲಷ್ಟೇ ಅಲ್ಲ ನಡವಳಿಕೆಯಲ್ಲೂ ಉತ್ತಮ ಪ್ರಗತಿ ದಾಖಲಿಸಬಲ್ಲರು.

ವಾಚಕರ ವಾಣಿ

ಭಿನ್ನತೆ ನಡುವೆ ಏಕತೆ!

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಹೇಳುತ್ತಾರೆ– ಆಗ ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ 40 % ಕಮಿಷನ್, ಈಗ ಕಾಂಗ್ರೆಸ್ ನೇತೃತ್ವದ ಸರ್ಕಾರ ಇರುವಾಗಲೂ ಅದೇ 40 % ಕಮಿಷನ್. ಇದರ ತನಿಖೆಗೆಂದೇ ಒಂದು ಕಮಿಷನ್ ನೇಮಿಸಿದರೂ ಪರಿಣಾಮ ಮಾತ್ರ ಹಲ್ಲು ಕಿತ್ತ ಹಾವಿನಂತೆ ಶೂನ್ಯ. ಬಿಜೆಪಿ- ಕಾಂಗ್ರೆಸ್ ನಡುವೆ ಬಹುತೇಕ ವಿಚಾರಗಳಲ್ಲಿ ಭಿನ್ನತೆ, ಆದರೂ... ಭ್ರಷ್ಟಾಚಾರ, ಪಕ್ಷಾಂತರದಲ್ಲಿ ಮಾತ್ರ ಏಕತೆ!

ಕೆ.ಬಸವನಗೌಡ, ಹಗರಿಬೊಮ್ಮನಹಳ್ಳಿ

ಎಲ್ಲವೂ ಬರೀ ಅಧಿಕಾರಕ್ಕಾಗಿ...

'ಕಾಂಗ್ರೆಸ್‌ನ ನಂಬಿದ್ದಕ್ಕೆ ನಮ್ಮ ಕುತ್ತಿಗೆ ಕೊಯ್ದರಲ್ಲ, ಚಾಕು ಹಾಕಿಸಿಕೊಳ್ಳಲು ಅವರ ಜೊತೆ ಇರಬೇಕಿತ್ತಾ?' ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದೇ ಕುಮಾರಸ್ವಾಮಿ ಕೆಲವು ವರ್ಷಗಳ ಹಿಂದೆ 20– 20 ಮ್ಯಾಚ್ ಫಿಕ್ಸ್ ಮಾಡಿ, ತಮ್ಮ ಬ್ಯಾಟಿಂಗ್ ನಂತರ ಬಿಜೆಪಿಯ ಯಡಿಯೂರಪ್ಪ ಅವರಿಗೆ ಬ್ಯಾಟ್ ಮಾಡಲು ಅವಕಾಶವನ್ನೇ ನೀಡದೆ (ಅಧಿಕಾರ ಹಸ್ತಾಂತರಿಸದೆ) 'ಕತ್ತು ಕೊಯ್ದು' ವಚನಭ್ರಷ್ಟ ಎನಿಸಿಕೊಂಡಿದ್ದನ್ನು ರಾಜ್ಯದ ಜನ ಇನ್ನೂ ಮರೆತಿಲ್ಲ. ಆಗ ಯಡಿಯೂರಪ್ಪನವರ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಊಹಿಸಬಹುದಲ್ಲ.

ರಾಜಕೀಯದಲ್ಲಿ ಶಾಶ್ವತ ಶತ್ರುಗಳೂ ಇಲ್ಲ, ಶಾಶ್ವತ ಮಿತ್ರರೂ ಇಲ್ಲ, ಎಲ್ಲವೂ ಬರೀ ಅಧಿಕಾರಕ್ಕಾಗಿ ಎಂಬುದು ಜನಸಾಮಾನ್ಯರಿಗೂ ಅರ್ಥವಾಗಿದೆ. ರಾಜಕಾರಣಿಗಳ ಪರಸ್ಪರ ಹೊಗಳಿಕೆ ಹಾಗೂ ತೆಗಳಿಕೆಗಳಿಗೆ ಜನ ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟಿದ್ದಾರೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಹತ್ತು ವರ್ಷಗಳ ಸಾಧನೆ ಸ್ಪಷ್ಟಪಡಿಸಲಿ

ಅಭಿವೃದ್ಧಿ ಹೊಂದಿದ ಭಾರತವನ್ನು ರೂಪಿಸುವ ಗುರಿಯನ್ನು ಸಾಧಿಸಲು ಬಿಜೆಪಿಯು ಭಾರಿ ಬಹುಮತದಿಂದ ಅಧಿಕಾರಕ್ಕೆ ಮರಳುವುದು ಅಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿರುವುದು ವರದಿಯಾಗಿದೆ (ಪ್ರ.ವಾ., ಫೆ. 19). ಆದರೆ ಹಿಂದಿನ 10 ವರ್ಷಗಳಲ್ಲಿ ಏನೇನು ಅಭಿವೃದ್ಧಿ ಮಾಡಲಾಗಿದೆ ಎಂಬ ಬಗ್ಗೆ ನಿಖರವಾದ ಮಾಹಿತಿಯನ್ನೇ ಅವರು ನೀಡಿಲ್ಲ. ಮೂರನೇ ಬಾರಿಗೆ ಅಧಿಕಾರ ಕೇಳುತ್ತಿರುವುದು ಅಧಿಕಾರವನ್ನು ಅನುಭವಿಸಲು ಅಲ್ಲ, ದೇಶಕ್ಕಾಗಿ ದುಡಿಯಲು ಎಂದಿರುವ ಮೋದಿ ಅವರು, ಕೋಟ್ಯಂತರ ಜನರಿಗೆ ಮನೆಗಳನ್ನು ನಿರ್ಮಿಸಿಕೊಟ್ಟಿರುವುದಾಗಿ, 25 ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಮುಕ್ತ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ, ಹಸಿವಿನ ಸೂಚ್ಯಂಕಕ್ಕೆ ಸಂಬಂಧಿಸಿದಂತೆ ವಿವಿಧ ರಾಷ್ಟ್ರಗಳ ಪಟ್ಟಿಯಲ್ಲಿ ಪ್ರತಿವರ್ಷ ಭಾರತದ ಸ್ಥಾನ ಕುಸಿಯುತ್ತಲೇ ಇದೆ.

ಅಯೋಧ್ಯೆಯಲ್ಲಿನ ರಾಮ ಮಂದಿರವನ್ನು 1,000 ವರ್ಷಗಳ ರಾಮರಾಜ್ಯದ ಆರಂಭವೆಂದು ಕರೆಯಲಾಗಿದೆ. ಹಾಗಾದರೆ ಹಿಂದಿನ 10 ವರ್ಷಗಳಲ್ಲಿ ಇದ್ದದ್ದು ಯಾವ ರಾಜ್ಯ ಎಂಬ ಬಗ್ಗೆ ಮತದಾರರಲ್ಲಿ ಗೊಂದಲ ಮೂಡುತ್ತದೆ. ಇಂತಹ ಅಸ್ಪಷ್ಟ ಮಾಹಿತಿ ನೀಡುವ ಬದಲಾಗಿ, ಈ ಹತ್ತು ವರ್ಷಗಳಲ್ಲಿ ರೈತರು, ಕೂಲಿ ಕಾರ್ಮಿಕರಿಗೆ ಏನೇನು ನಿರ್ದಿಷ್ಟ ಸೌಲಭ್ಯ ಒದಗಿಸಲಾಗಿದೆ ಹಾಗೂ ಉದ್ಯೋಗ, ಶಿಕ್ಷಣ, ಆರೋಗ್ಯ ಸುಧಾರಣೆಯಲ್ಲಿ ಏನೇನು ನಿರ್ದಿಷ್ಟ ಸಾಧನೆ ಮಾಡಲಾಗಿದೆ ಎಂಬ ಬಗ್ಗೆ ಮತದಾರರಿಗೆ ಸ್ಪಷ್ಟ ಮಾಹಿತಿ ನೀಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ವಿಪರ್ಯಾಸ

ಮುಂದಿನ ನೂರು ದಿನಗಳು
ನಿರ್ಣಾಯಕವಂತೆ,
ಮಳೆ, ಬೆಳೆಗೆ ಅಲ್ಲ,
ಮತ್ತೆ ಯಾರಿಗೆ?
ಚುನಾವಣಾ ತಯಾರಿಗೆ!

ಮಹಾಂತೇಶ ಮಾಗನೂರ
ಬೆಂಗಳೂರು

₹ 10ರ ನಾಣ್ಯ: ಕರ್ನಾಟಕದಲ್ಲಷ್ಟೇ ಸಮಸ್ಯೆ ಏಕೆ?

ಭಾರತೀಯ ರಿಸರ್ವ್ ಬ್ಯಾಂಕ್ ಇದುವರೆಗೆ 14 ನಮೂನೆಯ ₹ 10 ಮುಖಬೆಲೆಯ ನಾಣ್ಯಗಳನ್ನು ಮುದ್ರಿಸಿ ಸಾರ್ವಜನಿಕ ಚಲಾವಣೆಗೆ ಬಿಡುಗಡೆ ಮಾಡಿದೆ. ಯಾವುದೇ ನಮೂನೆಯ ನಾಣ್ಯವನ್ನು ಅಮಾನ್ಯ ಮಾಡಿಲ್ಲ. ಆದರೂ ರಾಜಕೀಯ ದುರುದ್ದೇಶದಿಂದ ಕೆಲವು ಕಿಡಿಗೇಡಿಗಳು ₹ 10ರ ನಾಣ್ಯಗಳು ಬ್ಯಾನ್ ಆಗಿವೆಯೆಂಬ ಸುಳ್ಳು ಸುದ್ದಿಯನ್ನು ಹಬ್ಬಿಸಿದ ಪರಿಣಾಮವಾಗಿ, ಸಾರ್ವಜನಿಕರು ಈ ನಾಣ್ಯಗಳನ್ನು ಸ್ವೀಕರಿಸಲು ಹಿಂದೇಟು ಹಾಕುತ್ತಿರುವುದು ಹಲವು ವರ್ಷಗಳಿಂದಲೂ ಮುಂದುವರಿದಿದೆ. ಈ ನಾಣ್ಯಗಳನ್ನು ವಹಿವಾಟಿನಲ್ಲಿ ಬಳಸಬೇಕೆಂದು, ಸ್ವೀಕರಿಸದಿರುವವರ ವಿರುದ್ಧ ಪೊಲೀಸರಿಗೆ ದೂರು ನೀಡಬಹುದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಹಲವು ಬಾರಿ ತಿಳಿಸಿದೆ. ಆದರೂ ಜನರ ಮನಃಸ್ಥಿತಿ ಬದಲಾಗಿಲ್ಲ. ಗ್ರಾಹಕರು ಈ ನಾಣ್ಯಗಳನ್ನು ಬ್ಯಾಂಕ್‌ಗಳಲ್ಲಿ ಜಮೆ ಮಾಡುವುದು ಬ್ಯಾಂಕ್‌ಗಳಿಗೆ ಹೊರೆಯಾಗಿ ಪರಿಣಮಿಸಿದೆ. ಇತ್ತೀಚೆಗೆ ನಾನು ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕೇರಳ ಪ್ರವಾಸ ಮಾಡಿದಾಗ, ₹ 10ರ ನಾಣ್ಯಗಳ ಚಲಾವಣೆಯಲ್ಲಿ ಯಾವುದೇ ಸಮಸ್ಯೆ ಕಾಣಲಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಈ ವಿಷಯದಲ್ಲಿ ಜನ ಹಿಂದೇಟು ಹಾಕುತ್ತಿದ್ದಾರೆ.

ಹತ್ತು ರೂಪಾಯಿಯ ನಾಣ್ಯಗಳನ್ನು ಸ್ವೀಕರಿಸದಿದ್ದರೆ ಅಂಥವರ ವಿರುದ್ಧ ರಾಷ್ಟ್ರದ್ರೋಹದ ಪ್ರಕರಣ ದಾಖಲಿಸುವುದಾಗಿ ಏಳು ವರ್ಷಗಳ ಹಿಂದೆ ಉತ್ತರಪ್ರದೇಶ ಸರ್ಕಾರ ಎಚ್ಚರಿಕೆ ನೀಡಿದ್ದರಿಂದ ಅಲ್ಲಿ ಈ ನಾಣ್ಯಗಳ ಚಲಾವಣೆ ಅಬಾಧಿತವಾಗಿದೆ. ₹ 10ರ ನಾಣ್ಯಗಳನ್ನು ಸಿಬ್ಬಂದಿಯು ಪ್ರಯಾಣಿಕರಿಂದ ಸ್ವೀಕರಿಸುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಜನವರಿ ತಿಂಗಳಲ್ಲಿ ಸುತ್ತೋಲೆಯನ್ನು ಸಹ ಹೊರಡಿಸಿದೆ. ಆದರೂ ಬಸ್‌ಗಳಲ್ಲಿ ಈ ನಾಣ್ಯಗಳು ಚಲಾವಣೆಯಾಗುತ್ತಿರುವುದು ಗಮನಕ್ಕೆ ಬಂದಿಲ್ಲ. ಚಲಾವಣೆಯಿಂದ ಹಿಂಪಡೆಯದ ನಮ್ಮ ದೇಶದ ಎಲ್ಲ ಮುಖಬೆಲೆಯ ನಾಣ್ಯ, ನೋಟುಗಳಿಗೆ ಎಲ್ಲ ರಾಜ್ಯಗಳೂ ಸಮಾನ ಮನ್ನಣೆ ನೀಡಬೇಕು. ಆದರೆ, ಕರ್ನಾಟಕದಲ್ಲಿ ಮಾತ್ರ ₹ 10ರ ನಾಣ್ಯಗಳ ಚಲಾವಣೆಯು ಅನಧಿಕೃತವಾಗಿ ಸ್ಥಗಿತಗೊಂಡಿರುವುದು ದುರದೃಷ್ಟಕರ. ಈ ನಾಣ್ಯಗಳನ್ನು ಚಲಾವಣೆಯಲ್ಲಿ ಇರಿಸುವ ದಿಸೆಯಲ್ಲಿ ಸಂಬಂಧಪಟ್ಟವರು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಮನ್ಸ್ ಮತ್ತು ಬಂಧನದ ನಡುವೆ ಹಲವು ನಿಯಮಗಳು

ಜಾರಿ ನಿರ್ದೇಶನಾಲಯ

● ಸುಕೃತ ಎಸ್.

‘ಜಾರಿ ನಿರ್ದೇಶನಾಲಯವು ನನಗೆ ಸಮನ್ಸ್ ನೀಡುತ್ತಿರುವುದು ಕಾನೂನುಬಾಹಿರವಾಗಿದೆ’ ಎಂದು ದೆಹಲಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ ಸಂಚಾಲಕ ಆಗಿರುವ ಅರವಿಂದ್ ಕೇಜ್ರಿವಾಲ್ ಅವರು ಸೋಮವಾರ ಮತ್ತೊಮ್ಮೆ ಹೇಳಿದ್ದಾರೆ. ದೆಹಲಿಯ ಅಬಕಾರಿ ನೀತಿಗೆ ಸಂಬಂಧಿಸಿ ಕೇಜ್ರಿವಾಲ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ.ಡಿ.) ಆರು ಬಾರಿ ಸಮನ್ಸ್ ನೀಡಿದೆ. ಕೇಜ್ರಿವಾಲ್ ಅವರು ಒಮ್ಮೆಯೂ ಇ.ಡಿ. ಎದುರು ವಿಚಾರಣೆಗೆ ಹಾಜರಾಗಿಲ್ಲ. ಸಮನ್ಸ್ ನೀಡಿರುವ ಕುರಿತು ಅವರು ಇ.ಡಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿ ಪತ್ರ ಬರೆಯುತ್ತಲೇ ಇದ್ದಾರೆ. ಹಾಗಾದರೆ, ಇ.ಡಿ. ನೀಡಿರುವ ಸಮನ್ಸ್ ಅನ್ನು ಎಷ್ಟು ಬಾರಿ ತಿರಸ್ಕರಿಸಬಹುದು? ಹಲವು ಬಾರಿ ಸಮನ್ಸ್ ಅನ್ನು ತಿರಸ್ಕರಿಸಿದರೆ ಏನಾಗುತ್ತದೆ?

ಸಂಬಂಧಿತ ಕಾನೂನಿನಲ್ಲಿ ಈ ಯಾವುದಕ್ಕೂ ನಿಖರವಾದ ಉತ್ತರವಿಲ್ಲ. ಯಾವುದೇ ಪ್ರಕರಣದಲ್ಲಿ ಹಣವು ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದಾದರೆ, ಆ ಪ್ರಕರಣವನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿ ವಿಚಾರಣೆ ನಡೆಸಲಾಗುತ್ತದೆ. ಈ ಕಾಯ್ದೆಯ ಸೆಕ್ಷನ್ 50(2)ರ ಅನ್ವಯ ಇ.ಡಿ ಅಧಿಕಾರಿಗಳು ವ್ಯಕ್ತಿಯೊಬ್ಬರಿಗೆ ಸಮನ್ಸ್ ನೀಡಬಹುದು. ಇದೇ ಕಾಯ್ದೆಯ ಸೆಕ್ಷನ್ 19 (1)ರಲ್ಲಿ ವ್ಯಕ್ತಿಯನ್ನು ಬಂಧಿಸುವ ಅಧಿಕಾರವನ್ನು ಇ.ಡಿ. ಅಧಿಕಾರಿಗಳಿಗೆ ನೀಡಲಾಗಿದೆ. ಈ ಯಾವುದೇ ಸೆಕ್ಷನ್‌ಗಳಲ್ಲೂ ಇ.ಡಿ. ಅಧಿಕಾರಿಗಳು ಎಷ್ಟು ಬಾರಿ ಸಮನ್ಸ್ ನೀಡಬಹುದು ಅಥವಾ ಇಷ್ಟೇ ಬಾರಿ ಸಮನ್ಸ್ ನೀಡಬೇಕು ಎಂಬಂಥ ಯಾವುದೇ ವಿವರಣೆಯನ್ನು ನೀಡಿಲ್ಲ. ಇನ್ನು ಬಂಧನದ ಕುರಿತು ಚರ್ಚಿಸುವ ಸೆಕ್ಷನ್ 19 (1)ರಲ್ಲಿಯೂ ಯಾವಾಗ ಬಂಧನ ಮಾಡಬೇಕು? ಒಂದು ವೇಳೆ ಇಂತಿಷ್ಟು ಸಮನ್ಸ್ ನೀಡಿದರೂ ವ್ಯಕ್ತಿಯು ವಿಚಾರಣೆಗೆ ಹಾಜರಾಗದೇ ಇದ್ದರೆ ಆಗ ಬಂಧಿಸಬಹುದು ಎಂಬುದನ್ನೂ ವಿವರಿಸಿಲ್ಲ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಸಾಕ್ಷ್ಯಗಳು ಇದ್ದರೆ, ಜಾರಿ ನಿರ್ದೇಶನಾಲಯವು ಅಂತಹ ವ್ಯಕ್ತಿಯನ್ನು ನೇರವಾಗಿ ಬಂಧಿಸಬಹುದು. ಬಂಧನಕ್ಕೂ ಮುನ್ನ ಆ ವ್ಯಕ್ತಿಗೆ ಅಧಿಕಾರಿಗಳು ಕಾರಣಗಳನ್ನು ಒದಗಿಸಬೇಕಿಲ್ಲ. ಬಂಧನದ ನಂತರ ಒದಗಿಸಿದರೆ ಸಾಕು. ಆದರೆ ಬಂಧನಕ್ಕೆ ಅರ್ಹವಾದ ಸೆಕ್ಷನ್‌ಗಳ ಅಡಿಯಲ್ಲಿ (ಪಿಎಂಎಲ್ಎ ಕಾಯ್ದೆಯ ವಿವಿಧ ಸೆಕ್ಷನ್‌ಗಳು) ಪ್ರಕರಣ ದಾಖಲಾಗಿರಬೇಕು. ಮೊದಲೇ ಮಾಹಿತಿ ಒದಗಿಸಿದೆಯೂ ಬಂಧಿಸಲು ಅವಕಾಶವಿರುವ ಕಾರಣಕ್ಕೇ, ಜಾರಿ ನಿರ್ದೇಶನಾಲಯಕ್ಕೆ ಇರುವ ಈ ಅಧಿಕಾರದ ಬಗ್ಗೆ ಅಪಸ್ವರವಿದೆ. ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಬಂಧನದಲ್ಲಿರುವ ಎಎಪಿಯ ಹಲವು ನಾಯಕರ ಬಂಧನವೂ ಇದೇ ರೀತಿ ನಡೆದಿತ್ತು. ಈಗ ಎಎಪಿ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೂ ಜಾರಿ ನಿರ್ದೇಶನಾಲಯವು ಸಮನ್ಸ್ ನೀಡುತ್ತಲೇ ಇದೆ. ಅವರು ಸಮನ್ಸ್ ಅನ್ನು ಸ್ವೀಕರಿಸುತ್ತಲೇ ಇಲ್ಲ. ತಮ್ಮನ್ನು ವಿಚಾರಣೆಗೆಂದು ಕರೆದು, ನಂತರ ಬಂಧಿಸುವ ಯೋಜನೆ ಇದು ಎಂದು ಕೇಜ್ರಿವಾಲ್ ಆರೋಪಿಸುತ್ತಲೇ ಇದ್ದಾರೆ.

ಇದೇ ರೀತಿ ಬಂಧನ ನಡೆದಿದ್ದ ಪ್ರಕರಣಗಳಲ್ಲಿ, ಅಂತಹ ಬಂಧನವನ್ನು ಅಮಾನ್ಯಗೊಳಿಸಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ವಿಚಾರಣೆಗೆಂದು ಕರೆದು (ಪಿಎಂಎಲ್ಎ ಸೆಕ್ಷನ್ 50ರ ಅಡಿಯಲ್ಲಿ), ಬಂಧಿಸುವುದು ಸರಿಯಲ್ಲ. ಬಂಧಿಸುವುದು ಅಗತ್ಯವಾಗಿದ್ದರೆ, ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲೇ ಬಂಧಿಸಿ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

ಹಲವು ಬಾರಿ ಸಮನ್ಸ್ ನೀಡಿದ ಮೇಲೂ ವ್ಯಕ್ತಿಯು ವಿಚಾರಣೆಗೆ ಹಾಜರಾಗದೇ ಇದ್ದರೆ, ಜಾರಿ ನಿರ್ದೇಶನಾಲಯವು ಕೋರ್ಟ್ ಮೆಟ್ಟಿಲೇರುತ್ತದೆ. ವಿಚಾರಣೆಗೆ ಸಹಕರಿಸುತ್ತಿಲ್ಲ ಆದ್ದರಿಂದ ವ್ಯಕ್ತಿಯನ್ನು ಬಂಧಿಸಲು, ಜಾಮೀನುರಹಿತ ಬಂಧನ ವಾರೆಂಟ್ ಜಾರಿ ಮಾಡುವಂತೆ ನ್ಯಾಯಾಲಯವನ್ನು ಕೋರಬಹುದು. ಕೇಜ್ರಿವಾಲ್ ಪ್ರಕರಣದಲ್ಲೂ ಇ.ಡಿ ಅಧಿಕಾರಿಗಳು ದೆಹಲಿ ಜಿಲ್ಲಾ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿದೆ. ಇದೇ ಕಾರಣಕ್ಕಾಗಿಯೇ ಕೇಜ್ರಿವಾಲ್ ಅವರು ‘ನ್ಯಾಯಾಲಯದ ಆದೇಶ ಬರುವವರೆಗೂ ಕಾಯಿರಿ. ಪದೇ ಪದೇ ಸಮನ್ಸ್ ನೀಡಬೇಡಿ’ ಎಂದು ಸೋಮವಾರ ಹೇಳಿದ್ದಾರೆ.

2023ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪೊಂದನ್ನು ನೀಡಿತ್ತು. ‘ವಿಚಾರಣೆಗೆ ಸಹಕರಿಸುತ್ತಿಲ್ಲ ಎನ್ನುವ ಒಂದೇ ಕಾರಣಕ್ಕೆ ವ್ಯಕ್ತಿಯೊಬ್ಬರನ್ನು ಇ.ಡಿ. ಅಧಿಕಾರಿಗಳು ಬಂಧಿಸಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮತ್ತೊಂದು ಪ್ರಕರಣದಲ್ಲಿ ದೆಹಲಿ ಹೈಕೋರ್ಟ್ ಕೂಡ ಇಂತಹದ್ದೇ ತೀರ್ಪು ನೀಡಿದೆ.



‘ಅಸಹಕಾರ ಎನ್ನುವ ಕಾರಣಕಷ್ಟೇ ಬಂಧಿಸುವಂತಿಲ್ಲ’

‘ಸಮನ್ಸ್ ಅನ್ನು ತಿರಸ್ಕರಿಸಿದರು, ವಿಚಾರಣೆಗೆ ಹಾಜರಾಗಲಿಲ್ಲ, ತನಿಖೆಗೆ ಅಸಹಕಾರ ನೀಡಿದರು ಎಂದು ವ್ಯಕ್ತಿಯುನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಬಂಧಿಸುವಂತಿಲ್ಲ’ ಎಂದು 2023 ಅಕ್ಟೋಬರ್ 4ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಪಂಕಜ್ ಬನ್ಸಾಲ್ ಹಾಗೂ ಬಸಂತ್ ಬನ್ಸಾಲ್ ಅವರ ಅರ್ಜಿಗೆ ಸಂಬಂಧಿಸಿದಂತೆ ಕೋರ್ಟ್ ಈ ತೀರ್ಪು ನೀಡಿತ್ತು.

ಸುಪ್ರೀಂ ಕೋರ್ಟ್ ಹೇಳಿದ್ದೇನು?

- ವಿಚಾರಣೆ ನಡೆಸುವುದು ಎಂದರೆ ಅದು ತಪ್ಪೊಪ್ಪಿಗೆ ಪ್ರಕ್ರಿಯೆ ಅಲ್ಲ. ವಿಚಾರಣೆಗೆ ಹಾಜರಾಗಲಿಲ್ಲ ಆದ್ದರಿಂದ ಆತ ತಪ್ಪಿತಸ್ಥ ಎಂದು ಬಂಧಿಸಲು ಸಾಧ್ಯವಿಲ್ಲ. ಹೀಗೆ ಮಾಡಿದರೆ, ಅದು ನಿಮ್ಮ (ಇ.ಡಿ. ಅಧಿಕಾರಿಗಳು) ಬೇಜವಾಬ್ದಾರಿಯಾಗುತ್ತದೆ
- ಸೆಕ್ಷನ್ 50ರ ಅಡಿಯಲ್ಲಿ ವ್ಯಕ್ತಿಯೊಬ್ಬರಿಗೆ ಸಮನ್ಸ್ ನೀಡಿ, ಅವರು ವಿಚಾರಣೆಗೆ ಹಾಜರಾಗಲಿಲ್ಲ ಅಥವಾ ವಿಚಾರಣೆಗೆ ಸಹಕರಿಸಲಿಲ್ಲ ಎಂದಾಕ್ಷಣ ಸೆಕ್ಷನ್ 19ರ ಅಡಿಯಲ್ಲಿ ಅವರನ್ನು ಬಂಧಿಸಲಾಗದು
- ಇ.ಡಿ. ಅಧಿಕಾರಿಗಳು ಕೇಳಿದ ಪ್ರಶ್ನೆಗೆ ವ್ಯಕ್ತಿಯು ಉತ್ತರಿಸಲು ಸಾಧ್ಯವಾಗಲಿಲ್ಲ ಎನ್ನುವುದು ಆತನನ್ನು ಬಂಧಿಸುವುದಕ್ಕೆ ಇರುವ ಸಕಾರಣವಲ್ಲ
- ವ್ಯಕ್ತಿಯ ಬಂಧನಕ್ಕೆ ಅಗತ್ಯವಾದ ಸಾಕ್ಷ್ಯಗಳನ್ನು, ಸಕಾರಣಗಳನ್ನು ಇ.ಡಿ ಅಧಿಕಾರಿಗಳು ಕಲೆ ಹಾಕಬೇಕಿರುವುದು ಮುಖ್ಯ
- ಇ.ಡಿ. ಅಧಿಕಾರಿಗಳು ವ್ಯಕ್ತಿಯೊಬ್ಬರನ್ನು ಬಂಧಿಸಿರುವುದು ನ್ಯಾಯಸಮ್ಮತವಾಗಿದೆಯೇ ಎಂಬುದನ್ನು ಪರಿಶೀಲಿಸುವುದು ವಿಚಾರಣಾ ನ್ಯಾಯಾಲಯದ ಕರ್ತವ್ಯ
- ಸರಿಯಾಗಿ ಪರಿಶೀಲನೆ ನಡೆಸದೆ, ವ್ಯಕ್ತಿಯನ್ನು ಬಂಧಿಸುವುದಕ್ಕೆ ವಿಚಾರಣಾ ನ್ಯಾಯಾಲಯವು ಆದೇಶ ನೀಡಬಾರದು
- ಬಂಧನವು ಸೆಕ್ಷನ್ 19ರ ಅನ್ವಯವೇ ಇದೆಯೇ ಎಂಬುದನ್ನು ವಿಚಾರಣಾ ನ್ಯಾಯಾಲಯವು ಖಚಿತಪಡಿಸಿಕೊಳ್ಳಬೇಕು
- ಇಂಥದ್ದೇ ಪ್ರಕರಣಕ್ಕೆ ಸಂಬಂಧಿಸಿದಂತೆ 2023ರ ಡಿಸೆಂಬರ್‌ನಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಬಂಧನದ ನಂತರ ಬಂಧಿತ ವ್ಯಕ್ತಿಗೆ ಮೌಖಿಕವಾಗಿ ಮಾಹಿತಿ ನೀಡಿದರೂ ಸಾಕು. ಆದರೆ 24 ಗಂಟೆಗಳ ಒಳಗೆ ಲಿಖಿತ ರೂಪದಲ್ಲಿ ಕಾರಣಗಳನ್ನು ಒದಗಿಸಬೇಕು ಎಂದು ಹೇಳಿತ್ತು

‘ಸುಪ್ರೀಂ’ ತೀರ್ಪು ಉಲ್ಲೇಖಿಸಿದ್ದ ದೆಹಲಿ ಹೈಕೋರ್ಟ್

‘ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 50ರ ಅಡಿಯಲ್ಲಿ ಸಮನ್ಸ್ ನೀಡಲಾಗಿದೆ ಎಂದ ಮಾತ್ರಕ್ಕೆ ವ್ಯಕ್ತಿಯೊಬ್ಬರನ್ನು ಬಂಧಿಸಲು ಅಧಿಕಾರವಿದೆ ಎಂದರ್ಥವಲ್ಲ’ ಎಂದು ದೆಹಲಿ ಹೈಕೋರ್ಟ್ 2023ರ ಅಕ್ಟೋಬರ್ 19ರಂದು ತೀರ್ಪು ನೀಡಿತ್ತು. ಆಶಿಶ್ ಮಿತ್ತಲ್ ಅವರ ಅರ್ಜಿ ಸಂಬಂಧ ನ್ಯಾಯಾಲಯವು ಈ ತೀರ್ಪು ನೀಡಿತ್ತು.

‘ಹೀಗೆಂದ ಮಾತ್ರಕ್ಕೆ ಸಮನ್ಸ್ ನೀಡಿದರೆ, ಅಧಿಕಾರಿಗಳು ವ್ಯಕ್ತಿಯನ್ನು ಬಂಧಿಸಿಯೇ ಬಂಧಿಸುತ್ತಾರೆ ಎನ್ನುವ ಕಾರಣಕ್ಕೆ ಇ.ಡಿ. ಅಧಿಕಾರಿಗಳು ಸಮನ್ಸ್ ನೀಡುವುದನ್ನು ತಡೆಹಿಡಿಯುವುದಕ್ಕೆ ಸಾಧ್ಯವಿಲ್ಲ ಮತ್ತು ವ್ಯಕ್ತಿಯನ್ನು ಬಂಧಿಸಬೇಡಿ ಎನ್ನುವುದಕ್ಕೂ ಸಾಧ್ಯವಿಲ್ಲ’ ಎಂದೂ ಅದು ಹೇಳಿತ್ತು.

ಹೈಕೋರ್ಟ್ ಹೇಳಿದ್ದೇನು?

- ಇ.ಡಿ. ಅಧಿಕಾರಿಗಳ ಇಷ್ಟ–ಕಷ್ಟಗಳ ಆಧಾರದಲ್ಲಿ ವ್ಯಕ್ತಿಯೊಬ್ಬರನ್ನು ಬಂಧಿಸಲು ಸೆಕ್ಷನ್ 19ಅನ್ನು ಬಳಸಿಕೊಳ್ಳುವಂತಿಲ್ಲ. ಬಂಧನ ಮಾಡುವ ಮೊದಲು ಮೂರು ಹಂತಗಳನ್ನು ಅಧಿಕಾರಿಗಳು ಹಾದು ಹೋಗಲೇಬೇಕು

1. ವ್ಯಕ್ತಿಯನ್ನು ಬಂಧಿಸಲಾಗುತ್ತಿದೆ ಎಂದರೆ, ಇ.ಡಿ ಅಧಿಕಾರಿಗಳ ಬಳಿ ಬಲವಾದ ಸಾಕ್ಷ್ಯವಿರಬೇಕು. ಬಂಧನವನ್ನು ಸಮರ್ಥಿಸಿಕೊಳ್ಳಲು ಸಕಾರಣಗಳಿರಬೇಕು. ಜೊತೆಗೆ, ವ್ಯಕ್ತಿಯನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿಯೇ ಬಂಧಿಸಬೇಕು ವಿನಾ ಇತರೆ ಕಾಯ್ದೆಗಳ ಅಡಿಯಲ್ಲಿ ಬಂಧಿಸುವಂತಿಲ್ಲ
2. ಬಂಧಿಸಲು ಇರುವ ಸಕಾರಣಗಳು ಬರಹ ರೂಪದಲ್ಲಿ ಇರಬೇಕು
3. ಬಂಧನಕ್ಕೆ ಇರುವ ಸಕಾರಣಗಳು, ಅಧಿಕಾರಿಗಳ ಬಳಿ ಇರುವ ದಾಖಲೆ ಅಥವಾ ಸಾಕ್ಷ್ಯಗಳನ್ನೇ ಆಧಾರಿಸಿರಬೇಕು

- ಕಾಯ್ದೆಯ ಸೆಕ್ಷನ್ 19 (1) ಹಾಗೂ ಸೆಕ್ಷನ್ 19(2) ಅನ್ನು ಅಧಿಕಾರಿಗಳು ಅನುಸರಿಸಲೇಬೇಕು. ಇದಕ್ಕೆ ಯಾವುದೇ ವಿನಾಯಿತಿಯನ್ನು ನೀಡಲು ಸಾಧ್ಯವಿಲ್ಲ

(**ಸೆಕ್ಷನ್ 19 (2):** ವ್ಯಕ್ತಿಯನ್ನು ಬಂಧಿಸಿದ ತಕ್ಷಣದಲ್ಲಿಯೇ ಬಂಧನದ ಸಕಾರಣಗಳನ್ನು ಉನ್ನತ ಅಧಿಕಾರಿಗೆ ನೀಡಬೇಕು. ಜೊತೆಗೆ, ಅಧಿಕಾರಿಗಳು ತಮ್ಮ ಬಳಿ ಇರುವ ಸಾಕ್ಷ್ಯಗಳನ್ನೂ ಉನ್ನತ ಅಧಿಕಾರಿಗೆ ನೀಡಬೇಕು)

ಆಧಾರ: ಪಿಟಿಐ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ, ದೆಹಲಿ ಹೈಕೋರ್ಟ್ ತೀರ್ಪು ಹಾಗೂ ಸುಪ್ರೀಂ ಕೋರ್ಟ್ ತೀರ್ಪು

ಗೋಪಾಲಕೃಷ್ಣ ದೇಶಪಾಂಡೆ, ರಂಗಾಯಣ ರಘು

ಶಾಖಾಹಾರದ ಜಿಹ್ವಾನಂದ

ಕನ್ನಡದಲ್ಲಿ ಅದ್ಭುತವಾದ, ಸೆಳೆಯಬಲ್ಲ ಬರವಣಿಗೆಯುಳ್ಳ ಕಥೆಗಾರರ ಕೊರತೆ ಇದೆ ಎನ್ನುವುದಕ್ಕೆ ಉತ್ತರವಾಗಿ ‘ಶಾಖಾಹಾರಿ’ ತೆರೆಗೆ ಬಂದಿದೆ. ಚೊಚ್ಚಲ ಚಿತ್ರದಲ್ಲೇ ನಿರ್ದೇಶಕ ಸಂದೀಪ್ ಮಣ್ಣಿನ ಕಥೆಯೊಂದಕ್ಕೆ ಕುತೂಹಲ ಬೆರೆಸಿ ಶುದ್ಧ ‘ಶಾಕಾಹಾರಿ’ ಹೋಟೆಲ್‌ನಲ್ಲಿ ‘ಶಾಖಾಹಾರ’ ಬಡಿಸಿದ್ದಾರೆ.

ಇಂಗ್ಲಿಷ್‌ನಲ್ಲಿ ಒಂದು ಮಾತಿದೆ, ‘in the heat of the moment’. ಅಂದರೆ ಘಟನೆಯೊಂದರ ಬೆನ್ನಲ್ಲೇ ಆವರಿಸುವ ಭಯ, ಆತುರದಿಂದ ಉದ್ಭವಿಸುವ ನಿರ್ಧಾರ. ಒಂದರ್ಥದಲ್ಲಿ ಇದುವೇ ‘ಶಾಖಾಹಾರಿ’ ಸಿನಿಮಾದ ಎಳೆಯಂತೆ ಕಂಡುಬರುತ್ತದೆ. ‘ಶಾಖ’ವೇ ಇಲ್ಲಿನ ಚಿತ್ರಕಥೆಯ ವೇಗ. ಆ ‘ಶಾಖ’ ಆರದಂತೆ ಚಿತ್ರಕಥೆಗೆ ಪ್ರತಿ ದೃಶ್ಯದಲ್ಲೂ ಉಸಿರು ತುಂಬಿದ ರಂಗಾಯಣ ರಘು ಈ ಚಿತ್ರದಿಂದ ‘ಅಭಿನಯಾಸುರ’ ಆಗಿದ್ದಾರೆ. ಆ ಪಟ್ಟಕ್ಕೆ ಅರ್ಹ ಎಂಬಂತೆ ಅವರಿಲ್ಲಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ ಎಂದಿನಂತೆ ತಮ್ಮ ಇರುವಿಕೆಯಿಂದಲೇ ಸಿನಿಮಾಗೊಂದು ಗತ್ತು ತಂದುಕೊಟ್ಟಿದ್ದಾರೆ.

ಮಲೆನಾಡಿನ ಮೇಳಿಗೆ–ಮೃಗವಧೆ ಅಕ್ಕಪಕ್ಕದ ಊರುಗಳು. ಮೇಳಿಗೆಯಲ್ಲಿ ಮಾಸ್ತಿಕಟ್ಟೆ ಸುಬ್ರಹ್ಮಣ್ಯ ಅಲಿಯಾಸ್ ಸುಬ್ಬಣ್ಣನ(ರಂಗಾಯಣ ರಘು) ‘ದುರ್ಗಾ ಪ್ರಸಾದ್’ ಎಂಬ ಸಣ್ಣ ಶುದ್ಧ ಶಾಕಾಹಾರಿ ಹೋಟೆಲ್. ಮೃಗವಧೆಯ ಪೊಲೀಸ್ ಠಾಣೆಯಲ್ಲಿ ಉತ್ತರ ಕರ್ನಾಟಕದ ಮಲ್ಲಿಕಾರ್ಜುನ್ (ಗೋಪಾಲಕೃಷ್ಣ ದೇಶಪಾಂಡೆ) ಎಸ್.ಐ ಆಗಿ ಕೆಲಸ ನಿರ್ವಹಿಸುತ್ತಿರುವಾತ. ಮಲೆನಾಡಿನ ವಾತಾವರಣ ಹಿಡಿಸದೆ ಮಲ್ಲಿಕಾರ್ಜುನ್ ಪತ್ನಿ ಊರಿಗೆ ಮರಳಿದ್ದಾಳೆ. ಮಲ್ಲಿಕಾರ್ಜುನನೂ ವರ್ಗಾವಣೆ ಬಯಸಿ ಅರ್ಜಿ ಹಾಕಿದ್ದಾನೆ. ಅರ್ಜಿಗೆ ಇನ್ನೇನು ಒಪ್ಪಿಗೆ ಸಿಗಬೇಕು ಎನ್ನುವಷ್ಟರಲ್ಲಿ ಠಾಣೆಯಲ್ಲಿ ಬಂಧಿಯಾಗಿದ್ದ ಕೊಲೆ ಪ್ರಕರಣದ ಆರೋಪಿ ವಿಜಯ್(ವಿನಯ್ ಯು.ಜೆ.) ತಪ್ಪಿಸಿಕೊಳ್ಳುತ್ತಾನೆ. ಅತ್ತ ಚಿತ್ರಕಥೆ ಮುಂದುವರಿದಂತೆ ಸುಬ್ಬಣ್ಣನ ಹೋಟೆಲ್‌ನ ‘ಮೆನು’ ಬದಲಾಗುತ್ತದೆ. ‘ಶಾಖ’ ಜಾಸ್ತಿಯಾಗುತ್ತದೆ. ಕೇವಲ ಇಡ್ಲಿ, ದೋಸೆ, ಕಾಫಿ, ಚಹಾ ಸಿಗುತ್ತಿದ್ದ ಶುದ್ಧ ಶಾಕಾಹಾರಿ ಹೋಟೆಲ್‌ನಲ್ಲಿ ಪುಳಿಯೋಗರೆ, ಕೇಸರೀಬಾತ್ ಸಿಗುವ ಸ್ಥಿತ್ಯಂತರವೇ ಕಥೆಯ ವಿಸ್ತರಣೆ .

ಶೀರ್ಷಿಕೆಯನ್ನೇ ಭಿನ್ನವಾಗಿ ರೂಪಿಸಿದ ಸಂದೀಪ್, ಚಿತ್ರದೊಳಗೆ ಅಳವಡಿಸಿದ ತಿರುವುಗಳು ಇಡೀ ಕಥೆಯನ್ನು ಬೇರೆಯೇ ಹಂತಕ್ಕೆ ಕರೆದೊಯ್ದಿದೆ. ಚೊಚ್ಚಲ ನಿರ್ದೇಶನದಲ್ಲೇ ಒಂದು ಅಚ್ಚುಕಟ್ಟಾದ ಸಿನಿಮಾ ನೀಡುವಲ್ಲಿ ಯಶಸ್ಸು ಕಂಡಿದ್ದಾರೆ. ಆರಂಭಿಕ ಹೆಜ್ಜೆಯಲ್ಲೇ ಸಿದ್ಧಸೂತ್ರದ ಸಿನಿಮಾ ಜಗತ್ತಿನಿಂದ ಹೊರಗುಳಿದು ಪ್ರಬುದ್ಧತೆ, ನಿರ್ದೇಶನದ ಮೇಲಿನ ಬದ್ಧತೆ ತೋರಿದ್ದಾರೆ ಸಂದೀಪ್. ತಮ್ಮೊಳಗಿನ ನೈಜ ಕಲಾವಿದನನ್ನು ಪ್ರೇಕ್ಷಕರೆದುರಿಗೆ ಇಡುವ ಮೂಲಕ ರಂಗಾಯಣ ರಘು ಅವರು ಕನ್ನಡ ಚಿತ್ರರಂಗಕ್ಕೂ ಪ್ರಶ್ನೆಯೊಂದನ್ನು ಎಸೆದಿರುವಂತೆ ಕಾಣುತ್ತಾರೆ. ಮುಗ್ಧ ಪ್ರೀತಿ, ಭಯ, ಸಂಕಟ, ಹಾಸ್ಯವೆಲ್ಲವನ್ನು ತುಂಬಿದ ‘ಅಭಿನಯಾಸುರ’ ಅವರು. ದೃಶ್ಯವೊಂದರಲ್ಲಿ ತಲೆಬಾಚುವ ಮೊದಲು, ನಂತರದ ಕನ್ನಡಿಯಲ್ಲಿನ ಅವರ ನೋಟವನ್ನು ತೆರೆಯಲ್ಲೇ ಅನುಭವಿಸಬೇಕು. ಗೋಪಾಲಕೃಷ್ಣ ದೇಶಪಾಂಡೆ ಚಿತ್ರದ ಇನ್ನೊಂದು ಆಧಾರಸ್ತಂಭ. ಆ ಮೆಲು ದನಿ, ನಡಿಗೆ, ಹಾವಭಾವದಲ್ಲಿನ ಪ್ರಯೋಗ, ರಘು ಜೊತೆಗಿನ ಸಂಭಾಷಣೆಗಳು ಹಲವು ಸಮಯ ನೆನಪಿನಲ್ಲಿ ಉಳಿಯುವಂತಹದು. ಉಳಿದಂತೆ ಎಲ್ಲ ಕಲಾವಿದರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ.

ಒಂದೆರಡು ಕಡೆಗಳಲ್ಲಿ ವಿಜಯ್ ದೃಶ್ಯಗಳಿಗೆ ಕತ್ತರಿ ಹಾಕಬಹುದು ಎಂದೆನಿಸಿದ್ದು ಬಿಟ್ಟರೆ ಚಿತ್ರಕಥೆಯಲ್ಲಿ ವೇಗವಿದೆ. ಸುಬ್ಬಣ್ಣನ ಪರಿವರ್ತನೆಗಳನ್ನು ಸಮಗ್ರವಾಗಿ ಸೆರೆಹಿಡಿಯುವಲ್ಲಿ ವಿಶ್ವಜಿತ್ ಗೆದ್ದಿದ್ದಾರೆ. ಶಶಾಂಕ್ ಸಂಕಲನ, ಮಯೂರ್ ಅವರ ಸಂಗೀತ ಚಿತ್ರಕಥೆಯ ಕುತೂಹಲಕಾರಿ ಹೆಜ್ಜೆಗೆ ಇಂಬು ನೀಡಿದೆ.

–ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಶಾಖಾಹಾರಿ (ಕನ್ನಡ)
- **ನಿರ್ಮಾಣ:** ರಾಜೇಶ್ ಕೀಳಂಬಿ ಮತ್ತು ರಂಜಿನಿ ಪ್ರಸನ್ನ
- **ನಿರ್ದೇಶನ:** ಸಂದೀಪ್ ಸುಂಕದ್
- **ತಾರಾಗಣ:** ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ಸುಜಯ್ ಶಾಸ್ತ್ರಿ, ಪ್ರತಿಮಾ ನಾಯಕ್, ಹರಿಣಿ, ವಿನಯ್ ಯು.ಜೆ., ಶ್ರೀಹರ್ಷ, ನಿಧಿ ಹೆಗಡೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಹಲವರು** ಪೊಲೀಸ್ ಠಾಣೆಯ ಸೆಲ್‌ನಲ್ಲಿ ಇರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪೊಲೀಸ್ ಅಧಿಕಾರಿಗಳು, ಸೆಲ್‌ನಲ್ಲಿ ಇರುವ ವ್ಯಕ್ತಿಗಳಿಗೆ ಲಾಠಿಯಿಂದ ಹೊಡೆಯುತ್ತಿರುವ ದೃಶ್ಯಗಳೂ ಆ ವಿಡಿಯೊದಲ್ಲಿ ಇವೆ. ಈ ವಿಡಿಯೊ ಜತೆಗೆ, ‘ನೋಡಿ, ಮೀರಾ ರೋಡ್‌ನಲ್ಲಿ ದಾಂದಲೆ ನಡೆಸಿದವರನ್ನು ಪೊಲೀಸರು ಕಂಬಿಗಳ ಹಿಂದೆ ತಳ್ಳಿದ್ದಾರೆ. ಅವರಿಗೆ ಸರಿಯಾಗಿ ಕಜ್ಜಾಯವನ್ನೂ ಕೊಡುತ್ತಿದ್ದಾರೆ’ ಎಂಬ ಸಂದೇಶವನ್ನೂ ಹಂಚಿಕೊಳ್ಳಲಾಗುತ್ತಿದೆ. ಇನ್ನೂ ಕೆಲವರು, ರಾಮ ಮಂದಿರ ಲೋಕಾರ್ಪಣೆಯ ದಿನ ಗಲಭೆ ನಡೆಸಿದ, ಪ್ರತಿಭಟಿಸಿದ ‘ಅವರಿಗೆ’ ತಕ್ಕ ಶಾಸ್ತಿಯಾಗುತ್ತಿದೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಇದು ತಿರುಚಲಾದ ಮಾಹಿತಿ.

✓ **ಸಾಮಾಜಿಕ** ಜಾಲತಾಣಗಳಲ್ಲಿ ಹೇಳುತ್ತಿರುವಂತೆ, ಇದು ಇದೇ ಜನವರಿ 22ರಂದು ನಡೆದಿದ್ದ ಸಂಘರ್ಷದ ಆರೋಪಿಗಳಿಗೆ ಸಂಬಂಧಿಸಿದ ವಿಡಿಯೊ ಅಲ್ಲ. ಇದು, ಬಿಜೆಪಿ ನಾಯಕಿಯಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದರ ಬಗ್ಗೆ ನೀಡಿದ್ದ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆಸಿದ್ದವರಿಗೆ ಸಂಬಂಧಿಸಿದ ವಿಡಿಯೊ. ನೂಪರ್ ಶರ್ಮಾ ಅವರ ಹೇಳಿಕೆಯನ್ನು ಖಂಡಿಸಿ 2022ರ ಜೂನ್‌ನಲ್ಲಿ ಉತ್ತರ ಪ್ರದೇಶದ ಹಲವೆಡೆ ಮುಸ್ಲಿಮರು ಪ್ರತಿಭಟನೆ ನಡೆಸಿದ್ದರು. ಶಹರಾನ್‌ಪುರದಲ್ಲಿ ಹೀಗೆ ಪ್ರತಿಭಟನೆ ನಡೆಸಿದ್ದವರನ್ನು ವಶಕ್ಕೆ ಪಡೆದು ಪೊಲೀಸರು ಹಲ್ಲೆ ನಡೆಸಿದ್ದರು. ಹಲ್ಲೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದಕ್ಕೆ ಆಕ್ಷೇಪಗಳೂ ವ್ಯಕ್ತವಾಗಿದ್ದವು. ಆದರೆ ಈಗ ಆ ಹಳೆಯ ವಿಡಿಯೊವನ್ನು ಬಳಸಿಕೊಂಡು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಯಾವ ವಿದ್ಯೆಯೂ ವ್ಯರ್ಥವಲ್ಲ

ನುಡಿ ಬೆಳಗು

ಪಿ. ಚಂದ್ರಿಕಾ

ಅವನೊಬ್ಬ ಉತ್ಸಾಹಿ ತರುಣ. ಆಗ ತಾನೆ ಮೇಷ್ಟ್ರಾಗಿ ಕೆಲಸಕ್ಕೆ ಸೇರಿದ್ದ. ಮಕ್ಕಳಿಗೆ ಪಠ್ಯಪುಸ್ತಕದ ಜೊತೆಗೆ ಏನಾದರೂ ಕಲಿಸಬೇಕೆನ್ನುವ ಆಸೆ. ಜೊತೆಯಲ್ಲಿರುವವರಿಗೆ ‘ನಮ್ಮ ಕೆಲಸವನ್ನು ನಾವು ಮಾಡಿದರೆ ಸಾಕು, ಬೇರೆಲ್ಲ ನಮಗೆ ಏಕೆ ಬೇಕು’ ಎನ್ನುವ ಭಾವ. ಹಾಗಾಗಿ ಎಲ್ಲರೂ ‘ಇಲ್ದಿರೋದನ್ನೆಲ್ಲಾ ಯಾಕಪ್ಪ ಹೇಳೋದು ಸಂಬಳ ತೆಗೆದುಕೊಳ್ಳುವುದಕ್ಕೆ ಏನು ಬೇಕೋ ಅದನ್ನ ಮಾಡೋಣ’ ಎನ್ನುತ್ತಿದ್ದರು.

ಎಲ್ಲದರ ಮಧ್ಯೆಯೂ ಆ ಯುವ ಮೇಷ್ಟ್ರು ಹುಡುಗರಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಕ್ಕೆ ತೆಗೆದು ಅವರಿಗೆ ಏನು ಬೇಕೋ ಅದನ್ನು ಹೇಳಿಕೊಡುವ ಪ್ರಯತ್ನವನ್ನು ಮಾಡುತ್ತಿದ್ದ. ನಿಧಾನವಾಗಿ ಆತ ಹುಡುಗರಿಗೆ ಪ್ರಿಯವಾಗತೊಡಗಿದ. ಪುಸ್ತಕದ ಎಷ್ಟೋ ಬೋರ್ ಹೊಡೆಯುವ ಸಂಗತಿಗಳಿಗಿಂತ ತಮ್ಮೊಳಗಿನ ಉತ್ಸಾಹಕ್ಕೆ ನೀರೆರೆಯುವ ಮೇಷ್ಟ್ರು ಅವರಿಗೆ ಹಿತವಾಗತೊಡಗಿದ್ದ. ಯುವ ಮೇಷ್ಟ್ರು ಮಾತ್ರ ಕಾಡನ್ನು ತೋರಿಸಿ, ಹಕ್ಕಿ ಪಕ್ಷಿಗಳನ್ನು ತೋರಿಸಿ, ಗಿಡಮರಗಳನ್ನು ತೋರಿಸಿ ಇವನ್ನೆಲ್ಲಾ ಹೊಸದಾಗಿ ಹೇಗೆ ನೋಡಬೇಕು ಎಂದೆಲ್ಲಾ ಹೇಳಿಕೊಡುತ್ತಿದ್ದ. ಹೀಗೇ ಆದರೆ ನಮ್ಮ ಅಸ್ತಿತ್ವವೇ ಇಲ್ಲವಾಗುತ್ತದೆ ಎಂದು ಬೇರೆ ಶಿಕ್ಷಕರು ಪಾಠವನ್ನು ಬಿಟ್ಟು ಮಕ್ಕಳಿಗೆ ಇಲ್ಲದ್ದನ್ನು ಹೇಳಿಕೊಡುತ್ತಾನೆ ಎಂದು ಹೆಡ್ ಮೇಷ್ಟ್ರಿಗೆ ದೂರನ್ನು ಕೊಟ್ಟರು.

ಮುಖ್ಯೋಪಾಧ್ಯಾಯ ಆ ಯುವ ಮೇಷ್ಟ್ರನ್ನು ಕರೆದು ಕೇಳಿಯೇ ಬಿಟ್ಟರು. ಅದಕ್ಕೆ ಆತ, ‘ಸರ್ ದ್ರೋಣಾಚಾರ್ಯರು ಅರ್ಜುನನಿಗೆ ಬಿಲ್ಲು ವಿದ್ಯೆ ಹೇಳಿಕೊಡುವಾಗ ಅನೇಕ ಅಸ್ತ್ರಗಳ ಬಗ್ಗೆ ಹೇಳುತ್ತಾರೆ. ಆಗ ಅರ್ಜುನ, ‘ಗುರುಗಳೇ ಇಷ್ಟೊಂದು ಅಸ್ತ್ರಗಳನ್ನು ಹೇಗೆ ಉಪಯೋಗಿಸಬೇಕು ಅನ್ನುವುದನ್ನು ಹೇಳುತ್ತಿದ್ದೀರಿ. ಇದರಿಂದ ಏನು ಪ್ರಯೋಜನ? ಸುಮ್ಮನೆ ಬತ್ತಳಿಕೆಯಲ್ಲಿರುತ್ತವೆ ಅಷ್ಟೇ. ಜೀವನದಲ್ಲಿ ಅದನ್ನು ಒಮ್ಮೆಯಾದರೂ ಬಳಸುತ್ತೇವೋ ಇಲ್ಲವೋ’ ಎನ್ನುತ್ತಾನೆ. ಆಗ ದ್ರೋಣರು, ‘ಅರ್ಜುನ, ಕಲಿಯುವಾಗ ಎಲ್ಲವನ್ನೂ ಕಲಿತುಕೋ. ಕಲಿಯುವುದರಲ್ಲಿ ತಪ್ಪೇನಿದೆ? ಅದರ ಉಪಯೋಗವನ್ನು ಕಾಲ ನಿರ್ಧರಿಸುತ್ತದೆ’ ಎನ್ನುತ್ತಾರೆ.

ಈ ಮಾತನ್ನು ಅರ್ಜುನ ಮರೆತೂ ಬಿಡುತ್ತಾನೆ. ಕುರುಕ್ಷೇತ್ರ ರಣರಂಗದಲ್ಲಿ ಎಲ್ಲ ಬಾಣಗಳು ಬತ್ತಳಿಕೆಯಲ್ಲಿ ಖಾಲಿಯಾಗುತ್ತಾ ಬರುತ್ತವೆ. ಸಾಮಾನ್ಯ ಸೈನಿಕನೊಬ್ಬ ಅವನ ಮೇಲೆ ಎರಗಿ ಬಂದಾಗ ಬತ್ತಳಿಕೆಯಲ್ಲಿ ಸಾಮಾನ್ಯ ಎಂದುಕೊಂಡಿದ್ದ, ಅರ್ಜುನ ಮರೆತೇ ಹೋಗಿದ್ದ ಅಸ್ತ್ರ ಸಿಗುತ್ತದೆ. ಅದರಿಂದ ಅವನು ಆ ಸೈನಿಕನನ್ನು ಕೊಲ್ಲುತ್ತಾನೆ. ಆಗ ಅವನಿಗೆ ದ್ರೋಣರು ಹೇಳಿದ ಮಾತು ನೆನಪಾಗುತ್ತದೆ– ‘ಜಗತ್ತಿನಲ್ಲಿ ಯಾವುದೂ ವ್ಯರ್ಥವಲ್ಲ’ ಎಂದು. ಈಗ ಹೇಳಿ ‘ನಾನು ನನ್ನ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿರುವ ಈ ಸಂಗತಿಗಳು ಹೇಗೆ ವ್ಯರ್ಥವಾಗುತ್ತವೆ? ಈಗ ನಮಗೆ ಇವರು ಮಕ್ಕಳು, ಭವಿಷ್ಯದಲ್ಲಿ ಏನೋ ಆಗಬಲ್ಲ ಚೇತನಗಳು. ನಾವು ಕಲಿಸಿದ್ದು ಈಗ ಪ್ರಯೋಜನಕ್ಕೆ ಬರದೇ ಹೋಗಬಹುದು, ಕಾಲ ಬಂದಾಗ ಅವು ಅವರಿಗೆ ಸಣ್ಣ ಆಸರೆ ಕೊಟ್ಟರೂ ನಮ್ಮ ಪ್ರಯತ್ನ ಸಾರ್ಥಕವಾಗುತ್ತವೆ ಅಲ್ಲವೇ?’ ಎನ್ನುತ್ತಾನೆ.

ತಮ್ಮ ವೃತ್ತಿ ಜೀವನದ ಬಹುದೊಡ್ಡ ಪಾಠವನ್ನು ಕಲಿತಂತಾಗಿ ಮುಖ್ಯೋಪಾಧ್ಯಾಯ ಆ ಯುವಮೇಷ್ಟ್ರನ್ನು ಅಪ್ಪಿಕೊಳ್ಳುತ್ತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಫೆಬ್ರುವರಿ 20, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಏಕಾದಶಿ ಗಂ. 09-56 ನಕ್ಷತ್ರ: ಆರ್ದ್ರಾ ಗಂ. 12-13 ಯೋಗ: ಪ್ರೀತಿ ಗಂ. 11-46 ಕರಣ: ವಿಷ್ಟಿ ಗಂ. 09-56, ಕುಂಭ ಮಾಸದ 07 ನೇ ದಿನ, ಮಳೆನಕ್ಷತ್ರ: ಶತಭಿಷ 1.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-55 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 09 ಶಬನ್
ಅದೃಷ್ಟ ಸಂಖ್ಯೆ : 4, 7

ಮೇಷ: ಯಾವುದೇ ಮುಜುಗರ ಅಥವಾ ಹೆದರಿಕೆ ಇಲ್ಲದೆ ಸಮಯವನ್ನು ಸತ್ಕಾರ್ಯಗಳಿಗೆ ಬಳಸಿಕೊಳ್ಳಲು ಪ್ರಯತ್ನವನ್ನು ಮಾಡಿ. ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ನಿರಂತರತೆ ಮತ್ತು ಅಸ್ತಿತ್ವ ಕಾಪಾಡಿಕೊಳ್ಳಿ.

ವೃಷಭ: ಸವಾಲಾಗಿರುವ ನಿಮ್ಮ ಮನದ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲು ಇಂದು ಸನ್ನಿವೇಶಗಳು ನಿಮಗೆ ಅನುಕೂಲವಾಗಲಿವೆ. ಭೂಮಿ ಖರೀದಿಯ ವಿಚಾರ ಮುಂದಕ್ಕೆ ಹಾಕುವ ಪರಿಸ್ಥಿತಿ ಕಂಡುಬಂದೀತು.

ಮಿಥುನ: ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳಿಂದ ಆದಾಯದಲ್ಲಿ ಗಣನೀಯ ಸುಧಾರಣೆ ಕಾಣಲಿದೆ. ಈಗಾಗಲೇ ಆರಂಭಿಸಿರುವ ಕೆಲಸ ಮುಂದುವರಿಸಲು ಪ್ರಯತ್ನಿಸಿ. ಸ್ಥಿರ ಆಸ್ತಿ ಖರೀದಿಸುವ ಬಗ್ಗೆ ಯೋಚನೆ ಮಾಡುವುದು ಉತ್ತಮ.

ಕರ್ಕಾಟಕ: ಮನಸ್ಸಿಗೆ ಅಸಮಾಧಾನ ಆಗುವಂಥ ಘಟನೆಯು ಈ ದಿನ ನಡೆಯಲಿದೆ. ಸಿದ್ಧ ಉಡುಪು ಮಾರಾಟಗಾರರಿಗೆ ವಿಶೇಷ ಲಾಭ ಬರುವುದು. ಅಧಿಕಾರಿ ವರ್ಗದವರಿಗೆ ರಾಜಕಾರಣಿಗಳ ಕಿರುಕುಳ ಹೆಚ್ಚಾಗುತ್ತದೆ.

ಸಿಂಹ: ಹುಣಸೆ ಹಣ್ಣು ಹಾಗೂ ದ್ರಾಕ್ಷಿ ವ್ಯಾಪಾರಸ್ಥರಿಗೆ ಅನುಕೂಲಕರ ವ್ಯಾಪಾರ ಇರುವುದು. ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು.

ಕನ್ಯಾ: ಸಾಂಪ್ರದಾಯಿಕ ವಿಚಾರದ ಚಿಂತನೆ ಅಥವಾ ಅಂಥ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಘನತೆ ಹೆಚ್ಚಲಿದೆ. ಮನೆಯವರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿವೆ.

ತುಲಾ: ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ ನಂತರ ಗುರಿ ಸಾಧಿಸಬೇಕಿದ್ದಲ್ಲಿ ಜನರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳುವುದು ಉತ್ತಮ. ವ್ಯವಹಾರಿಕ ಒತ್ತಡಗಳು ಕಡಿಮೆಯಾಗುವುದು.

ವೃಶ್ಚಿಕ: ಜನರೊಂದಿಗಿನ ಹೆಚ್ಚಿನ ಸಂಪರ್ಕದಿಂದಾಗಿ ರಾಜಕೀಯ ರಂಗಕ್ಕಿಳಿಯುವ ಅವಕಾಶ ಅಥವಾ ಆಹ್ವಾನ ಬರಲಿದೆ. ದುಃಖ ತೀವ್ರತೆಯು ದಿನದಿಂದ ದಿನಕ್ಕೆ ಕಡಿಮೆಯಾಗುವುದು. ಬಂಧು ಮಿತ್ರರು ಬರಲಿದ್ದಾರೆ.

ಧನು: ಹಣಕಾಸಿನ ಲೆಕ್ಕಾಚಾರವನ್ನು ನೋಡುವವರು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಿ. ಆರ್ಥಿಕ ವೃದ್ಧಿ, ಆರೋಗ್ಯವೃದ್ಧಿ, ಅಕಸ್ಮಿಕ ಧನ ಯೋಗ ಈ ದಿನದಲ್ಲಿದೆ. ಉಡುಪು ವಿನ್ಯಾಸಗಾರರಿಗೆ ಅವಕಾಶಗಳು ಲಭ್ಯವಾಗುತ್ತದೆ.

ಮಕರ: ಆರ್ಥಿಕವಾಗಿ ಲಾಭ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಗುವ ಪರಿಸ್ಥಿತಿ ಎದುರಾಗಬಹುದು. ಚಟಗಳಿಂದ ಹೊರಬರುವ ಬಗ್ಗೆ ಪ್ರಯತ್ನವಿರಲಿ. ಆಹಾರದಲ್ಲಿ ಪಥ್ಯವನ್ನು ಮತ್ತು ಶುಚಿತ್ವವನ್ನು ಕಾಪಾಡಿಕೊಳ್ಳಿರಿ.

ಕುಂಭ: ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತ ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭ ಹೊಂದುವಿರಿ. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಉದ್ಯೋಗ ಅಥವಾ ಬಡ್ತಿ ಪಡೆಯುವ ಕಾಲ ನಿಮ್ಮದಾಗಲಿದೆ.

ಮೀನ: ಷೇರು ಪೇಟೆ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯುವುದು ಕಷ್ಟವಾಗಲಿದೆ. ಮನಸ್ಸು ಅಸ್ಥಿರವಾಗುವುದು. ಲೋಹ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳವಾಗಲಿದೆ. ಕೆಲಸಗಳು ಸುಗಮವಾಗಿ ಸಾಗಲಿದೆ.

ಪದಬಂಧ 5597

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಭೇದ ಭಾವವಿಲ್ಲದಿರುವಿಕೆ (5)
4.ಆ ಮೋದಕ ತಿಂದಿದ್ದಕ್ಕೇ ಈ ಸಂತೋಷ ! (3)
5.ತರಗತಿಗಳಲ್ಲಿರುವ ಗುಂಪು (2)
7.ವಿವಿಧದಲ್ಲಿ ರೀತಿಯನ್ನು ಹುಡುಕಿ! (2)
10.ಕಮರಿಯೊಳಗೆ ಬಿದ್ದಿರುವ ಗಜ (2)
13.ನೂಪುರ ಖರೀದಿಸಿದ ಪಟ್ಟಣ (2)
15.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ
1. ಅಕ್ಷರಗಳನ್ನು ಬಲ್ಲವನೀತ (4)
2.ನಿರಂತರ ಎಂದು ಹೀಗನ್ನಿ (3)
3.ದರ್ಶನವಿತ್ತಾಗ ನೀಡಿರುವ ದೃಷ್ಟಾಂತ (4)
4.ಪೂಜೆ ಮಾಡುವವನು (4)
6.ಹೀಗೆ ಮುಷ್ಟಿಯಿಂದ ಹೊಡೆ! (2)
8.ಹೆಚ್ಚು ಹಣವುಳ್ಳವನು (4)
9.ಮಾನವುಳ್ಳವನಿಗೆ ಮೂಡಿದ ಶಂಕೆ (4)
11.ಪುಢಾರಿ ಹತ್ತಿರವಿರುವ ಶತ್ರು (2)
12.ತೆಳ್ಳಗಿನ ಸೊಂಟವಿದು (4)
14.ಕುಪ್ಪಸ ಇಲ್ಲಿದೆ (3)



5596ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಅರಸ 5.ವಾದಕ 6.ಮಡದಿ 7.ಆಟ 8.ನವ 12.ಹುಸಿ 14.ವಾರ 15.ಕರಿಯ 16.ಕಮ್ಮಾರ 17.ತೆವರಿ

ಮೇಲಿಂದ ಕೆಳಕ್ಕೆ: 1.ಕವಾಟ 2.ಅಕಳಂಕ 3.ಸಮನ್ವಯ 4.ಸುದಿನ 7.ಅಜಾನುಬಾಹು 9.ವರ್ಣವಿಕಾರ 10.ಆತ್ಮೀಯತೆ 11.ಮದಕರಿ 13.ಸಿಕತ 14.ವಾರಸು

ಸುಡೊಕು 5982

7				1			8	2
		6	8		9	5		7
4		8	7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5981 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಸುಧಾ, ಮಯೂರ ಓದಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,040
ಇಂದಿನ ಅಂತ್ಯ	22,122
▲	81
ದಿನದ ಗರಿಷ್ಠ	22,186

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1200-1800
ಸಣ್ಣ	₹800-1200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1460 (1460)
ಸೋಯಾ (ರಿಫೈನ್ಡ್)	₹890 (885)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹860 (855)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹215-468
ದ್ವಿತಳಿ (ಬಿ.ವಿ)	₹170-565

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹161
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹139

(ಪ್ರತಿ ಕೆ.ಜಿಗೆ)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8ನೇ ವರ್ಷದ ಪುಣ್ಯ ಸ್ಮರಣೆ



ಹೆಚ್. ಕೃಷ್ಣಪ್ಪ (HAL)
ಜನನ: 07/02/1937; ನಿಧನ: 20/02/2016
ನಿಮ್ಮ ಆದರ್ಶ ನಮಗೆ ಸದಾ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಇಂತಿ ದುಃಖತಪ್ತರು
ಧರ್ಮಪತ್ನಿ ಶ್ರೀಮತಿ ಎಸ್. ಗುಂಡಮ್ಮ ಹಾಗೂ ಕುಟುಂಬವರ್ಗದವರು
ಗಾಯತ್ರಿನಗರ, ಬೆಂಗಳೂರು.

ರೆಪೊ ದರ ಇಳಿಕೆ: ಗೋಯಲ್

ನವದೆಹಲಿ (ಪಿಟಿಐ): 'ದೇಶದಲ್ಲಿ ಹಣದುಬ್ಬರ ನಿಯಂತ್ರಣದಲ್ಲಿದೆ. ಹಾಗಾಗಿ, ಮುಂಬರುವ ತಿಂಗಳುಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಕಡಿತಗೊಳಿಸುವ ಸಾಧ್ಯತೆಯಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ದೇಶದ ಆರ್ಥಿಕ ಸ್ಥಿತಿಯು ಸದೃಢವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ದೇಶದ ಸರಾಸರಿ ಹಣದುಬ್ಬರವು ಶೇ 5ರಿಂದ ಶೇ 5.5ರಷ್ಟಿದೆ' ಎಂದು ಹೇಳಿದ್ದಾರೆ.

'ಕಳೆದ ಒಂದೂವರೆ ವರ್ಷದ ಹಿಂದೆ ಜಾಗತಿಕ ಮಟ್ಟದಲ್ಲಿ ತಲೆದೋರಿದ ಉಕ್ರೇನ್ ಬಿಕ್ಕಟ್ಟಿನಿಂದಾಗಿ ಬಡ್ಡಿದರವನ್ನು ಹೆಚ್ಚಿಸಲಾಗಿತ್ತು. ಆರ್‌ಬಿಐನ ಮುಂದಿನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯ ವೇಳೆಗೆ ಇಳಿಕೆಯಾಗುವ ನಿರೀಕ್ಷೆಯಿದೆ' ಎಂದಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್, 2023ರ ಫೆಬ್ರುವರಿಯಿಂದಲೂ ರೆಪೊ ದರವನ್ನು ಶೇ 6.5ರಲ್ಲಿಯೇ ಯಥಾಸ್ಥಿತಿ ಕಾಯ್ದುಕೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-33500
ಹಳತು	33500-43000
ಚಿತ್ರದುರ್ಗ	
ಅಪಿ	46801-47202
ಬೆಟ್ಟೆ	35629-36089
ಕೆಂಪುಗೋಟು	29119-29559
ರಾಶಿ	46339-46779
ಕಾರ್ಕಳ	
ಹೊಸತು	25000-34000
ಹಳತು	30000-43500
ಕುಮಟ	
ಚಿಪ್ಪು	24089-29999
ಕೋಕ	16019-25099
ಫ್ಯಾಕ್ಟರಿ	11019-19599
ಹಳೆಚಾಲಿ	34019-37005
ಹೊಸಚಾಲಿ	29509-33019
ಸಾಗರ	
ಬಿಳಿಗೋಟು	15899-26899
ಚಾಲಿ	29011-34599
ಕೋಕ	15669-27319
ಕೆಂಪುಗೋಟು	22899-34199
ರಾಶಿ	27899-47939
ಸಿಪ್ಪೆಗೋಟು	10789-17259
ಶಿವಮೊಗ್ಗ	
ಬೆಟ್ಟೆ	46069-54799
ಗೊರಬಲು	17050-32299
ರಾಶಿ	34179-47950
ಸರಕು	46010-81396
ಸಿದ್ದಾಪುರ	
ಬಿಳಿಗೋಟು	26890-30699
ಚಾಲಿ	35469-36599
ಕೋಕ	24699-28000
ಹೊಸಚಾಲಿ	30659-33899
ಕೆಂಪುಗೋಟು	30619-38309
ರಾಶಿ	43089-46899
ತಟ್ಟಿಬೆಟ್ಟೆ	39409-46499
ಶಿರಸಿ	
ಬೆಟ್ಟೆ	38208-43899
ಬಿಳಿಗೋಟು	25699-31099
ಚಾಲಿ	36508-38311
ಕೆಂಪುಗೋಟು	29099-33218
ರಾಶಿ	43299-46941
ಯಲ್ಲಾಪುರ	
ಅಪಿ	54689-63269
ಬಿಳಿಗೋಟು	20122-30706
ಚಾಲಿ	31399-37649
ಕೋಕ	13109-24601
ಕೆಂಪುಗೋಟು	22899-35195
ರಾಶಿ	43199-54069
ತಟ್ಟಿಬೆಟ್ಟೆ	33410-42019

ಟಾಟಾದಿಂದ ರಾಜ್ಯದಲ್ಲಿ ಪ್ರಥಮ ವಿಮಾನ ನಿರ್ವಹಣೆ – ದುರಸ್ತಿ ಘಟಕ ಸ್ಥಾಪನೆ

₹2,300 ಕೋಟಿ ಹೂಡಿಕೆಗೆ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಯೋಜನೆಯಡಿ ಏರ್ ಇಂಡಿಯಾ ಮತ್ತು ಟಾಟಾ ಅಡ್ವಾನ್ಸ್ಡ್ ಸಿಸ್ಟಂ ಲಿಮಿಟೆಡ್‌ನಿಂದ ಒಟ್ಟು ₹2,300 ಕೋಟಿ ಹೂಡಿಕೆಗೆ ನಿರ್ಧರಿಸಿದ್ದು, ಸೋಮವಾರ ಈ ಕುರಿತ ಒಡಂಬಡಿಕೆಗೆ ವಿಧಾನಸೌಧದಲ್ಲಿ ಸಹಿ ಹಾಕಲಾಯಿತು.

ಟಾಟಾ ಸಮೂಹದ ಈ ಹೂಡಿಕೆಯಿಂದ ನೇರವಾಗಿ 1,650 ಉದ್ಯೋಗಗಳು ಸೃಷ್ಟಿಯಾಗಲಿವೆ.

ಸರ್ಕಾರದ ಪರ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ಏರ್ ಇಂಡಿಯಾದ ಮುಖ್ಯ ವಾಣಿಜ್ಯ ವ್ಯವಹಾರ ಅಧಿಕಾರಿ ನಿಪುಣ್ ಅಗರವಾಲ್ ಹಾಗೂ ಟಿಎಎಸ್‌ಎಲ್ ಸಿಇಒ ಸುಕರಣ್ ಸಿಂಗ್ ಅವರು, ಒಡಂಬಡಿಕೆ ಪತ್ರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹಾಜರಿದ್ದರು.

ಬಳಿಕ ಮಾತನಾಡಿದ ಸಚಿವ ಎಂ.ಬಿ. ಪಾಟೀಲ, 'ಒಟ್ಟು ಹೂಡಿಕೆಯ ಪೈಕಿ ಏರ್ ಇಂಡಿಯಾ ಕಂಪನಿಯು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ವಿಮಾನಗಳ ನಿರ್ವಹಣೆ, ದುರಸ್ತಿ ಮತ್ತು ಓವರ್-ಹಾಲ್ (ಎಂಆರ್‌ಒ) ಘಟಕ ಸ್ಥಾಪನೆಗೆ ₹1,300 ಕೋಟಿ ಹೂಡುತ್ತಿದೆ' ಎಂದು ತಿಳಿಸಿದರು.

'ಇದರಿಂದ 1,200 ಜನರಿಗೆ ನೇರವಾಗಿ ಉದ್ಯೋಗ ಸಿಗಲಿದೆ. ಪರೋಕ್ಷವಾಗಿ 25 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ. ದೇಶದಲ್ಲಿ ಇಂತಹ ಮೊಟ್ಟಮೊದಲ ಯೋಜನೆ ಇದಾಗಿದೆ' ಎಂದರು.

ಬೆಂಗಳೂರಿನಲ್ಲಿ ಸೋಮವಾರ ಟಾಟಾ ಸಮೂಹ ಹಾಗೂ ಸರ್ಕಾರದ ನಡುವೆ ಒಡಂಬಡಿಕೆಗೆ ಸಹಿ ಹಾಕಿ ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಂ.ಬಿ. ಪಾಟೀಲ, ಟಾಟಾ ಸಮೂಹದ ಉನ್ನತ ಅಧಿಕಾರಿಗಳಾದ ನಿಪುಣ್ ಅಗರವಾಲ್, ಸುಕರಣ್ ಸಿಂಗ್, ಬಿಐಎಎಲ್‌ನ ಹರಿ ಮಾರಾರ್, ಸಾತ್ಯಕಿ ರಘುನಾಥ್ ಹಾಜರಿದ್ದರು

ಟಾಟಾ ಅಡ್ವಾನ್ಸ್ಡ್ ಸಿಸ್ಟಂ (ಟಿಎಎಸ್‌ಎಲ್) ಕಂಪನಿಯು ಮೂರು ಯೋಜನೆಗಳಿಗೆ ₹1,030 ಕೋಟಿ ಬಂಡವಾಳ ಹೂಡಲಿದೆ. ಈ ಪೈಕಿ ನಾಗರಿಕ ವಿಮಾನಗಳನ್ನು ಸರಕು ಸಾಗಣೆ ವಿಮಾನಗಳನ್ನಾಗಿ ಪರಿವರ್ತಿಸುವ ಘಟಕ ಸ್ಥಾಪನೆಗೆ ₹420 ಕೋಟಿ ವಿನಿಯೋಗಿಸಲಿದೆ ಎಂದು ತಿಳಿಸಿದರು.

₹310 ಕೋಟಿ ಹೂಡಿಕೆಯೊಂದಿಗೆ ಗನ್ ತಯಾರಿಕೆ ಘಟಕ ಮತ್ತು ₹300 ಕೋಟಿ ವೆಚ್ಚದಲ್ಲಿ ವಿಮಾನಯಾನ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಕೈಗೆತ್ತಿಕೊಳ್ಳಲಿದೆ. ಇದರಿಂದ 450 ಉದ್ಯೋಗ ಸೃಷ್ಟಿಯಾಗಲಿವೆ ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ, ಏರ್ ಇಂಡಿಯಾದ ಉನ್ನತಾಧಿಕಾರಿಗಳಾದ ಮನನ್ ಚೌಹಾಣ್, ಕಾರ್ತಿಕೇಯ ಭಟ್, ಅತುಲ್ ಶುಕ್ಲ, ಟಿಎಎಸ್‌ಎಲ್ ಉನ್ನತ ಅಧಿಕಾರಿಗಳಾದ ಗುರು ದತ್ತಾತ್ರೇಯ, ಅರ್ಜುನ್ ಮೈನೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಹರಿ ಮಾರಾರ್, ಸಿಒಒ ಸಾತ್ಯಕಿ ರಘುನಾಥ್, ಸಿಎಫ್‌ಒ ಭಾಸ್ಕರ್ ರವೀಂದ್ರ ಹಾಜರಿದ್ದರು.

ಗನ್ ತಯಾರಿಕೆ ಘಟಕ

ಟಾಟಾ ಅಡ್ವಾನ್ಸ್ಡ್ ಸಿಸ್ಟಂ ಕಂಪನಿಯು, ದೇವನಹಳ್ಳಿ ವಿಮಾನ ನಿಲ್ದಾಣದ ಸಮೀಪ ಮತ್ತು ಕೋಲಾರದಲ್ಲಿ ಗನ್ ತಯಾರಿಕೆ ಘಟಕ ಸ್ಥಾಪಿಸಲಿದೆ.

ಆ ಮೂಲಕ ತನಗೆ ಅಗತ್ಯವಿರುವ 13 ಸಾವಿರ ಬಿಡಿಭಾಗಗಳ ಪೈಕಿ ಶೇ 50ರಷ್ಟನ್ನು ಪೂರೈಸಿಕೊಳ್ಳುವ ಆಲೋಚನೆ ಹೊಂದಿದೆ. ಇದರಿಂದಾಗಿ 300ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ 2ರಿಂದ 3 ಸಾವಿರ ಜನರಿಗೆ ಉದ್ಯೋಗ ಲಭಿಸಲಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮುಂಬೈ ಧಾರಣೆ

ಶೇಂಗಾ

19-02-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1470)
ಒಂದು ವಾರದ ಡೆಲಿವರಿ	1465 (1465)
ಸೋಯಾ ಕಚ್ಚಾ	855 (850)
ಪಾಮ್ ವಾರದ ಡೆಲಿವರಿ	858 (853)
ಸೂರ್ಯಕಾಂತಿ ಎಣ್ಣೆ ಕಚ್ಚಾ	840 (840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹61,700 (61,650)

ಬೆಳ್ಳಿ ಕೆ.ಜಿ ₹71,250 (71,600)

ಆವರಣದಲ್ಲಿ ಶನಿವಾರದ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬಂಟ್ವಾಳ	₹7000-8000
ಕೆ.ಆರ್.ಪೇಟೆ	₹8500-8500
ತಿಪಟೂರು	₹7500-8500

ಮಲಬಾರ್, ಟೈಟಾನ್‌ಗೆ ಜಾಗತಿಕ ಬ್ರ್ಯಾಂಡ್ ಸ್ಥಾನ

ಡೆಲಾಯ್ಟ್ ಪಟ್ಟಿ: ಕಲ್ಯಾಣ್, ಜೋಯಾಲುಕ್ಕಾಸ್‌ಗೂ ಮಾನ್ಯತೆ

ಮುಂಬೈ (ಪಿಟಿಐ): ಆಭರಣ ತಯಾರಿಕಾ ಕಂಪನಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಹಾಗೂ ಫ್ಯಾಷನ್ ಪರಿಕರಗಳನ್ನು ತಯಾರಿಸುವ ಟೈಟಾನ್ ಕಂಪನಿ ಸೇರಿದಂತೆ ಭಾರತದ ಪ್ರಮುಖ ನಾಲ್ಕು ಕಂಪನಿಗಳು, ಜಗತ್ತಿನ ನೂರು ಐಷಾರಾಮಿ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ.

ಡೆಲಾಯ್ಟ್ ಕಂಪನಿಯು ಸೋಮವಾರ ಬಿಡುಗಡೆಗೊಳಿಸಿರುವ ಗ್ಲೋಬಲ್ ಲಕ್ಸುರಿ ಗೂಡ್ಸ್ ಪಟ್ಟಿ 2023ರ ಪ್ರಕಾರ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ 19ನೇ ಸ್ಥಾನ ಪಡೆದಿದೆ. ಕೇರಳದ ಕೋಯಿಕ್ಕೋಡ್ ಮೂಲದ ಈ ಕಂಪನಿಯು ಇದೇ ಮೊದಲ ಬಾರಿಗೆ ಈ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಟಾಟಾ ಸಮೂಹದ ಟೈಟಾನ್ 24ನೇ ಸ್ಥಾನ, ಕಲ್ಯಾಣ್ ಜುವೆಲ್ಲರ್ಸ್ 46ನೇ ಸ್ಥಾನ ಹಾಗೂ ಜೋಯಾಲುಕ್ಕಾಸ್ 47ನೇ ಸ್ಥಾನ ಪಡೆದಿದೆ.

ಸೆಂಕೋ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಮತ್ತು ತಂಗಮಯಿಲ್ ಜ್ಯುವೆಲ್ಲರಿ ಕ್ರಮವಾಗಿ 78 ಹಾಗೂ 98ನೇ ಸ್ಥಾನ ಪಡೆದಿವೆ. ಜಗತ್ತಿನ ಐಷಾರಾಮಿ ಉತ್ಪನ್ನಗಳ ತಯಾರಿಕಾ ಕಂಪನಿಯಾದ ಫ್ರೆಂಚ್‌ನ ಎಲ್‌ವಿಎಂಎಚ್ ಈ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.

'ದೇಶೀಯ ಬ್ರ್ಯಾಂಡ್‌ಗಳು, ಐಷಾರಾಮಿ ಉತ್ಪನ್ನಗಳ ಮಾರುಕಟ್ಟೆಗೆ ಪ್ರೇರಕ ಶಕ್ತಿಯಾಗಿವೆ. ದೇಶೀಯ ಆರ್ಥಿಕತೆಯ ಬೆಳವಣಿಗೆ ಹಾಗೂ ಗ್ರಾಹಕರ ಮೆಚ್ಚುಗೆಯಿಂದಾಗಿ ದೇಶೀಯ ಐಷಾರಾಯಿ ಉತ್ಪನ್ನಗಳ ಮಾರುಕಟ್ಟೆಯು ಅಭಿವೃದ್ಧಿ ಹೊಂದುತ್ತಿದೆ. ಜೊತೆಗೆ, ಜಾಗತಿಕ ಮಟ್ಟದಲ್ಲಿ ಈ ಬ್ರ್ಯಾಂಡ್‌ಗಳನ್ನು ಗುರುತಿಸುವಿಕೆಗೂ ಇದು ನೆರವಾಗಲಿದೆ' ಎಂದು ಡೆಲಾಯ್ಟ್ ಹೇಳಿದೆ.

ಕಾಳುಮೆಣಸು ದರ: ಅಲ್ಪ ಚೇತರಿಕೆ

ಪ್ರಜಾವಾಣಿ ವಾರ್ತೆ

ಶಿರಸಿ: ಒಂದು ವಾರದಿಂದಲೂ ಕುಸಿತದ ಹಾದಿ ಹಿಡಿದಿದ್ದ ಕಾಳುಮೆಣಸು ದರ ಸ್ವಲ್ಪ ಚೇತರಿಕೆ ಕಂಡಿದೆ.

ಕಳೆದ ಸೋಮವಾರ ಪ್ರತಿ ಕ್ವಿಂಟಲ್‌ಗೆ ₹61 ಸಾವಿರವಿದ್ದ ದರವು ವಾರಾಂತ್ಯದ ವೇಳೆಗೆ ₹54 ಸಾವಿರಕ್ಕಿಂತಲೂ ಕಡಿಮೆಯಾಗಿತ್ತು.

ಸೋಮವಾರ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ಗರಿಷ್ಠ ₹55,699 ದರ ದಾಖಲಾಗಿದೆ.

'ಗುಣಮಟ್ಟದ ಕಾಳುಮೆಣಸು ಕಡಿಮೆ ಪ್ರಮಾಣದಲ್ಲಿ ಆವಕ ಆಗುತ್ತಿದೆ. ಅದು ಮಾರುಕಟ್ಟೆಗೆ ಪೂರೈಕೆಯಾದರೆ ದರ ಏರಿಕೆ ಆಗುತ್ತದೆ. ಇಲ್ಲದಿದ್ದರೆ, ಕ್ವಿಂಟಲ್‌ಗೆ ಸರಾಸರಿ ದರ ₹54 ಸಾವಿರ ಇರುತ್ತದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಧಾರಣೆ ಏರಿಳಿತವಾಗುತ್ತಿದೆ' ಎನ್ನುತ್ತಾರೆ ವರ್ತಕರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಸೇವಾ ತರಬೇತಿ ಮತ್ತು ಉದ್ಯೋಗ: ಸೇವಾಸಂಸ್ಥೆಯ ನರ್ಸಿಂಗ್ ವಿಭಾಗಕ್ಕೆ SSLC,PUC,Degree ಆದ ಮಹಿಳಾ ಹಾಗೂ ಪುರುಷ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು. ಆಸ್ಪತ್ರೆಗಳಲ್ಲಿ ಉಚಿತ ತರಬೇತಿ. ತರಬೇತಿಯಲ್ಲಿ ಮಾಸಿಕಸಂಬಳ 15,000ದಿಂದ 20,000ತನಕ. ಊಟ,ಹಾಸ್ಟೆಲ್,ಸಮವಸ್ತ್ರ ಉಚಿತ ಹಾಗೂ ಕರ್ನಾಟಕದ್ಯಾದ್ಯಂತವಿರುವ ನಮ್ಮ ಸೇವಾಸಂಸ್ಥೆಯಿಂದ ಉದ್ಯೋಗ ಅವಕಾಶ. ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ದಾಸ್ ಸೇವಾಸಂಸ್ಥೆ(ರಿ)(ಸರಕಾರಿ ನೋಂದಾಯಿತ ಸಂಸ್ಥೆ), ಮಂಗಳೂರು:0824-2432744, 9343568915, 9845495055.ಬೆಂಗಳೂರು: 9242730143, ಮೈಸೂರು: 9243306815, ಹುಬ್ಬಳ್ಳಿ:9242302918, ಬೆಳಗಾಂ:9242096219, ಹಾಸನ: 9241324003, ಶಿವಮೊಗ್ಗ:9241127545, ದಾವಣಗೆರೆ:7760164111, ಬಳ್ಳಾರಿ: 9972851518 Website:www.homenursingservices.org

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಕನ್ನಡ ಟೆಲಿಕಾಲರ್‌ಗಳು ಬೇಕು. (ತಾಜಾ/ ಅನುಭವಿ)ಸ್ಥಳ: ಮಲ್ಲೇಶ್ವರಂ, ಬೆಂಗಳೂರುಸಂಬಳ (ಮಾಸಿಕ ರೂ. 15000/-), ಕೆಲಸದ ಸಮಯ : ಮಧ್ಯಾಹ್ನ 2:00 ರಿಂದ ರಾತ್ರಿ 8:30, ಆಸಕ್ತರು 7669250202 ಗೆ ಮಿಸ್ಡ್ ಕಾಲ್ ನೀಡಿ

Multiple Vacancy

REQUIRED EXPERIENCED Telecaller & Loan Recovery Supervisor for BankLoan collection. Salary 30,000+ Incentive. 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9035482999/ 6366430366

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಭವಿಷ್ಯ

Astrology

ವಶೀಕರಣ ಸ್ಪೆಷಲಿಸ್ಟ್, ಕೇರಳದ ಮಾಂತ್ರಿಕರು, ಪ್ರೇಮವಿಚಾರ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ ಅಷ್ಟಮಂಗಲ ಪೂಜೆಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. 9900574892

ಪ್ರವಾಸ

Travel

ಸುಸಜ್ಜಿತವಾದ ಊಟ, ವಸತಿಯೊಂದಿಗೆ 27.3.2024 ರಿಂದ (10/6) ದಿನಗಳ ರೈಲು/ವಿಮಾನದಲ್ಲಿ ಅಯೋಧ್ಯಾ ಕಾಶಿ, ಗಯಾ. 13.4.2024ರಿಂದ 7 ದಿನಗಳ 2/2 ಲಕ್ಸ್ಯುರಿ ಬಸ್ಸಿನಲ್ಲಿ ಶಿರಡಿ, ಪಂಡರಾಪುರ ಭೀಮಾಶಂಕರ ಕೊಲ್ಲಾಪುರ್ ನಾಸಿಕ್, ಎಲ್ಲೋರಾ. 23.4.2024ರಿಂದ ರೈಲಿನಲ್ಲಿ 13 ದಿನಗಳ ಅಯೋಧ್ಯಾ, ಕಾಶಿ ಪೂರಿಜಗನ್ನಾಥ, ಕೋನಾರ್ಕ್. 2.6.2024 ರಿಂದ ರೈಲು/ ವಿಮಾನದಲ್ಲಿ (18/14) ಚಾರ್ಧಾಮ್: ಕೇದಾರನಾಥ್, ಬದರಿನಾಥ್, ಗಂಗೋತ್ರಿ ಯಮುನೋತ್ರಿ. ಸಂಪರ್ಕಿಸಿ: 9740311411, 9741024122. ಕೆ.ಪಿ.ಟೂರ್ಸ್ & ಟ್ರಾವೆಲ್ಸ್, ಬೆಂಗಳೂರು.

12.04.2024 17.05.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 12.04.2024 ದುಬೈ,ಅಬುದಾಬಿ 5 ದಿನಗಳು. 12.04.2024 05.05.2024 ಭೂತಾನ್ 8 ದಿನಗಳು. 17.03.2024 12.04.2024 ಶ್ರೀಲಂಕಾ 7 ದಿನಗಳು. 02.04.2024 03.05.2024 29.05.2024 ಅಸ್ಸಾಂ ಅರುಣಾಚಲಪ್ರದೇಶ ಮೇಘಾಲಯ 9 ದಿನಗಳು. 25.03.2024 16.04.2024 ಕಾಶಿ,ಗಯಾ,ಅಯೋಧ್ಯಾ 8 ದಿನಗಳು. 05.04.2024 25.04.2024 14.05.2024 ಶಿಮ್ಲಾ ಕುಲುಮನಾಲಿ 7 ದಿನಗಳು. 21.04.2024 06.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

16.3.2024 ಮತ್ತು 29.3.2024 ರಿಂದ 5ದಿನ ಕಾಶಿ. ಅಯೋಧ್ಯೆ. ಗಯಾ. ಅಲಹಾಬಾದ್. 23.3.2024 ರಿಂದ 8ದಿನ ಉಜ್ಜಯಿನಿ. ಓಂಕಾರೇಶ್ವರ, ಭೀಮಾಶಂಕರ, ಶಿರಡಿ, ತುಳಜಾಪುರ, ಎಲ್ಲೋರ, ಪಂಡರಾಪುರ. 28.3.2024 ರಿಂದ 4ದಿನ ರಾಮೇಶ್ವರ- ಕನ್ಯಾಕುಮಾರಿ- ಮಧುರೈ- ಶ್ರೀರಂಗ.21.4.2024 ರಿಂದ 10 ದಿನ, ವೈಷ್ಣೋದೇವಿ. ದೆಹಲಿ, ಕುಲುಮನಾಲಿ, ವಾಘಾಬಾರ್ಡರ್. 27.4.2024 ರಿಂದ 4ದಿನ, ಧರ್ಮಸ್ಥಳ- ಹೊರನಾಡು- ಕೊಲ್ಲೂರು ಮೂಕಾಂಬಿಕೆ, ಸಿಗಂದೂರು. 28.4.2024 ರಿಂದ 4ದಿನ ತಿರುನಲ್ಲಾರ್. ಚಿದಂಬರಂ, ತಂಜಾವೂರು, ಶ್ರೀರಂಗ. 7.5.2024 ರಿಂದ 7ದಿನ ಸಿಂಗಾಪುರ- ಮಲೇಷಿಯಾ, 12.6.2024 ರಿಂದ 13ದಿನ ಚಾರ್‌ದಾಮ್ ಪ್ರವಾಸ ಕೇದಾರನಾಥ, ಬದರೀನಾಥ, ಇತರೆ ಸ್ಥಳಗಳು. ಶ್ರೀಗುರುರಾಜ ಟ್ರಾವೆಲ್ಸ್: ಕೋಲಾರ. 9900124333, 9611082432, 8123099913

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
ರಿಯಲ್ ಎಸ್ಟೇಟ್
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಷೇರು ಸೂಚ್ಯಂಕ ಏರಿಕೆ

ನವದೆಹಲಿ (ಪಿಟಿಐ): ಹಣಕಾಸು ಮತ್ತು ಎಫ್‌ಎಂಸಿಜಿ ಷೇರುಗಳು ಲಾಭ ಕಂಡಿದ್ದರಿಂದ ಸೋಮವಾರ ಷೇರು ಸೂಚ್ಯಂಕಗಳು ಏರಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 281 ಅಂಶ ಏರಿಕೆಯಾಗಿ 72,708ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 81 ಅಂಶ ಹೆಚ್ಚಳವಾಗಿ 22,122ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಹೂಡಿಕೆದಾರರ ಸಂಪತ್ತು ಒಂದೇ ದಿನ ₹2.20 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಪೇಟಿಎಂ ಷೇರಿನ ಮೌಲ್ಯ ಏರಿಕೆ: ಪೇಟಿಎಂನ ಮಾತೃಸಂಸ್ಥೆಯಾದ ಒನ್‌97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರುಗಳ ಮೌಲ್ಯ ಶೇ 5ರಷ್ಟು ಏರಿಕೆ ಕಂಡಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ವಿಧಿಸಿದ್ದ ನಿರ್ಬಂಧವನ್ನು ಆರ್‌ಬಿಐ, ಮಾರ್ಚ್ 15ರ ವರೆಗೆ ವಿಸ್ತರಿಸಿದೆ. ಜೊತೆಗೆ ಪೇಟಿಎಂ, ಆಕ್ಸಿಸ್ ಬ್ಯಾಂಕ್ ಸಹಯೋಗದೊಂದಿಗೆ ಕೆಲಸ ನಿರ್ವಹಿಸುವುದಾಗಿ ನಿರ್ಧಾರ ಪ್ರಕಟಿಸಿದ ನಂತರ ಷೇರಿನ ಮೌಲ್ಯ ಏರಿಕೆ ಕಂಡಿದೆ.

ವಿರೋಧ ಪಕ್ಷದ ನಾಯಕರ ಐಫೋನ್ ಹ್ಯಾಕ್ ವಿವಾದ

ಆ್ಯಪಲ್‌ಗೆ ಸ್ಪಷ್ಟ ಉತ್ತರ ಕೇಳಿದ ಕೇಂದ್ರ

ನವದೆಹಲಿ (ಪಿಟಿಐ): 'ವಿರೋಧ ಪಕ್ಷದ ನಾಯಕರ ಐಫೋನ್ ಹ್ಯಾಕ್ ವಿವಾದಕ್ಕೆ ಸಂಬಂಧಿಸಿದಂತೆ ಆ್ಯಪಲ್ ಕಂಪನಿಯಿಂದ ಸ್ಪಷ್ಟ ಉತ್ತರಕ್ಕಾಗಿ ಸರ್ಕಾರ ಕಾಯುತ್ತಿದೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ಐದು ತಿಂಗಳ ಹಿಂದೆ 'ಸರ್ಕಾರಿ ಪ್ರಾಯೋಜಿತ ದಾಳಿಕೋರರು' ಐಫೋನ್ ಹ್ಯಾಕ್ ಮಾಡುತ್ತಿದ್ದಾರೆ ಎಂದು ವಿಪಕ್ಷಗಳ ನಾಯಕರ ಫೋನ್ ಹಾಗೂ ಇ-ಮೇಲ್‌ಗಳಿಗೆ ಕಂಪನಿಯು ಎಚ್ಚರಿಕೆಯ ಸಂದೇಶ ಕಳುಹಿಸಿತ್ತು.



ರಾಜೀವ್ ಚಂದ್ರಶೇಖರ್

'ವಿಪಕ್ಷ ನಾಯಕರ ಸಾಧನಗಳು ಸುರಕ್ಷಿತವಾಗಿವೆಯೇ ಹಾಗೂ ಒಂದು ವೇಳೆ ಸುರಕ್ಷಿತವಾಗಿದ್ದರೆ ಎಚ್ಚರಿಕೆಯ ಸಂದೇಶ ಕಳುಹಿಸಲು ನೈಜ ಕಾರಣವೇನು ಎಂಬುದನ್ನು ಸ್ಪಷ್ಟಪಡಿಸುವಂತೆ ಆ್ಯಪಲ್‌ಗೆ ಕೇಳಲಾಗಿದೆ' ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಸಚಿವರು ಹೇಳಿದ್ದಾರೆ.

ಯಾವುದೇ ಕಂಪನಿಯು ತನ್ನ ದೌರ್ಬಲ್ಯದ ಬಗ್ಗೆ ಒಪ್ಪಿಕೊಳ್ಳುವುದಿಲ್ಲ. ಅದನ್ನು ಸ್ಪಷ್ಟವಾಗಿ ನಿರಾಕರಿಸುವ ಪ್ರವೃತ್ತಿ ಹೊಂದಿರುತ್ತದೆ ಎಂದು ಹೇಳಿದ್ದಾರೆ.

ಸರ್ಕಾರದ ವಿರುದ್ಧ ಆರೋಪ ಕೇಳಿಬಂದ ದಿನದಂದೇ ಆ್ಯಪಲ್ ಕಂಪನಿಯೇ ಇದಕ್ಕೆ ಉತ್ತರ ನೀಡಬೇಕು ಎಂದು ಸರ್ಕಾರ ಸ್ಪಷ್ಟಪಡಿಸಿದೆ ಎಂದಿದ್ದಾರೆ. ಆ್ಯಪಲ್ ಆಪರೇಟಿಂಗ್ ಸಿಸ್ಟಂ ಬಗ್ಗೆ ಪರಿಶೀಲಿಸಲು ಸರ್ಕಾರವು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಹೊಂದಿಲ್ಲ. ತನ್ನ ಒಡೆತನದ ತಂತ್ರಜ್ಞಾನದ ಬಗ್ಗೆ ಕಂಪನಿ ಕೂಡ ಸರ್ಕಾರಕ್ಕೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಹೇಳಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಶಶಿ ತರೂರ್ ಸೇರಿದಂತೆ ಹಲವು ನಾಯಕರು, ತಮ್ಮ ಐಫೋನ್ ಹ್ಯಾಕ್ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದು, ಚರ್ಚೆಗೆ ಗ್ರಾಸವಾಗಿತ್ತು.

ಅಮೆರಿಕ: ದಾಖಲೆಯ ಹಾದಿಯಲ್ಲಿ ಅಶ್ವಿನ್

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ 24 ವರ್ಷದ ಅಶ್ವಿನ್ ರಾಮಸ್ವಾಮಿ ಅವರು ಅಮೆರಿಕದ ಜಾರ್ಜಿಯಾದಿಂದ ಸೆನೆಟರ್ ಸ್ಥಾನಕ್ಕೆ ಸ್ಪರ್ಧಿಸಿ ದಾಖಲೆ ನಿರ್ಮಿಸುವ ಹಾದಿಯಲ್ಲಿದ್ದಾರೆ. ಅಮೆರಿಕದ ರಾಜಕಾರಣದಲ್ಲಿ ಭಾರತ ಮೂಲದ 'ಜನರೇಷನ್ ಝಡ್' ಯುವಕನೊಬ್ಬ ಚುನಾವಣೆ ಕಣಕ್ಕಿಳಿಯಲಿರುವುದು ಇದೇ ಮೊದಲು.

'ಜನರೇಷನ್ ಝಡ್' ಎಂದರೆ 1997ರಿಂದ 2012ರ ನಡುವೆ ಹುಟ್ಟಿದವರು. ಇವರನ್ನು 'ಝೂಮರ್ಸ್' ಎಂದೂ ಕರೆಯಲಾಗುತ್ತದೆ. ಅಶ್ವಿನ್ ಪೋಷಕರು 1990ರಲ್ಲಿ ತಮಿಳುನಾಡಿನಿಂದ ಅಮೆರಿಕಕ್ಕೆ ಹೋಗಿ ನೆಲೆಸಿದ್ದರು.

ಅಶ್ವಿನ್ ರಾಮಸ್ವಾಮಿ

ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅಶ್ವಿನ್, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲು ತಯಾರಿ ನಡೆಸಲಿದ್ದಾರೆ.

ಅಶ್ವಿನ್ ರಾಮಸ್ವಾಮಿ ಗೆಲುವು ಸಾಧಿಸಿದರೆ, ಜಾರ್ಜಿಯಾದ 'ಜನರೇಷನ್ ಝಡ್'ನ ಮೊದಲ ಸೆನೆಟರ್ ಆಗಲಿದ್ದಾರೆ. ಅದೇ ರೀತಿ, ಜಾರ್ಜಿಯಾ ಶಾಸನಸಭೆಗೆ ಆಯ್ಕೆಯಾದ ಮೊದಲ ಭಾರತೀಯ ಅಮೆರಿಕನ್ ಆಗಿ ದಾಖಲೆ ನಿರ್ಮಿಸಲಿದ್ದಾರೆ.

ಹಳೆಯ ತೆರಿಗೆ ಬೇಡಿಕೆ ವಾಪಸ್ ಮಿತಿ ₹1 ಲಕ್ಷಕ್ಕೆ ನಿಗದಿ: ಸಿಬಿಡಿಟಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಿರುವಂತೆ ಹಳೆಯ ಮತ್ತು ವಿವಾದಿತ ನೇರ ತೆರಿಗೆ ಹಿಂಪಡೆಯುವ ಮಿತಿಯನ್ನು ₹1 ಲಕ್ಷಕ್ಕೆ ನಿಗದಿಗೊಳಿಸಿದೆ.

2010-11ರ ವರೆಗೆ ₹25 ಸಾವಿರಕ್ಕಿಂತ ಕಡಿಮೆ ಮೊತ್ತ ಹಾಗೂ 2011-12ರಿಂದ 2014-15ರ ವರೆಗೆ ₹10 ಸಾವಿರಕ್ಕಿಂತ ಕಡಿಮೆ ಮೊತ್ತದ ನೇರ ತೆರಿಗೆ ಬೇಡಿಕೆಯನ್ನು ಹಿಂಪಡೆಯಲಾಗುತ್ತದೆ. ಒಟ್ಟು ₹3,500 ಕೋಟಿ ತೆರಿಗೆ ಬೇಡಿಕೆಯನ್ನು ಹಿಂಪಡೆಯಲಾಗುವುದು. ಹಳೆಯ ಮತ್ತು ವಿವಾದಿತ ನೇರ ತೆರಿಗೆಗಳ ವಸೂಲಾತಿಯನ್ನು ಮುಂದುವರಿಸುವುದಿಲ್ಲ ಎಂದು ಸರ್ಕಾರ ಹೇಳಿತ್ತು.

ಆದಾಯ ತೆರಿಗೆ, ಸಂಪತ್ತಿನ ತೆರಿಗೆ ಮತ್ತು ಉಡುಗೊರೆ ತೆರಿಗೆಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ತೆರಿಗೆ ಪಾವತಿಯೂ ₹1 ಲಕ್ಷ ಮಿತಿಗೆ ಒಳಪಟ್ಟಿರುತ್ತದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಹೇಳಿದೆ. ಸುಮಾರು 1.11 ಕೋಟಿಗೂ ಹೆಚ್ಚು ವಿವಾದಿತ ತೆರಿಗೆ ಬೇಡಿಕೆಗಳಿವೆ ಎಂದು ಕೇಂದ್ರ ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ದುಬೈ ವಿಮಾನ ನಿಲ್ದಾಣ: ಭಾರತ ಪ್ರಯಾಣಿಕರೇ ಮುಂದು

ದುಬೈ (ಪಿಟಿಐ): ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಸಂಚರಿಸಿದ ಪ್ರಯಾಣಿಕರ ಸಂಖ್ಯೆಯಲ್ಲಿ ಭಾರತೀಯರು ಅಗ್ರಸ್ಥಾನದಲ್ಲಿದ್ದಾರೆ ಎಂದು ವಿಮಾನ ನಿಲ್ದಾಣದ ಪ್ರಕಟಣೆ ತಿಳಿಸಿದೆ.

2023ರ ಸಾಲಿನಲ್ಲಿ ದುಬೈ ನಿಲ್ದಾಣದ ಮೂಲಕ ಒಟ್ಟು 8.69 ಕೋಟಿ ಮಂದಿ ಪ್ರಯಾಣಿಸಿದ್ದಾರೆ. ಇದರಲ್ಲಿ ಭಾರತದ ಪ್ರಯಾಣಿಕರ ಸಂಖ್ಯೆ 1.19 ಕೋಟಿಯಷ್ಟಿದೆ ಎಂದು ಸೋಮವಾರ ಬಿಡುಗಡೆಗೊಳಿಸಿದ ಅಂಕಿ-ಅಂಶ ತಿಳಿಸಿದೆ.

ಪ್ರಯಾಣಿಕರ ಸಂಖ್ಯೆಯಲ್ಲಿ ಸೌದಿ ಅರೇಬಿಯಾ (67 ಲಕ್ಷ ಪ್ರಯಾಣಿಕರು), ಭಾರತದ ಬಳಿಕ ಎರಡನೇ ಸ್ಥಾನದಲ್ಲಿದೆ. ಬ್ರಿಟನ್ (59 ಲಕ್ಷ), ಪಾಕಿಸ್ತಾನ (42 ಲಕ್ಷ), ಅಮೆರಿಕ (36 ಲಕ್ಷ), ರಷ್ಯಾ (25 ಲಕ್ಷ) ಮತ್ತು ಜರ್ಮನಿ (25 ಲಕ್ಷ) ಬಳಿಕದ ಸ್ಥಾನಗಳಲ್ಲಿವೆ.

ದುಬೈ ನಿಲ್ದಾಣದಿಂದ 104 ದೇಶಗಳ 262 ತಾಣಗಳಿಗೆ ವಿಮಾನ ಸಂಪರ್ಕ ಇದ್ದು, ಒಟ್ಟು 102 ವಿಮಾನಯಾನ ಕಂಪನಿಗಳು ಕಾರ್ಯಾಚರಿಸುತ್ತಿವೆ.

ಅವ್‌ಡಿವ್ಕಾ ರಷ್ಯಾ ವಶಕ್ಕೆ

ಕೀವ್ (ಎಪಿ): ಉಕ್ರೇನ್‌ನ ಅವ್‌ಡಿವ್ಕಾ ನಗರವನ್ನು ಸಂಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ರಷ್ಯಾ ಸೇನೆ ಸೋಮವಾರ ತಿಳಿಸಿದೆ.

ಅವ್‌ಡಿವ್ಕಾದಲ್ಲಿ ರಷ್ಯಾ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾವಣೆಗೊಂಡಿದ್ದು, ಉಕ್ರೇನ್ ಪಡೆಗಳನ್ನು ನಗರದಿಂದ ಹೊರದಬ್ಬಿದೆ.

'ಅವ್‌ಡಿವ್ಕಾ ನಮ್ಮ ನಿಯಂತ್ರಣದಲ್ಲಿದೆ' ಎಂದು ರಷ್ಯಾ ಅಧಿಕಾರಿಗಳು ಹೇಳಿದ್ದಾರೆ. ರಷ್ಯಾ ಬಾಂಬ್ ದಾಳಿಯ ಬಳಿಕ ನಗರದಿಂದ ಹೊರಬಂದಿರುವುದಾಗಿ ಉಕ್ರೇನ್ ಸೇನೆ ತಿಳಿಸಿದೆ.

ಯುದ್ಧ ಆರಂಭವಾಗಿ ಎರಡು ವರ್ಷ ಪೂರ್ಣಗೊಳ್ಳಲು ಕೆಲವೇ ದಿನಗಳಿಗಿರುವಾಗ ಲಭಿಸಿರುವ ದೊಡ್ಡ ಯಶಸ್ಸು ರಷ್ಯಾಕ್ಕೆ ಮತ್ತಷ್ಟು ಶಕ್ತಿ ತುಂಬಿದೆ ಎಂದು ವಿಶ್ಲೇಷಿಸಲಾಗಿದೆ.

'ಸುನ್ನಿ ಇತ್ತೇಹಾದ್ ಕೌನ್ಸಿಲ್' ಜತೆಗೂಡಲಿರುವ ಪಿಟಿಐ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷದ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು ಸುನ್ನಿ ಇತ್ತೇಹಾದ್ ಕೌನ್ಸಿಲ್ ಸೇರಲಿದ್ದಾರೆ ಎಂದು ಪಕ್ಷದ ಮೂಲಗಳು ಸೋಮವಾರ ತಿಳಿಸಿವೆ.

ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದ ರಾಷ್ಟ್ರೀಯ ಅಸೆಂಬ್ಲಿಯಲ್ಲಿನ ನಮ್ಮ ಪ್ರತಿನಿಧಿಗಳು. ಪಂಜಾಬ್, ಖೈಬರ್ ಫಖ್ತುಂಖ್ವಾ ಶಾಸನಸಭೆಗಳಲ್ಲಿನ ಪ್ರತಿನಿಧಿಗಳು ಸುನ್ನಿ ಇತ್ತೇಹಾದ್ ಕೌನ್ಸಿಲ್ ಸೇರಲಿದ್ದಾರೆ ಎಂದು ಪಕ್ಷದ ಅಧ್ಯಕ್ಷ ಗೋಹರ್ ಖಾನ್ ತಿಳಿಸಿದ್ದಾರೆ.

ರಫಾ ಆಕ್ರಮಣ: ಇಸ್ರೇಲ್ ಬೆದರಿಕೆ

ಗಾಜಾ ಪಟ್ಟಿ (ಎಎಫ್‌ಪಿ): 'ಹಮಾಸ್ ಬಂಡುಕೋರರು ತಮ್ಮ ವಶದಲ್ಲಿರುವ ಎಲ್ಲ ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದರೆ ರಂಜಾನ್ ತಿಂಗಳ ಆರಂಭದ ಸಂದರ್ಭದಲ್ಲಿ ಗಾಜಾ ಪಟ್ಟಿಯ ರಫಾ ನಗರವನ್ನು ಆಕ್ರಮಿಸಲಾಗುವುದು' ಎಂದು ಇಸ್ರೇಲ್ ಬೆದರಿಕೆ ಹಾಕಿದೆ.

ರಫಾ ನಗರದಲ್ಲಿ ಆಶ್ರಯ ಪಡೆದಿರುವ ಪ್ಯಾಲೆಸ್ಟೀನ್ ನಾಗರಿಕರ ರಕ್ಷಣೆ ಕುರಿತು ಇಸ್ರೇಲ್ ಮೇಲೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ಇದ್ದರೂ ಈ ಎಚ್ಚರಿಕೆ ನೀಡಿದೆ.

ಈ ಮಧ್ಯೆ, ಕದನ ವಿರಾಮದ ಮಾತುಕತೆಗಳು ನಿರೀಕ್ಷಿತ ಫಲ ನೀಡಿಲ್ಲ. ಇಸ್ರೇಲ್‌ನ ಬೆದರಿಕೆ ಬೆನ್ನಲ್ಲೇ ವಿಶ್ವಸಂಸ್ಥೆ, ಅಮೆರಿಕ ಹಾಗೂ ಅನೇಕ ದೇಶಗಳು, 'ರಫಾ ಮೇಲೆ ಆಕ್ರಮಣ ಮಾಡುವ ನಿರ್ಧಾರವನ್ನು ಕೈಬಿಡಬೇಕು' ಎಂದು ಇಸ್ರೇಲ್‌ಗೆ ಮನವಿ ಮಾಡಿವೆ. 'ಜಗತ್ತು ಮತ್ತು ಹಮಾಸ್ ನಾಯಕರಿಗೆ ಈ ಸಂಗತಿ ತಿಳಿಯಬೇಕಿದೆ. ಹಮಾಸ್ ಬಂಡುಕೋರರು ಒತ್ತೆಯಿರಿಸಿಕೊಂಡಿರುವ ನಮ್ಮವರನ್ನು ರಂಜಾನ್ ವೇಳೆಗೆ ಬಿಡುಗಡೆ ಮಾಡದಿದ್ದರೆ, ರಫಾ ಸೇರಿದಂತೆ ಎಲ್ಲ ಕಡೆಯೂ ಆಕ್ರಮಣ ನಡೆಸಬೇಕಾಗುತ್ತದೆ' ಎಂದು ಸೇನೆಯ ನಿವೃತ್ತ ಮುಖ್ಯಸ್ಥ ಬೆನ್ನಿ ಗ್ಯಾಂಟ್ಜ್ ಅವರು ಭಾನುವಾರ ಜೆರುಸಲೇಂನಲ್ಲಿ ನಡೆದ ಅಮೆರಿಕನ್ ಯಹೂದಿ ನಾಯಕರ ಸಮ್ಮೇಳನದಲ್ಲಿ ಹೇಳಿದರು.

'ಹಮಾಸ್ ಮುಂದೆ ಇನ್ನೂ ಒಂದು ಆಯ್ಕೆಯಿದೆ. ನಮಗೆ ಶರಣಾಗಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದರೆ, ಗಾಜಾದ ಜನರು ರಂಜಾನ್ ಮಾಸವನ್ನು ಆಚರಣೆ ಮಾಡಬಹುದು' ಎಂದಿದ್ದಾರೆ. ಮುಸ್ಲಿಮರ ಪವಿತ್ರ ರಂಜಾನ್ ಉಪವಾಸ ಮಾರ್ಚ್ 10ರಂದು ಶುರುವಾಗಲಿದೆ.

29 ಸಾವಿರ ದಾಟಿದ ಸಾವಿನ ಸಂಖ್ಯೆ: ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧ ಆರಂಭವಾದ ಬಳಿಕ ಮೃತಪಟ್ಟ ಪ್ಯಾಲೆಸ್ಟೀನ್ ಪ್ರಜೆಗಳ ಸಂಖ್ಯೆ 29,092ಕ್ಕೆ ತಲುಪಿದೆ ಎಂದು ಗಾಜಾದಲ್ಲಿನ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಉತ್ತರಪ್ರದೇಶ: ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಪಟ್ಟು

‘17 ಸ್ಥಾನಕ್ಕೆ ‘ಕೈ’ ಒಪ್ಪಿದರಷ್ಟೆ ಯಾತ್ರೆಗೆ’

ಲಖನೌ (ಪಿಟಿಐ): ‘ಉತ್ತರಪ್ರದೇಶದಲ್ಲಿ ಕಾಂಗ್ರೆಸ್‌ಗೆ 17 ಲೋಕಸಭಾ ಕ್ಷೇತ್ರಗಳನ್ನು ಬಿಟ್ಟುಕೊಡಲು ಸಿದ್ಧರಿದ್ದೇವೆ. ಇದಕ್ಕೆ ಒಪ್ಪಿದರಷ್ಟೆ ರಾಯ್‌ಬರೇಲಿಯಲ್ಲಿ ನಡೆಯಲಿರುವ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆಯಲ್ಲಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಭಾಗವಹಿಸುತ್ತಾರೆ’ ಎಂದು ಸಮಾಜವಾದಿ ಪಕ್ಷ ಸೋಮವಾರ ತಿಳಿಸಿದೆ.

‘ಕಾಂಗ್ರೆಸ್‌ಗೆ ಕೊನೆಯ ಅವಕಾಶವನ್ನು ನೀಡುತ್ತಿದ್ದೇವೆ. ಅಖಿಲೇಶ್ ಯಾದವ್ ಅವರು ಯಾತ್ರೆಯಲ್ಲಿ ಭಾಗಿಯಾಗುವುದು ಕಾಂಗ್ರೆಸ್‌ನ ಒಪ್ಪಿಗೆಯ ಮೇಲೆ ನಿರ್ಧರಿತವಾಗಲಿದೆ’ ಎಂದು ಸಮಾಜವಾದಿ ಪಕ್ಷದ ಮುಖ್ಯ ವಕ್ತಾರ ರಾಜೇಂದ್ರ ಚೌಧರಿ ತಿಳಿಸಿದರು.

ಸೋಮವಾರ ಅಮೇಥಿಯಲ್ಲಿ ಭಾರತ್ ಜೋಡೋ ನ್ಯಾಯ ಯಾತ್ರೆಯು ಸಾಗಿದ್ದು, ಮಂಗಳವಾರ ರಾಯ್‌ಬರೇಲಿಯನ್ನು ತಲುಪಲಿದೆ. ಯಾತ್ರೆಯಲ್ಲಿ ಭಾಗಿಯಾಗುವುದಾಗಿ ಈ ಹಿಂದೆ ಅಖಿಲೇಶ್ ತಿಳಿಸಿದ್ದರು. ಇದೀಗ ಸೀಟು ಹಂಚಿಕೆ ತೀರ್ಮಾನವಾದರೆ ಮಾತ್ರ ಯಾತ್ರೆಯಲ್ಲಿ ಭಾಗಿಯಾಗುವುದಾಗಿ ಷರತ್ತು ವಿಧಿಸಿದ್ದಾರೆ.

‘ಇಂಡಿಯಾ’ದ ಭಾಗವಾಗಿರುವ ಸಮಾಜವಾದಿ ಪಕ್ಷವು ಆರಂಭದಲ್ಲಿ ಕಾಂಗ್ರೆಸ್‌ಗೆ 11 ಸ್ಥಾನಗಳನ್ನು ಬಿಟ್ಟು ಕೊಡುವುದಾಗಿ ತಿಳಿಸಿತ್ತು. ಆದರೆ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ನೀಡುವಂತೆ ಪಟ್ಟುಹಿಡಿದಿದೆ.

ದೆಹಲಿ ನಿವಾಸದಲ್ಲಿ ಆಪ್ತರ ಜತೆ ಕಮಲ್ ನಾಥ್ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್‌ನಲ್ಲಿ ಕಮಲ್ ನಾಥ್ ಮುಂದುವರಿಯುವರೋ ಇಲ್ಲವೋ ಎನ್ನುವ ಪ್ರಶ್ನೆಗೆ ಸೋಮವಾರವೂ ಉತ್ತರ ದೊರೆಯಲಿಲ್ಲ.

ತಮ್ಮ ಆಪ್ತರು ಹಾಗೂ ಸಹವರ್ತಿಗಳೊಂದಿಗೆ ಕಮಲ್ ನಾಥ್ ಸೋಮವಾರ ಸಭೆ ನಡೆಸಿದರು. ಆದರೆ, ಮಾಧ್ಯಮದವರ ಜತೆಗೆ ಏನನ್ನೂ ಮಾತನಾಡಲಿಲ್ಲ.

ಅವರ ನಿವಾಸದ ಮೇಲೆ ಹಾರಾಡುತ್ತಿದ್ದ ‘ಜೈ ಶ್ರೀ ರಾಮ್’ ಎಂಬ ಧ್ವಜವನ್ನು ತೆರವುಗೊಳಿಸಲಾಗಿದೆ ಎಂದು ಕೆಲವು ಮಾಧ್ಯಮ ವರದಿ ಮಾಡಿದ್ದವು. ಆ ಧ್ವಜ ಮತ್ತೆ ಅವರ ನಿವಾಸದ ಮೇಲೆ ಹಾರಾಡತೊಡಗಿದೆ.

ಕಮಲ್ ನಾಥ್ ಹಾಗೂ ಲೋಕಸಭಾ ಸದಸ್ಯರೂ ಆಗಿರುವ ಅವರ ಮಗ ನಕುಲ್ ನಾಥ್ ಕಾಂಗ್ರೆಸ್ ತೊರೆದು, ನಂತರ ಬಿಜೆಪಿ ಸೇರುತ್ತಾರೆ ಎಂಬ ಊಹಾಪೋಹವಿದೆ.

ಸೋಮವಾರ ಕಮಲ್ ನಾಥ್ ಅವರ ನಿವಾಸದಲ್ಲಿ ಸಭೆ ನಡೆದ ನಂತರ ಅವರ ಸಹವರ್ತಿ ಸಜ್ಜನ್ ಸಿಂಗ್ ವರ್ಮಾ ಮಾತನಾಡಿ, ‘40 ವರ್ಷಗಳ ಕಾಲ ಇದ್ದ ಕಾಂಗ್ರೆಸ್ ಪಕ್ಷವನ್ನು ತೊರೆಯುವ ಆಲೋಚನೆಯೇನೂ ಕಮಲ್ ನಾಥ್ ಅವರಿಗೆ ಇಲ್ಲ. ಅವರೇ ಹೈಕಮಾಂಡ್ ಆಗಿರುವಾಗ ಇಂತಹ ಪ್ರಶ್ನೆಯಾದರೂ ಹೇಗೆ ಮೂಡುತ್ತದೆ?’ ಎಂದು ಪ್ರತಿಕ್ರಿಯಿಸಿದರು.

ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ ನ್ಯಾಯ ಯಾತ್ರೆ"ಯು ಭೋಪಾಲ್‌ನಲ್ಲಿ ನಡೆಯಲಿದ್ದು, ಅಲ್ಲಿ ಕಮಲ್ ನಾಥ್ ಸಭೆ ನಡೆಸಲಿದ್ದಾರೆ ಎಂದೂ ಸಜ್ಜನ್ ಸಿಂಗ್ ವರ್ಮಾ ತಿಳಿಸಿದರು.

‘ಮಧ್ಯಪ್ರದೇಶದಲ್ಲಿ ಲೋಕಸಭಾ ಚುನಾವಣೆ ಸಿದ್ಧತೆಗಳ ಕುರಿತು ಕಾಂಗ್ರೆಸ್ ಉಸ್ತುವಾರಿಗಳ ಜತೆಗೆ ಅವರು ಸಭೆ ನಡೆಸಲಿದ್ದಾರೆ. ಮಾಧ್ಯಮದ ಊಹಾಪೋಹದ ಬಗೆಗೆ ಸುಮ್ಮನೆ ಏನನ್ನು ಪ್ರತಿಕ್ರಿಯಿಸುವುದು ಎಂದು ಕಮಲ್ ನಾಥ್ ಅವರೇ ನನಗೆ ಹೇಳಿದರು’ ಎಂದು ಸಜ್ಜನ್ ಸಿಂಗ್ ಹೇಳಿದರು.

ರಾಜಸ್ಥಾನ: ಬುಡಕಟ್ಟು ಜನರ ನಾಯಕ ಬಿಜೆಪಿಗೆ ಸೇರ್ಪಡೆ

ಜೈಪುರ: ರಾಜಸ್ಥಾನದಲ್ಲಿ ಬುಡಕಟ್ಟು ಸಮುದಾಯದ ಪ್ರಭಾವಿ ನಾಯಕರಾಗಿದ್ದ ಮಹೇಂದ್ರಜೀತ್ ಸಿಂಗ್ ಮಾಲವೀಯ ಅವರು ಸೋಮವಾರ ಬಿಜೆಪಿಗೆ ಸೇರ್ಪಡೆಗೊಂಡರು. ಈ ಮೂಲಕ ಅವರು ಕಾಂಗ್ರೆಸ್ ಪಕ್ಷದ ಜೊತೆಗಿನ ಮೂರು ದಶಕದ ಸಂಬಂಧವನ್ನು ಕಡಿದುಕೊಂಡರು.

ಲೋಕಸಭೆ ಚುನಾವಣೆಗೂ ಮೊದಲು ಪಕ್ಷದ ಪ್ರಮುಖ ನಾಯಕರನ್ನು ಸೆಳೆಯಬಹುದು ಎಂಬ ಆತಂಕ ಕಾಂಗ್ರೆಸ್ ಅನ್ನು ಕಾಡುತ್ತಿರುವ ಹೊತ್ತಿನಲ್ಲಿಯೇ ಈ ಬೆಳವಣಿಗೆ ನಡೆದಿದೆ. ಮಾಲವೀಯ ಅವರು ಬನ್ಸ್ವಾರಾದ ಬಾಗಿದೌರಾ ಕ್ಷೇತ್ರದ ಶಾಸಕ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದರು.

ಇದರೊಂದಿಗೆ 200 ಸದಸ್ಯ ಬಲದ ರಾಜ್ಯದ ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಬಲ 69 ಸ್ಥಾನಗಳಿಗೆ ಕುಸಿಯಿತು. ಬಿಜೆಪಿ ಒಟ್ಟು 115 ಸದಸ್ಯರನ್ನು ಹೊಂದಿದೆ. ಮಾಳವೀಯ ಅವರು ಕಾಂಗ್ರೆಸ್ ಕಾರ್ಯಕಾರಣಿ ಸಮಿತಿ ಸದಸ್ಯರೂ ಆಗಿದ್ದರು. ನಾಲ್ಕು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಎಂಎನ್‌ಎಸ್–ಬಿಜೆಪಿ ಮೈತ್ರಿ?

ಮುಂಬೈ: ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಹುಪಕ್ಷಗಳ ಜೊತೆಗೆ ಮೈತ್ರಿ ಹೊಂದುವ ಯತ್ನವಾಗಿ ಬಿಜೆಪಿಯು, ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಮುಖಂಡ, ವಾಗ್ಮಿ ರಾಜ್ ಠಾಕ್ರೆ ಅವರನ್ನು ಸಂಪರ್ಕಿಸಿದೆ.

ರಾಜ್ ಠಾಕ್ರೆ ಅವರು ಶಿವಸೇನೆ (ಉದ್ಧವ್ ಬಣ) ನಾಯಕ ಉದ್ಧವ್ ಠಾಕ್ರೆ ಅವರ ದಾಯಾದಿ. ಬಿಜೆಪಿ ಮುಂಬೈ ಘಟಕದ ಅಧ್ಯಕ್ಷ ಆಶೀಶ್ ಶೆಲಾರ್ ಅವರು ರಾಜ್ ಅವರನ್ನು ದಾದರ್‌ನಲ್ಲಿರುವ ಅವರ ನಿವಾಸ ‘ಶಿವತೀರ್ಥ’ದಲ್ಲಿ ಭೇಟಿಯಾಗಿ ಕೆಲಹೊತ್ತು ಚರ್ಚಿಸಿದರು.

ಹಿಂದುತ್ವ ಚಿಂತನೆ, ಮರಾಠಿಗರ ಕಲ್ಯಾಣ ಕುರಿತು ಎಂಎನ್‌ಎಸ್‌ಗೆ ಒಲವು ಇರುವ ಹಿನ್ನೆಲೆಯಲ್ಲಿ ಬಿಜೆಪಿ ಮೈತ್ರಿಗೆ ಮುಂದಾಗಿದೆ ಎನ್ನಲಾಗಿದೆ. ‘ರಾಜಕಾರಣದಲ್ಲಿದ್ದು, ಗೆಳೆಯರೂ ಆಗಿರುವ ಕಾರಣ ಭೇಟಿಯಾದೆವು’ ಎಂದು ಶೆಲಾರ್ ನಂತರ ಪ್ರತಿಕ್ರಿಯಿಸಿದರು.

ದೇವಸ್ಥಾನಗಳ ಜತೆಗೇ ವೈದ್ಯಕೀಯ ಕಾಲೇಜು ನಿರ್ಮಾಣ: ಮೋದಿ

ಸಂಭಾಲ್ (ಪಿಟಿಐ/ಪ್ರಜಾವಾಣಿ ವಾರ್ತೆ): ಅಯೋಧ್ಯೆಯ ಬಾಲರಾಮ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯಲ್ಲಿ ಮುಖ್ಯ ಯಜಮಾನರಾಗಿ ಭಾಗವಹಿಸಿ ರಾಮಮಂದಿರ ಉದ್ಘಾಟನೆ ನೆರವೇರಿಸಿದ್ದ ಮೋದಿ, ಒಂದು ತಿಂಗಳೊಳಗೇ ಸೋಮವಾರ ಮತ್ತೊಂದು ದೇಗುಲದ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯಲ್ಲಿರುವ ಹಿಂದೂಗಳ ಪ್ರಸಿದ್ಧ ತೀರ್ಥಕ್ಷೇತ್ರ ಶ್ರೀ ಕಲ್ಕಿ ಧಾಮ ದೇವಾಲಯ ನಿರ್ಮಾಣಕ್ಕೆ ಪ್ರಧಾನಿ ವಿಶೇಷ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಪ್ರಧಾನಿ ಮೋದಿ, ‘ದೇಶದಲ್ಲಿ ದೇಗುಲಗಳ ನಿರ್ಮಾಣದ ಜತೆಗೇ ವೈದ್ಯಕೀಯ ಕಾಲೇಜುಗಳನ್ನೂ ನಿರ್ಮಿಸಲಾಗುತ್ತಿದೆ. ಒಂದೆಡೆ, ತೀರ್ಥಕ್ಷೇತ್ರಗಳನ್ನು ಅಭಿವೃದ್ಧಿಪಡಿಲಾಗುತ್ತಿದೆ. ಮತ್ತೊಂದೆಡೆ, ನಗರಗಳಲ್ಲಿ ಹೈಟೆಕ್ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದು ಹೇಳಿದರು.

ತಮ್ಮ ಭಾಷಣದಲ್ಲಿ ಪ್ರಧಾನಿ ಮೋದಿ ಅವರು ಅಯೋಧ್ಯೆಯ ರಾಮಮಂದಿರ ಮತ್ತು ಅಬುಧಾಬಿಯ ದೇಗುಲಗಳನ್ನೂ ಪ್ರಸ್ತಾಪಿಸಿದರು.

‘ಕಾಶಿ ವಿಶ್ವನಾಥ ಧಾಮ, ಸೋಮನಾಥ ಮಂದಿರದ ಅಭಿವೃದ್ಧಿ, ಕೇದಾರನಾಥ ದೇಗುಲದ ಪುನರ್ ನಿರ್ಮಾಣವನ್ನೂ ನಾವು ಕಂಡೆವು. ‘ವಿಕಾಸ್ ಭೀ, ವಿರಾಸತ್ ಭೀ (ವಿಕಾಸವೂ ಪರಂಪರೆಯೂ)-ಇದು ನಮ್ಮ ಮಂತ್ರ’ ಎಂದು ಅವರು ತಿಳಿಸಿದರು.

ಲಖನೌದಲ್ಲಿ ನಡೆದ ಉತ್ತರ ಪ್ರದೇಶದ ನಾಲ್ಕನೇ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಿಟಿಐ ಚಿತ್ರ

ಹಲವು ಯೋಜನೆ ಉದ್ಘಾಟನೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೋಮವಾರ ₹10 ಲಕ್ಷ ಕೋಟಿ ಮೌಲ್ಯದ 14000 ಯೋಜನೆಗಳಿಗೆ ಚಾಲನೆ ನೀಡಿದರು.

ಇವು ಉತ್ಪಾದನೆ, ನವೀಕೃತ ಇಂಧನ, ಆಹಾರ ಸಂಸ್ಕರಣೆಗೆ ಸಂಬಂಧಿಸಿದ ಯೋಜನೆಗಳಾಗಿವೆ.

‘ಸುಧಾಮ ಲಂಚ ನೀಡಿದ ಎನ್ನುತ್ತಾರೆ’

ವಿರೋಧ ಪಕ್ಷಗಳು ತಮ್ಮ ಸರ್ಕಾರದ ವಿರುದ್ಧ ಮಾಡುತ್ತಿರುವ ಭ್ರಷ್ಟಾಚಾರ ಆರೋಪಗಳ ಬಗ್ಗೆ ಪ್ರತಿಕ್ರಿಯಿಸುವ ವೇಳೆ ಪ್ರಧಾನಿ ನರೇಂದ್ರ ಮೋದಿ ಕೃಷ್ಣ, ಸುಧಾಮನ ಕಥೆಯನ್ನು ಉಲ್ಲೇಖಿಸಿದರು.

‘ಭಾಗವತ ಪುರಾಣ’ದಲ್ಲಿ ದಾಖಲಾಗಿರುವಂತೆ, ಬಡ ಬ್ರಾಹ್ಮಣ ಸುಧಾಮ ಗುರುಕುಲದಲ್ಲಿ ತನ್ನ ಸಹಪಾಠಿಯಾಗಿದ್ದ ಕೃಷ್ಣನನ್ನು ನೋಡಲು ಹೋಗುತ್ತಾನೆ. ದ್ವಾರಕೆಯ ರಾಜನಾಗಿದ್ದ ಕೃಷ್ಣನಿಗೆ ಸುಧಾಮ ಸ್ವಲ್ಪ ಅವಲಕ್ಕಿ ನೀಡುತ್ತಾನೆ. ಇಂದು ಸುಧಾಮ ಶ್ರೀಕೃಷ್ಣನಿಗೆ ಅವಲಕ್ಕಿ ಕೊಟ್ಟಿದ್ದರೆ, ಅದರ ವಿಡಿಯೊ ಬಿಡುಗಡೆ ಮಾಡಲಾಗುತ್ತಿತ್ತು. ಶ್ರೀಕೃಷ್ಣನಿಗೆ ಸುಧಾಮ ಲಂಚ ನೀಡಿದ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಭ್ರಷ್ಟಾಚಾರದ ಆರೋಪದ ಮೇಲೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ದಾಖಲಾಗಿರುತ್ತಿತ್ತು’ ಎಂದು ಪ್ರಧಾನಿ ಮೋದಿ ಹೇಳಿದರು.

‘ಈಗ ನಮ್ಮ ಪುರಾತನ ಶಿಲ್ಪಗಳನ್ನು ವಿದೇಶಗಳಿಂದ ಮರಳಿ ತರಲಾಗುತ್ತಿದೆ. ದಾಖಲೆ ಪ್ರಮಾಣದ ವಿದೇಶಿ ಬಂಡವಾಳ ಹರಿದುಬರುತ್ತಿದೆ. ಈ ಬದಲಾವಣೆಯು ಕಾಲಚಕ್ರ ತಿರುಗಿ ಹೊಸ ಯುಗದ ಆಗಮನವಾಗಿರುವುದರ ಪುರಾವೆಯಾಗಿದೆ’ ಎಂದು ಹೇಳಿದರು.

ಆಧಾರ್ ಕಾರ್ಡ್ ನಿಷ್ಕ್ರಿಯ: ಪ್ರಧಾನಿಗೆ ಮಮತಾ ಪತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಜನರ ಆಧಾರ್ ಕಾರ್ಡ್‌ಗಳನ್ನು ‘ಏಕಾಏಕಿ ನಿಷ್ಕ್ರಿಯ’ಗೊಳಿಸಲಾಗಿದೆ. ಇದಕ್ಕೆ ಕಾರಣ ತಿಳಿಸಬೇಕು ಎಂದು ಕೋರಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಹೀಗೇ ಏಕಾಏಕಿ ನಿಷ್ಕ್ರಿಯಗೊಳಿಸಿರುವ ಕ್ರಮದಿಂದಾಗಿ ರಾಜ್ಯದ ಜನರಲ್ಲಿ ತೀವ್ರ ಆತಂಕ, ಗೊಂದಲ ಉಂಟಾಗಿದೆ. ಈ ಕ್ರಮವು ನಿಯಮಬಾಹಿರ ಹಾಗೂ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದುದಾಗಿದೆ ಎಂದು ಪತ್ರದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

‘ಜನರ ಆಧಾರ್ ಕಾರ್ಡ್‌ಗಳನ್ನು ನಿಷ್ಕ್ರಿಯಗೊಳಿಸುವ ಈ ಬೆಳವಣಿಗೆಯು ಗಂಭೀರ ಸ್ವರೂಪದ ಮುಖ್ಯವಾಗಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದ ಜನರಿಗೆ ಮಾಡುತ್ತಿರುವ ತಾರತಮ್ಯವಾಗಿದೆ’ ಎಂದು ಉಲ್ಲೇಖಿಸಿದ್ದಾರೆ.

ಸಕಾರಣ ನೀಡದೇ ಹೀಗೆ ನಿಷ್ಕ್ರಿಯಗೊಳಿಸಿರುವ ಉದ್ದೇಶವೇನು ಎಂದು ಪ್ರಶ್ನಿಸಿದ್ದಾರೆ.

ಅಬಕಾರಿ ನೀತಿ ಹಗರಣದ ಜೊತೆಗೆ ನಂಟು ಹೊಂದಿರುವ ಪ್ರಕರಣ

ಇ.ಡಿ.ವಿಚಾರಣೆಗೆ ಕೇಜ್ರಿವಾಲ್ ಗೈರು

ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಜೊತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ (ಇ.ಡಿ) ವಿಚಾರಣೆಗೆ ಸತತ ಆರನೇ ಬಾರಿಯೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಗೈರುಹಾಜರಾಗಿದ್ದಾರೆ.

ಕೇಜ್ರಿವಾಲ್ ಅವರಿಗೆ ಕಾನೂನುಬಾಹಿರವಾಗಿ ಸಮನ್ಸ್ ಜಾರಿಗೊಳಿಸಲಾಗಿದೆ ಎಂದಿರುವ ಎಎಪಿ, ‘ಇ.ಡಿ. ಅಧಿಕಾರಿಗಳು ಪದೇ ಪದೇ ಸಮನ್ಸ್ ನೀಡುವ ಬದಲು ನ್ಯಾಯಾಲಯದ ಆದೇಶ ಪ್ರಕಟವಾಗುವವರೆಗೂ ಕಾಯಬೇಕು’ ಎಂದಿದೆ.

‘ಇ.ಡಿ. ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ಪ್ರತಿಕ್ರಿಯೆ ನೀಡಲಾಗುವುದು’ ಎಂದು ಕೇಜ್ರಿವಾಲ್ ಅವರು ದೆಹಲಿ ವಿಧಾನಸಭೆಯಲ್ಲಿ ಸುದ್ದಿಗಾರರಿಗೆ ತಿಳಿಸಿದರು. ವಿಚಾರಣೆಗೆ ಸೋಮವಾರ ಹಾಜರಾಗುವಂತೆ ಕೇಜ್ರಿವಾಲ್ ಅವರಿಗೆ ಇ.ಡಿ. ಅಧಿಕಾರಿಗಳು ಆರನೇ ಬಾರಿ ಸಮನ್ಸ್ ನೀಡಿದ್ದರು.

ಕೇಜ್ರಿವಾಲ್ ಅವರು ಸಮನ್ಸ್‌ಗೆ ಪ್ರತಿಕ್ರಿಯಿಸುತ್ತಿಲ್ಲ ಎಂದು ಆರೋಪಿಸಿ ಇ.ಡಿ ಅಧಿಕಾರಿಗಳು ಈಚೆಗೆ ನ್ಯಾಯಾಲಯದ ಮೊರೆಹೋಗಿದ್ದರು. ಇದರ ವಿಚಾರಣೆಗಾಗಿ ಕೇಜ್ರಿವಾಲ್ ಅವರು ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರು. ದೆಹಲಿ ವಿಧಾನಸಭೆಯಲ್ಲಿ ಬಜೆಟ್ ಅಧಿವೇಶನ ನಡೆಯುತ್ತಿರುವ ಕಾರಣ ಕೇಜ್ರಿವಾಲ್ ಅವರಿಗೆ ಖುದ್ದಾಗಿ ಹಾಜರಾಗಲು ಸಾಧ್ಯವಾಗಿಲ್ಲ ಎಂದು ಅವರ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದರು.

ಮಾರ್ಚ್ 16ರಂದು ನಡೆಯಲಿರುವ ಮುಂದಿನ ವಿಚಾರಣೆಗೆ ಕೇಜ್ರಿವಾಲ್ ಅವರು ಖುದ್ದಾಗಿ ಹಾಜರಾಗುವರು ಎಂದೂ ಹೇಳಿದ್ದರು.

‘ದೆಹಲಿಯಲ್ಲಿ ಸಾಂವಿಧಾನಿಕ ಬಿಕ್ಕಟ್ಟು’

ನವದೆಹಲಿ (ಪಿಟಿಐ): ‘ಬಿಜೆಪಿಯ ಬೆದರಿಕೆ ಮತ್ತು ಒತ್ತಡದಿಂದಾಗಿ ಅಧಿಕಾರಿಗಳು ಕೆಲಸ ಮಾಡುವುದಿಲ್ಲ ಎನ್ನುತ್ತಿದ್ದಾರೆ. ಇದರಿಂದಾಗಿ ರಾಷ್ಟ್ರ ರಾಜಧಾನಿಯಲ್ಲಿ ಗಂಭೀರ ಸ್ವರೂಪದ ಸಾಂವಿಧಾನಿಕ ಬಿಕ್ಕಟ್ಟು ಉದ್ಭವಿಸಿದೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸೋಮವಾರ ಹೇಳಿದ್ದಾರೆ.

ವಿಧಾನಸಭೆಯಲ್ಲಿ ತಮ್ಮ ಭಾಷಣದ ವೇಳೆ ಈ ಕುರಿತು ಮಾತನಾಡಿದ ಅವರು, ‘ದೆಹಲಿಗೆ ಸಂಪೂರ್ಣ ರಾಜ್ಯದ ಸ್ಥಾನಮಾನ ನೀಡದಿರುವುದು ಹಾಗೂ ಬೇರೆ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರದ ಹಿಡಿತದಲ್ಲಿ ಅಧಿಕಾರ ಇರುವುದು ಈ ಸಮಸ್ಯೆಯ ಮೂಲ. ‘ದೆಹಲಿಯ ಚುನಾಯಿತ ಸರ್ಕಾರವು ತನ್ನ ಕೆಲಸ ಮಾಡುವುದು ಆ ಬೇರೆ ಪಕ್ಷಕ್ಕೆ (ಬಿಜೆಪಿ) ಬೇಕಾಗಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನೀರಿನ ಬಿಲ್‌ಗಳ ಸಮಸ್ಯೆಗಳನ್ನು ಬಗೆಹರಿಸಲು ರೂಪಿಸಲಾದ ಒಂದಾವರ್ತಿ ಪಾವತಿ ಯೋಜನೆಗೆ ಕೆಲವು ಅಧಿಕಾರಿಗಳು ಅಡ್ಡಿಪಡಿಸುತ್ತಿದ್ದಾರೆ. ಏಕ ಪಾವತಿ ವ್ಯವಸ್ಥೆಯನ್ನು ತಡೆಹಿಡಿಯಬೇಕೆಂದು ಅಧಿಕಾರಿಗಳಿಗೆ ಬಿಜೆಪಿ ಬೆದರಿಕೆ ಹಾಕುತ್ತಿದೆ’ ಎಂದು ಕೇಜ್ರಿವಾಲ್ ಅವರು ಆರೋಪಿಸಿದ್ದಾರೆ. ಆದರೆ ಈ ಆರೋಪಕ್ಕೆ ಬಿಜೆಪಿಯು ತಕ್ಷಣವೇ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಇದೇ ಸಂದರ್ಭದಲ್ಲಿ ಕೇಜ್ರಿವಾಲ್ ಅವರು, ‘ಅಧಿಕಾರಿಗಳಿಗೆ ಯೋಜನೆಗೆ ಅನುಮತಿ ನೀಡುವಂತೆ ನಿರ್ದೇಶಿಸಬೇಕು. ಇದರಿಂದ 10.50 ಲಕ್ಷ ಕುಟುಂಬಗಳಿಗೆ ಅನುಕೂಲವಾಗಲಿದೆ’ ಎಂದು ದೆಹಲಿ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಖೇಲೊ ಇಂಡಿಯಾ ಗುವಾಹಟಿಯಲ್ಲಿ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ 4ನೇ ಆವೃತ್ತಿಯ ಆರಂಭೋತ್ಸವದಲ್ಲಿ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು ಪಿಟಿಐ ಚಿತ್ರ

ಸಂದೇಶ್‌ಖಾಲಿಗೆ ಮಹಿಳಾ ಆಯೋಗದ ನಿಯೋಗ ಭೇಟಿ

‘ಮಹಿಳೆಯರ ಧ್ವನಿ ಹತ್ತಿಕ್ಕುತ್ತಿರುವ ಸರ್ಕಾರ’

ಕೋಲ್ಕತ್ತ(ಪಿಟಿಐ): ಸಂದೇಶ್‌ಖಾಲಿಯಲ್ಲಿ ದೌರ್ಜನ್ಯದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಮಹಿಳೆಯರ ಧ್ವನಿಯನ್ನು ಪಶ್ಚಿಮ ಬಂಗಾಳ ಸರ್ಕಾರವು ಹತ್ತಿಕ್ಕುತ್ತಿದೆ ಎಂದು ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮಾ ಸೋಮವಾರ ಆರೋಪಿಸಿದರು.

ಸಂದೇಶ್‌ಖಾಲಿಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, ‘ಸತ್ಯ ಹೊರಬರದಂತೆ ತಡೆಯಲು ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ಹೇಳಿದರು.

ರೇಖಾ ಶರ್ಮಾ ಅವರ ನೇತೃತ್ವದಲ್ಲಿ ಎನ್‌ಸಿಡಬ್ಲ್ಯು ನಿಯೋಗವು ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಗೆ ಭೇಟಿ ನೀಡಿ, ಮಹಿಳೆಯರ ಜೊತೆ ಮಾತುಕತೆ ನಡೆಸಿದೆ.

‘ದೌರ್ಜನ್ಯ ನಡೆದಿರುವ ಪ್ರದೇಶದ ಮಹಿಳೆಯರ ಸಂಕಷ್ಟ ಆಲಿಸಿದ್ದೇನೆ. ಆರೋಪಿ ಶಹಜಹಾನ್ ಶೇಖ್‌ರನ್ನು ಕೂಡಲೇ ಬಂಧಿಸಬೇಕು. ಅವರನ್ನು ಬಂಧಿಸಿದರೆ ಇನ್ನಷ್ಟು ಮಹಿಳೆಯರು ದೂರು ನೀಡಲು ಮುಂದೆ ಬರಬಹುದು. ನಾವು ಮಹಿಳೆಯರಿಗೆ ಧೈರ್ಯ ತುಂಬಿದ್ದೇವೆ’ ಎಂದು ರೇಖಾ ಶರ್ಮಾ ತಿಳಿಸಿದರು.

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂದೂ ಅವರು ಒತ್ತಾಯಿಸಿದರು.

ಟಿಎಂಸಿ ನಾಯಕ ಶಹಜಹಾನ್ ಶೇಖ್ ಹಾಗೂ ಬೆಂಬಲಿಗರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಭೂಮಿ ಕಬಳಿಸಿದ್ದಾರೆ ಎಂದು ಆರೋಪಿಸಿ ಮಹಿಳೆಯರು ಸಂದೇಶ್‌ಖಾಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಶಹಜಹಾನ್ ಶೇಖ್ ಅವರು ತಲೆಮರೆಸಿಕೊಂಡಿದ್ದಾರೆ.

‘ಮಮತಾ ಸರ್ಕಾರವನ್ನು ಕಿತ್ತೆಸೆಯಬೇಕು’: ಪಶ್ಚಿಮ ಬಂಗಾಳವನ್ನು ಉಳಿಸಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವನ್ನು ಕಿತ್ತೆಸೆಯಬೇಕು ಎಂದು ಬಿಜೆಪಿ ಸಂಸದೆ ಲಾಕೆಟ್ ಚಟರ್ಜಿ ಹೇಳಿದರು.

ಹಕ್ಕುಬಾಧ್ಯತಾ ಸಮಿತಿಯ ನೋಟಿಸ್‌ಗೆ ತಡೆ

ನವದೆಹಲಿ (ಪಿಟಿಐ): ಸಂದೇಶ್‌ಖಾಲಿ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಿ ಲೋಕಸಭೆಯ ಹಕ್ಕುಬಾಧ್ಯತಾ ಸಮಿತಿಯು ಪಶ್ಚಿಮ ಬಂಗಾಳದ ಅಧಿಕಾರಿಗಳಿಗೆ ನೀಡಿದ್ದ ನೋಟಿಸ್‌ಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ಅಧಿಕಾರಿಗಳ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು, ಮುಂದಿನ ವಿಚಾರಣೆಯನ್ನು ನಾಲ್ಕು ವಾರಗಳ ನಂತರಕ್ಕೆ ನಿಗದಿಪಡಿಸಿದೆ.

ಪಿಐಎಲ್ ಪರಿಗಣನೆಗೆ ‘ಸುಪ್ರೀಂ’ ನಕಾರ: ಪಶ್ಚಿಮ ಬಂಗಾಳದ ಸಂದೇಶ್‌ಖಾಲಿ ಗ್ರಾಮದಲ್ಲಿ ನಡೆದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಿಬಿಐ ಅಥವಾ ಎಸ್‌ಐಟಿ ತನಿಖೆ ನಡೆಸಬೇಕೆಂದು ಕೋರಿ ಸಲ್ಲಿಸಿದ್ದ ಪಿಐಎಲ್ ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಮತಪತ್ರ, ವಿಡಿಯೊ ಪರಿಶೀಲನೆ ಇಂದು

ಒಂದನೇ ಪುಟದಿಂದ...

ಮಂಗಳವಾರದ ಬದಲು ಬೇರೊಂದು ದಿನ ಈ ಪ್ರಕರಣದ ವಿಚಾರಣೆಯನ್ನು ನಡೆಸಬೇಕು ಎಂಬ ಕೋರಿಕೆಯನ್ನು ತಳ್ಳಿಹಾಕಿದ ಮುಖ್ಯ ನ್ಯಾಯಮೂರ್ತಿ, ‘ಸದಸ್ಯರ ಖರೀದಿ ನಡೆಯುತ್ತಿದೆ’ ಎಂದು ಅಭಿಪ್ರಾಯಪಟ್ಟರು.

ಚುನಾವಣಾಧಿಕಾರಿ ಅನಿಲ್ ಮಸೀಹ್ ಅವರನ್ನು ಫೆ.5ರಂದು ತರಾಟೆಗೆ ತೆಗೆದುಕೊಂಡಿದ್ದ ಸುಪ್ರೀಂ ಕೋರ್ಟ್, ‘ಅಧಿಕಾರಿಯು ಮತಪತ್ರಗಳನ್ನು ವಿರೂಪಗೊಳಿಸಿರುವುದು ನಿಜ. ಅವರನ್ನು ಶಿಕ್ಷೆಗೊಳಪಡಿಸಬೇಕು. ಅವರ ನಡೆಯು ಪ್ರಜಾಪ್ರಭುತ್ವದ ಅಣಕ ಮತ್ತು ಹತ್ಯೆ’ ಎಂದಿತ್ತು.

ಸುಪ್ರೀಂ ನಿರ್ದೇಶನದಂತೆ ಸೋಮವಾರ ಪೀಠದ ಎದುರು ಹಾಜರಾಗಿದ್ದ ಮಸೀಹ್ ಅವರನ್ನು ನ್ಯಾಯಮೂರ್ತಿಗಳು ತೀವ್ರ ಪಾಟಿಸವಾಲಿಗೆ ಒಳಪಡಿಸಿದರು.

ನ್ಯಾಯಮೂರ್ತಿಗಳ ಪ್ರಶ್ನೆಗೆ ಉತ್ತರಿಸಿದ ಮಸೀಹ್, ‘ಆಗಲೇ ಹಾಳಾಗಿದ್ದ ಎಂಟು ಮತಪತ್ರಗಳ ಮೇಲೆ ನಾನು ‘ಎಕ್ಸ್’ ಎಂದು ಗುರುತು ಮಾಡಿದ್ದೆ. ಎಎಪಿ ಸದಸ್ಯರು ಗೊಂದಲ ಮೂಡಿಸಿದ್ದು, ಮತಪತ್ರಗಳನ್ನು ಕಸಿಯಲು ಯತ್ನಿಸಿದರು. ಇದೇ ಕಾರಣದಿಂದ ನಾನು ಮತ ಎಣಿಕೆ ಕೇಂದ್ರದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾದತ್ತ ದೃಷ್ಟಿಯನ್ನು ಹರಿಸಿದ್ದೆ’ ಎಂದು ತಮ್ಮ ನಡೆಗೆ ಕಾರಣ ತಿಳಿಸಿದರು.

ಮೇಯರ್ ಆಯ್ಕೆಗೆ ಸಂಬಂಧಿಸಿದಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಪಾಲಿಕೆಯ ಎಎಪಿ ಸದಸ್ಯರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಮೇಯರ್ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಎಎಪಿ ಮೈತ್ರಿ ಮಾಡಿಕೊಂಡಿದ್ದವು. ಆದರೆ, ಬಿಜೆಪಿಯು ಅಂದು ನಡೆದ ಮೇಯರ್ ಚುನಾವಣೆಯಲ್ಲಿ ಗೆಲುವು ಸಾಧಿಸಿತ್ತು. ಎಂಟು ಮತಗಳನ್ನು ಅಸಿಂಧು ಎಂದು ಚುನಾವಣಾಧಿಕಾರಿ ಘೋಷಿಸಿದ್ದರು.

ಎಎಪಿ ಅಭ್ಯರ್ಥಿ ಕುಲದೀಪ್ ಕುಮಾರ್ ಅವರನ್ನು ಪರಾಭವಗೊಳಿಸಿ ಬಿಜೆಪಿಯ ಮನೋಜ್ ಸೋನಕರ್ ಮೇಯರ್ ಆಗಿ ಆಯ್ಕೆಯಾಗಿದ್ದರು. ಆದರೆ, ನಂತರದ ಬೆಳವಣಿಗೆಯಲ್ಲಿ ಅವರು ಮೇಯರ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

5 ವರ್ಷ ಎಂಎಸ್‌ಪಿ ಖಾತರಿ

ಒಂದನೇ ಪುಟದಿಂದ

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರೂ ಸಭೆಯಲ್ಲಿದ್ದರು. ನಾಲ್ಕು ಗಂಟೆಗೂ ಹೆಚ್ಚು ಅವಧಿ ಸಭೆ ನಡೆಯಿತು. ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಗೋಯಲ್, ‘ಚರ್ಚೆ ವೇಳೆ ಕಾರ್ಯಸೂಚಿಗೆ ಹೊರತಾದ ಈ ಪ್ರಸ್ತಾವ ಮೂಡಿಬಂತು’ ಎಂದರು.

‘ನಾನು ಒಬ್ಬ ವಕೀಲನಾಗಿ ಸಭೆಯಲ್ಲಿ ಪಾಲ್ಗೊಂಡಿದ್ದೇನೆ. ಕೇಂದ್ರದ ಪ್ರಸ್ತಾವದ ಕುರಿತು ಭಾಗಿದಾರರೇ ಅಂತಿಮ ತೀರ್ಮಾನ ತೆಗೆದು ಕೊಳ್ಳಬೇಕು. ಪ್ರತಿಭಟನೆ ವೇಳೆ ಶಾಂತಿ ಕಾಯ್ದುಕೊಳ್ಳಬೇಕು’ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಹೇಳಿದರು.

ಎಂಎಸ್‌ಪಿಗೆ ಕಾಯ್ದೆಯ ರಕ್ಷೆ ನೀಡುವುದು, ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಜಾರಿ, ಸಾಲಮನ್ನಾ ಕುರಿತ ಬೇಡಿಕೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು ಎಂದು ರೈತ ಮುಖಂಡ ಜಗಜೀತ್ ಸಿಂಗ್ ದಲ್ಲೇವಾಲ್ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಐದು ವರ್ಷದ ಒಪ್ಪಂದ ಕುರಿತ ಕೇಂದ್ರದ ಪ್ರಸ್ತಾಪದ ಬಗ್ಗೆ ರೈತರ ವೇದಿಕೆಗಳಲ್ಲಿ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು. ಸಾಲಮನ್ನಾ ಮತ್ತು ಇತರೆ ಬೇಡಿಕೆಗಳು ಬಾಕಿ ಉಳಿದಿವೆ. ಇವುಗಳಿಗೂ ಮಂಗಳವಾರದವರೆಗೆ ಪರಿಹಾರ ಸಿಗುವ ವಿಶ್ವಾಸವಿದೆ ಎಂದು ಹೇಳಿದರು.

ರೈತ ಪ್ರತಿನಿಧಿಗಳ ಜೊತೆ ಮತ್ತೊಂದು ಸುತ್ತಿನ ಮಾತುಕತೆ ಸಾಧ್ಯತೆ ಕುರಿತ ಪ್ರಶ್ನೆಗೆ ಗೋಯಲ್, ‘ಕೃಷಿಕರು ಸಕಾರಾತ್ಮಕ ನಿರ್ಧಾರ ಕೈಗೊಂಡರೆ ಚರ್ಚೆ ಮುಂದುವರಿಯಲಿದೆ. ಅದಕ್ಕೆ ಮುನ್ನ ಅವರು ಪ್ರತಿಭಟನೆ ಕೈಬಿಡಬೇಕು’ ಎಂದು ಉತ್ತರಿಸಿದರು.

‘ಕಾನೂನು ರಕ್ಷೆ –ಬೇಡಿಕೆ ಕೈಬಿಟ್ಟಿಲ್ಲ’

ಚಂಡೀಗಢ (ಪಿಟಿಐ): ‘ಎಂಎಸ್‌ಪಿ ದರದಲ್ಲಿ ಕೃಷಿ ಉತ್ಪನ್ನಗಳ ಖರೀದಿಗೆ 5 ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಸ್ತಾವದ ಕುರಿತು ರೈತರ ವೇದಿಕೆಗಳಲ್ಲಿ ಚರ್ಚಿಸುತ್ತೇವೆ. ಆದರೆ, ಎಂಎಸ್‌ಪಿಗೆ ಕಾನೂನಿನ ರಕ್ಷೆ ಬೇಕು ಎಂಬ ಬೇಡಿಕೆಯಿಂದ ಹಿಂದೆ ಸರಿಯುವುದಿಲ್ಲ’ ಎಂದು ರೈತ ಮುಖಂಡರು ಪ್ರತಿಕ್ರಿಯಿಸಿದರು.

ಸಭೆಯ ಫಲಶ್ರುತಿ ಕುರಿತು ಶಂಭು ಗಡಿಯಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಕೃಷಿ ಮುಖಂಡ ಸರವನ್ ಸಿಂಗ್ ಪಂಧೇರ್ ಅವರು, ಕೇಂದ್ರದ ಪ್ರಸ್ತಾಪ ಕುರಿತು ರೈತ ಮುಖಂಡರು ಚರ್ಚಿಸಲಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ 72 ವರ್ಷದ ರೈತ ಖನೌರಿ ಗಡಿಯಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದು, ಸ್ಥಳಕ್ಕೆ ಮುಖಂಡರು ಭೇಟಿ ನೀಡುವರು ಎಂದರು. ಈ ಹಿಂದೆ ಶಂಭೂ ಗಡಿಯಲ್ಲಿಯೂ ರೈತರೊಬ್ಬರು ಸತ್ತಿದ್ದರು.

ನಾಫೆಡ್, ಎನ್‌ಸಿಸಿಎಫ್ ಮೂಲಕ ಒಪ್ಪಂದ

ರಾಷ್ಟ್ರೀಯ ಸಹಕಾರ ಗ್ರಾಹಕರ ಒಕ್ಕೂಟ (ಎನ್‌ಸಿಸಿಎಫ್) ಹಾಗೂ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ (ನಾಫೆಡ್) ಐದು ವರ್ಷ ಕನಿಷ್ಠ ಬೆಂಬಲ ಬೆಲೆಗೆ ಕೃಷಿ ಉತ್ಪನ್ನಗಳ ಖರೀದಿಗೆ ಕೃಷಿಕರೊಂದಿಗೆ ಒಪ್ಪಂದ ಮಾಡಿಕೊಳ್ಳಲಿವೆ.

ರೈತ ಮುಖಂಡರೊಟ್ಟಿಗೆ ನಡೆಸಿದ ಸಭೆಯ ಫಲಶ್ರುತಿ ಕುರಿತು ಸುದ್ದಿಗಾರರ ಜೊತೆಗೆ ಮಾತನಾಡಿದ ಸಚಿವ ಪಿಯೂಷ್ ಗೋಯಲ್ ಅವರು ಈ ವಿಷಯ ತಿಳಿಸಿದರು.

ವಿಶ್ವ ಟಿ.ಟಿ. ಟೀಮ್ ಸ್ಪರ್ಧೆ: ಪುರುಷರಿಗೆ ಸೋಲು

ಭಾರತ ಮಹಿಳಾ ತಂಡಕ್ಕೆ ಜಯ

ಬೂಸಾನ್ (ದಕ್ಷಿಣ ಕೊರಿಯಾ), (ಪಿಟಿಐ): ಭಾರತ ಮಹಿಳಾ ತಂಡ, ವಿಶ್ವ ಟೇಬಲ್ ಟೆನಿಸ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಉಜ್ಬೇಕಿಸ್ತಾನ ತಂಡವನ್ನು 3–0 ಯಿಂದ ಸೋಲಿಸಿದರೆ, ಪುರುಷರ ತಂಡವು 0–3ರಿಂದ ದಕ್ಷಿಣ ಕೊರಿಯಾ ತಂಡಕ್ಕೆ ಮಣಿಯಿತು.

ಐಹಿಕಾ ಮುಖರ್ಜಿ ಮತ್ತು ಶ್ರೀಜಾ ಅಕುಲ ಅವರಿಗೆ ವಿಶ್ರಾಂತಿ ನೀಡಿ, ಅರ್ಚನಾ ಕಾಮತ್ ಮತ್ತು ದಿಯಾ ಚಿತಾಳೆ ಅವರನ್ನು ತಂಡ ಕಣಕ್ಕಿಳಿಸಿತು. ಅನುಭವಿ ಮಣಿಕಾ ಬಾತ್ರಾ ಅವರೂ ಆಡಿದರು. ಅರ್ಚನಾ 11–7, 11–3, 11–6 ರಿಂದ ರಿಮ್ಮಾ ಗುಫ್ರಾನೊವ್ ಅವರನ್ನು ಮಣಿಸಿದರೆ, ಮಣಿಕಾ 11–7, 11–4, 11–1 ರಿಂದ ಮಾರ್ಕಬೊ ಮಗ್ದೀವಾ ಅವರನ್ನು ಸೋಲಿಸಿದರು. ದಿಯಾ ಸ್ವಲ್ಪ ಪ್ರತಿರೋಧ ಎದುರಿಸಿದರೂ ಅಂತಿಮವಾಗಿ 11–6, 10–12, 11–4, 11–6 ರಿಂದ ರೊಝುಲಿನಾ ಖಡ್ಜೀವಾ ಅವರನ್ನು ಹಿಮ್ಮೆಟ್ಟಿಸಿದರು.

ಮೊದಲ ಪಂದ್ಯದಲ್ಲಿ ಚೀನಾ ಎದುರು 2–3 ರಿಂದ ಸೋತಿದ್ದ ಭಾರತಕ್ಕೆ ಇದು ಸತತ ಎರಡನೇ ಗೆಲುವು. ಒಂದನೇ ಗುಂಪಿನಲ್ಲಿ ಈಗ ಎರಡನೇ ಸ್ಥಾನದಲ್ಲಿದೆ. ಭಾರತ ತಂಡವು ಗುಂಪಿನ ಕೊನೆಯ ಪಂದ್ಯವನ್ನು ಮಂಗಳವಾರ ಸ್ಪೇನ್ ವಿರುದ್ಧ ಆಡಲಿದೆ. ಭಾರತ ಈ ಮೊದಲ ಹಂಗೆರಿ ಮೇಲೆ 3–2 ರಲ್ಲಿ ಜಯಗಳಿಸಿತ್ತು.

ಪುರುಷರ ವಿಭಾಗದಲ್ಲಿ ಭಾರತ ಹೆಚ್ಚು ಹೋರಾಟ ತೋರದೇ ಮೂರನೇ ಶ್ರೇಯಾಂಕದ ದಕ್ಷಿಣ ಕೊರಿಯಾಕ್ಕೆ ಸೋತಿತು. ವಿಶ್ವ ಕ್ರಮಾಂಕದಲ್ಲಿ 67ನೇ ಸ್ಥಾನ ಪಡೆದಿರುವ ಹರ್ಮೀತ್ ದೇಸಾಯಿ 4–11, 10–12, 8–11 ರಿಂದ ವಿಶ್ವದ 14ನೇ ಕ್ರಮಾಂಕದ ಆಟಗಾರ ಜಾಂಗ್ ವೂಜಿನ್ ಅವರಿಗೆ ಶರಣಾದರು.

ಸತ್ಯನ್ 5–11, 7–11, 7–11 ರಿಂದ ವಿಶ್ವದ 16ನೇ ಕ್ರಮಾಂಕದ ಆಟಗಾರ ಲಿಮ್ ಜೊಂಗ್‌ಹೂನ್ ಅವರಿಗೆ ಮಣಿದರು. ಶರತ್ ಒಂದಿಷ್ಟು ಹೋರಾಟ ತೋರಿದರೂ 9–11, 11–8, 6–11, 5–11 ರಿಂದ ಲೀ ಸನ್ ಸು ಅವರಿಗೆ ಸೋತರು.

ಭಾರತ ಮೊದಲ ಪಂದ್ಯದಲ್ಲಿ ಚಿಲಿ ಎದುರು ಗೆದ್ದು ಶುಭಾರಂಭ ಮಾಡಿದರೂ, ಭಾನುವಾರ ಎರಡನೇ ಪಂದ್ಯದಲ್ಲಿ 1–3 ರಿಂದ ಪೋಲೆಂಡ್ ಎದುರು ಸೋಲನುಭವಿಸಿತ್ತು.

ದಲಿತರ ನಿರ್ಲಕ್ಷ್ಯ: ರಾಹುಲ್ ವಾಗ್ದಾಳಿ

ಪ್ರತಾಪಗಢ (ಉತ್ತರಪ್ರದೇಶ) (ಪಿಟಿಐ): ಅಯೋಧ್ಯೆಯಲ್ಲಿ ನಡೆದ ಬಾಲರಾಮ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ದಲಿತರು, ಹಿಂದುಳಿದವರನ್ನು ಹಾಗೂ ರಾಷ್ಟ್ರಪತಿಯನ್ನು ಆಹ್ವಾನಿಸದೆ ಅವಮಾನಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಭಾರತ್ ಜೋಡೊ ನ್ಯಾಯ ಯಾತ್ರೆಯ ಅಂಗವಾಗಿ ರಾಂಪುರದಲ್ಲಿ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ಉದ್ಯಮಿಗಳನ್ನು ಮತ್ತು ಅಮಿತಾಭ್ ಬಚ್ಚನ್ ಅವರನ್ನು ರಾಮಮಂದಿರಕ್ಕೆ ಆಹ್ವಾನಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಶೇ 73ರಷ್ಟು ಜನರು ಮುಖ್ಯರಲ್ಲ ಎಂಬ ಸಂದೇಶವನ್ನು ರವಾನಿಸಿದ್ದಾರೆ ಎಂದು ಹೇಳಿದರು.

ದೇಶದಲ್ಲಿ ಶೇ 73ರಷ್ಟಿರುವ ದಲಿತ, ಹಿಂದುಳಿದ ವರ್ಗಗಳು ಮತ್ತು ಬುಡಕಟ್ಟು ಜನರನ್ನು ಬಿಜೆಪಿ ಸರ್ಕಾರವು ನಿರ್ಲಕ್ಷಿಸಿದೆ ಎಂದು ಆರೋಪಿಸಿದರು.

ಅರಣ್ಯ ಸಂರಕ್ಷಣೆಗೆ ಹಲವು ನಿಯಮಗಳನ್ನು ಪ್ರಕಟಿಸಿರುವ ‘ಸುಪ್ರೀಂ’

ಸಫಾರಿ, ಮೃಗಾಲಯ ಆರಂಭಕ್ಕೆ ಅಂಕುಶ

ನವದೆಹಲಿ (ಪಿಟಿಐ): ಅರಣ್ಯ ಸಂರಕ್ಷಣೆಗೆ ಹಲವು ನಿಯಮಗಳನ್ನು ಪ್ರಕಟಿಸಿರುವ ಸುಪ್ರೀಂ ಕೋರ್ಟ್, ಹೊಸದಾಗಿ ಮೃಗಾಲಯ ಆರಂಭಿಸಲು ಹಾಗೂ ಅರಣ್ಯ ಪ್ರದೇಶಗಳಲ್ಲಿ ಸಫಾರಿ ಆರಂಭಿಸಲು ತನ್ನ ಅನುಮತಿ ಪಡೆಯಬೇಕು ಎಂದು ಸೋಮವಾರ ತಾಕೀತು ಮಾಡಿದೆ.

2023ರಲ್ಲಿ ಅರಣ್ಯ ಸಂರಕ್ಷಣೆ ಕಾನೂನಿಗೆ ತರಲಾದ ತಿದ್ದುಪಡಿ ಅಡಿಯಲ್ಲಿ, ‘ಅರಣ್ಯ’ಕ್ಕೆ ನೀಡಿರುವ ವ್ಯಾಖ್ಯಾನವು ಸರಿಸುಮಾರು 1.99 ಲಕ್ಷ ಚದರ ಕಿ.ಮೀ. ಪ್ರದೇಶವನ್ನು ‘ಅರಣ್ಯ’ ವ್ಯಾಪ್ತಿಯಿಂದ ಹೊರಗಿರಿಸಿದ್ದು, ಈ ಪ್ರದೇಶವನ್ನು ಇತರ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳ ಬಹುದು ಎಂಬ ಹೇಳಿಕೆಯನ್ನು ಕೋರ್ಟ್ ದಾಖಲಿಸಿಕೊಂಡಿದೆ.

2023ರ ಅರಣ್ಯ ಸಂರಕ್ಷಣಾ ಕಾನೂನಿಗೆ ತಂದಿರುವ ತಿದ್ದುಪಡಿಯನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶದ ವಿವರವನ್ನು ಕೇಂದ್ರ ಸರ್ಕಾರಕ್ಕೆ ಮಾರ್ಚ್ 31ಕ್ಕೆ ಮೊದಲು ಸಲ್ಲಿಸಬೇಕು ಎಂದು ಸೂಚಿಸಿದೆ.

ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಸಲ್ಲಿಸುವ ‘ಅರಣ್ಯದಂತಹ ಪ್ರದೇಶ, ಮೀಸಲು ಅಥವಾ ಸಂರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಇಲ್ಲದ ಅರಣ್ಯ, ಸಮುದಾಯ ಅರಣ್ಯದ ವಿವರಗಳನ್ನು’ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಏಪ್ರಿಲ್ 15ಕ್ಕೆ ಮೊದಲು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಕೋರ್ಟ್ ಹೇಳಿದೆ.

‘ಅರಣ್ಯ ಜಮೀನಿನಲ್ಲಿ ಪೂರ್ವಾನುಮತಿ ಇಲ್ಲದೆ ಮೃಗಾಲಯ, ಸಫಾರಿ ಆರಂಭದ ಬಗ್ಗೆ ಅಧಿಸೂಚನೆ ಹೊರಡಿಸುವಂತಿಲ್ಲ... ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರಲ್ಲಿ ಉಲ್ಲೇಖಿಸಲಾದ, ಸರ್ಕಾರ ಅಥವಾ ಯಾವುದೇ ಪ್ರಾಧಿಕಾರದ ಮಾಲೀಕತ್ವದ ಮೃಗಾಲಯ, ಸಫಾರಿ ಆರಂಭಕ್ಕೆ ಸಂಬಂಧಿಸಿದ ಯಾವುದೇ ಪ್ರಸ್ತಾವನೆಯನ್ನು ಈ ಕೋರ್ಟ್‌ನ ಪೂರ್ವಾನುಮತಿ ಇಲ್ಲದೆ ಒಪ್ಪಿಕೊಳ್ಳುವಂತೆ ಇಲ್ಲ’ ಎಂದು ಪೀಠವು ಸ್ಪಷ್ಟಪಡಿಸಿದೆ.

ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಲ್ಲಿ ‘ಅರಣ್ಯ’ಕ್ಕೆ ಇದ್ದ ವಿಸ್ತೃತ ಅರ್ಥವನ್ನು ತಿದ್ದುಪಡಿ ಕಾನೂನು ಕಿರಿದಾಗಿಸಿದೆ ಎಂದು ಅರ್ಜಿದಾರರು ದೂರಿದ್ದಾರೆ. ತಿದ್ದುಪಡಿ ಕಾನೂನಿನ ಪ್ರಕಾರ, ಭೂಪ್ರದೇಶವೊಂದನ್ನು ಅರಣ್ಯ ಎಂದು ಪರಿಗಣಿಸಬೇಕಾದಲ್ಲಿ ಅದಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಪ್ರಕಟವಾಗಿರಬೇಕು ಅಥವಾ ಸರ್ಕಾರದ ದಾಖಲೆಗಳಲ್ಲಿ ಅದು ನಿರ್ದಿಷ್ಟವಾಗಿ ಅರಣ್ಯ ಎಂದು ನಮೂದಾಗಿರಬೇಕು.

ಸುಪ್ರೀಂ ಕೋರ್ಟ್‌ನ ಸೂಚನೆಗಳಿಗೆ ಅನುಗುಣವಾಗಿಯೇ ತಿದ್ದುಪಡಿಗಳನ್ನು ತರಲಾಗಿದೆ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಹೇಳಿದರು. ತಿದ್ದುಪಡಿ ಮಾಡಿರುವ ಕಾನೂನನ್ನು ಅಸಿಂಧುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ವಿದೇಶದಲ್ಲಿ ತರಬೇತಿಗೆ ಸಮ್ಮತಿ



ಸ್ವಸ್ತಿಕಾ ಘೋಷ್

ನವದೆಹಲಿ (ಪಿಟಿಐ): ಟೇಬಲ್ ಟೆನಿಸ್ ಆಟಗಾರ್ತಿಯರಾದ ದಿಯಾ ಚಿತಾಳೆ ಮತ್ತು ಸ್ವಸ್ತಿಕಾ ಘೋಷ್ ಅವರಿಗೆ ಕ್ರಮವಾಗಿ ದಕ್ಷಿಣ ಕೊರಿಯಾ ಮತ್ತು ಜಪಾನ್‌ನಲ್ಲಿ ಉನ್ನತ ಮಟ್ಟದ ತರಬೇತಿ ಪಡೆಯಲು ಕ್ರೀಡಾ ಸಚಿವಾಲಯದ ಮಿಷನ್ ಒಲಿಂಪಿಕ್ ಸೆಲ್ ಅನುಮತಿ ನೀಡಿದೆ.

ದಿಯಾ ಅವರು ದಕ್ಷಿಣ ಕೊರಿಯಾದ ಪಾಜು-ಸಿ ನಗರದಲ್ಲಿ ಶಿನ್ ಮಿನ್ ಸುಂಗ್ ಅವರಿಂದ ತರಬೇತಿ ಪಡೆಯಲಿದ್ದಾರೆ. ಸ್ವಸ್ತಿಕಾ ಅವರು ಜಪಾನ್‌ನ ಒಸಾಕಾದಲ್ಲಿ ಕ್ವಿ ಜಿಯಾಣ್ ಷಿನ್ ಅವರಿಂದ ತರಬೇತಿ ಪಡೆಯಲಿದ್ದಾರೆ.

ಶಿನ್ ಮಿನ್ ಸಂಗ್ ಅವರ ಬಳಿ ತರಬೇತಿ ಪಡೆಯಲು ದಿಯಾ ಅವರು ದಕ್ಷಿಣ ಕೊರಿಯಾದ ಪಜು-ಸಿಗೆ ತೆರಳಿದರೆ, ಸ್ವಸ್ತಿಕಾ ಜಪಾನ್‌ನ ಒಸಾಕಾದಲ್ಲಿ ಕಿಯು ಜಿಯಾನ್ ಕ್ವಿನ್ ಅವರಿಂದ ತರಬೇತಿ ಪಡೆಯಲಿದ್ದಾರೆ..

ಗುಲ್ವೀರ್ ಸಿಂಗ್‌ಗೆ ಚಿನ್ನ

ಟೆಹರಾನ್ (ಪಿಟಿಐ): ಗುಲ್ವೀರ್ ಸಿಂಗ್ ಅವರು ಏಷ್ಯನ್ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್‌ನ ಕೊನೆಯ ದಿನವಾದ ಸೋಮವಾರ 3,000 ಮೀ. ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಇದು ಕೂಟದಲ್ಲಿ ಭಾರತಕ್ಕೆ ನಾಲ್ಕನೇ ಚಿನ್ನ.

ಗುಲ್ವೀರ್ ಸಿಂಗ್ 8ನಿ. 07.48 ಸೆ.ಗಳಲ್ಲಿ ಓಟ ಪೂರೈಸಿದರು. ಕಿರ್ಗಿಸ್ತಾನದ ಕೆನೆಶ್‌ಬೆಕೊವ್ ನೂರ್‌ಸುಲ್ತಾನ್ (8:08.85 ಸೆ.) ರಜತ ಮತ್ತು ಇರಾನ್‌ನ ಜಲೀಲ್ ನಸೇರಿ (8:09.39) ಕಂಚಿನ ಪದಕ ಪಡೆದರು.

ಇದಕ್ಕೆ ಮೊದಲು ಅಂಕಿತಾ, ಮಹಿಳೆಯರ 3,000 ಮೀ. ಓಟದಲ್ಲಿ ಬೆಳ್ಳಿಯ ಪದಕ (9:26.22) ಗೆದ್ದುಕೊಂಡಿದ್ದರು.

ರಣಜಿ ಕ್ರಿಕೆಟ್: ಕರ್ನಾಟಕ– ಚಂಡೀಗಢ ನಡುವಿನ ಪಂದ್ಯ ಡ್ರಾ • ಆತಿಥೇಯ ತಂಡಕ್ಕೆ 3 ಅಂಕ

ಎಂಟರ ಘಟ್ಟಕ್ಕೆ ಮಯಂಕ್ ಪಡೆ

• ಸತೀಶ ಬಿ.

ಹುಬ್ಬಳ್ಳಿ: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಗೆದ್ದು ಪೂರ್ಣ ಅಂಕ ಗಳಿಸುವ ಕರ್ನಾಟಕದ ಆಸೆಗೆ ಚಂಡೀಗಢದ ಕೆಳ ಮಧ್ಯಮ ಕ್ರಮಾಂಕದ ಆಟಗಾರರಾದ ಮಯಂಕ್ ಸಿಧು (ಔಟಾಗದೇ 56), ಕರಣ್ ಕೈಲಾ (ಔಟಾಗದೇ 25) ದಿಟ್ಟ ಆಟದ ಮೂಲಕ ಅಡ್ಡಿಯಾದರು. ಪಂದ್ಯ ಡ್ರಾನಲ್ಲಿ ಅಂತ್ಯ ಕಂಡಿತು.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ನಾಲ್ಕನೇ ದಿನದಾಟದಲ್ಲಿ ಚಂಡೀಗಢ ತಂಡವನ್ನು ಆಲೌಟ್ ಮಾಡಿ ಇನಿಂಗ್ಸ್ ಗೆಲುವು ಸಾಧಿಸುವ ಆತಿಥೇಯ ತಂಡದ ಲೆಕ್ಕಾಚಾರ ಕೈಗೂಡಲಿಲ್ಲ. 296 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಕರ್ನಾಟಕ ತಂಡ ಮೂರು ಅಂಕಕ್ಕೆ ಸಮಾಧಾನ ಪಡಬೇಕಾಯಿತು.

ಕರ್ನಾಟಕ ತಂಡ 'ಸಿ' ಗುಂಪಿನಲ್ಲಿ 27 ಅಂಕಗಳೊಂದಿಗೆ ಅಂಕ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯಿತು. ತಮಿಳುನಾಡು (28 ಅಂಕ) ಅಗ್ರಸ್ಥಾನ ಗಳಿಸಿತು. ಈ ಎರಡೂ ತಂಡಗಳು 'ಸಿ' ಗುಂಪಿನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಕರ್ನಾಟಕ ಫೆಬ್ರುವರಿ 23ರಿಂದ 27ರವರೆಗೆ ನಾಗ್ಪುರದಲ್ಲಿ ನಡೆಯುವ ಕ್ವಾರ್ಟರ್‌ಫೈನಲ್ ನಲ್ಲಿ ವಿದರ್ಭ ತಂಡವನ್ನು ಎದುರಿಸಲಿದೆ. ವಿದರ್ಭ 'ಎ' ಗುಂಪಿನಲ್ಲಿ (33 ಅಂಕ) ಅಗ್ರಸ್ಥಾನ ಪಡೆಯಿತು.

ದಿಟ್ಟ ಹೋರಾಟ: ಮಯಂಕ್ ಸಿಧು ಮತ್ತು ಆಲ್‌ರೌಂಡರ್ ಕರಣ್ ಅವರ ಮಹತ್ವದ ಜತೆಯಾಟ ಚಂಡೀಗಢ ತಂಡಕ್ಕೆ ಸೋಲು ತಪ್ಪಿಸಿತು. 174 ಎಸೆತಗಳನ್ನು ಎದುರಿಸಿದ ಈ ಜೋಡಿ ಮುರಿಯದ ಆರನೇ ವಿಕೆಟ್ ಜತೆಯಾಟದಲ್ಲಿ 61 ರನ್ ಸೇರಿಸಿತು.

ಚಂಡೀಗಢ ತಂಡ 80 ಓವರ್‌ಗಳಲ್ಲಿ 5 ವಿಕೆಟ್‌ಗೆ 236 ರನ್ ಗಳಿಸಿದ್ದ ವೇಳೆ ಉಭಯ ನಾಯಕರು 'ಡ್ರಾ'ಕ್ಕೆ ಒಪ್ಪಿಕೊಂಡರು. ಆಗ ದಿನದಾಟದಲ್ಲಿ ಇನ್ನೂ 21 ಓವರ್‌ಗಳು ಬಾಕಿ ಇದ್ದವು.

131 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ಮಯಂಕ್ ಸಿಧು 165 ನಿಮಿಷಗಳ ಕಾಲ ಕ್ರೀಸ್‌ನಲ್ಲಿ ಬೇರೂರಿದ್ದರು. ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರ ಮೊದಲ ಅರ್ಧಶತಕ. ಅವರಿಗೆ ಬೆಂಬಲ ನೀಡಿದ ಕರಣ್ ಕೈಲಾ ಅತ್ಯುಪಯುಕ್ತ ಅಜೇಯ 25 ರನ್ ಗಳಿಸಿದರು. ಅವರು ಪ್ರಥಮ ಇನಿಂಗ್ಸ್‌ನಲ್ಲಿ 79 ರನ್ ಗಳಿಸಿದ್ದರು.

ಇದಕ್ಕೂ ಮುನ್ನ ವಿಕೆಟ್ ನಷ್ಟವಿಲ್ಲದೇ 61 ರನ್‌ಗಳೊಂದಿಗೆ ನಾಲ್ಕನೇ ದಿನದಾಟ ಆರಂಭಿಸಿದ ಚಂಡೀಗಢಕ್ಕೆ ಮೊದಲ ಎಸೆತದಲ್ಲೇ ಶಿವಂ ಭಾಂಬ್ರಿ (33) ಅವರನ್ನು ಎಲ್‌ಬಿ ಬಲೆಗೆ ಕೆಡವಿದ ಆಫ್ ಸ್ಪಿನ್ನರ್ ಕೆ.ಶಶಿಕುಮಾರ್ ಪೆಟ್ಟು ಕೊಟ್ಟರು.

ಈ ಹಂತದಲ್ಲಿ ನಾಯಕ ಮನನ್ ವೋಹ್ರಾ ಜತೆಗೂಡಿದ ಅರ್ಸ್ಲಾನ್ ಖಾನ್ ಎರಡನೇ ವಿಕೆಟ್‌ಗೆ 61 (67) ರನ್ ಕಲೆಹಾಕಿ ಕುಸಿತ ತಡೆದರು. ಜವಾಬ್ದಾರಿಯುತ ಆಟವಾಡುತ್ತಿದ್ದ ವೋಹ್ರಾ 23 (53 ಎಸೆತ) ಶಾರ್ಟ್‌ಲೆಗ್‌ನಲ್ಲಿದ್ದ ನಿಕಿನ್ ಜೋಸ್‌ಗೆ ಕ್ಯಾಚಿತ್ತರು. ಅರ್ಧಶತಕ ಗಳಿಸಿದ್ದ ಅರ್ಸ್ಲಾನ್ ಖಾನ್ (63 ರನ್; 90ಎಸೆತ, 4X11) ಅವರನ್ನು ಇನಿಂಗ್ಸ್‌ನ 29ನೇ ಓವರ್‌ನಲ್ಲಿ ಎಲ್‌ಬಿ ಬಲೆಗೆ ಬೀಳಿಸಿದ ವೇಗಿ ವಿ.ಕೌಶಿಕ್, ತಮ್ಮ ಮುಂದಿನ ಓವರ್‌ನಲ್ಲಿ ಕುನಾಲ್ ಮಹಾಜನ್ ಅವರನ್ನು ಬೌಲ್ಡ್ ಮಾಡಿದರು.

ಲಂಚ್ ನಂತರ ಕರ್ನಾಟಕ ತಂಡಕ್ಕೆ ಕೇವಲ ಒಂದು ವಿಕೆಟ್ ಪಡೆಯಲು ಸಾಧ್ಯವಾಯಿತು. ಕರ್ನಾಟಕ ತಂಡದ ಪರ ವಿ.ಕೌಶಿಕ್, ಕೆ.ಶಶಿಕುಮಾರ್ ತಲಾ 2 ವಿಕೆಟ್ ಕಬಳಿಸಿದರು.

ಅರ್ಧಶತಕ ಗಳಿಸಿದ ಚಂಡೀಗಢ ತಂಡದ ಮಯಂಕ್ ಸಿಧು ಅವರ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

'ಪ್ರದರ್ಶನ ತೃಪ್ತಿ ತಂದಿದೆ'

'ಚಂಡೀಗಢದ ವಿರುದ್ಧ ಗೆದ್ದು, ಪೂರ್ಣ ಅಂಕ ಗಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೆವು. ಆದರೆ ಒಟ್ಟಾರೆ ತಂಡದ ಪ್ರದರ್ಶನ ತೃಪ್ತಿ ತಂದಿದೆ' ಎಂದು ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಹೇಳಿದರು.

'ವೇಗಿಗಳು, ಸ್ಪಿನ್ನರ್‌ಗಳು ಉತ್ತಮವಾಗಿ ಬೌಲಿಂಗ್ ಮಾಡಿದರು. 17 ವರ್ಷದ ಹಾರ್ದಿಕ್ ರಾಜ್ ತಂಡದ ಅಗತ್ಯ ಅರಿತು ಬ್ಯಾಟಿಂಗ್ ಮಾಡಿದರು. ವೈಶಾಖ ವಿಜಯಕುಮಾರ್ ಬೌಲಿಂಗ್ ಜತೆಗೆ, ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದು ನೆರವಾಯಿತು. ಅವರ ಕಠಿಣ ಪರಿಶ್ರಮಕ್ಕೆ ಫಲ ಸಿಕ್ಕಿದೆ' ಎಂದರು.

ಕ್ವಾರ್ಟರ್ ಫೈನಲ್ ಮುಖಾಮುಖಿ (ಫೆ.23 ರಿಂದ 27)
ಕರ್ನಾಟಕ– ವಿದರ್ಭ (ನಾಗ್ಪುರ)
ಮುಂಬೈ– ಬರೋಡ (ಮುಂಬೈ)
ತಮಿಳುನಾಡು– ಸೌರಾಷ್ಟ್ರ (ಕೊಯಮತ್ತೂರು)
ಮಧ್ಯಪ್ರದೇಶ– ಆಂಧ್ರ (ಇಂದೋರ್)

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಚಂಡೀಗಢ 267 (106.4 ಓವರ್) ಕರ್ನಾಟಕ 5ಕ್ಕೆ 563 ಡಿಕ್ಲೇರ್ (136.5 ಓವರ್) 2ನೇ ಇನಿಂಗ್ಸ್: ಚಂಡೀಗಢ 5ಕ್ಕೆ 236 (80 ಓವರ್) (ಭಾನುವಾರ: ವಿಕೆಟ್ ನಷ್ಟವಿಲ್ಲದೆ 61)

ಶಿವಂ ಎಲ್‌ಬಿಡಬ್ಲ್ಯು ಶಶಿಕುಮಾರ್ 33 (27ಎ, 4X6)

ಅರ್ಸ್ಲಾನ್ ಎಲ್‌ಬಿಡಬ್ಲ್ಯು ಕೌಶಿಕ್ 63 (90ಎ, 4X11)

ಮನನ್ ಸಿ ನಿಕಿನ್ ಬಿ ಶಶಿಕುಮಾರ್ 23 (53ಎ, 4X3)

ಕುನಾಲ್ ಬಿ ಕೌಶಿಕ್ 1 (12 ಎ)

ಎ.ಕೆ.ಕೌಶಿಕ್ ಸಿ ಶರತ್ ಬಿ ವೆಂಕಟೇಶ್ 15 (56ಎ, 4X1)

ಸಿಧು ಔಟಾಗದೆ 56 (150ಎ, 4X3)

ಕರಣ್ ಔಟಾಗದೆ 25 (93ಎ, 4X3)

ಇತರೆ: 20 (ಬೈ 16, ಲೆಗ್‌ಬೈ 2, ನೋಬಾಲ್ 1, ವೈಡ್ 1)

ವಿಕೆಟ್ ಪತನ: 1–61 (ಶಿವಂ ಭಾಂಬ್ರಿ; 11.1), 2–122 (ಮನನ್ ವೋಹ್ರಾ; 27.6), 3–122 (ಅರ್ಸ್ಲಾನ್ ಖಾನ್; 28.2), 4–127 (ಕುನಾಲ್ ಮಹಾಜನ್; 30.6), 5.175 (ಎ.ಕೆ.ಕೌಶಿಕ್; 50.6)

ಬೌಲಿಂಗ್: ವಿ.ಕೌಶಿಕ್ 10–4–26–2, ಎಂ.ವೆಂಕಟೇಶ್ 14–2–59–1, ಹಾರ್ದಿಕ್ ರಾಜ್ 15–1–46–0, ಕೆ.ಶಶಿಕುಮಾರ್ 25–6–55–2, ವಿ.ವೈಶಾಖ 7–0–20–0, ಆರ್.ಸಮರ್ಥ್ 6–2–11–0, ನಿಕಿನ್ ಜೋಸ್ 3–2–1–0

ಪಂದ್ಯಶ್ರೇಷ್ಠ: ವೈಶಾಖ ವಿಜಯಕುಮಾರ್

ಫಲಿತಾಂಶ: ಪಂದ್ಯ ಡ್ರಾ,

ಬೂಮ್ರಾಗೆ ವಿಶ್ರಾಂತಿ ಸಾಧ್ಯತೆ

23ರಿಂದ ನಾಲ್ಕನೇ ಟೆಸ್ಟ್: ಕೆ.ಎಲ್. ರಾಹುಲ್ ಸೇರ್ಪಡೆ ನಿರೀಕ್ಷೆ

ರಾಜ್‌ಕೋಟ್ (ಪಿಟಿಐ): ಭಾರತದ ಮುಂಚೂಣಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಫೆಬ್ರುವರಿ 23ರಿಂದ ಇಂಗ್ಲೆಂಡ್ ವಿರುದ್ಧ ರಾಂಚಿಯಲ್ಲಿ ನಡೆಯಲಿರುವ ನಾಲ್ಕನೇ ಟೆಸ್ಟ್‌ಗೆ ವಿಶ್ರಾಂತಿ ನೀಡುವ ಸಾಧ್ಯತೆಯಿದೆ. ತೊಡೆಯ ನೋವಿನಿಂದ ಚೇತರಿಸಿಕೊಂಡಿರುವ ಅನುಭವಿ ಬ್ಯಾಟರ್ ಕೆ.ಎಲ್. ರಾಹುಲ್ ತಂಡಕ್ಕೆ ಮರಳುವ ನಿರೀಕ್ಷೆಯಿದೆ.

ಬೂಮ್ರಾ ಮೂರು ಪಂದ್ಯಗಳಿಂದ ಬೂಮ್ರಾ 17 ವಿಕೆಟ್ ಪಡೆದಿದ್ದು ತಂಡದ ಯಶಸ್ವಿ ಬೌಲರ್ ಎನಿಸಿದ್ದಾರೆ. ಎರಡನೇ ಟೆಸ್ಟ್‌ನಲ್ಲಿ ಭಾರತವನ್ನು ಏಕಾಂಗಿಯಾಗಿ ತಂಡಕ್ಕೆ ಗೆಲುವು ತಂದಿತ್ತಿದ್ದರು. ಐದು ಪಂದ್ಯಗಳ ಸರಣಿಯಲ್ಲಿ ಆತಿಥೇಯರು 2-1 ಮುನ್ನಡೆ ಸಾಧಿಸಿದ್ದಾರೆ.

'ತಂಡವು ಮಂಗಳವಾರ ರಾಂಚಿಗೆ ತೆರಳಲಿದ್ದು, ಬೂಮ್ರಾ ಅವರಿಗೆ ವಿಶ್ರಾಂತಿ ನೀಡುವ ನಿರೀಕ್ಷೆಯಿದೆ' ಎಂದು ಬಿಸಿಸಿಐ ಮೂಲವೊಂದು ತಿಳಿಸಿದ್ದು, ರಾಹುಲ್ ಬಹುತೇಕ ಚೇತರಿಸಿಕೊಂಡಿದ್ದು, ನಾಲ್ಕನೇ ಟೆಸ್ಟ್ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದೂ ಹೇಳಿದೆ.

ಕೆ.ಎಲ್.ರಾಹುಲ್

ಮೊದಲ ಮೂರು ಟೆಸ್ಟ್‌ಗಳಲ್ಲಿ ಬೂಮ್ರಾ 80.5 ಓವರ್‌ಗಳನ್ನು ಮಾಡಿದ್ದರಿಂದ ಅವರಿಗೆ ವಿಶ್ರಾಂತಿ ನೀಡುವ ನಿರ್ಧಾರ ಅನಿರೀಕ್ಷಿತವೇನೂ ಆಗಿರಲಿಲ್ಲ. ಕಾರ್ಯಭಾರ ನಿರ್ವಹಣೆಯ ಭಾಗವಾಗಿ, ವಿಶಾಖಪಟ್ಟಣದಲ್ಲಿ ನಡೆದ ಎರಡನೇ ಟೆಸ್ಟ್‌ಗೆ ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ ನೀಡಿತ್ತು. ಅವರು ರಾಜ್‌ಕೋಟ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ಮೂರನೇ ಟೆಸ್ಟ್‌ನಲ್ಲಿ ಆಡಿದ್ದರು. ಭಾರತ ಆ ಪಂದ್ಯದಲ್ಲಿ 434 ರನ್‌ಗಳ ದಾಖಲೆ ಅಂತರದ ಜಯ ಪಡೆದಿತ್ತು.

ರಾಂಚಿಯ ಟೆಸ್ಟ್ ಪಂದ್ಯವನ್ನು ಗೆದ್ದು ಭಾರತ ತಂಡವು ಸರಣಿಯನ್ನು ಕೈವಶ ಮಾಡಿಕೊಳ್ಳಲು ತವಕದಿಂದ ಇದೆ. ಒಂದೊಮ್ಮೆ ಇದು ಸಾಧ್ಯವಾಗದಿದ್ದಲ್ಲಿ, ಧರ್ಮಶಾಲಾದಲ್ಲಿ ಮಾರ್ಚ್ 7 ರಿಂದ ನಡೆಯುವ ಐದನೇ ಮತ್ತು ಅಂತಿಮ ಟೆಸ್ಟ್‌ಗೆ ಬೂಮ್ರಾ ಅವರ ಸೇವೆ ತಂಡಕ್ಕೆ ಅನಿವಾರ್ಯವಾಗಬಹುದು.

ಬಲ ತೊಡೆಯ ನೋವಿನಿಂದ (ಕ್ವಾಡ್ರಿಸೆಪ್ಸ್) ಎರಡು ಮತ್ತು ಮೂರನೇ ಟೆಸ್ಟ್‌ಗೆ ಅಲಭ್ಯರಾಗಿದ್ದ ರಾಹುಲ್ ಕಳೆದ ವಾರ ಶೇ 90ರಷ್ಟು ಫಿಟ್ನೆಸ್ ಪಡೆದಿದ್ದಾರೆ. ಅವರು ರಾಂಚಿಯಲ್ಲಿ ಆಡುವ ಸಾಧ್ಯತೆ ನಿಚ್ಚಳವಾಗಿದೆ ಎಂದು ತಂಡದ ಮೂಲವೊಂದು ತಿಳಿಸಿದೆ.

ನಾಲ್ಕು ತಿಂಗಳ ಕಾಲ ತಂಡದಿಂದ ಹೊರಗುಳಿದಿದ್ದ ರಾಹುಲ್, ಪುನರಾಗಮನದ ನಂತರ ಮೂರೂ ಮಾದರಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾಕ್ಕೆ ಎರಡು ಟೆಸ್ಟ್‌ಗಳ ಪ್ರವಾಸ ಕೈಗೊಂಡಿದ್ದ ಭಾರತ ತಂಡದಲ್ಲಿ ಶತಕ ಹೊಡೆದ ಏಕೈಕ ಆಟಗಾರ ಎನಿಸಿದ್ದರು.

'ಬಾಝ್‌ಬಾಲ್'ಗೆ ಮಾಜಿ ನಾಯಕರ ಕಿಡಿ

ಲಂಡನ್ (ಪಿಟಿಐ): ಭಾರತ ವಿರುದ್ಧ ಹಾಲಿ ಟೆಸ್ಟ್ ಸರಣಿಯಲ್ಲಿ ಇಂಗ್ಲೆಂಡ್ ತಂಡ ಅನುಸರಿಸುತ್ತಿರುವ 'ಬಾಝ್‌ಬಾಲ್' ತಂತ್ರವನ್ನು ಆ ತಂಡದ ಮಾಜಿ ನಾಯಕರಾದ ನಾಸಿರ್ ಹುಸೇನ್ ಮತ್ತು ಮೈಕೆಲ್ ವಾನ್ ಕಟುವಾಗಿ ಟೀಕಿಸಿದ್ದಾರೆ. ಸರ್ವ ಕಾಲಕ್ಕೂ ಆಕ್ರಮಣಕಾರಿ ಮನೋಭಾವದ ಒಂದೇ ಸಿದ್ಧಾಂತದ ಬದಲು ಪಂದ್ಯದ ಸಂದರ್ಭಕ್ಕೆ ತಕ್ಕಂತೆ ಆಟವಾಡುವ ಕಡೆ ಯೋಚಿಸಬೇಕಾದ ಅಗತ್ಯವಿದೆ ಎಂದು ಹೇಳಿದ್ದಾರೆ.

ನಾಸಿರ್ ಹುಸೇನ್

ಮೈಕೆಲ್ ವಾನ್

ಭಾರತ ತಂಡ ಭಾನುವಾರ ರಾಜಕೋಟ್‌ನಲ್ಲಿ ಮುಕ್ತಾಯಗೊಂಡ ಮೂರನೇ ಟೆಸ್ಟ್ ಪಂದ್ಯದಲ್ಲಿ 434 ರನ್‌ಗಳ ದಾಖಲೆ ಅಂತರದಿಂದ ಜಯಗಳಿಸಿತ್ತು. ಪ್ರವಾಸಿ ತಂಡ ಎರಡನೇ ಇನಿಂಗ್ಸ್‌ನಲ್ಲಿ ಕೇವಲ 122 ರನ್‌ಗಳಿಗೆ ಉರುಳಿತ್ತು.

'ಇದು ಬೆನ್ ಸ್ಟೋಕ್ಸ್ ಮತ್ತು ಬ್ರೆಂಡನ್ ಮೆಕ್ಕಲಂ ಅಡಿ ತಂಡ ಕಂಡ ದಯನೀಯ ಸೋಲು. ಅವರ ಕಾರ್ಯತಂತ್ರ ವೈಫಲ್ಯ ಬಯಲಿಗೆಳೆದಿದೆ. ಪ್ರತಿ ಬಾರಿ ಆಕ್ರಮಣದ ಆಟ ನಡೆಯುವುದಿಲ್ಲ. ಸಂದರ್ಭೋಚಿತವಾಗಿ ಆಡಬೇಕಾಗುತ್ತದೆ' ಎಂದು ವಾನ್ 'ಟೆಲಿಗ್ರಾಫ್.ಕೊ.ಯುಕೆ'ಗೆ ತಮ್ಮ ಅಂಕಣದಲ್ಲಿ ಬರೆದಿದ್ದಾರೆ.

ವಾನ್ ಇದೇ ಅಭಿಪ್ರಾಯ ಧ್ವನಿಸಿದ್ದಾರೆ. 'ಬಾಝ್‌ಬಾಲ್ ಆಕ್ರಮಣಕ್ಕಿಳಿಯುವ ತಂತ್ರ ಮಾತ್ರವಲ್ಲ, ಒತ್ತಡ ನಿಯಂತ್ರಿಸುವ ತಂತ್ರ ಕೂಡ' ಎಂದು ಹುಸೇನ್ 'ಸ್ಕೈ ಸ್ಪೋರ್ಟ್ಸ್'ಗೆ ತಿಳಿಸಿದ್ದಾರೆ. 'ಅವರು ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮೂರನೇ ದಿನ ಆಡಿದ ರೀತಿ ಗಮನಿಸಬೇಕು. ಅವರು 30–40 ಎಸೆತಗಳವರೆಗೆ ಸಂಯಮ ವಹಿಸಿ ಒತ್ತಡ ನಿಭಾಯಿಸಿದರಲ್ಲದೇ, ನಂತರ ಬೌಂಡರಿಗಳನ್ನು ಹೊಡೆಯತೊಡಗಿದರು' ಎಂದು ಅವರು ಉಲ್ಲೇಖಿಸಿದ್ದಾರೆ.

'ಭಾರತ 228.5 ಓವರುಗಳಲ್ಲಿ 875 ರನ್ ಹೊಡೆದಿದೆ. ಯಾರೂ ಭಾರತದ ಬ್ಯಾಟಿಂಗ್ ಬೋರು ಹೊಡೆಸಿತು ಎಂದು ಯಾರೂ ನನ್ನ ಬಳಿ ಹೇಳಲಿಲ್ಲ' ಎಂದು ವಾನ್ ಹೇಳಿದರು.

ಸಮರ್ಥನೆ: ಆದರೆ ಇಂಗ್ಲೆಂಡ್ ಕೋಚ್ ಬ್ರೆಂಡನ್ ಮೆಕ್ಕಲಂ 'ಬಾಝ್‌ಬಾಲ್' ತಂತ್ರ ಸಮರ್ಥಿಸಿಕೊಂಡಿದ್ದಾರೆ. 3ನೇ ಟೆಸ್ಟ್‌ನ ಸೋಲು ನೋವು ಉಂಟುಮಾಡಿದೆ. ಆದರೆ ಆಕ್ರಮಣಕಾರಿ ಮನೋಭಾವದ ಬಾಝ್‌ಬಾಲ್ ತಂತ್ರವನ್ನು ಸರಣಿಯ ಉಳಿದ ಎರಡೂ ಪಂದ್ಯಗಳಲ್ಲಿ ಮುಂದುವರಿಸುವುದಾಗಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಾಕಿ: ಸ್ಪೇನ್ ವಿರುದ್ಧ ಭಾರತ ಜಯಭೇರಿ

ಭುವನೇಶ್ವರ (ಪಿಟಿಐ) : ಅನುಭವಿ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರ ರಕ್ಷಣೆಯ ಆಟದಿಂದ ಭಾರತ ಪುರುಷರ ಹಾಕಿ ತಂಡ ಪ್ರೊ ಲೀಗ್ ಪಂದ್ಯದಲ್ಲಿ ಸ್ಪೇನ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಸೋಲಿಸಿತು. ನಿಗದಿ ಅವಧಿಯ ಆಟ ಮುಗಿದಾಗ ಸ್ಕೋರ್ 2–2ರಲ್ಲಿ ಸಮನವಾಗಿತ್ತು.

ಭಾರತ ಪರ ಜರ್ಮನ್‌ಪ್ರೀತ್ ಸಿಂಗ್ (1ನೇ ನಿಮಿಷ), ಅಭಿಷೇಕ್ (35ನೇ ನಿಮಿಷ) ಗೋಲು ಗಳಿಸಿದರೆ, ಸ್ಪೇನ್ ಪರ ಜೋಸ್ ಬಾಸ್ಟೆರಾ (3ನೇ ನಿಮಿಷ) ಮತ್ತು ಬೊರ್ಜಾ ಲಕಾಲೆ (15ನೇ ನಿಮಿಷ) ಗೋಲು ಗಳಿಸಿದರು.

ಪೆನಾಲ್ಟಿ ಶೂಟೌಟ್‌ನಲ್ಲೂ ಎರಡು ತಂಡಗಳು 7–7 ಗೋಲು ಗಳಿಸಿದವು. ಇದರಿಂದ ಪಂದ್ಯವು ರೋಚಕವಾಗಿತ್ತು. ಲಲಿತ್ ಉಪಾಧ್ಯಾಯ ಗೋಲು ಹೊಡೆದರೆ, ಮಾರ್ಕ್ ಮಿರಾಲೆಸ್ ಪ್ರಯತ್ನವನ್ನು ಶ್ರೀಜೇಶ್ ತಡೆದರು. ಭಾರತ ಬುಧವಾರ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ಮಹಿಳಾ ಲೀಗ್: ಕಶ್ವಿ ಗಾಯಾಳು

ಬೆಂಗಳೂರು: ಉದಯೋನ್ಮುಖ ಆಟಗಾರ್ತಿ ಹಾಗೂ ಮಹಿಳಾ ಪ್ರೀಮಿಯರ್ ಲೀಗ್‌ನ ಎರಡನೇ ಆವೃತ್ತಿಯಲ್ಲಿ ಭಾರತದ ದುಬಾರಿ ಆಟಗಾರ್ತಿ ಎನಿಸಿರುವ ಕಶ್ವಿ ಗೌತಮ್ ಅವರು ಗಾಯಾಳಾಗಿದ್ದು ಲೀಗ್‌ನಿಂದ ಹಿಂದೆಸರಿದಿದ್ದಾರೆ.

ಕಶ್ವಿ ₹2 ಕೋಟಿ ಮೊತ್ತಕ್ಕೆ ಗುಜರಾತ್ ಜೈಂಟ್ಸ್ ಪಾಲಾಗಿದ್ದರು. ಜೈಂಟ್ಸ್ ತಂಡ ಈಗ ಅವರ ಬದಲಿಯಾಗಿ ಮುಂಬೈನ ಸಯಾಲಿ ಸಾತ್ಘರೆ ಅವರನ್ನು ಮೀಸಲು ಮೊತ್ತ ₹10 ಲಕ್ಷ ನೀಡಿ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಭಾರತ ತಂಡದ ಆಲ್‌ರೌಂಡರ್ ಕನಿಕಾ ಅಹುಜಾ ಅವರೂ ಗಾಯಾಳಾಗಿ ಎರಡನೇ ಆವೃತ್ತಿಗೆ ಅಲಭ್ಯರಾಗಿದ್ದಾರೆ. ಅವರನ್ನು ಪಡೆದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಈಗ ಅವರ ಬದಲಿಗೆ ಮಹಾರಾಷ್ಟ್ರದ ಎಡಗೈ ವೇಗಿ ಶ್ರದ್ಧಾ ಪೊಖಾರ್ಕರ್ ಅವರನ್ನು ಮೀಸಲು ನಿಧಿಯಿಂದ ₹10 ಲಕ್ಷ ನೀಡಿ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಪಾಂಡಿಚೇರಿ ವಿರುದ್ಧ ಕರ್ನಾಟಕ ಮೇಲುಗೈ

ಬೆಂಗಳೂರು: ರೋಹಿತ್ ಕುಮಾರ್ ಎ.ಸಿ. ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಂಡಿಚೇರಿ ವಿರುದ್ಧ ಹಿಡಿತ ಸಾಧಿಸಿದೆ.

ಇಲ್ಲಿನ ಆಲೂರು ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ ತಂಡವು ಮ್ಯಾಕ್ನೀಲ್ ಎಚ್.ಎನ್. ಅವರ ಶತಕದ (117, 277ಎ, 4x5, 6x5) ನೆರವಿನಿಂದ 123 ಓವರ್‌ಗಳಲ್ಲಿ 395 ರನ್ ಗಳಿಸಿದೆ. ನಂತರ ಬ್ಯಾಟಿಂಗ್‌ಗೆ ಇಳಿದ ಪಾಂಡಿಚೇರಿ ತಂಡ ರೋಹಿತ್ ಕುಮಾರ್ ಅವರ (41ಕ್ಕೆ 5) ದಾಳಿಗೆ ತತ್ತರಿಸಿತು. ಹೀಗಾಗಿ, ತಂಡವು ಸೋಮವಾರ ಎರಡನೇ ದಿನದಾಟದ ಅಂತ್ಯಕ್ಕೆ 54 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 129 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ 123 ಓವರ್‌ಗಳಲ್ಲಿ 395 (ಮ್ಯಾಕ್ನೀಲ್ ಎಚ್.ಎನ್. 117, ಸ್ಮರಣ್ ಆರ್. 83, ಅನೀಶ್ವರ್ ಗೌತಮ್ 59; ನಿತಿನ್ ಪ್ರಣವ್ 38ಕ್ಕೆ 4, ಶಿಶಿಲ್ ಎಚ್. ಆರ್. 106ಕ್ಕೆ 3). ಪಾಂಡಿಚೇರಿ 54 ಓವರ್‌ಗಳಲ್ಲಿ 9 ವಿಕೆಟ್‌ಗೆ 129 (ರೋಹಿತ್ ಕುಮಾರ್ ಎ.ಸಿ 41ಕ್ಕೆ 5, ಗೌತಮ್ ಮಿಶ್ರಾ 15ಕ್ಕೆ 2.

ಸ್ಪಿನ್ ಎದುರಿಸುವ ತಾಲೀಮು...

ಪದಾರ್ಪಣೆ ಟೆಸ್ಟ್‌ನಲ್ಲಿ ಮಿಂಚಿದ ಸರ್ಫರಾಜ್ ಯಶಸ್ಸಿನ ಕಥೆ

ನವದೆಹಲಿ (ಪಿಟಿಐ): ಇಂಗ್ಲೆಂಡ್ ಸ್ಪಿನ್ನರ್‌ಗಳ ಎದುರು ತಮ್ಮ ಪದಾರ್ಪಣೆ ಟೆಸ್ಟ್ ಪಂದ್ಯದಲ್ಲೇ ಸರ್ಫರಾಜ್ ಖಾನ್ ಅಧಿಕಾರಯುತ ಬ್ಯಾಟಿಂಗ್ ಪ್ರದರ್ಶನ ನೀಡಿದ್ದು ಆಕಸ್ಮಿಕವೇನಲ್ಲ. ಇದು ಸುಮಾರು 15 ವರ್ಷಗಳ ಪರಿಶ್ರಮದ ಫಲ.

ತಂದೆ ನೌಶಾದ್ ಖಾನ್ ಅವರ ಹದ್ದುಗಣ್ಣಿನಡಿ ಅವರು ದಿನನಿತ್ಯ 500 ಎಸೆತಗಳನ್ನು ಎದುರಿಸುತ್ತಿದ್ದರು. ರಾಜಕೋಟ್‌ನಲ್ಲಿ ತಮ್ಮ ಮೊದಲ ಟೆಸ್ಟ್‌ನಲ್ಲೇ ಆತ್ಮವಿಶ್ವಾಸದಿಂದ ಆಡಿ ಎರಡು ಅರ್ಧ ಶತಕಗಳನ್ನು ಹೊಡೆದಿರುವ ಅವರು ತಂಡದಲ್ಲಿ ತಾವು ಬೇರೂರಲು ಸಮರ್ಥ ಎಂಬ ಸಂಕೇತ ರವಾನಿಸಿದ್ದಾರೆ. ಹಲವು ವರ್ಷ ಬೆವರು ಹರಿಸಿ ದೇಶೀಯ ಕ್ರಿಕೆಟ್‌ನಲ್ಲಿ ಯಶಸ್ಸು ಕಂಡ 26 ವರ್ಷದ ಈ ಆಟಗಾರ, ತಮ್ಮ ತಂದೆಯ 'ಮ್ಯಾಚೊ ಕ್ರಿಕೆಟ್ ಕ್ಲಬ್'ನಲ್ಲಿ ಪಳಗಿದವರು.

ಕೆಲವು ವರ್ಷಗಳಿಂದ, ಅದರಲ್ಲೂ ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಪಟ್ಟ ಪರಿಶ್ರಮ ಹಾಗೂ ವ್ಯವಸ್ಥಿತ ಯೋಜನೆಗಳ ಪರಿಣಾಮ ಈಗ ಹಾರ್ಟ್ಲಿ, ಜೋ ರೂಟ್, ರೆಹಾನ್ ಅಹ್ಮದ್ ಅಂಥ ಬೌಲರ್‌ಗಳನ್ನು ಎದುರಿಸುವಾಗ ಫಲ ನೀಡಿದ್ದು ರಾಜಕೋಟ್‌ನಲ್ಲಿ ಜಾಹೀರಾಗಿದೆ.

'ಮುಂಬೈನ ಓವಲ್, ಕ್ರಾಸ್ ಮೈದಾನ ಮತ್ತು ಆಜಾದ್ ಮೈದಾನಗಳಲ್ಲಿ ಅವರು ನಿತ್ಯ ಆಫ್, ಲೆಗ್ ಮತ್ತು ಎಡಗೈ ಸ್ಪಿನ್ನರ್‌ಗಳಿಂದ 500 ಎಸೆತಗಳನ್ನು ಎದುರಿಸುತ್ತಿದ್ದರು' ಎಂದು ಮುಂಬೈನ ಈ ಆಟಗಾರನನ್ನು ಸಮೀಪದಿಂದ ಬಲ್ಲ ಕೋಚ್ ಒಬ್ಬರು ಹೇಳುತ್ತಾರೆ.

ಸರ್ಫರಾಜ್ ಖಾನ್

'ಲಾಕ್‌ಡೌನ್ ಸಮಯದಲ್ಲಿ ಅವರು ಕಾರಿನಲ್ಲಿ 1600 ಕಿ.ಮೀ. ಪ್ರಯಾಣಿಸಿದ್ದರು. ಮುಂಬೈನಿಂದ ಉತ್ತರ ಪ್ರದೇಶದ ಅಮ್ರೋಹ, ಮೊರದಾಬಾದ್, ಮೀರಠ್, ಕಾನ್ಪುರ, ಮಥುರಾ ಮತ್ತು ಉತ್ತರಾಖಂಡದ ಡೆಹ್ರಾಡೂನ್ ನಲ್ಲಿ ಆಡುತ್ತಿದ್ದರು. ಚೆಂಡಿಗೆ ತುಂಬಾ ತಿರುವು ನೀಡುತ್ತಿದ್ದ ಸ್ಪಿನ್ ಸ್ನೇಹಿ ಪಿಚ್‌ಗಳಲ್ಲಿ ಪುಟಿದೇಳುವ, ಕೆಳಮಟ್ಟದಲ್ಲಿ ಬರುವ ಚೆಂಡುಗಳನ್ನು ಎದುರಿಸುವುದನ್ನು ಅಭ್ಯಾಸ ಮಾಡಿದ್ದರು' ಎಂದು ಈ ಕೋಚ್ ವಿವರಿಸುತ್ತಾರೆ. ತಂದೆ ನೌಶಾದ್ ಅವರ ಜೊತೆಗೆ ಇತರ ಕೆಲವು ಕೋಚ್‌ಗಳಿಗೂ ಅವರ ಯಶಸ್ಸಿನ ಹಿಂದೆ ಇದ್ದಾರೆ. ಭುವನೇಶ್ವರ ಕುಮಾರ್ ಅವರ ಕೋಚ್ ಸಂಜಯ್ ರಾಸ್ತೋಗಿ, ಮೊಹಮ್ಮದ್ ಶಮಿ ಅವರ ಕೋಚ್ ಬದ್ರುದ್ದೀನ್ ಶೇಖ್, ಕುಲದೀಪ್ ಯಾದವ್ ಕೋಚ್ ಕಪಿಲ್ ದೇವ್ ಪಾಂಡೆ ಮತ್ತು ಭಾರತ 'ಎ' ತಂಡದ ನಾಯಕ ಅಭಿಮನ್ಯು ಈಶ್ವರನ್ ತಂದೆ ಆರ್.ಪಿ.ಈಶ್ವರನ್ ಅವರ ಶ್ರಮವನ್ನು ಮರೆಯುವಂತಿಲ್ಲ.

ವಿಶೇಷವಾಗಿ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ, ಈ ತರಬೇತುದಾರರು ಸರ್ಫರಾಜ್ ಅವರಿಗೆ ನೆಟ್ ಪ್ರಾಕ್ಟೀಸ್‌ಗೆ ವ್ಯವಸ್ಥೆ ಮಾಡಿದ್ದರು.

'ನೌಶಾದ್ ಮತ್ತು ನಾನು ಅಜಂಗಢದವರು. ಮುಂಬೈನಲ್ಲಿ ಜೊತೆಗೆ ಕ್ಲಬ್ ಕ್ರಿಕೆಟ್ ಆಡಿದವರು. ಅವರು ತಮ್ಮ ಮಗನಿಗೆ ಅಭ್ಯಾಸಕ್ಕೆ ನೆರವಾಗುವಂತೆ ಕೇಳಿದಾಗ, ಅದನ್ನು ನನ್ನ ಕರ್ತವ್ಯವೆಂದು ಭಾವಿಸಿದೆ' ಎನ್ನುತ್ತಾರೆ ಕಪಿಲ್ ಪಾಂಡೆ.

ಕೆಕೆಆರ್ ತಂಡದಲ್ಲಿ ಬದಲಾವಣೆ

ನವದೆಹಲಿ (ಪಿಟಿಐ): ಮುಂಬರುವ ಐಪಿಎಲ್‌ನಲ್ಲಿ ಪಾಲ್ಗೊಳ್ಳುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವು, ಇಂಗ್ಲೆಂಡ್ ವೇಗದ ಬೌಲರ್ ಗಸ್ ಅಟ್ಕಿನ್ಸನ್ ಬದಲಿಗೆ ಶ್ರೀಲಂಕಾದ ವೇಗದ ಬೌಲರ್ ದುಷ್ಮಂತ ಚಮೀರ ಅವರನ್ನು ಸೋಮವಾರ ಸೇರ್ಪಡೆ ಮಾಡಿಕೊಂಡಿದೆ.

ಚಮೀರ, ಕೆಕೆಆರ್ ತಂಡವನ್ನು ₹50 ಲಕ್ಷ ಮೀಸಲು ಬೆಲೆಗೆ ಸೇರಿಕೊಳ್ಳಲಿದ್ದಾರೆ ಎಂದು ಐಪಿಎಲ್ ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಹಿಂದೆ ಚಮೀರ ಅವರು ರಾಜಸ್ತಾನ ರಾಯಲ್ಸ್ ಮತ್ತು ರಾಯಲ್ ಚಾಲೆಂಜರ್ಸ್ ತಂಡದಲ್ಲಿ ಆಡಿದ್ದಾರೆ. 2022ರಲ್ಲಿ ಲಖನೌ ಸೂಪರ್ ಜೈಂಟ್ಸ್ ಪರ 12 ಪಂದ್ಯ ಆಡಿದ್ದ ಅವರು 9 ವಿಕೆಟ್ ಪಡೆದಿದ್ದರು.

ಪ್ರೊ ಕಬಡ್ಡಿ: ಪ್ಯಾಂಥರ್ಸ್‌ಗೆ ಗೆಲುವು

ಪಂಚಕುಲಾ: ಅರ್ಜುನ್ ದೇಶ್ವಾಲ್ ಭರ್ಜರಿ ರೈಡಿಂಗ್ (13 ಪಾಯಿಂಟ್ಸ್) ಬಲದಿಂದ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡ, ಪ್ರೊ ಕಬಡ್ಡಿ ಲೀಗ್‌ನಲ್ಲಿ ಸೋಮವಾರ ಗುಜರಾತ್ ಜೈಂಟ್ಸ್ ತಂಡವನ್ನು 45–36 ಪಾಯಿಂಟ್‌ಗಳಿಂದ ಸದೆಬಡಿಯಿತು.

ದೇಶ್ವಾಲ್ ಅವರಿಗೆ ಶುಭಂ ಶೆಲ್ಕೆ (9 ಪಾಯಿಂಟ್ಸ್), ಸಮಿತ್ ಮಲಿಕ್ (6) ಮತ್ತು ಶೌಲ್ ಕುಮಾರ್ (6) ಬೆಂಬಲ ನೀಡಿದರು. ಪ್ಯಾಂಥರ್ಸ್ ತಂಡವು ಆರಂಭದಿಂದಲೇ ಪಾರಮ್ಯ ಮೆರೆಯಿತು. ಮಧ್ಯಂತರ ವೇಳೆಗೆ 28–14 ರಿಂದ ಮುನ್ನಡೆ ಪಡೆದ ಪ್ಯಾಂಥರ್ಸ್, ವಿರಾಮದ ಬಳಿಕವೂ ಉತ್ತಮ ಪ್ರದರ್ಶನ ನೀಡಿ, 14 ಪಾಯಿಂಟ್ಸ್ ಅಂತರದ ಗೆಲುವು ಸಾಧಿಸಿತು. ಜೈಂಟ್ಸ್ ಪರ ಏಕಾಂಗಿ ಹೋರಾಟ ನಡೆಸಿದ ಪಾರ್ಟಿಕ್ ದಹಿಯಾ (16 ಅಂಕ) ಸೋಲು ತಪ್ಪಿಸಲು ಸಾಧ್ಯವಾಗಲಿಲ್ಲ.

ಪುಣೇರಿ ಪಲ್ಟನ್ ತಂಡವು ದಿನದ ಎರಡನೇ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು 51-36 ಪಾಯಿಂಟ್‌ಗಳಿಂದ ಸೋಲಿಸಿತು.